ಹುಬ್ಬಳ್ಳಿ
ಗುರುವಾರ, 9 ಏಪ್ರಿಲ್ 2026
ಸಂಪುಟ 16, ಸಂಚಿಕೆ 15, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಆನೆ ದಾಳಿ: ಕಾಫಿ ಬೆಳೆಗಾರ ಸಾವು | 0೫ | ಕದನ ವಿರಾಮ ಒಪ್ಪಂದ ಇನ್ನೂ ಅಸ್ಪಷ್ಟ | 0೭ | ವನ್ಯಜೀವಿಗಳ ಸಂತಾನ ಹರಣಕ್ಕೆ ಚಿಂತನೆ | 0೫

ನಾವೆಲ್ಲರೂ ಒಟ್ಟಾಗಿ ನಾರೀಶಕ್ತಿಯನ್ನು ಸಶಕ್ತಗೊಳಿಸೋಣ

▸ನರೇಂದ್ರ ಮೋದಿ, ಪ್ರಧಾನಿ



ಮುಂಬರುವ ದಿನಗಳಲ್ಲಿ ಭಾರತವು ಹಬ್ಬಗಳ ಸಡಗರದಲ್ಲಿ ಮಿಂದೇಳಲಿದೆ. ಅಸ್ಸಾಂನಲ್ಲಿ 'ರೊಂಗಲಿ ಬಿಹು', ಕೇರಳದಲ್ಲಿ 'ವಿಷು', ತಮಿಳುನಾಡಿನಲ್ಲಿ 'ಪುತ್ತಾಂಡು' ಸಂಭ್ರಮವಿದ್ದರೆ, ಪಂಜಾಬ್ ಸೇರಿ ಉತ್ತರ ಭಾರತದ ವಿವಿಧ ಭಾಗಗಳಲ್ಲಿ 'ಬೈಸಾಖಿ'ಯು ಹೊಸ ಭರವಸೆ ಮತ್ತು ಸಕಾರಾತ್ಮಕತೆಯನ್ನು ಹೊತ್ತು ತರಲಿದೆ. ಈ ಮಂಗಳಕರ ಸಂದರ್ಭಗಳು ಎಲ್ಲರ ಜೀವನದಲ್ಲಿ ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇನೆ.

ಅಷ್ಟೇ ಅಲ್ಲದೆ, ಏ.11 ರಂದು ನಾವು ಮಹಾತ್ಮ ಫುಲೆಯವರ 200ನೇ ಜಯಂತಿಯ ಆಚರಣೆಗಳಿಗೆ ಚಾಲನೆ ನೀಡಲಿದ್ದೇವೆ ಹಾಗೂ ಏ.14 ರಂದು ಅಂಬೇಡ್ಕರ್ ಜಯಂತಿಯ ಸಂದರ್ಭದಲ್ಲಿ ಇಡೀ ಭಾರತವು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಭಕ್ತಿಪೂರ್ವಕ ಗೌರವ ನಮನಗಳನ್ನು ಸಲ್ಲಿಸಲಿದೆ. ನವಚೈತನ್ಯವು ನಮ್ಮ ಮನಸ್ಸುಗಳನ್ನು ತುಂಬಿರುವ ಇಂತಹ ವಿಶೇಷ ಸಂದರ್ಭಗಳ ನಡುವೆಯೇ, ನಮ್ಮ ರಾಷ್ಟ್ರವು ಮತ್ತೊಂದು ಐತಿಹಾಸಿಕ ಕ್ಷಣದ ಹೊಸ್ತಿಲಲ್ಲಿ ಬಂದು ನಿಂತಿದೆ. ಇದು ನಮ್ಮ ಪ್ರಜಾಪ್ರಭುತ್ವದ ಅಡಿಪಾಯವನ್ನು ಮತ್ತಷ್ಟು ಗಟ್ಟಿಗೊಳಿಸಲು ಹಾಗೂ ಸಮಾನತೆ ಮತ್ತು ಒಳಗೊಳ್ಳುವಿಕೆಯ ಬಗ್ಗೆ ನಮ್ಮೆಲ್ಲರ ಸಾಮೂಹಿಕ ಬದ್ಧತೆಯನ್ನು ಪುನರುಚ್ಚರಿಸಲು ಲಭಿಸಿರುವ ಒಂದು ಮಹತ್ವದ ಅವಕಾಶವಾಗಿದೆ.

ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವ ಮಹತ್ವದ ಮಸೂದೆಯ ಕುರಿತು ಚರ್ಚಿಸಲು ಮತ್ತು ಅದನ್ನು ಅಂಗೀಕರಿಸಲು ಏ.16ರಂದು ಸಂಸತ್ತು ಸಮಾವೇಶಗೊಳ್ಳಲಿದೆ. ಇದನ್ನು ಕೇವಲ ಒಂದು ಶಾಸನಾತ್ಮಕ ಪ್ರಕ್ರಿಯೆ ಎಂದು ಕರೆದರೆ ಅದು ಅದರ ಮಹತ್ವವನ್ನು ಕಡಿಮೆ ಎಂದು ಅಂದಾಜಿಸಿ



ದಂತಾಗುತ್ತದೆ. ವಾಸ್ತವವಾಗಿ, ಇದು ಭಾರತ ದಾದ್ಯಂತ ಇರುವ ಕೋಟ್ಯಂತರ ಮಹಿಳೆಯರ ಆಕಾಂಕ್ಷೆಗಳ ಪ್ರತಿಬಿಂಬವಾಗಿದೆ. 'ಮಹಿಳೆಯರು ಪ್ರಗತಿ ಹೊಂದಿದಾಗ ಮಾತ್ರ ಸಮಾಜವು ಪ್ರಗತಿ ಹೊಂದುತ್ತದೆ' ಎಂಬ ನಮ್ಮ ಸುದೀರ್ಘ ನಾಗರಿಕತೆಯ ಮೌಲ್ಯಗಳು ಮತ್ತು ನೈತಿಕ ತತ್ವಗಳಿಗೆ ಇದು ಸಾಕ್ಷಿಯಾಗಿದೆ.

ಭಾರತದ ಜನಸಂಖ್ಯೆಯ ಸುಮಾರು ಅರ್ಧದಷ್ಟು ಭಾಗ ಮಹಿಳೆಯರಾಗಿದ್ದು, ರಾಷ್ಟ್ರದ ನಿರ್ಮಾಣದಲ್ಲಿ ಅವರ ಕೊಡುಗೆ ಅಪಾರ ಹಾಗೂ ಅಮೂಲ್ಯವಾಗಿದೆ. ಇಂದು ವಿಜ್ಞಾನ-ತಂತ್ರಜ್ಞಾನದಿಂದ ಹಿಡಿದು ಉದ್ಯಮಶೀಲತೆಯವರೆಗೆ, ಕ್ರೀಡಾಕ್ಷೇತ್ರದಿಂದ ಸಶಸ್ತ್ರ ಪಡೆಗಳವರೆಗೆ ಮತ್ತು ಸಂಗೀತದಿಂದ ಕಲೆಯವರೆಗೆ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಭಾರತದ ಪ್ರಗತಿಯ ಮುಂಚೂಣಿಯಲ್ಲಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಮಹಿಳಾ ಸಬಲೀಕರಣಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಲು ನಿರಂತರ ಪ್ರಯತ್ನಗಳು ನಡೆಯುತ್ತಿವೆ. ಶಿಕ್ಷಣದ ಲಭ್ಯತೆ, ಸುಧಾರಿತ ಆರೋಗ್ಯ ಸೇವೆಗಳು, ಆರ್ಥಿಕ ಒಳಗೊಳ್ಳುವಿಕೆ ಹಾಗೂ ಮೂಲಭೂತ ಸೌಕರ್ಯಗಳ ವಿಸ್ತರಣೆಯು ಮಹಿಳೆಯರು ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಭದ್ರವಾದ ಅಡಿಪಾಯವನ್ನು ಒದಗಿಸಿವೆ. ➡ಪುಟ ೪

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಮೂಲ

ದಿನದ ಮಾತು

ಮರೆವು ಒಂದು ವರ. ಏಕೆಂದರೆ ಕೆಲವು ಸಂಗತಿಗಳು ನೆನಪಿನಲ್ಲಿ ಉಳಿಯುವುದು ಒಂದು ಶಾಪ.

▲ಸುಭಾಷಿತ

ಸಂಭಾವಿತರೇಕೆ ದಲ್ಲಾಳಿಗಳಾಗಲು ಸಾಧ್ಯವಿಲ್ಲ ಗೊತ್ತೇ?

ಗುರುತರ

• ಸೋಮಶೇಖರ ಸಿ.ಜೆ.

• ಪುಟ ೬

ಕಿರುಸುದ್ದಿ

ಇಂದು ಪಿಯು ಫಲಿತಾಂಶ

• **ಬೆಂಗಳೂರು:** ರಾಜ್ಯ ದ್ವಿತೀಯ ಪಿಯುಸಿ ಪರೀಕ್ಷೆ – 1ರ ಫಲಿತಾಂಶವು ಏ.9 ರಂದು ಮಧ್ಯಾಹ್ನ 3 ಗಂಟೆಗೆ ಪ್ರಕಟವಾಗಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ತಿಳಿಸಿದೆ. ಫಲಿತಾಂಶವನ್ನು https://karresults.nic.in ಲಿಂಕ್ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್‌ನಿಂದ ಪಡೆಯಬಹುದಾಗಿದೆ. ಅಲ್ಲದೇ, ವಿದ್ಯಾರ್ಥಿಗಳ ನೋಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸಾಪ್/ಎಸ್‌ಎಂಎಸ್ ಮೂಲಕವೂ ಫಲಿತಾಂಶದ ಮಾಹಿತಿಯನ್ನು ಮಂಡಳಿಯಿಂದ ರವಾನಿಸಲಾಗುತ್ತದೆ. ಈ ವರ್ಷ ಮೊದಲ ಬಾರಿಗೆ ವಿಶೇಷವಾಗಿ, ವಿದ್ಯಾರ್ಥಿಗಳ ಫಲಿತಾಂಶದ ಅಂಕಪಟ್ಟಿಯನ್ನು ಡಿಜಿಲಾಕರ್ ಬಳಸಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಫಲಿತಾಂಶದ ಪಟ್ಟಿಯನ್ನು ಸಂಬಂಧಿತ ಕಾಲೇಜುಗಳಿಗೆ ಮಧ್ಯಾಹ್ನ 3 ಗಂಟೆಗೆ ಲಭ್ಯಗೊಳಿಸಲಾಗುವುದು ಎಂದು ಮಂಡಳಿಯ ಅಧ್ಯಕ್ಷರು ತಿಳಿಸಿದ್ದಾರೆ.

ಉದ್ದಿಮೆಗಳ ಬಲಪಡಿಸುವಲ್ಲಿ ಮುದ್ರಾ ಯೋಜನೆ ಯಶಸ್ವಿ

• **ಹೊಸದಿಲ್ಲಿ:** ಉದ್ದಿಮೆಗಳ ಸುಗಮತೆಗಿದ್ದ ಅಡೆತಡೆ ನಿವಾರಿಸಿ, ಜನರ ಆಶೋತ್ತರಗಳಲ್ಲಿ ದೃಢ ವಿಶ್ವಾಸ ಕಾಯ್ದುಕೊಳ್ಳುವ ಮುಖೇನ, ದೇಶಾದ್ಯಂತ ಉದ್ದಿಮೆಗಳ ಸ್ಫೂರ್ತಿ ಬಲಪಡಿಸುವಲ್ಲಿ ಮುದ್ರಾ ಯೋಜನೆ ಯಶಸ್ವಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

• ಪುಟ ೭

ಮುಕ್ತ ಮತದಾನಕ್ಕೆ ಸನ್ನದ್ಧ

• **ಬೆಂಗಳೂರು:** ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಗೆ ಗುರುವಾರ ಮತದಾನ ನಡೆಯಲಿದ್ದು, ಮುಕ್ತ ಮತ್ತು ನ್ಯಾಯಸಮ್ಮತವಾಗಿ ಮತದಾನಕ್ಕೆ ಚುನಾವಣಾ ಆಯೋಗ ಸರ್ವ ಸನ್ನದ್ಧವಾಗಿದೆ.

• ಪುಟ ೪

ಕೈ ಅಭ್ಯರ್ಥಿ ಅಧೀರ್ ರಂಜನ್ ಕಾರಿಗೆ ಟ್ರಕ್ ಡಿಕ್ಕಿ

• ಪುಟ ೭

ಆರ್‌ಬಿಐ ಕಾದುನೋಡುವ ತಂತ್ರ, ಬಡ್ಡಿದರ ಯಥಾಸ್ಥಿತಿ

• ಪುಟ ೭

ರಾಣಾ ಆಯೂಬ್ ವಿರುದ್ಧ ಕ್ರಮಕ್ಕೆ ಹೈಕೋರ್ಟ್ ಸೂಚನೆ

• ಪುಟ ೭

ಅಮೆರಿಕ–ಇಸ್ರೇಲ್, ಇರಾನ್ ನಡುವೆ 2 ವಾರ ಯುದ್ಧ ವಿರಾಮ

ಒಪ್ಪಂದ ಬೆನ್ನಿಗೆ ದಾಳಿ

• **ಟೆಹ್ರಾನ್:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವೆ ಕೊನೆಯ ಕ್ಷಣದಲ್ಲಿ ಎರಡು ವಾರಗಳ ಯುದ್ಧ ವಿರಾಮ ಒಪ್ಪಂದಕ್ಕೆ ಬರಲಾಗಿದೆ. ಇದರಿಂದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದ ಭಾರೀ ಬಾಂಬ್ ದಾಳಿಯ ಎಚ್ಚರಿಕೆ ತಾತ್ಕಾಲಿಕವಾಗಿ ತಪ್ಪಿದಂತಾಗಿದೆ.



ಆದರೆ, ಒಪ್ಪಂದ ಘೋಷಣೆಯ ಕೆಲವೇ ಗಂಟೆಗಳಲ್ಲಿ ಇರಾನ್ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ಮತ್ತೆ ದಾಳಿಗಳು ನಡೆದಿವೆ.

ಏತನ್ಮಧ್ಯೆ, ಲೆಬನಾನ್ ಮೇಲೆ ಇಸ್ರೇಲ್ ದಾಳಿ ಬಳಿಕ ಹಡಗುಗಳು ಹಾರ್ಮುಜ್ ಜಲಸಂಧಿ ಮೂಲಕ ಹಾದುಹೋಗುವುದಕ್ಕೆ ನಿರ್ಬಂಧ ಹೇರಲಾಗಿದೆ ಎಂದು ವರದಿಯಾಗಿದೆ. ಇದೇ ವೇಳೆ ಒಪ್ಪಂದದ ವಿವರಗಳ ಬಗ್ಗೆ ಮೂರು ದೇಶಗಳು ವಿಭಿನ್ನ ಹೇಳಿಕೆಗಳನ್ನು ನೀಡುತ್ತಿರುವುದರಿಂದ ಗೊಂದಲ ಹೆಚ್ಚಾಗಿದೆ. ➡ಪುಟ ೪

ಮುಂದಿನ ಹಾದಿ ಅನಿಶ್ಚಿತ

ಈ ಕದನ ವಿರಾಮವು ತಾತ್ಕಾಲಿಕ ಶಾಂತಿ ನೀಡಿದರೂ, ಪ್ರಮುಖ ವಿಷಯಗಳು ಇನ್ನೂ ಬಾಕಿಯೇ ಇವೆ. ಮುಂದಿನ ಮಾತುಕತೆಗಳು ಪಾಕಿಸ್ತಾನದಲ್ಲಿ ನಡೆಯುವ ಸಾಧ್ಯತೆ ಇದೆ. ಆದರೆ, ಈ ಒಪ್ಪಂದ ದೀರ್ಘಕಾಲಿಕ ಶಾಂತಿಗೆ ದಾರಿ ಮಾಡಿಕೊಡುತ್ತದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.



ಕಚ್ಚಾ ತೈಲ ಇಳಿಕೆ, ಚಿನ್ನ-ಬೆಳ್ಳಿ ಏರಿಕೆ, ಷೇರು ಚೇತರಿಕೆ

ಮಧ್ಯಪ್ರಾಚ್ಯ ಸಂಘರ್ಷಕ್ಕೆ 14 ದಿನಗಳ ತಾತ್ಕಾಲಿಕ ವಿರಾಮ ಘೋಷಿಸುತ್ತಲೇ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಒಂದು ಬ್ಯಾರೆಲ್ 90 ಡಾಲರ್‌ಗೆ ಇಳಿಕೆಯಾಗಿದೆ. ಇದೇ ಸಂದರ್ಭ 10 ಗ್ರಾಂ. 24 ಕ್ಯಾರೆಟ್ ಚಿನ್ನದ ದರ 3,980 ರೂ. ಮತ್ತು 10 ಗ್ರಾಂ. ಬೆಳ್ಳಿ ದರವು 100 ರೂ. ಏರಿಕೆ ಕಂಡಿದೆ. ಷೇರುಪೇಟೆ ಚೇತರಿಸಿಕೊಂಡಿದ್ದು, ಬಿಎಸ್‌ಇ ಸೆನ್ಸೆಕ್ಸ್ 2,946.32 ಅಂಕಗಳ ಏರಿಕೆ ಕಂಡು 77,562.9 ಅಂಕ ಮತ್ತು ನಿಫ್ಟಿ 873.7 ಅಂಕಗಳ ಏರಿಕೆಯೊಂದಿಗೆ 23,997.35 ಅಂಕಗಳನ್ನು ತಲುಪಿವೆ.

ಮುಂದುವರಿದ ದಾಳಿ

ಯುದ್ಧ ವಿರಾಮ ಘೋಷಣೆಯ ಬಳಿಕವೂ ಹಲವು ದಾಳಿಗಳು ನಡೆದಿವೆ. ಇರಾನ್‌ನ ಲಾವನ್ ದ್ವೀಪದ ತೈಲ ಶುದ್ಧೀಕರಣ ಘಟಕದ ಮೇಲೆ ದಾಳಿಯಾಗಿದೆ. ಯುಎಇ, ಕುವೈತ್ ಮತ್ತು ಸೌದಿ ಅರೇಬಿಯಾದ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳಾಗಿವೆ. ಈ ವೇಳೆ ಸೌದಿ ಅರೇಬಿಯಾ ಒಂಬತ್ತು ಡ್ರೋನ್‌ಗಳನ್ನು ತಡೆದಿದೆ. ಕುವೈತ್‌ನಲ್ಲಿ ವಿದ್ಯುತ್ ಮತ್ತು ನೀರು ಘಟಕಗಳಿಗೆ ಹಾನಿಯಾಗಿದೆ.

ಕದನ ವಿರಾಮ ಸ್ವಾಗತಿಸಿದ ಭಾರತ

ಅಮೆರಿಕ ಮತ್ತು ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮ ಒಪ್ಪಂದವನ್ನು ಭಾರತೀಯ ವಿದೇಶಾಂಗ ಸಚಿವಾಲಯ(ಎಂಇಎ) ಬುಧವಾರ ಸ್ವಾಗತಿಸಿದೆ. ಮಧ್ಯಪ್ರಾಚ್ಯದಲ್ಲಿ ಯುದ್ಧೋನ್ಮಾದ, ಉದ್ವಿಗ್ನತೆ ಶಮನಗೊಂಡು, ಪ್ರದೇಶದಲ್ಲಿ ಶಾಶ್ವತ ಶಾಂತಿ ಪುನಃಸ್ಥಾಪನೆಯಾಗಬೇಕು. ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು ಎಂದು ಎಂಇಎ ಸಲಹೆ ನೀಡಿದೆ.

ಅಸ್ಸಾಂ, ಕೇರಳ, ಪುದುಚೇರಿಯಲ್ಲಿ ಮತ

3 ವಿಧಾನಸಭೆಗಳಿಗೆ ಇಂದು ಚುನಾವಣೆ

• **ಹೊಸದಿಲ್ಲಿ:** ಅಸ್ಸಾಂ, ಕೇರಳ ಮತ್ತು ಪುದುಚೇರಿ ವಿಧಾನಸಭೆಗಳಿಗೆ ಗುರುವಾರ ಚುನಾವಣೆ ನಡೆಯಲಿದೆ. ಇದರೊಂದಿಗೆ ಕರ್ನಾಟಕ, ನಾಗಾಲ್ಯಾಂಡ್ ಮತ್ತು ತ್ರಿಪುರಾದಲ್ಲೂ ಕೆಲ ವಿಧಾನಸಭೆ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಎಲ್ಲಾ ಚುನಾವಣೆಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ.

ಪಾರದರ್ಶಕ ಮತದಾನಕ್ಕಾಗಿ ಚುನಾವಣಾ ಆಯೋಗ ಕೇಂದ್ರ ಪಡೆಗಳನ್ನು ನಿಯೋಜಿಸಿದ್ದು, ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನೂ ಮಾಡಿದೆ.

ಅಸ್ಸಾಂನಲ್ಲಿ ಎಲ್ಲಾ 126 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, 722 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇಲ್ಲಿ 2.5 ಕೋಟಿ ಮತದಾರರಿದ್ದು, ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್ ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ. ➡ಪುಟ ೪

ಗೋವಾ ಉಪಚುನಾವಣೆ ರದ್ದು

ಗೋವಾದ ಪೋಂಡಾ ಕ್ಷೇತ್ರದ ಉಪಚುನಾವಣೆಯನ್ನು ಬಾಂಬೆ ಹೈಕೋರ್ಟ್ ರದ್ದುಗೊಳಿಸಿದೆ. ಪ್ರಸ್ತುತ ವಿಧಾನಸಭೆಯ ಅವಧಿ ಮುಗಿಯಲು ಒಂದು ವರ್ಷಕ್ಕಿಂತ ಕಡಿಮೆ ಸಮಯ ಇರುವುದರಿಂದ ಚುನಾವಣೆ ಅನಗತ್ಯ ಎಂದು ನ್ಯಾಯಾಲಯ ತೀರ್ಪು ನೀಡಿದೆ.



ರಾಜ್ಯದ 2 ಕ್ಷೇತ್ರಕ್ಕೆ ಉಪಚುನಾವಣೆ

ಕರ್ನಾಟಕದಲ್ಲಿ ಎರಡು, ನಾಗಾಲ್ಯಾಂಡ್ ಮತ್ತು ತ್ರಿಪುರಾದಲ್ಲಿ ತಲಾ ಒಂದು ಸ್ಥಾನಕ್ಕೆ ಉಪಚುನಾವಣೆ ನಿಗದಿಯಾಗಿದೆ. ಕರ್ನಾಟಕದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ನಡುವೆ ನೇರ ಪೈಪೋಟಿ ಏರ್ಪಟ್ಟಿದೆ. ನಾಗಾಲ್ಯಾಂಡ್‌ನ ಕೋರಿಡಾಂಗ್ ಮತ್ತು ತ್ರಿಪುರಾದ ಧರ್ಮನಗರ ಸ್ಥಾನಗಳಿಗೂ ಶಾಸಕರ ನಿಧನದಿಂದಾಗಿ ಚುನಾವಣೆ ನಡೆಯುತ್ತಿದೆ. ➡ಪುಟ ೪

ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿಗೆ ಕೇಂದ್ರ ಅನುಮತಿ

• **ಹೊಸದಿಲ್ಲಿ:** ಮಹಿಳಾ ಮೀಸಲಾತಿ ಕಾಯ್ದೆಯನ್ನು ತ್ವರಿತವಾಗಿ ಜಾರಿಗೆ ತರಲು ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದ್ದು, ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಅನುಷ್ಠಾನಗೊಳಿಸುವ



ಉದ್ದೇಶದಿಂದ ನಾರಿ ಶಕ್ತಿ ವಂದನ್ ಅಧಿನಿಯಮಕ್ಕೆ ತಿದ್ದುಪಡಿ ತರಲಿರುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕರಡು ಮಸೂದೆಗೆ ಒಪ್ಪಿಗೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಂಸತ್ತಿನ ಬಜೆಟ್ ಅಧಿವೇಶನವನ್ನು ವಿಸ್ತರಿಸಿರುವ ಕೇಂದ್ರ ಸರ್ಕಾರ, ಏ.16ರಿಂದ 18ರವರೆಗೆ ವಿಶೇಷ ಮೂರು ದಿನಗಳ ಅಧಿವೇಶನ ಕರೆದಿದ್ದು, ಈ ಅವಧಿಯಲ್ಲಿ ಮಸೂದೆಯನ್ನು ಅಂಗೀಕರಿಸುವ ನಿರೀಕ್ಷೆಯಿದೆ. ➡ಪುಟ ೪

ತಿದ್ದುಪಡಿ ಪ್ರಕಾರ

- ಲೋಕಸಭಾ ಸ್ಥಾನಗಳ ಸಂಖ್ಯೆ 543-816ಕ್ಕೆ ಏರಿಕೆ
- ಅದರಲ್ಲಿ 273 ಸ್ಥಾನಗಳು ಮಹಿಳೆಯರಿಗೆ ಮೀಸಲು
- ಎಸ್‌ಸಿ/ಎಸ್‌ಟಿ ವರ್ಗಗಳಿಗೆ ಲಂಬ ಆಧಾರದಲ್ಲಿ ಪ್ರತ್ಯೇಕ ಮೀಸಲು ಮುಂದುವರಿಕೆ
- ಕ್ಷೇತ್ರ ಪುನರ್‌ವಿಂಗಡಣೆ 2027ರ ಜನಗಣತಿ ಬದಲು 2011ರ ಜನಗಣತಿ ಆಧಾರದಲ್ಲಿ
- ರಾಜ್ಯ ವಿಧಾನಸಭೆಗಳಲ್ಲೂ ಅನುಪಾತದ ಆಧಾರದಲ್ಲಿ ಮಹಿಳಾ ಮೀಸಲು

ಇಸಿ ಜತೆಗಿನ ಸಭೆಯಲ್ಲಿ ಟಿಎಂಸಿ ಹೈಡ್ರಾಮಾ

• **ಹೊಸದಿಲ್ಲಿ:** ಡೆರಿಕ್ ಓ ಬ್ರಿಯನ್ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪ್ರತಿನಿಧಿಗಳ ನಿಯೋಗ ಮತ್ತು ಕೇಂದ್ರ ಚುನಾವಣಾ ಆಯೋಗ(ಸಿಇಸಿ) ನಡುವಿನ ಸಭೆ ಬುಧವಾರ ಉದ್ವಿಗ್ನತೆಯಿಂದ ಕೂಡಿತ್ತು. ಸಭೆಯಲ್ಲಿ ಏನಾಯಿತು ಎಂಬುದರ ಬಗ್ಗೆ ಉಭಯರೂ ಪರಸ್ಪರ ವಿರುದ್ಧದ ಹೇಳಿಕೆಗಳನ್ನು ನೀಡಿದ್ದಾರೆ. ಇಸಿ ಮೂಲಗಳ ಪ್ರಕಾರ, ಟಿಎಂಸಿ ನಾಯಕ ಡೆರಿಕ್



ಓ'ಬ್ರಿಯನ್ ಅವರು ಚರ್ಚೆಯ ವೇಳೆ ಧ್ವನಿ ಎತ್ತಿ, ಮುಖ್ಯ ಚುನಾವಣಾ ಆಯುಕ್ತರಿಗೆ ಮಾತನಾಡಬಾರದೆಂದು ಹೇಳಿದರು ಎಂದು ಆರೋಪಿಸಲಾಗಿದೆ. ಟಿಎಂಸಿ ಸಭೆ ಕೆಲವೇ ನಿಮಿಷಗಳಲ್ಲಿ ಮುಗಿಯಿತು. ಡೆರಿಕ್ ಓ'ಬ್ರಿಯನ್ ಅವರು ಚು. ಆಯೋಗದ ಮೇಲೆ ಏರು ಧ್ವನಿಯಲ್ಲಿ ಕೂಗಿ, ಸಿಇಸಿಗೆ ಮಾತನಾಡಬಾರದೆಂದು ಹೇಳಿದರು ಎಂದು ಇಸಿ ಮೂಲಗಳು ತಿಳಿಸಿವೆ. ➡ಪುಟ ೪

ಇಸಿಗೆ ಟಿಎಂಸಿ ಸವಾಲು

ಆದರೆ, ಟಿಎಂಸಿ ನಾಯಕರು ಚುನಾವಣಾ ಆಯೋಗದ ಆರೋಪಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿದ್ದಾರೆ. ಅವುಗಳನ್ನು ಸುಳ್ಳು ಎಂದು ಕರೆದಿದ್ದಾರೆ. ಸಭೆಯ ದಾಖಲೆಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡುವಂತೆ ಅವರು ಚು.ಆಯೋಗಕ್ಕೆ ಸವಾಲು ಹಾಕಿದ್ದಾರೆ. ➡ಪುಟ ೪



ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರದಿಂದ ಸ್ಪಷ್ಟ ನಿಲುವು

ಸಾಂವಿಧಾನಿಕ ನೈತಿಕತೆ ಅಸ್ಪಷ್ಟ

• **ಹೊಸದಿಲ್ಲಿ:** ಧರ್ಮದ ಅಗತ್ಯ ಆಚರಣೆಗಳು, ನಂಬಿಕೆಗಳು ಹಾಗೂ ಸಂಪ್ರದಾಯಗಳನ್ನು ನಿರ್ಧರಿಸಲು ಸಾಂವಿಧಾನಿಕ ನೈತಿಕತೆಯನ್ನು ನ್ಯಾಯಾಂಗ ಪರಿಶೀಲನೆಯ ಮಾನದಂಡವನ್ನಾಗಿ ಬಳಸಲಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸುಪ್ರೀಂ ಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಶಬರಿಮಲೆ ಸೇರಿ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಕುರಿತ ಅರ್ಜಿಗಳ ವಿಚಾರಣೆ ವೇಳೆ ಕೇಂದ್ರ ಈ ಮಹತ್ವದ ವಾದ ಮಂಡಿಸಿದೆ. ಮುಖ್ಯ ನ್ಯಾ. ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠದ ಮುಂದೆ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಸಾಂವಿಧಾನಿಕ ನೈತಿಕತೆ ಎಂಬುದು ಅಸ್ಪಷ್ಟ, ವ್ಯಕ್ತಿನಿಷ್ಠ ಹಾಗೂ ರಾಜಕೀಯ ವಿಜ್ಞಾನದ ಪರಿಕಲ್ಪನೆಯಾಗಿದ್ದು, ಧಾರ್ಮಿಕ ನಂಬಿಕೆಗಳ ಸತ್ಯಾಸತ್ಯತೆ ಪರೀಕ್ಷಿಸಲು ಇದು ಆಧಾರವಾಗಲು ಸಾಧ್ಯವಿಲ್ಲ' ಎಂದು ಹೇಳಿದರು. ➡ಪುಟ ೪



ಶಬರಿಮಲೆ ಸೇರಿ ಧಾರ್ಮಿಕ ಸ್ಥಳಗಳಲ್ಲಿ ಮಹಿಳಾ ಪ್ರವೇಶ ದಾವೆ

ಮುಖ್ಯಾಂಶಗಳು


- ಧಾರ್ಮಿಕ ಆಚರಣೆಗಳ ಪರೀಕ್ಷೆಗೆ ಸಾಂವಿಧಾನಿಕ ನೈತಿಕತೆ ಮಾನದಂಡವಲ್ಲ
- ಶಬರಿಮಲೆ ತೀರ್ಪಿನಲ್ಲಿ ಪರಿಕಲ್ಪನೆ ತಪ್ಪಾಗಿ ಬಳಕೆ: ತುಷಾರ್ ಮೆಹ್ತಾ
- ವಿದೇಶಿ ಕಾನೂನು ತಜ್ಞರ ಅಭಿಪ್ರಾಯ ಆಧಾರಿತ ತೀರ್ಪುಗಳಿಗೆ ಕೇಂದ್ರದ ಆಕ್ಷೇಪ
- ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿಗೆ ಸಂಬಂಧಿಸಿದ 7 ಪ್ರಶ್ನೆಗಳ ವಿಚಾರಣೆ ಮುಂದುವರಿಕೆ

ಪೀಠದಲ್ಲಿರುವ ಜಡ್ಜ್‌ಗಳು

ಮುಖ್ಯ ನ್ಯಾ. ಸೂರ್ಯಕಾಂತ್, ನ್ಯಾ.ಬಿ.ವಿ.ನಾಗರತ್ನ, ನ್ಯಾ.ಎಂ.ಎಂ. ಸುಂದ್ರೇಶ್, ನ್ಯಾ.ಅಹ್ಸಾನುದ್ದೀನ್ ಅಮಾನುಲ್ಲಾ, ನ್ಯಾ.ಅರವಿಂದ ಕುಮಾರ್, ನ್ಯಾ.ಅಗಸ್ಟೀನ್ ಜಾರ್ಜ್ ಮೆಸಿಹ್, ನ್ಯಾ. ಪ್ರಸನ್ನ ಬಿ. ವರಾಳೆ, ನ್ಯಾ.ಆರ್.ಮಹಾದೇವನ್ ಮತ್ತು ನ್ಯಾ.ಜೋಯ್‌ಮಲ್ಯಾ ಬಾಗ್ಚಿ.

ಖರ್ಗೆ ವಿರುದ್ಧ ಎರಡು ದೂರು

• **ಗುವಾಹಟಿ:** ಅವಹೇಳನಕಾರಿ ಹೇಳಿಕೆ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅಸ್ಸಾಂನ ಎರಡು ಪೊಲೀಸ್ ಠಾಣೆಗಳಲ್ಲಿ ಆರ್‌ಎಸ್‌ಎಸ್ ದೂರು



ನೀಡಿದೆ. ಅಸ್ಸಾಂನ ಚುನಾವಣಾ ಪ್ರಚಾರದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ಸಮೀಕರಿಸಿ ಅವರೆಡು ವಿಷಕಾರಿ ಹಾವುಗಳು ಎಂದಿದ್ದರು. ಈ ಬಗ್ಗೆ ಮಾಹಿತಿ ನೀಡಿದ ಆರ್‌ಎಸ್‌ಎಸ್ ವಕ್ತಾರರೊಬ್ಬರು, ಚುನಾವಣಾ ರ‍್ಯಾಲಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಅವಹೇಳನಕಾರಿ, ಕೋಮು ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ, ಈ ಹಿನ್ನೆಲೆ ಅವರ ವಿರುದ್ಧ ಕಾನೂನುಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದಿದ್ದಾರೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಷೇರು ಸೂಚ್ಯಂಕ	
ಬೆಳ್ಳಿ: 2,60,000 (2,50,000) ಅಪರಂಜಿ ಚಿನ್ನ: 1,53,820 (1,49,840) ಆಭರಣ ಚಿನ್ನ: 1,41,000 (1,37,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	ಬಿಎಸ್‌ಇ 77,562 (2946↑) ಎನ್‌ಎಸ್‌ಇ 23,997 (873↑)	$1 = ₹92.35

ಕಿರುಸುದ್ದಿ

ತಪ್ಪಿತಸ್ಥರ ಮೇಲೆ ಕ್ರಮವಾಗಲಿ

ಹುಬ್ಬಳ್ಳಿ: ಮತ ಬ್ಯಾಂಕ್ ಗೋಸ್ಕರ ಒಂದೇ ಸಮಾಜದ ಜನರನ್ನು ಓಲೈಸುವುದು, ನಗರದ ಪೊಲೀಸ್ ವ್ಯಾನ್ ಮೇಲೆ ಹತ್ತಿ ಸ್ಟೇಷನ್ ಮೇಲೆ ಮತ್ತು ಹಿಂದೂಗಳ ಮಂದಿರಗಳ ಮೇಲೆ ಕಲ್ಲು ತೂರಾಟ ನಡೆಸಿ ಅಶಾಂತಿ ಸೃಷ್ಟಿಸಿದವರ ಕೇಸುಗಳನ್ನು ಮತ್ತು ಅನೇಕ ಅಪರಾಧ ಕೃತ್ಯಗಳಲ್ಲಿ ಭಾಗವಹಿಸಿದವರ ಕೇಸನ್ನು ತೆಗೆದು ಅವರನ್ನು ಮತ್ತಷ್ಟು ಅಪರಾಧ ಮಾಡಲು ರಾಜ್ಯ ಸರ್ಕಾರವೇ ಮೂಲ ಕಾರಣವೆಂದು ಮಹಾನಗರ ಜಿಲ್ಲಾ ಬಿಜೆಪಿ ವಕ್ತಾರ ರಾಜು ಕೋರ್ಯಾಣಮಠ ಆರೋಪಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ನಗರದಲ್ಲಿ ಲವ್ ಜಿಹಾದ ನಂತಹ ಮತ್ತು ವಶೀಕರಣದಂತಹ ಗಂಭೀರ ಅಪರಾಧ ನಡೆದು ಆರೋಪಿ ಸಂತ್ರಸ್ತೆಗೆ ಮಬ್ಬು ಬರುವ ಔಷಧಿ ನೀಡಿ ಅವರ ಮೇಲೆ ಅತ್ಯಾಚಾರ ಮಾಡಿದರು ಕಾಂಗ್ರೆಸ್ ನಾಯಕರಿಗೆ ಏನು ಅನಿಸುತ್ತಿಲ್ಲಾ, ಇದು ಅವರಿಗೆ ಗಂಭೀರ ಪ್ರಕರಣವಾಗಿಲ್ಲ, ಇಂತಹ ಪ್ರಕರಣ ಸಂಭವಿಸಿದರು ಕಾಂಗ್ರೆಸ್ಸಿನ ಒಬ್ಬ ನಾಯಕರು ಸಂತ್ರಸ್ತೆಯ ಮನೆಗೆ ಭೇಟಿ ನೀಡದಿರುವುದು ಸಂಶಯಕ್ಕೆ ಎಡೆಮಾಡಿ ಕೊಡುತ್ತಿದೆ ಎಂದು ಆರೋಪಿಸಿದ್ದಾರೆ.

ಸ್ವಪಕ್ಷದ ಪಾಲಿಕೆ ಸದಸ್ಯರೇ ಹೇಳುತ್ತಿದ್ದಾರೆ ನಮ್ಮ ಶಾಸಕರ ಕೈವಾಡವಿದೆ ಎಂದು. ಇಂತಹ ಆರೋಪಗಳನ್ನು ಪೊಲೀಸ್ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ವಹಿಸಿದಾಗ ಮಾತ್ರ ಹಿಂದೂಗಳಿಗೆ ರಕ್ಷಣೆ ಸಿಗುತ್ತದೆ. ಆದರಲ್ಲೂ ಹೆಚ್ಚಾಗಿ ಹಿಂದೂ ಯುವತಿಯರಿಗೆ ಟಾರ್ಗೆಟ್ ಮಾಡುತ್ತಿರುವುದನ್ನು ನೋಡಿದರೆ ಇದಕ್ಕೆಲ್ಲ ರಾಜ್ಯ ಸರ್ಕಾರದ ಅತಿಯಾದ ತುಷ್ಟೀಕರಣ ಕಾರಣ ಎಂದು ದೂರಿದ್ದಾರೆ.

ಸೇವಾ ಸ್ಫೂರ್ತಿ ಪ್ರಶಸ್ತಿ

ನವಲಗುಂದ: ಸಾಹಿತಿ, ಶಿಕ್ಷಕ ಡಾ. ಸಿದ್ಧಲಿಂಗೇಶ ಸಂ. ಹಂಡಿಗಿ ಅವರಿಗೆ ಸೇವಾ ಸ್ಫೂರ್ತಿ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಪರಿಷತ್ತು, ಭಾರತ ಜ್ಞಾನ ವಿಜ್ಞಾನ ಸಮಿತಿ, ಪರಿಸರ ಪ್ರೇಮ ತಂಡ ಧಾರವಾಡ ಇವರುಗಳ ಸಂಯುಕ್ತ ಆಶ್ರಯದಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ. ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಡಾ. ಹಂಡಿಗಿ ಅವರಿಗೆ ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಪರಿಸರ ಜಾಗೃತಿ ಹಾಗೂ ಸಾಮಾಜಿಕ ಸೇವೆ ಪರಿಗಣಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಮಾರಂಭದಲ್ಲಿ ಜಿ.ಪಂ. ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಅಖಿಲ ಭಾರತ ಶಿಕ್ಷಕರ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಗುರಿಕಾರ, ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಉಪಾಧ್ಯಕ್ಷ ಎಫ್. ಸಿ. ಚೇಗರಡ್ಡಿ, ಜಿಲ್ಲಾ ಅಧ್ಯಕ್ಷ ಗುರು ತಿಗಡಿ, ಪರಿಸರ ಪ್ರೇಮ ತಂಡದ ಸಂಚಾಲಕ ಎಲ್. ಐ. ಲಕ್ಕಮ್ಮನವರ, ಸರ್ಕಾರಿ ನೌಕರರ ಸಾಂಸ್ಕೃತಿಕ ಮತ್ತು ಸಾಹಿತ್ಯ ಪರಿಷತ್ ರಾಜ್ಯ ಅಧ್ಯಕ್ಷೆ ರಮಾ ಆರ್., ಪ್ರಧಾನ ಕಾರ್ಯದರ್ಶಿ ಪರ್ವೀನ್ ಭಾನು ಬುಳ್ಳಣ್ಣವರ, ಕೋಶಾಧ್ಯಕ್ಷ ಎಂ. ಆರ್. ಮಲ್ಲಿಕಾರ್ಜುನ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಲಿಂಗರಾಜ ಅಂಗಡಿ, ಡಯಟ್‌ನ ನಿವೃತ್ತ ಉಪನ್ಯಾಸಕ ಕೆ.ಜಿ.ದೇವರಮನಿ, ಪ್ರಮುಖರಾದ ರಾಜಶೇಖರ ಹೊನ್ನಪ್ಪನವರ, ಶಂಕರ ಘಟ್ಟಿ ಮತ್ತಿತರರಿದ್ದರು.

ಏ.12ರಂದು ಶಾಸ್ತ್ರೀಯ ಸಂಗೀತ

ಹುಬ್ಬಳ್ಳಿ: ಗಂಗೂಬಾಯಿ ಹಾನಗಲ್ ಜನ್ಮದಿನ ಅಂಗವಾಗಿ ಗಂಗೂಬಾಯಿ ಹಾನಗಲ್ ಸಂಗಿತೋತ್ಸವ ಹಾಗೂ ಎಂಜಿಎಂ ಫೌಂಡೇಶನ್ ಟ್ರಸ್ಟ್ ವತಿಯಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏ.12ರಂದು ಸಂಜೆ 5 ಗಂಟೆಗೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವಿದುಷಿ ವೀಣಾ ಹಾನಗಲ್ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸಿದ್ಧ ಗಾಯಕ ವಿನಾಯಕ ಹೆಗಡೆ, ಶಿರಸಿ ಮುತ್ತುಮುರುಡು, ಸಿತಾರ ವಾದಕ ಉಸ್ತಾದ್ ಮೊಹಸಿನ್ ಖಾನ್ ಮತ್ತು ಪಂಡಿತ್ ವಿನಾಯಕ್ ತೊರವಿ, ಉದಯೋನ್ಮುಖ ಪ್ರತಿಭೆ ಲಕ್ಷ್ಮೀ ಬೆಳ್ಳಣ್ಣಿ, ಸಹಕಲಾವಿದರಾಗಿ ಪ್ರಸಾದ್ ಮಡಿವಾಳರ್, ಬಸವರಾಜ್ ಹಿರೇಮಠ ಮತ್ತು ಹೇಮಂತ್ ಜೋಶಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಹಿರಿಯ ಸಂಗೀತ ಕಲಾವಿದ ಕೃಷ್ಣಾ ಇನಾಮದಾರ್, ಲತಾ ಜಮಖಂಡಿ ಅವರನ್ನು ಸನ್ಮಾನಿಸಲಾಗುವುದು ಎಂದರು.

ಸಂಗೀತೋತ್ಸವದ ಕಾರ್ಯದರ್ಶಿ ವಿನಯ ನಾಯಕ, ಸಂಘಟಕ ಶಶಿಸಾಲಿ ಇದ್ದರು.

ತ್ರಿಭಾಷಾ ಸೂತ್ರ ಅಗತ್ಯ

ಹುಬ್ಬಳ್ಳಿ: ರಾಜ್ಯ ಸರ್ಕಾರ ದ್ವಿಭಾಷಾ ಸೂತ್ರದತ್ತವಾಲಿದ್ದು ನಿಜಕ್ಕೂ ಆತಂಕದ ವಿಷಯ. ರಾಷ್ಟ್ರೀಯ ಮಟ್ಟದ ವಿಚಾರದಲ್ಲಿ ತ್ರಿಭಾಷಾ ಸೂತ್ರ ಅಗತ್ಯ ಹಾಗೂ ಅನಿವಾರ್ಯ ಎಂದು ಚಿಂತನ ವೇದಿಕೆ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ರಾಜ್ಯಮಟ್ಟದಲ್ಲಿ ಚಿಂತನೆ ನಡೆಸಿ ಬಂಡಾಯ ಹಾಗೂ ಎಡಪಂಥೀಯ ವಿಚಾರ ಧಾರೆಯ ಕೆಲವರನ್ನು ಒಳಗೊಂಡಂತೆ ಇದು ಅಪಾಯಕಾರಿ ಬೆಳವಣಿಗೆ, ಸರ್ಕಾರದ ಅಧೀನ ನಾಮಕರಣದ ಕೆಲವರು ದ್ವಿಭಾಷಾ ಸೂತ್ರ ಅಗತ್ಯವಿದೆ ಎನ್ನುವುದು ಆರೋಗ್ಯಕರ ಬೆಳವಣಿಗೆಯಲ್ಲ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಬಗ್ಗೆ ಪೂರ್ವಾ ಪರ ಯೋಚಿಸದೆ ತನ್ನ ನಿಲುವು ವ್ಯಕ್ತಪಡಿಸಿದಂತೆ ತೋರುತ್ತದೆ, ಕನ್ನಡ ಪರ ಸಂಘಟನೆಗಳು ಕೇವಲ ಕರ್ನಾಟಕ ರಾಜ್ಯದ ಬದುಕಿನತ್ತ ಯೋಚಿಸದೇ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ಮಾಡಲಿ ಎಂದು ಆಗ್ರಹಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಮರುಪರಿಶೀಲನೆ ಮಾಡಲು ಮನವಿ ಮಾಡಿದೆ.



ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮೀಜಿ ಮಠಕ್ಕೆ ಶಾಸಕ ರಮೇಶ ಜಾರಕಿಹೊಳಿ ಅವರು ಭೇಟಿ ನೀಡಿ ಉಭಯ ಶ್ರೀಗಳ ದರ್ಶನ ಪಡೆದರು. ಶ್ರೀಮಠದಿಂದ ಅವರಿಗೆ ಸನ್ಮಾನಿಸಲಾಯಿತು. ಮಠದ ಚೇರಮನ್ ಬಾಳು ಮಗಜಿಕೊಂಡಿ, ಗೌರವ ಕಾರ್ಯದರ್ಶಿ ವಿನಾಯಕ ಘೋಡಕೆ, ಧರ್ಮದರ್ಶಿ ಶಾಮಾನಂದ ಪೂಜೇರಿ, ಬಸವರಾಜ ಕಲ್ಯಾಣ ಶೆಟ್ಟರ ಸೇರಿದಂತೆ ಅನೇಕರಿದ್ದರು.

ಅರಿವಿನ ಗವಿಯಲ್ಲಿ ಮೂರ್ತಿ ಪ್ರತಿಷ್ಠಾಪಿಸಲು ಆಗ್ರಹ

ನವಲಗುಂದ: ಬೀದರ್ ಜಿಲ್ಲೆಯ ಬಸವಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ ಇರುವ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕು ಎಂದು ಒತ್ತಾಯಿಸಿ ಶ್ರೀ ಶಿವಶರಣ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘ ತಾಲೂಕು ಘಟಕ ನವಲಗುಂದ ವತಿದಿಂದ ಪ್ರತಿಭಟಿಸಿ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ 12ನೇ ಶತಮಾನದ ಅನೇಕ ಬಸವಾದಿ ಶರಣರ ಅರಿವಿನ ಗವಿಗಳು ಇರುವುದಾಗಿ ಇತಿಹಾಸ ಸಾರುತ್ತದೆ. ಅದೇ ರೀತಿ ವಿಶ್ವಗುರು ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿದ್ದ ಶಿವಶರಣ ಹಡಪದ ಅಪ್ಪಣ್ಣನವರ ಅಂದಿನ ಗವಿಯೂ ಅಲ್ಲಿ ಅಸ್ತಿತ್ವದಲ್ಲಿದೆ. ಆದರೆ ಅರಿವಿನ ಗವಿಯನ್ನು ಬಸವೇಶ್ವರ ದೇವಸ್ಥಾನದ ಪಂಚಕಮಿಟಿಯವರು ಅಕ್ರಮವಾಗಿ ಹಸ್ತಕ್ಷೇಪ ಮಾಡಿರುವುದು ಖಂಡನೀಯ. ಇದರಿಂದ ಶಿವಶರಣ ಹಡಪದ ಅಪ್ಪಣ್ಣನವರಿಗೆ ಮತ್ತು ಹಡಪದ ಸಮುದಾಯದ ಭಕ್ತಿಭಾವನೆಗಳಿಗೆ ತೀವ್ರ ಘಾಸಿಯಾಗಿದೆಯಲ್ಲದೆ, ಇತಿಹಾಸದ ಮೌಲ್ಯ ಕುಗ್ಗಿಸುವ ಕೃತ್ಯ ನಡೆಸಿದಂತಾಗಿದೆ ಎಂದರು. ಅನೇಕ ಮಠಾಧೀಶರು ಹಾಗೂ ನಾಯಕರು ಸಹ ಹಡಪದ ಅಪ್ಪಣ್ಣನವರ ಪರವಾಗಿ ಹೋರಾಟ ನಡೆಸಿದರೂ ಇನ್ನೂ ನ್ಯಾಯ ದೊರಕಿಲ್ಲ. ಈ ಕೃತ್ಯದಲ್ಲಿ ಭಾಗಿಯಾಗಿರುವ ಪಂಚಕಮಿಟಿ ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಅಧ್ಯಕ್ಷ ಈರಣ್ಣ ಹಡಪದ, ಮಲ್ಲಪ್ಪ ಹಡಪದ, ಆನಂದ ಹಡಪದ, ಎಸ್. ಎನ್. ಇಟಗಿ, ಎಚ್. ಎಂ.ಹಡಪದ, ಎಸ್. ವಿ. ಹಡಪದ, ನಾಗಪ್ಪ ಹಡಪದ ಸೇರಿದಂತೆ ಸಮಾಜದವರು ಇದ್ದರು.



ನವಲಗುಂದ: ಬೀದರ್ ಜಿಲ್ಲೆಯ ಬಸವಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ ಇರುವ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕು ಎಂದು ಒತ್ತಾಯಿಸಿ ಶ್ರೀ ಶಿವಶರಣ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘ ತಾಲೂಕು ಘಟಕ ನವಲಗುಂದ ವತಿದಿಂದ ಪ್ರತಿಭಟಿಸಿ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

25 ಕರಾಸಾ ಪೇದೆಗಳಿಗೆ ತರಬೇತಿ | ಪ್ರಿಯಾಂಗಾ ಎಂ. ಅಭಿಮತ

ಸಂಸ್ಥೆಯ ಏಳಿಗೆಗೆ ಶ್ರಮಿಸಿ



- ಉತ್ತಮ ಕರಾಸಾ ಪೇದೆ (ತರಬೇತಿ) ಪ್ರಶಸ್ತಿಗೆ ಭಾಜನರಾದ ರಾಹುಲ್ ಹಳ್ಳಿ ರವರಿಗೆ ಸಂಸ್ಥೆಯ ಮಾದರಿ ಬಸ್ ಮತ್ತು ಪ್ರಶಂಸನಾ ಪತ್ರ ವಿತರಣೆ
- ಪ್ರತಿ ತರಬೇತಿ ಪಡೆದ ಕ.ರಾ.ಸಾ ಪೇದೆಗಳಿಗೆ ಪ್ರಶಂಸನಾ ಪತ್ರ ವಿತರಣೆ
- ಕ.ರಾ.ಸಾ ಪೇದೆಗಳಿಗೆ ತರಬೇತಿ ನೀಡಿದ ಎಸ್. ವಿ. ಬದಿ ನಿವೃತ್ತ ಪೊಲೀಸ್ ಅಧಿಕಾರಿಗೆ ಸನ್ಮಾನ



ಹುಬ್ಬಳ್ಳಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯಾದ 25 ಕರಾಸಾ ಪೇದೆಗಳಿಗೆ ತರಬೇತಿ ನೀಡಲಾಗಿದ್ದು, ಆಸಕ್ತಿ, ಶ್ರದ್ಧೆಯಿಂದ ಕಲಿತು ಯಶಸ್ವಿಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ನಿಮ್ಮ ಕರ್ತವ್ಯದ ಸ್ಥಳದಲ್ಲಿಯೂ ಸಹ ಇದೇ ರೀತಿ ಆಸಕ್ತಿ, ಶ್ರದ್ಧೆಯಿಂದ ಕಾರ್ಯನಿರ್ವಹಿಸಿ ಸಂಸ್ಥೆಯ ಏಳಿಗೆಗೆ ಶ್ರಮಿಸಬೇಕು ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ. ತಿಳಿಸಿದರು.

ಇಲ್ಲಿಯ ಗೋಕುಲ ರಸ್ತೆಯಲ್ಲಿರುವ ಪ್ರಾದೇಶಿಕ ತರಬೇತಿ ಕೇಂದ್ರದಲ್ಲಿ ಅನುಕಂಪದ ಆಧಾರ ಮೇಲೆ ನೇಮಕಾತಿಯಾದ ಕರಾಸಾ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮ ಸಮಾರೋಪ ಸಮಾರಂಭವಾದ ನಿರ್ಗಮನ ಪಥಸಂಚಲನಕ್ಕೆ ಚಾಲನೆ ನೀಡಿ ಮಾತನಾಡಿದರು.

ಉಪಾಧ್ಯಕ್ಷ ಸುನೀಲ್ ಹಣಮನ್ನವರ ಮಾತನಾಡಿದರು. ಸಂಚಾರ ವ್ಯವಸ್ಥಾಪಕ ವಿವೇಕಾನಂದ ವಿಶ್ವಜ್ಞ, ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ ಶ್ರೀನಿವಾಸಮೂರ್ತಿ ಸಿಇ, ಮುಖ್ಯ ತಾಂತ್ರಿಕ ಅಭಿಯಂತರ ಸಿದ್ದೇಶ್ವರ ಎನ್. ಹೆಬ್ಬಾಳ, ಮುಖ್ಯ ಕಾನೂನು ಅಧಿಕಾರಿ ಶ್ಯಾಮಲಾ ಕೆ.ಎನ್., ಮುಖ್ಯ ಉಗ್ರಾಣ ಮತ್ತು ಖರೀದಿ ನಿಯಂತ್ರಕ ಇಮಾಮ್ ಕಾಸೀಮ್ ಕಂದಗಲ್ ಇದ್ದರು.

ಜವಾಬ್ದಾರಿ ಅಗತ್ಯ

ತರಬೇತಿ ಎಂಬುದು ಕ.ರಾ.ಸಾ ಪೇದೆಗಳ ಸೇವೆಯಲ್ಲಿ ಅಡಿಪಾಯವಾಗಿರುತ್ತದೆ. ಎಲ್ಲರೂ ಆಸಕ್ತಿಯಿಂದ ಭಾಗವಹಿಸಿದ್ದು, ಮುಂದೆ ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಉಪಯುಕ್ತವಾಗುತ್ತದೆ. ಸಂಸ್ಥೆಯ ಶಿಸ್ತು ನಿಯಮಾವಳಿಗಳನ್ನು ರೂಢಿಸಿಕೊಂಡು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವಂತೆ ಸಂಸ್ಥೆ ಮುಖ್ಯ ಭದ್ರತಾ ಹಾಗೂ ಜಾಗೃತ ಅಧಿಕಾರಿ ಗಣೇಶ ರಾಠೋಡ್ ತಿಳಿಸಿದರು.

> ಒಬ್ಬ ವ್ಯಕ್ತಿ ಕೆಲಸ ಮಾಡಿದ ಒಂದು ಸಂಸ್ಥೆಯಲ್ಲಿ ಮುಂದಿನ ಪೀಳಿಗೆಗೆ ಸಹ ಅದೇ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುವ ಅವಕಾಶ ಸಿಗುವುದು ವಿರಳ. ಅಂತಹ ಅವಕಾಶ ನಿಮಗೆ ಲಭಿಸಿದ್ದು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು.
> ■ ಪ್ರಿಯಾಂಗಾ ಎಂ., ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ

ಮಕ್ಕಳ ಬಾಲ್ಯ ನಶಿಸದಿರಲಿ: ಶಿವಪ್ರಕಾಶ



ಕುಂದಗೋಳ: ತಾಲೂಕಿನ ಹರಲಾಪೂರ ಗ್ರಾಮದ ಜಾನಪದ ಕ್ರೀಡಾ ರಂಗ ಕುಟೀರದಲ್ಲಿ ದಿ ಪಾರ್ವತೆಮ್ಮ ನರೇಗಲ್ಲಮಠ ಅವರ ಸ್ಮರಣಾರ್ಥ 13ನೇ ರಾಜ್ಯಮಟ್ಟದ ಮಕ್ಕಳ ಜಾನಪದ ಮಲ್ಲಕಂಬ ಯೋಗ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ ಹರಲಾಪೂರ ಮತ್ತು ಕನ್ನಡ ಹಾಗೂ ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಡೆದ ಕಾರ್ಯಕ್ರಮವನ್ನು ಖ್ಯಾತ ಉದ್ಯಮಿ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ಅವರು ಪುಷ್ಪಾರ್ಚನೆ ಸಲ್ಲಿಸಿ ಜಗ್ಗಲಿಗೆ ಬಾರಿಸುವ ಮೂಲಕ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಮಕ್ಕಳಿಗೆ ವಸತಿ ಸಹಿತ ರಾಜ್ಯಮಟ್ಟದ ಶಿಬಿರ ಆಯೋಜಿಸುವುದು ಸವಾಲಿನ ಕೆಲಸ. ಹರಲಾಪೂರ ಗ್ರಾಮದಲ್ಲಿ ಹತ್ತಾರು ವರ್ಷಗಳಿಂದ ಈ ಕಾರ್ಯ ನಿರಂತರವಾಗಿ ನಡೆಯುತ್ತಿರುವುದು ಶ್ಲಾಘನೀಯ. ಮಕ್ಕಳ ಬಾಲ್ಯ ನಶಿಸಬಾರದು. ಆಟ,ಪಾಠ ಎರಡೂ ಸಮಾನವಾಗಿ ಸಾಗಿದಾಗ ಮನಸ್ಸು ಉಲ್ಲಾಸಗೊಳ್ಳುತ್ತದೆ. ವಿವಿಧ ಭಾಗಗಳಿಂದ ಆಗಮಿಸಿರುವ ಮಕ್ಕಳು ಇಲ್ಲಿ ಉತ್ತಮ ಆಚಾರ-ವಿಚಾರಗಳನ್ನು ಕಲಿತು ಉತ್ತಮ ನಾಗರಿಕರಾಗಿ ಬೆಳೆವಂತೆ ಎಂದು ಆಶಿಸಿದರು.

ಮಕ್ಕಳಲ್ಲಿ ಒತ್ತಡ ಹೆಚ್ಚಳ

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳ ಮೇಲೆ ಒತ್ತಡ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ನಶಿಸುತ್ತಿರುವ ಜನಪದ ಕಲೆಗಳನ್ನು ಉಳಿಸಿ ಬೆಳೆಸುವ ಕಾರ್ಯ ಹರಲಾಪೂರದಲ್ಲಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ರಂಗಕರ್ಮಿ ಬಸವರಾಜ ಬೆಂಗೇರಿ ಹೇಳಿದರು.

ಲಕ್ಷ್ಮೇಶ್ವರ ಚೆನ್ನಮ್ಮ ಬಿಇಡಿ ಕಾಲೇಜಿನ ಪ್ರಾಚಾರ್ಯ ರೇಣುಕಾನಂದ ಅಂಗಡಿ ಮಾತನಾಡಿ, ಪಾಲಕರು ಅಂಕಗಳ ಹಿಂದೆ ಓಡುತ್ತಾ ಮಕ್ಕಳ ಆರೋಗ್ಯವನ್ನು ಕಡೆಗಣಿಸುತ್ತಿದ್ದಾರೆ. ಆದರೆ ಈ ರೀತಿಯ ಶಿಬಿರಗಳಿಗೆ ಮಕ್ಕಳನ್ನು ಕಳುಹಿಸುವ ಪಾಲಕರು ಅಭಿನಂದನಾರ್ಹರು ಎಂದರು.


ಅಧ್ಯಕ್ಷತೆ ಎಸ್.ಎಸ್. ಹಿರೇಮಠ ವಹಿಸಿದ್ದರು. ಯುವ ಉದ್ಯಮಿ ವಿನಯ ಹಿರೇಮಠ, ಸಮಾಜಸೇವಕ ನವೀನ ಕುರ್ತಕೋಟಿಮಠ, ಈಶ್ವರಯ್ಯ ನರೆಗಲಮಠ, ಶಿಕ್ಷಕಿ ಅನು ಹಿರೇಮಠ ಸೇರಿದಂತೆ ವಿದ್ಯಾರ್ಥಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು. ಅಮೋಘ ಸ್ವಾಗತಿಸಿದರು. ಮಲ್ಲಯ್ಯ ಹಿರೇಮಠ ವಂದಿಸಿದರು.

ಸಂಶೋಧನೆಗಳಿಗೆ ಅನ್ವೇಷಣಾ ಮನೋಭಾವ ಅಗತ್ಯ

ಧಾರವಾಡ: ವೈಜ್ಞಾನಿಕ ಸಂಶೋಧನೆಗಳಿಗೆ ತಾರ್ಕಿಕ ಅವಲೋಕನ ಮತ್ತು ಅನ್ವೇಷಣಾ ಮನೋಭಾವ ಬಹಳ ಅಗತ್ಯ ಎಂದು ಬೆಂಗಳೂರಿನ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕ್ಯಾಡೆಮಿ ಅಧ್ಯಕ್ಷ ಪ್ರೊ. ಎ.ಎಚ್.ರಾಜಾಸಾಬ್ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ವಿಶ್ವವಿದ್ಯಾಲಯವು ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ಸರ್ ಸಿ.ವಿ.ರಾಮನ್ ಸ್ಮಾರಕ ಮೂಲತತ್ವದ ಉಪನ್ಯಾಸ-ಉತ್ತಮ ಸಂಶೋಧನಾ ಲೇಖನ ಪ್ರಶಸ್ತಿ ಕಾರ್ಯಕ್ರಮದಲ್ಲಿ ಸುಸ್ಥಿರ ಮಾದರಿಗಳು: ಆಧುನಿಕ ಸಸ್ಯಶಾಸ್ತ್ರೀಯ ಸವಾಲುಗಳಿಗೆ ನವೀನ ಪರಿಹಾರಗಳು, ವಿಷಯದ ಕುರಿತು ಮಾತನಾಡಿದರು. ಕೋವಿಡ್ ಲಸಿಕೆ ಅಭಿವೃದ್ಧಿಪಡಿಸುವಲ್ಲಿ ಸಸ್ಯಶಾಸ್ತ್ರೀಯ ವಿಜ್ಞಾನ ಹೆಚ್ಚು ಸಹಕಾರಿ. ಸಸ್ಯಗಳ ಅಧ್ಯಯನದಲ್ಲಿ ಕ್ರಿಸ್ಪರ್ ಜೀನ್ ತಂತ್ರಜ್ಞಾನವು ಹೊಸ ಆಧುನಿಕ ತಂತ್ರಜ್ಞಾನವಾಗಿದೆ. ಗೂಗಲ್ ತಂತ್ರಜ್ಞಾನ ಗುರು ಮತ್ತು ಪುಸ್ತಕಗಳ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ ಎಂದರು. ಪಾಲಿ ಅಗ್ರಿಕಲ್ಚರಲ್ ಹೌಸ್ ಎಂಬ ಪರಿಕಲ್ಪನೆ ಮಹಾನಗರದಲ್ಲಿ ಹೆಚ್ಚಾಗಿದೆ. ಕೃತಕ ಬುದ್ಧಿಮತ್ತೆ ಕೇವಲ ತಕ್ಷಣದ ಪರಿಹಾರಕ್ಕೆ ಮಾತ್ರ ಸೂಕ್ತವಾಗಿದೆ. ಆದರೆ ಭವಿಷ್ಯದ ದೀರ್ಘಕಾಲದ ಅವಧಿಗೆ ಪುಸ್ತಕಗಳೇ ಜ್ಞಾನ ಮೂಲಗಳಾಗಿವೆ. ಬಯೋ ಇಂಧನ ಭವಿಷ್ಯದ ಇಂದನವಾಗಿದೆ. ಆದರೆ ಬಯೋ ಇಂಧನದ ಉತ್ಪಾದಿಸಲು ಹೆಚ್ಚು ಸಮಯ ಬೇಕು. ಸಸ್ಯಶಾಸ್ತ್ರೀಯ ವಿಜ್ಞಾನವು ಇಂದು ಆರೋಗ್ಯ, ಆಹಾರ, ವೈದ್ಯಕೀಯ, ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಬಳಕೆ ಮಾಡಲಾಗುತ್ತಿದೆ ಎಂದರು.

ಕವಿವಿ ಕುಲಪತಿ ಪ್ರೊ.ಎ.ಎಂ.ಖಾನ್ ಮಾತನಾಡಿ, ಸಂಶೋಧಕರಿಗೆ ಆಸಕ್ತಿ ಹೊಂದಿರಬೇಕು. ಪ್ರಸ್ತುತ ಸಂಶೋಧನೆಗಳು ಸಮಾಜ ಮುಖಿಯಾಗಿ ಇರಬೇಕು. ಸಂಶೋಧನಾ ಮನೋಭಾವ ಬೆಳಸುವ ಪಠ್ಯಕ್ರಮವನ್ನು ಪಠ್ಯದಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ ಎಂದರು. 2023ರ ಸಾಲಿನ ವಿಜ್ಞಾನ ವಿಷಯಗಳಲ್ಲಿ ಸಸ್ಯಶಾಸ್ತ್ರ ಡಾ. ಎಸ್.ಎನ್.ಅಗಡಿ, ಪ್ರಾಣಿಶಾಸ್ತ್ರ ವಿಭಾಗದ ಡಾ.ಸಿ.ಬಿ.ಗಣೇಶ, ಗಣಕಯಂತ್ರ ವಿಭಾಗದ ಡಾ.ಈಶ್ವರ ಬೈದಾರಿ, ಜೈವಿಕ ರಸಾಯನಶಾಸ್ತ್ರ ಪ್ರೊ. ಸಿ.ಎಂ.ಕಾಮನವಳ್ಳಿ, ಕರ್ನಾಟಕ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರದ, ಡಾ.ಎಸ್.ಕೆ.ರಾಜಪ್ಪ, ಡಾ.ಆರ್.ಜಿ.ಕಲಕಾಂಬ್ಕರ, ಡಾ. ಶ್ರೀನಿವಾಸ ನಾಯಕ, ರಸಾಯನಶಾಸ್ತ್ರದ ಡಾ.ಲೋಕೇಶ ಶಾಸ್ತ್ರಿ, ಭೌತಶಾಸ್ತ್ರದ ಡಾ.ಎಂ.ಕೆ.ರಬಿನಾಳ, ಕರ್ನಾಟಕ ವಿಜ್ಞಾನ ಕಾಲೇಜಿನ ಡಾ.ಕೆ.ಎಸ್.ಕಟಗಿ ಅವರು ಹತ್ತು ಸಾವಿರ ನಗದು ಉತ್ತಮ ಲೇಖನಕ್ಕೆ ಪ್ರಶಸ್ತಿ ಪಡೆದರು. 2024ನೇ ಸಾಲಿನ ಉತ್ತಮ ಸಂಶೋಧನಾ ಲೇಖನಕ್ಕೆ ಪ್ರೊ. ಎಸ್.ಶಿರಾಳಶೆಟ್ಟಿ, ಸಸ್ಯಶಾಸ್ತ್ರ ಡಾ. ಶ್ರೀನಿವಾಸ ನಾಯಕ, ಡಾ. ವೈ. ಗಣೇಶ ಬಾಬು, ಡಾ.ಹರಿಶ್ಚಂದ್ರ ರಮಾನೆ, ಡಾ.ಎ.ಬಿ.ವೇದಮೂರ್ತಿ, ಕವಿವಿ ಭೌತಶಾಸ್ತ್ರ ವಿಭಾಗದ ಪ್ರೊ. ಜೆ.ಸಿ ತೋನಣ್ಣವರ ಅವರಿಗೆ ಹತ್ತು ಸಾವಿರ ನಗದು ಬಹುಮಾನ ಉತ್ತಮ ಸಂಶೋಧನಾ ಲೇಖನಕ್ಕೆ ದೊರಕಿತು.ಕಾರ್ಯಕ್ರಮದಲ್ಲಿ ಕವಿವಿ ಕುಲಸಚಿವರಾದ ಡಾ. ಶಂಕರಪ್ಪ ವಣಿಕ್ಯಾಳ, ಪ್ರೊ.ಎ.ಬಿ.ವೇದ ಮೂರ್ತಿ, ಪ್ರಸಾರಾಂಗದ ಡಾ. ಎನ್. ಸಿದ್ದಪ್ಪ ಸೇರಿದಂತೆ ಇತರರಿದ್ದರು.



ವಿಶಿಷ್ಟಚೇತನರು ಆತ್ಮವಿಶ್ವಾಸದಿಂದ ಬದುಕಲಿ: ಪ್ರಸಾದ ಅಬ್ಬಯ್ಯ



ಹುಬ್ಬಳ್ಳಿ: ರಾಜ್ಯ ಕಾಂಗ್ರೆಸ್ ಸರ್ಕಾರ ವಿಶಿಷ್ಟಚೇತನರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು, ವಿಶಿಷ್ಟಚೇತನರು ಆತ್ಮವಿಶ್ವಾಸದ ಬದುಕು ಮತ್ತು ಸ್ವಾವಲಂಬಿಗಳಾಗಬೇಕು ಎಂಬುದೇ ಸರ್ಕಾರ ಮುಖ್ಯ ಉದ್ದೇಶವಾಗಿದೆ ಎಂದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ, ಹು-ಧಾ ಪೂರ್ವ ಕ್ಷೇತ್ರದ ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ಸಂತೋಷ ನಗರದ ಗೃಹ ಕಚೇರಿಯಲ್ಲಿ ಹು-ಧಾ ಮಹಾನಗರ ಪಾಲಿಕೆ ಅನುದಾನದಡಿ ಪೂರ್ವ ಕ್ಷೇತ್ರದ 13 ವಿಶಿಷ್ಟಚೇತನ ಫಲಾನುಭವಿಗಳಿಗೆ ತ್ರೀ ಚಕ್ರ ವಾಹನ ವಿತರಿಸಿ ಅವರು ಮಾತನಾಡಿದರು. ಅಂಗವಿಕಲತೆ ಎಂದರೆ ದೌರ್ಬಲ್ಯವಲ್ಲ, ಅದು ಸಮಾಜದ ಜವಾಬ್ದಾರಿ. ತ್ರೀಚಕ್ರ ವಾಹನಗಳು ನಿಮ್ಮ ಸ್ವಾತಂತ್ರ್ಯದ ಸಂಕೇತಗಳು. ನಿಮ್ಮ ಕನಸುಗಳನ್ನು ಸಾಧಿಸಲು ತ್ರೀಚಕ್ರ ವಾಹನ ಸಹಾಯಕವಾಗಲಿ. ಬದುಕಿನಲ್ಲಿ ಹೊಸ ಬೆಳಕು ತರುವಂತಾಗಲಿ. ವಾಹನ ಚಾಲನೆ ಮಾಡುವಾಗ ಹೆಚ್ಚು ಜಾಗೃತಿ ವಹಿಸಬೇಕು ಎಂದರು.

ವಿಶಿಷ್ಟಚೇತನರು ಆತ್ಮವಿಶ್ವಾಸ ಮತ್ತು ವೃತ್ತಿಪರ ಕೌಶಲ್ಯದಿಂದ ಸ್ವಾವಲಂಬಿ ಜೀವನ ನಡೆಸಬೇಕು. ವಿಶಿಷ್ಟಚೇತನರ ಸ್ವಾವಲಂಬಿ ಬದುಕಿಗಾಗಿ ಸರ್ಕಾರಿ ಸೌಲಭ್ಯಗಳು, ಉದ್ಯೋಗ ತರಬೇತಿ ಮತ್ತು ಆರ್ಥಿಕ ನೆರವು ಅತ್ಯಗತ್ಯ. ಕೌಶಲ ತರಬೇತಿ ಕೇಂದ್ರಗಳು, ವಿಕಲಚೇತನರ ಅಭಿವೃದ್ಧಿ ನಿಗಮದ ಸಾಲ ಸೌಲಭ್ಯಗಳಿಂದ ಉದ್ಯೋಗ ಮುಖ್ಯವಾಹಿನಿಗೆ ಬರಲು ಸಹಕಾರಿಯಾಗಿವೆ ಎಂದರು.

ಈ ವೇಳೆ ಮುಖಂಡರಾದ ರಾಜ ಕುಮಾರ ಕಾಮರೆಡ್ಡಿ, ಶರೀಫ್ ಅದೋನಿ, ಬಾಗಣ್ಣ ಮುಸ್ತಾಕಮುದಗಲ್ಲ, ಮುಸ್ತಾಕ ಅತ್ತಾರ, ಶಿವನಗೌಡ ಹೊಸಮನಿ, ವಿಶಾಲ ಅಬ್ಬಯ್ಯ, ನಾಶಿರ ಅಸುಂಡಿ, ಮುಕ್ತೇಯಾರ್ ಮನಿಯಾರ, ಮೆಹಬೂಬ್ ನಾಲಬಂದ ಹಾಗೂ ಅಧಿಕಾರಿಗಳು ಇದ್ದರು.

ವಿಶ್ವ ಆರೋಗ್ಯ ದಿನಾಚರಣೆ: ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ



ನವಲಗುಂದ: ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ನವಲಗುಂದದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಂದ ಆರೋಗ್ಯ ಜಾಗೃತಿ ಜಾಥಾ ಜರುಗಿತು.

ಈ ಜಾಥಾದಲ್ಲಿ ನೂರಾರು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ, ಆರೋಗ್ಯದ ಮಹತ್ವವನ್ನು ಸಾರ್ವಜನಿಕರಿಗೆ ಮನವರಿಕೆ ಮಾಡುವ ಕಾರ್ಯ ನಡೆಸಿದರು. ಜಾಥಾ ಕಾಲೇಜು ಆವರಣದಿಂದ ಪ್ರಾರಂಭವಾಗಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ವಿದ್ಯಾರ್ಥಿಗಳು ಸ್ವಸ್ಥ ಜೀವನ-ಸುಖೀ ಜೀವನ, ಆರೋಗ್ಯವೇ ಮಹಾಭಾಗ್ಯ, ಸ್ವಚ್ಛತೆ ಕಾಪಾಡಿ ಆರೋಗ್ಯ ಉಳಿಸಿ ಎಂಬ ಘೋಷಣೆಗಳನ್ನು ಕೂಗಿ ಜನರಲ್ಲಿ ಅರಿವು ಮೂಡಿಸಿದರು. ಕೈಯಲ್ಲಿ ಫಲಕಗಳನ್ನು ಹಿಡಿದು, ಆರೋಗ್ಯದ ಬಗ್ಗೆ ಸಂದೇಶಗಳನ್ನು ಸಾರಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಬಿ.ಬಾಗಡಿ ಮಾತನಾಡಿ, ಆರೋಗ್ಯದ ಬಗ್ಗೆ ಪ್ರತಿಯೊಬ್ಬರೂ ಜಾಗೃತರಾಗಬೇಕು ಎಂದ ಅವರು, ದಿನನಿತ್ಯ ವ್ಯಾಯಾಮ, ಸಮತೋಲನ ಆಹಾರ ಹಾಗೂ ಸ್ವಚ್ಛತೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ಮಹಾವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಮಂಜುನಾಥ ಚಾಡರ ಹಾಗೂ ಸಂಚಾಲಕ ಪ್ರೊ. ಐ.ಬಿ. ಸಾತಿಹಾಳ ಅವರು ಜಾಥಾ ನೇತೃತ್ವ ವಹಿಸಿದ್ದರು.

ಈ ಸಂದರ್ಭದಲ್ಲಿ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಜಾಥಾ ಯಶಸ್ವಿಯಾಗಿ ನೆರವೇರಿದ್ದು, ಸಾರ್ವಜನಿಕರಲ್ಲಿ ಆರೋಗ್ಯದ ಬಗ್ಗೆ ಉತ್ತಮ ಜಾಗೃತಿ ಮೂಡಿಸಿದರು.

ಚಿತ್ರಕಲಾ ಕಾಲೇಜಿನ ಸುವರ್ಣ ಮಹೋತ್ಸವ: ಡಾ.ಬಸವರಾಜ



ಧಾರವಾಡ: ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಚಿತ್ರಕಲಾ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಆಶ್ರಯದಲ್ಲಿ ನಗರದ ಸರ್ಕಾರಿ ಚಿತ್ರಕಲಾ ಕಾಲೇಜಿನ ಸುವರ್ಣ ಸಂಭ್ರಮ ಸಮಾರಂಭ ಏ.11ರಂದು ಬೆಳಗ್ಗೆ 11ಕ್ಕೆ ಆಯೋಜಿಸಲಾಗಿದೆ ಎಂದು ಸುವರ್ಣ ಸಮಿತಿ ಕೋಶಾಧ್ಯಕ್ಷ ಡಾ.ಬಸವರಾಜ ಕುರಿಯವರ ಹೇಳಿದರು.

ಬುಧವಾರ ಸುದ್ದಿಗೊಷ್ಠಿಯಲ್ಲಿ ಅವರು ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಮತ್ತು ಸಚಿವ ಎಚ್.ಕೆ.ಪಾಟೀಲ್ ಚಿತ್ರಕಲಾ ಪ್ರದರ್ಶನ ಉದ್ಘಾಟನೆ ನೆರವೇರಿಸುವರು. ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸುವರು. ನೀರು ಸರಬರಾಜು-ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ, ಡಾ.ಲೋಹಿತ್ ನಾಯ್ಕರ, ಡಾ. ಎಂ.ಎಸ್.ಮೂರ್ತಿ, ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕಿ ಕರಿಮುನ್ನಿಸಾ ಸಯ್ಯದ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದರು.

ಸುವರ್ಣ ಮಹೋತ್ಸವ ಸಮಿತಿ ಗೌರವಾಧ್ಯಕ್ಷ ಶಿವಶಂಕ ಹಿರೇಮಠ, ಕಲಾವಿದ ಎಂ.ಆರ್. ಬಾಳಿಕಾಯಿ ಹಾಗೂ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಎಸ್.ಎಸ್. ಅಂಗಡಿ ಗೌರವ ಉಪಸ್ಥಿತಿ ವಹಿಸುವರು ಎಂದರು.

ಮಧ್ಯಾಹ್ನ 3ಕ್ಕೆ ಗ್ರಾಫಿಕ್ ಮತ್ತು ಗೇಮಿಂಗ್ ವಿಷಯದ ಗೋಷ್ಠಿ, ಸಂಜೆ 5ಕ್ಕೆ ಪ್ರಾತ್ಯಕ್ಷಿಕೆ (ಭಾವಚಿತ್ರ), 6ಕ್ಕೆ ಹಿರಿಯ ವಿದ್ಯಾರ್ಥಿಗಳು ಅನಿಸಿಕೆ ಹಂಚಿಕೊಳ್ಳಲಿದ್ದು, ಅನಂತರ ಸಂಜೆ 7ರಿಂದ 10ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಏ.12ರ ಬೆಳಗ್ಗೆ 9ಕ್ಕೆ ಜ್ಯುಬ್ಲಿ ಸರ್ಕಲ್ ನಿಂದ ಸರ್ಕಾರಿ ಆರ್ಟ್ ಗ್ಯಾಲರಿವರೆಗೂ ಶೋಭಾಯಾತ್ರೆ ನಂತರ, 10ಕ್ಕೆ ಚಿತ್ರಕಲಾ ಪ್ರದರ್ಶನ-ಮಾರಾಟ ವಿಷಯದ ಗೋಷ್ಠಿ, 11ಕ್ಕೆ ಕಲಾಕೃತಿಗಳ ಉದ್ಘಾಟನೆ, ಸ್ಮರಣ ಸಂಚಿಕೆ ಬಿಡುಗಡೆ ಜರುಗಲಿದೆ. ಸಭಾಪತಿ ಬಸವರಾಜ ಹೊರಟ್ಟಿ, ವಿಪ ಸದಸ್ಯ ಎಸ್.ವಿ.ಸಂಕನೂರ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಎಫ್.ಎಚ್.ಜಕ್ಕಪ್ಪನವರ, ಕಲಾವಿದ ಬಿ.ಮಾರುತಿ ಪಾಲ್ಗೊಳ್ಳುವರು. ಮಧ್ಯಾಹ್ನ 3ಕ್ಕೆ ಚಿತ್ರಕಲಾ ಶಿಕ್ಷಣದ ಇಂದಿನ ಸ್ಥಿತಿ-ಗತಿ ವಿಷಯದ ಬಗ್ಗೆ ಗೋಷ್ಠಿ, ಸಂಜೆ 4.30ಕ್ಕೆ ಸಮಾರೋಪದಲ್ಲಿ ಉತ್ಸವ ಸಮಿತಿ ಗೌರವಾಧ್ಯಕ್ಷ ಶಿವಶಂಕರ, ಕಲಾವಿದ ಎಂ.ಆರ್.ಬಾಳಿಕಾಯಿ, ಸುರೇಶ ಹಾಲಭಾವಿ ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಬಿ.ಮಾರುತಿ, ಡಾ.ಶಂಕರ ಕುಂದಗೋಳ, ಸುಧೀರ ಪಡ್ನೀಸ್, ದಯಾನಂದ ಕಾಮಕರ, ಡಾ.ಪ್ರತಾಪ ಬಹುರೂಪಿ, ವಿಠ್ಠಲ ಬಸಲಿಗುಂದಿ ಇದ್ದರು.

ಏ.11ಕ್ಕೆ ಮೇಗಾ ಉದ್ಯೋಗ ಮೇಳ

ಹುಬ್ಬಳ್ಳಿ: ನಗರದ ಚೇತನ್ ಬಿಸಿನೆಸ್ ಸ್ಕೂಲ್, ಕರ್ನಾಟಕ ವಿಶ್ವವಿದ್ಯಾಲಯ ಸಹಯೋಗದಲ್ಲಿ ಏ.11ರಂದು ಬೆಳಗ್ಗೆ 9 ಗಂಟೆಯಿಂದ ತಾಜನಗರದ ಕಾಲೇಜ್ ಆವರಣದಲ್ಲಿ ಮೇಗಾ ಉದ್ಯೋಗ ಮೇಳ ಆಯೋಜಿಸಲಾಗಿದೆ.

ಬಿಬಿಎ, ಬಿಸಿಎ ಹಾಗೂ ಬಿಕಾಂ ಪದವಿ ಪಡೆದ ವಿದ್ಯಾರ್ಥಿಗಳಿಗೆ (ಅಂತಿಮ ವರ್ಷ ಹಾಗೂ ಉತ್ತೀರ್ಣ) ಸಂದರ್ಶನದಲ್ಲಿ ಭಾವಹಿಸಬಹುದು. ವಿದ್ಯಾರ್ಥಿಗಳು ಮತ್ತು ಕೈಗಾರಿಕಾ ಅಗತ್ಯಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿದೆ. ಈ ಕಾರ್ಯಕ್ರಮದಲ್ಲಿ ಸುಮಾರು 20 ಪ್ರಸಿದ್ಧ ಕಂಪನಿಗಳು ಭಾಗವಹಿಸುವುದಾಗಿ ದೃಢಪಡಿಸಿದ್ದು, ವಿದ್ಯಾರ್ಥಿಗಳಿಗೆ ವಿವಿಧ ಉದ್ಯೋಗಾವಕಾಶಗಳನ್ನು ಒದಗಿಸಲಿವೆ. ಪ್ರಮುಖ ಸಂಸ್ಥೆಗಳಾಗಿ ಜೆಪ್ಟೋ, ಮುತ್ತೂಟ್ ಫೈನಾನ್ಸ್ ಕೆ12 ಟೆಕ್ನೋ ಸರ್ವಿಸ್ ಪ್ರೈವೇಟ್ ಲಿಮಿಟೆಡ್, ಎಸ್‌ಬಿಐ ಲೈಫ್ ಇನ್‌ಯುರೆನ್ಸ್ ಕಂಪನಿ ಲಿಮಿಟೆಡ್, ಟ್ಯಾನಿ ಹೆಚ್‌ಕ್ಯೂ, ರುಪೀಕ್ ಫಿನ್ ಟೆಕ್ ಪ್ರೈವೇಟ್ ಲಿಮಿಟೆಡ್, ಪಾಲಿಸಿಬಜಾರ್ ಸೇರಿದಂತೆ ಅನೇಕ ಸಂಸ್ಥೆಗಳು ಭಾಗವಹಿಸಲಿವೆ. ಇದಲ್ಲದೇ ಕೊರವಿ ಡೆವಲಪರ್ಸ್ ಮತ್ತು ಬಿಲ್ಡರ್ಸ್, ವರ್ಕ್‌ಕ್ಯೂಬಿಕಲ್ ಪ್ರೈವೇಟ್ ಲಿಮಿಟೆಡ್, ಗುರುಕುಲ ಸ್ಕಿಲ್, ವೋಕಲ್ ಮಾರ್ಕೆಟಿಂಗ್, ಶ್ರೀ ದುರ್ಗಾ ಡೆವಲಪರ್ ಮತ್ತು ಪ್ರಮೋಟರ್, ಫೈವ್ ಎಸ್ ಡಿಜಿಟಲ್, ಡಾಫ್ಸನ್ಸ್, ಇಂಟಿಗ್ರೇಟ್, ಪ್ಲೇಸ್‌ಮೈನ್ ಅಪೋನಿಕ್ಸ್ ಅಕಾಡೆಮಿ ಸೇರಿದಂತೆ ಇತರ ಸಂಸ್ಥೆಗಳು ಕೂಡ ಭಾಗವಹಿಸಲಿವೆ. ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 11, 2026 ರಂದು ಬೆಳಗ್ಗೆ 9 ಗಂಟೆಗೆ ಕ್ಯಾಂಪಸ್‌ಗೆ ಆಗಮಿಸಿ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ವಿನಂತಿಸಲಾಗಿದೆ.

ಏ.11ರಿಂದ ರಾಷ್ಟ್ರೀಯ ಸಮ್ಮೇಳನ: ಪ್ರೊ. ಎ.ಬಿ.ವೇದಮೂರ್ತಿ



ಧಾರವಾಡ: ಕವಿವಿ ವಿಶ್ರಾಂತ ಕುಲಪತಿ ಡಾ.ಎಚ್.ಬಿ.ವಾಲೀಕಾರ ಅಭಿನಂದನಾ ಸಮಾರಂಭ ಹಾಗೂ ರಾಷ್ಟ್ರೀಯ ಸಮ್ಮೇಳನ ಏ.11 ಮತ್ತು 12ರಂದು ಎರಡು ದಿನ ನಗರದ ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರೊ. ಎ.ಬಿ.ವೇದಮೂರ್ತಿ, ಪಾವಟೆ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಗಣಕಯಂತ್ರ ವಿಭಾಗ, ಸಂಖ್ಯಾಶಾಸ್ತ್ರ ವಿಭಾಗಗಳ ಸಹಯೋಗದ ಸಮಾರಂಭಕ್ಕೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆಮಿಸಲಿದ್ದಾರೆ ಎಂದರು. ವಿಪ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಡಾ.ಎಚ್.ಸಿ.ಮಹಾದೇವಪ್ಪ, ಕೆ.ಎಚ್.ಪಾಟೀಲ, ಸಂತೋಷ ಲಾಡ್, ಎಚ್.ಎಂ.ರೇವಣ್ಣ, ಉದ್ಯಮಿ ವಿಜಯ ಸಂಕೇಶ್ವರ, ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಶಾಸಕರಾದ ಪ್ರಸಾದ ಅಬ್ಬಯ್ಯ, ಎನ್.ಎಚ್.ಕೋನರಡ್ಡಿ, ಎಸ್.ವಿ.ಸಂಕನೂರ, ಎಫ್.ಎಚ್.ಜಕ್ಕಪ್ಪನವರ ಎಂ.ಆರ್.ಪಾಟೀಲ, ಮಹೇಶ ಟೆಂಗಿನಕಾಯಿ, ಪ್ರದೀಪ ಶೆಟ್ಟರ್ ಪಾಲ್ಗೊಳ್ಳಲಿದ್ದು, ಕುಲಪತಿ ಡಾ. ಎ.ಎಂ.ಖಾನ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಏ.12ರ ಬೆಳಗ್ಗೆ 10ಕ್ಕೆ ನಡೆಯುವ ಗಣಿತ-ವಿಜ್ಞಾನ ಮತ್ತು ಅವುಗಳ ಅನ್ವಯಗಳ ರಾಷ್ಟ್ರೀಯ ಸಮ್ಮೇಳನಕ್ಕೆ ಭಾರತೀಯ ಗಣಿತ ಸೊಸೈಟಿ ಕಾರ್ಯದರ್ಶಿ ಪ್ರೊ. ಎಂ.ಎಂ.ಶಿಕರೆ ಚಾಲನೆ ನೀಡಲಿದ್ದು, ಡಾ.ಎ.ಎಂ. ಖಾನ್ ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು. ಕುಲಸಚಿವ ಡಾ.ಶಂಕರಪ್ಪ ವಣಿಕ್ಯಾಳ, ಡಾ. ನಿಜಲಿಂಗಪ್ಪ ಮಟ್ಟಿಹಾಳ, ಹಣಕಾಸು ಅಧಿಕಾರಿ ಪ್ರದೀಪಕುಮಾರ್, ಕವಿವಿ ಜೈವಿಕ ತಂತ್ರಜ್ಞಾನ-ಸೂಕ್ಷ್ಮ ಜೀವವಿಜ್ಞಾನ ವಿಭಾಗದ ಅಧ್ಯಕ್ಷ ಪ್ರೊ. ಎ.ಬಿ.ವೇದಮೂರ್ತಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ಸಮ್ಮೇಳನದಲ್ಲಿ ವಿವಿಧ ವಿಷಯಗಳ ಕುರಿತು ಸಂಪನ್ಮೂಲ ವ್ಯಕ್ತಿಗಳು ವಿಷಯ ಮಂಡಿಸಲಿದ್ದು, ಪ್ರೊ. ಎಚ್.ಆರ್.ರಾಮನೆ, ಪ್ರೊ. ಎಸ್.ಸಿ.ನಾಟೀಕಾರ್, ನಾಗೇಶ, ಪ್ರೊ.ಎಸ್.ಸಿ.ಶಿರಾಳಶೆಟ್ಟಿ, ಪ್ರೊ. ಶ್ರೀದೇವಿ, ಪಿ.ಆರ್.ಹಂಪಿಹೊಳಿ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರೊ. ಎಸ್.ಸಿ.ಶಿರಾಳಶೆಟ್ಟಿ, ಪ್ರೊ. ಸುಭಾಷ ನಾಟೀಕಾರ್, ಪ್ರೊ. ಜೆ.ಎಂ. ಚಂದುನವರ ಅನೇಕರು ಇದ್ದರು.

ಕಿರುಸುದ್ದಿ

ಎರಡೂ ಕ್ಷೇತ್ರದಲ್ಲಿ ಬಿಜೆಪಿಗೆ ಸೋಲು: ಎಂಬಿಪಾ

ವಿಜಯಪುರ: ಉಪ ಚುನಾವಣೆ ಎರಡು ಕ್ಷೇತ್ರದಲ್ಲಿ ಬಿಜೆಪಿ ಸೋಲುತ್ತದೆ. ಸೋಲಿನ ಬಳಿಕ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮನೆಗೆ ಹೋಗುತ್ತಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಲಿನ ಬಳಿಕ ವಿಜಯೇಂದ್ರನ್ನು ತೆಗೆದು ಹಾಕುತ್ತಾರೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಪ್ರಚಾರ ಮಾಡಿದರೂ ಎರಡು ಕ್ಷೇತ್ರದಲ್ಲಿ ಬಿಜೆಪಿ ಸೋಲುತ್ತದೆ. ನಮ್ಮ ಗ್ಯಾರಂಟಿ ಹೆಣ್ಣುಮಕ್ಕಳು ಓಟು ಹಾಕಿದರೆ ನಾವೇ ಗೆಲ್ಲುತ್ತೇವೆ. ಗ್ಯಾರಂಟಿ ಬಗ್ಗೆ ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಬೇಕಿದ್ದರೆ ವಿಜಯೇಂದ್ರಗೂ ಗ್ಯಾರಂಟಿ ಕೊಡುತ್ತೇವೆ ಎಂದು ಲೇವಡಿ ಮಾಡಿದರು.

ಬಸವಜಯಮೃತ್ಯುಂಜಯ ಪ್ರಕರಣ ವಿಚಾರಕ್ಕೆ ಪ್ರತಿಕ್ರಿಯಿಸಿ, ಪೊಲೀಸರು ತನಿಖೆ ಮಾಡುತ್ತಾರೆ. ಸತ್ಯ ಹಾಗೂ ಅಸತ್ಯಯೋ ತನಿಖೆ ಬಳಿಕ ತಿಳಿದು ಬರುತ್ತದೆ. ಇದರ ಬಗ್ಗೆ ನಾನು ಕಾಮೆಂಟ್ ಮಾಡಬಾರದು ಎಂದರು.

ರಥದ ಚಕ್ರಕ್ಕೆ ಸಿಲುಕಿ ವ್ಯಕ್ತಿ ಸಾವು

ಕಲಬುರಗಿ: ಶರಣಬಸವೇಶ್ವರ ರಥೋತ್ಸವದ ವೇಳೆ ಸಂಭವಿಸಿದ ದುರಂತದಲ್ಲಿ ಭಕ್ತನೊಬ್ಬ ಮೃತಪಟ್ಟ ಘಟನೆ ಜಿಲ್ಲೆಯ ಹಾಗರಗುಂಡಗಿ ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆದಿದೆ.



ಕಲಬುರಗಿ ತಾಲೂಕಿನ ಹಾಗರಗುಂಡಗಿ ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆದ ಶ್ರೀ ಶರಣಬಸವೇಶ್ವರ ದೇವರ ರಥೋತ್ಸವದಲ್ಲಿ ಈ ದುರ್ಘಟನೆ ಸಂಭವಿಸಿದೆ. ರಥ ಎಳೆಯುವ ವೇಳೆ ಆಯಾತಪ್ಪಿದ ವಿನೋದ್ ರೆಡ್ಡಿ (40) ರಥದ ಚಕ್ರದಡಿ ಸಿಲುಕಿದ್ದಾರೆ. ಘಟನೆಯ ವೇಳೆ ರಥದ ಚಕ್ರವು ವಿನೋದ್ ಅವರ ತೊಡೆಯ ಮೇಲಿಂದ ಹರಿದ ಪರಿಣಾಮ ಅವರು ತೀವ್ರ ರಕ್ತಸ್ರಾವಕ್ಕೊಳಗಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಫರಹತ್ತಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಬೀದಿ ನಾಯಿಗಳಿಂದ ದಾಳಿ: 5 ಮೇಕೆ ಸಾವು

ಲಕ್ಷ್ಮೇಶ್ವರ: ಪಟ್ಟಣದ ಜನ್ನತನಗರದ ಪವಾಡಲಿಂಗೇಶ್ವರ ದೇವಸ್ಥಾನ ಹತ್ತಿರ ಮೇಕೆಗಳ ಶೆಡ್‌ಗಳ ಮೇಲೆ 5ರಿಂದ 6 ಬೀದಿನಾಯಿಗಳು ಏಕಾಏಕಿ ದಾಳಿ ನಡೆಸಿದ ಪರಿಣಾಮ ಬುಧವಾರ 5 ಮೇಕೆಗಳು ಮೃತಪಟ್ಟಿದ್ದು, ಒಂದು ಮೇಕೆಗೆ ಗಂಭೀರ ಗಾಯಗಳಾಗಿವೆ. ನಾಗರಾಜ ಮಾರ್ತಾಂಡಪ್ಪ ಆರ್ಯಾರ ಎಂಬ ಮಾಲೀಕರಿಗೆ ಸೇರಿದ ಮೇಕೆಗಳ ಇವಾಗಿದ್ದು, ಸ್ಥಳಕ್ಕೆ ಪುರಸಭೆ ಅಧಿಕಾರಿಗಳು ಪಶು ಇಲಾಖೆಯ ವೈದ್ಯಾಧಿಕಾರಿಗಳು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಈ ಹಿಂದೆ ಅದೆ ಶೆಡ್‌ನಿಂದ ಮೇಕೆಗಳ ಮರಿಗಳನ್ನು ನಾಯಿಗಳು ಎತ್ತುಕೊಂಡು ಹೋಗಿವೆ ಎಂದು ಮೇಕೆಗಳ ಮಾಲೀಕರು ಆರೋಪಿಸಿದರು. ಅದೆ ರೀತಿ ಪಟ್ಟಣದ ಹಳ್ಳದಕೇರಿ ಹೊರವಲಯದ ಜಮೀನಗಳಲ್ಲಿ ಜಾನುವಾರಗಳ ಮೇಲೆ ಬೀದಿ ನಾಯಿಗಳು ದಾಳಿ ಮಾಡುತ್ತಿದ್ದು, ಈ ಬಗ್ಗೆ ಸಂಬಂಧ ಪಟ್ಟ ಪುರಸಭೆಯವರು ಕ್ರಮ ಕೈಗೊಳ್ಳಬೇಕೆಂದು ರೈತ ಶಿವಣ್ಣ ಕಟಗಿ ಆಗ್ರಹಿಸಿದ್ದಾರೆ.

ಹೆಡ್ ಕಾನ್‌ಸ್ಟೆಬಲ್ ಸಾವು

ಹುಬ್ಬಳ್ಳಿ: ಹುಬ್ಬಳ್ಳಿಯಿಂದ ಧಾರವಾಡದ ಕಡೆ ಬೈಕ್‌ನಲ್ಲಿ ತೆರಳುತ್ತಿದ್ದ ಕೆಎಸ್‌ಆರ್‌ಪಿ ಹೆಡ್ ಕಾನ್‌ಸ್ಟೆಬಲ್ ನಾಗಪ್ಪ ಸಿದ್ದಪ್ಪನವರ(50) ಅವರಿಗೆ ನವನಗರದ ಬಳಿ ಮಂಗಳವಾರ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಹಾವೇರಿ ಜಿಲ್ಲೆಯ ಸವಣೂರಿನ ಜಲ್ಲಾಪುರ ಗ್ರಾಮದವರಾದ ಅವರು ರಾಯಾಪುರದ ಕೆಎಸ್‌ಆರ್‌ಪಿ 10ನೇ ಬಟಾಲಿನ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಡೀಸೆಲ್ ತುಂಬಿಕೊಂಡು ಹೋಗುತ್ತಿದ್ದ ಟ್ಯಾಂಕರ್ ಅವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ, ತಲೆಗೆ ಗಂಭೀರ ಗಾಯವಾಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಉತ್ತರ ಸಂಚಾರ ಪೊಲೀಸ್ ಠಾಣೆಯ ಪ್ರಕರಣ ದಾಖಲಾಗಿದೆ.

ಆರ್‌ಎಸ್‌ಎಸ್‌ನ ಕರ್ನಾಟಕ ಉತ್ತರ ಪ್ರಾಂತದ ಕಾರ್ಯಕಾರಿಣಿ ಸದಸ್ಯ ಶ್ರೀಧರ ನಾಡಗೀರ ಅಭಿಪ್ರಾಯ

ನಾವೆಲ್ಲರೂ ಸಾಮರಸ್ಯದಿಂದ ಬದುಕೋಣ

ಹುಬ್ಬಳ್ಳಿ: ಭಾರತ ಸರ್ವ ಶಕ್ತಿ ರಾಷ್ಟ್ರವಾಗಲೂ ಜಗತ್ತಿನ ಮುಂದುವರಿದ ದೇಶಗಳಿಗೆ ಇಷ್ಟವಿಲ್ಲ. ಸ್ವಾವಲಂಬಿ ಆಗಬಾರದು ಎಂಬುವುದು ಆ ದೇಶಗಳ ಆಂತರಿಕ ಚಿಂತನೆಯಾಗಿದೆ. ಅಂತಹ ಅನೇಕ ಪ್ರಯತ್ನಗಳು ನಡೆಯುತ್ತಿವೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳಿದಂತೆ ನಾವೆಲ್ಲರೂ ಸಾಮರಸ್ಯದಿಂದ ಬದುಕಿದರೆ ಮಾತ್ರ ಅದನ್ನು ತಡೆಯಲು ಸಾಧ್ಯ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತದ ಕಾರ್ಯ ಕಾರಿಣಿ ಸದಸ್ಯ ಶ್ರೀಧರ ನಾಡಗೀರ ತಿಳಿಸಿದರು.

ಬುಧವಾರ ಇಲ್ಲಿಯ ಆರ್‌ಎಸ್‌ಎಸ್ ಕಚೇರಿ ಕೇಶವ ಕುಂಜದಲ್ಲಿ ಸಾಮರಸ್ಯ ವೇದಿಕೆ ಹುಬ್ಬಳ್ಳಿ ಮಹಾನಗರ ವತಿಯಿಂದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತ ದುರ್ಬಲವಾಗಿ ಇರುವಂತೆ ಮಾಡಲಾಗುತ್ತಿದೆ. ಸದಾ ಆಂತರಿಕ ಬೇಧ ಭಾವ ನಮ್ಮಲ್ಲಿ ಸೃಷ್ಟಿಸಲಾಗುತ್ತಿದೆ. ಆದ್ದರಿಂದ ನಾವೆಲ್ಲರೂ ಸಾಮರಸ್ಯದಿಂದ ಕೂಡಿರಬೇಕು. ಸಂವಿಧಾನ ಪಾಲನೆ ಮಾಡಬೇಕು. ಡಾ.ಬಿ.ಆರ್ ಅಂಬೇಡ್ಕರ್ ಅವರು ಅಸ್ಪೃಶ್ಯತೆ ಜನಾಂಗದಲ್ಲಿ ಜನಿಸಿದರು. ಸಾಕಷ್ಟು ನೋವು ಅನುಭವಿಸಿದರೂ ಸಹ ಉನ್ನತ ಶಿಕ್ಷಣ ಪಡೆದು ಸಮಾಜಕ್ಕೆ ಹಿತ ಬಯಸಿದರು. ಶಿಕ್ಷಣ, ಸಂಘಟನೆ ಹಾಗೂ ಹೋರಾಟ ಮೂಲಕ ತಮ್ಮ ಜನಾಂಗ ಮೇಲೆತ್ತುವ ಕೆಲಸ ಮಾಡಿದರು ಎಂದರು.

ದೇಶ ಜನ ದೊಡ್ಡ ವ್ಯಕ್ತಿಗಳ ದೇವರ ಸ್ಥಾನದಲ್ಲಿ ಕೂಡಿಸುವುದು, ಅವರ ಗುಣಗಾನ ಮಾಡುವುದು ಮನುಷ್ಯನ ಪತನದ ಲಕ್ಷಣವಾಗಿದೆ. ಸಿದ್ಧಾಂತ ಹಾಗೂ ಜೀವನ ನಡುವೆ ಅಂತರ ಕಡಿಮೆ ಮಾಡಬೇಕಿದೆ. ಎಲ್ಲರೂ ಒಂದಾಗಿ ಬದುಕಬೇಕಿದೆ. ಎಲ್ಲ ಜಾತಿಯವರನ್ನು ಪ್ರೀತಿ ಗೌರವದಿಂದ ಕಲಿಯಬೇಕು. ಸಾಮರಸ್ಯ ಬದುಕಿನ ಗುರಿ ಹಾಗೂ ಸಿದ್ಧಾಂತ ಆಗಬೇಕು. ಮತಾಂತರ ಸಮಸ್ಯೆಗೆ ಪರಿಹಾರವಲ್ಲ ಎಂದರು.

ಅತಿಥಿಯಾಗಿ ಆಗಮಿಸಿದ ದೈಹಿಕ ಶಿಕ್ಷಕ ಪ್ರಕಾಶ ಕಂಬ್ಳಿ ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ಅವರು ಜೀವನ ಪೂರ್ತಿ ಕಷ್ಟ ಪಟ್ಟು ನಮಗೆಲ್ಲ ಬೆಳಕು ನೀಡಿದ್ದಾರೆ. ಅವರು ವ್ಯಕ್ತಿಯಲ್ಲ ಶಕ್ತಿಯಾಗಿದ್ದರು. ಆದರೆ, ನಾವುಗಳು ಇನ್ನೂ ಸಮಾಜದಲ್ಲಿ ಪ್ರೀತಿ, ಸ್ವಾತಂತ್ರ ಹಾಗೂ ಸ್ವಚ್ಛಂದವಾಗಿ ಬದುಕುಲು ಏಕೆ ಆಗುತ್ತಿಲ್ಲ? ಇದಕ್ಕೆ ಸಮಾಜದಲ್ಲಿ ಹಣೆ ಪಟ್ಟಿ ಕಟ್ಟುತ್ತಿರುವುದು ಎಂದು ತಿಳಿಸಿದರು.

ಹಳ್ಳಿಗಳು ನಮಗೆ ಸಾಮರಸ್ಯದಿಂದ ಬದುಕುವುದು ಕಲಿಸಿದೆ. ನಗರದಲ್ಲಿ ಇಂತಹ ಪರಿಸ್ಥಿತಿ ಇಲ್ಲ. ಸುಮಾರು ವರ್ಷ ಅಂಬೇಡ್ಕರ್ ಕಠಿಣ ಪರಿಸ್ಥಿತಿ ಅಧ್ಯಯನ ಮಾಡಿ ಸಂವಿಧಾನ ರಚಿಸಿದ್ದಾರೆ. ಶಿಕ್ಷಣದಿಂದ ವಂಚಿತರಾಗಬಾರದು ಎಂಬುವುದು ಅವರ ಉದ್ದೇಶವಾಗಿತ್ತು. ಮಹಿಳೆಯರಿಗೆ ಸ್ವಾತಂತ್ರ್ಯ ಸಿಕ್ಕಿದಿಲ್ಲ. ಅದು ಸಿಗುವಂತೆ ಮಾಡಿದರು. ಅಂಬೇಡ್ಕರ್ ಅವರನ್ನು ಏಕೆ ಒಂದು ಚೌಕಟ್ಟಿಗೆ ಸೀಮಿತ ಮಾಡಿದ್ದೇವೆ ಎಂಬ ಪ್ರಶ್ನೆ ಮೂಡುತ್ತಿದೆ. ಎಲ್ಲಿವರೆಗೂ ಇನ್ನೊಬ್ಬರ ಗೌರವಿಸುವ, ಪ್ರೀತಿಸುವ ಗುಣ ಬರಲ್ಲ ಅಲ್ಲಿವರೆಗೂ ಬದಲಾವಣೆ ಆಗಲು ಸಾಧ್ಯವಿಲ್ಲ ಎಂದು ಹೇಳಿದರು.

ಅಂಬೇಡ್ಕರ್ ನಡೆದು ಬಂದ ದಾರಿ, ಜೀವನ ಶೈಲಿ ಹಾಗೂ ಅನೇಕ ಸಂಗತಿಗಳನ್ನು ಮಕ್ಕಳಿಗೆ ತಿಳಿಸಿಕೊಡುವ ಕಾರ್ಯಾಗಬೇಕಿದೆ. ಮೂಲಭೂತ ಹಕ್ಕುಗಳ ಜೊತೆ ಕರ್ತವ್ಯಗಳನ್ನು ಪಾಲಿಸಬೇಕು. ಗ್ರಾಮದಲ್ಲಿ ಸಾಮರಸ್ಯ ಬದುಕನ್ನು ಮಕ್ಕಳಿಗೆ ಕಲಿಸಬೇಕಿದೆ ಎಂದರು.



> ಅಸ್ಪೃಶ್ಯತೆ ಕೊನೆಗಾಣಿಸಲು ವಿರೋಧ ಮಹತ್ಮಾ ಗಾಂಧಿ ಹಾಗೂ ಕಾಂಗ್ರೆಸ್ ವಿರುದ್ಧ ಸಿಡಿದೆದ್ದರು. ಸಮಾನತೆ ತತ್ವ ಸಾರಿದ ಬೌದ್ಧ ಧರ್ಮ ಸ್ವೀಕರಿಸಿದರು. ಕೊನೆಗೆ ಬೌದ್ಧ ಧರ್ಮ ಸ್ವೀಕರಿಸಿದರು. ಬಹುಶಃ ಅವರು ದೇಶ ಮೊದಲ ಪ್ರಧಾನಿಯಾಗಿದ್ದರೆ ನಮ್ಮ ದೇಶ ಈಗ ಇನ್ನೂ ಚೆನ್ನಾಗಿ ಇರುತ್ತಿತ್ತು. ಸಮಾಜಕ್ಕೆ ಶ್ರಮಿಸಿದ್ದರಿಂದ ಅಂಬೇಡ್ಕರ್ ಈಗಲೂ ಪ್ರತಿಯೊಬ್ಬರ ಮನದಲ್ಲಿ ಇದ್ದಾರೆ.
> ■ ಶ್ರೀಧರ ನಾಡಗೀರ, ಆರ್‌ಎಸ್‌ಎಸ್‌ನ ಕರ್ನಾಟಕ ಉತ್ತರ ಪ್ರಾಂತದ ಕಾರ್ಯಕಾರಿಣಿ ಸದಸ್ಯ

ಯತ್ನಾಳ ಬಿಜೆಪಿಗೆ ಬಂದರೆ ಅನುಕೂಲ: ಜಾರಕಿಹೊಳಿ

ಅಥಣಿ: ಬಸನಗೌಡಾ ಪಾಟೀಲ ಯತ್ನಾಳ ಬಿಜೆಪಿಗೆ ಬಂದರೆ ಶಕ್ತಿ ಹೆಚ್ಚಾಗುತ್ತದೆ. ಹಿಂದು ಮತಗಳನ್ನ ಕ್ರೂಢೀಕರಿಸಲು ಅನುಕೂಲವಾಗುತ್ತದೆ ಎಂದು ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.



ಪಟ್ಟಣದದಲಿತಮುಖಂಡ ಗೌತಮ ಪರಾಂಜಿಪೆ ಅವರ ಮನೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಯತ್ನಾಳ ಅವರನ್ನ ಉಚ್ಚಾಟನೆಗೊಂಡಾಗಿನಿಂದ ಪಕ್ಷಕ್ಕೆ ಮರಳಿ ತರಲು ಪ್ರಯತ್ನ ಮಾಡುತ್ತಿದ್ದೇನೆ. ಅದರಂತೆ ಅವರು ಉಪಚುನಾವಣೆಯಲ್ಲಿ ಪ್ರಚಾರ ಮಾಡುತ್ತಿರುವುದು ಒಳ್ಳೆಯ ಸಂದೇಶವಾಗಿದೆ. ಮುಂದಿನ ದಿನಗಳಲ್ಲಿ ಯತ್ನಾಳ ಅವರನ್ನ ಪಕ್ಷಕ್ಕೆ ಕರೆತರಲು ಒಂದು ವೇದಿಕೆ ಸಜ್ಜಾಗಿದೆ. ಉಪಚುನಾವಣೆಯಲ್ಲಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದಾರೆ ಗೆಲ್ಲುವ ವಿಶ್ವಾಸವಿದೆ ಎಂದರು.

ಸವದಿ ಬಿಜೆಪಿಗೆ ಬರುವುದಿಲ್ಲ, ನಾವು ಕರೆದುಕೊಳ್ಳವುದಿಲ್ಲ. ಅವರು ಪಕ್ಷ ಬಿಟ್ಟು ಹೋಗುವಾಗ ನಮ್ಮ ಪಕ್ಷಕ್ಕೆ ನಮ್ಮ ರಾಷ್ಟ್ರೀಯ ನಾಯಕರಿಗೆ ಯಾವ ರೀತಿಯಲ್ಲಿಮತನಾಡಿದ್ದಾರೆ ಎನ್ನುವುದು ನಮ್ಮ ವರಿಷ್ಠರು ಮರೆತಿಲ್ಲ. ಅವರು ಮರೆತರು ನಾವು ಅದನ್ನ ನೆನಪಿಸುತ್ತೇವೆ. ಒಂದು ವೇಳೆ ಬಂದರೆ ಆವಾಗ ನಮಗೆ ದೇವರು ಏನು ಬುದ್ಧಿ ಕೊಡುತ್ತಾನೊ ಅದನ್ನ ಮಾಡುತ್ತೇವೆ. ಲಕ್ಷ್ಮಣ ಸವದಿ ಅಥಣಿ ಬಿಜೆಪಿ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಯಾಗಲಿ, ಸಂಘಟನೆಯ ಕೊರತೆಯಾಗಲಿ ಎನ್ನುವ ಒಂದು ತಂತ್ರಗಾರಿಕೆಯಲ್ಲಿ ಬಿಜೆಪಿಗೆ ಬರುತ್ತಾರೆ ಎಂದು ಹೇಳುತ್ತಿದ್ದಾರೆ. ಅವರು ಬಿಜೆಪಿ ಬರಲು ಸಾಧ್ಯವಿಲ್ಲ. ನಮ್ಮ ಕಾರ್ಯಕರ್ತರು ಯಾವುದೆ ಗೊಂದಲಕ್ಕೆ ಅಥವಾ ಯಾರದೊ ಮಾತಿಗೆ ಕಿವಿಗೊಡದೆ ಸಂಘಟನೆಯತ್ತ ಗಮನ ಹರಿಸಿ ಮುಂದಿನ ದಿನಗಳಲ್ಲಿ ಅಥಣಿಯಲ್ಲಿ ಬಿಜೆಪಿ ಗೆಲ್ಲಿಸುವ ಕೆಲಸ ಮಾಡೋಣ ಎಂದು ಹೇಳಿದರು.

ಮಾಜಿ ಶಾಸಕ ಮಹೇಶ ಕುಮಠಳ್ಳಿ, ಬಿಜೆಪಿ ಅಧ್ಯಕ್ಷ ಗಿರೀಶ ಬುಟಾಳಿ, ಜಿಲ್ಲಾ ಉಪಾಧ್ಯಕ್ಷ ನಿಂಗಪ್ಪಾ ನಂದೇಶ್ವರ, ಮುಖಂಡರಾದ ನಾನಾಸಾಬ ಅವತಾಡೆ, ದರೇಪ್ಪಾ ಠಕ್ಕಣ್ಣವರ, ಅಶೋಕ ಪರಾಂಜಿಪೆ, ಸತ್ಯಪ್ಪಾ ಬಾಗೆನ್ನವರ, ಡಾ.ರವಿ ಸಂಕ, ರವಿ ಪೂಜಾರಿ, ಸಿದ್ದು ಪಾಟೀಲ, ಗೌತಮ ಪರಾಂಜಿಪೆ, ಸಂಪತ್ತಕುಮಾರ ಶೆಟ್ಟಿ, ಗಿರೀಶ ಬಸರಗಿ, ಅಶೋಕ ಯಲ್ಲಡಗಿ, ಮಲ್ಲಪ್ಪಾ ಹಂಚಿನಾಳ, ಸಂತೋಷ ಕಕಮರಿ, ಮಲ್ಲಿಕಾರ್ಜುನ ಅಂದಾನಿ, ಶಶಿಕಾಂತ ಬಾಡಗಿ, ಶಶಿ ಸಾಳ್ವೆ, ರಾಜು ಐಹೊಳೆ, ಗೊವಿಂದ ಗಾಡಿವಡ್ಡರ, ಶಿವಾನಂದ ಐಗಳಿ, ಸೌರಭ ಮಾಶ್ಯಾಳೆ, ಪ್ರಶಾಂತ ಚಂಡಕಿ ಸೇರಿದಂತೆ ಅನೇಕರು ಇದ್ದರು.

ಜಯಮೃತ್ಯುಂಜಯ ಶ್ರೀಗಳ ತೇಜೋವಧೆಗೆ ಷಡ್ಯಂತ್ರ: ಅಂಗಡಿ



ಗದಗ: ಅಪರಿಚಿತ ವ್ಯಕ್ತಿಗಳು ನೀಡಿದ ದೂರಿನ ಮೇಲೆ ಕೂಡಲಸಂಗಮದ ಪಂಚಮಸಾಲಿ ಪೀಠದ ಜಯಮೃತ್ಯುಂಜಯ ಶ್ರೀಗಳನ್ನು ತೋಜೋವಧೆ ಮಾಡಲು ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದು ಪಂಚಮಸಾಲಿ ಯುವ ಘಟಕದ ಜಿಲ್ಲಾಧ್ಯಕ್ಷ ಅಯ್ಯಪ್ಪ ಅಂಗಡಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮಹಿಳಾ ಆಯೋಗವು ಅಪರಿಚಿತ ಮಹಿಳೆ ದೂರು ನೀಡಿದ ತಕ್ಷಣ ವಿಚಾರಣೆ ಮಾಡದೆ ಶ್ರೀಗಳ ವಿರುದ್ಧ ಕ್ರಮ ಕೈಗೊಂಡಿರುವುದು ಖಂಡನೀಯವಾಗಿದೆ. ಇಡೀ ಪಂಚಮಸಾಲಿ ಸಮಾಜದ ಗುರುಗಳಾದ ಜಯಮೃತ್ಯುಂಜಯ ಶ್ರೀಗಳನ್ನು ಅವಮಾನಿಸಿರುವುದು ಸರಿಯಲ್ಲ ಎಂದರು.

ಪಂಚಮಸಾಲಿ ಸಮಾಜವನ್ನು 2ಎ ಮೀಸಲಾತಿಗಾಗಿ ಹೋರಾಟ ಮಾಡುತ್ತಿರುವ ಶ್ರೀಗಳನ್ನು ಹತ್ತಿಕ್ಕುವ ಪ್ರಯತ್ನ ಸರ್ಕಾರ ಮತ್ತು ಸಮಾಜದ ಕೆಲವರು ಮಾಡುತ್ತಿದ್ದಾರೆ. ಶ್ರೀಗಳ ಮೇಲೆ ಈ ಹಿಂದೆ ಹಲ್ಲೆ ಮಾಡಿದವರೇ ಈಗ ಶ್ರೀಗಳ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಇದರ ಹಿಂದೆ ಯಾರಿದ್ದಾರೆ ಎಂದು ತನಿಖೆಯಿಂದ ತಿಳಿದು ಬರಲಿದೆ. ಗುರುಗಳ ವಿರುದ್ಧ ಷಡ್ಯಂತ್ರ ಮಾಡಿದವರ ವಿರುದ್ಧ ಮುಂದಿನ ದಿನಗಳಲ್ಲಿ ತಕ್ಕಪಠ ಕಲಿಸುತ್ತೇವೆ ಎಂದು ಹೇಳಿದರು.

ಬಸವರಾಜ ಮನಗುಂಡಿ ಮಾತನಾಡಿ, ಪಂಚಮಸಾಲಿ ಸಮಾಜವನ್ನು ರಾಜಕಾರಣಿಗಳ ಕಪಿಮುಷ್ಠಿಯಿಂದ ಬಿಡುಗಡೆ ಮಾಡಿದ್ದಕ್ಕೆ ಶ್ರೀಗಳ ಮೇಲೆ ಅಪಾಧನೆ ಮಾಡಿ ಅವರ ವಿರುದ್ಧ ಸರ್ಕಾರ ಷಡ್ಯಂತ್ರ ನಡೆಸಿ ಸಮಾಜ ತುಳಿಯುವ ಪ್ರಯತ್ನ ಮಾಡುತ್ತಿದೆ. ತಪ್ಪು ಯಾರೇ ಮಾಡಿರಲಿ ಸರ್ಕಾರ ಕೂಡಲೆ ಕ್ರಮಕೈಗೊಂಡು ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸಮಾಜದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಹೇಶ ಕರಬಿಷ್ಠಿ, ಶರಣಪ್ಪ ಗೊಳಗೊಳಕಿ, ಈರಣ್ಣ ಬಾಲಿಕಾಯಿ, ರಮೇಶ ರೋಣದ, ಮಹೇಶ ಆದಿ, ಕುಮಾರ ಹೊಂಬಳ, ಮಲ್ಲಿಕಾರ್ಜುನ ಕಿರೇಸೂರ ಇದ್ದರು.

ವಿದ್ಯುತ್ ಅವಘಡದಿಂದ ಮನೆಗೆ ಬೆಂಕಿ

ಲಕ್ಷಾಂತರ ಮೌಲ್ಯದ ಆಸ್ತಿ ಭಸ್ಮ

ಕಲಬುರಗಿ: ಜಿಲ್ಲೆಯ ಸೇಡಂ ತಾಲೂಕಿನ ರಂಜೋಳ್ ಗ್ರಾಮದಲ್ಲಿ ಶಾಟ್ ಸರ್ಕ್ಯೂಟ್‌ನಿಂದ ಸಂಭವಿಸಿದ ಅಗ್ನಿ ಅವಘಡದಲ್ಲಿ ಮನೆ ಸಂಪೂರ್ಣವಾಗಿ ಸುಟ್ಟು ಭಸ್ಮವಾದ ಘಟನೆ ನಡೆದಿದೆ.

ಗ್ರಾಮದ ಬಸವರಾಜ್ ಅವರಿಗೆ ಸೇರಿರುವ ಮನೆಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಮನೆಯವರು ಕೆಲಸದ ನಿಮಿತ್ತ ಹೊರಗೆ ಹೋಗಿದ್ದ ವೇಳೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದ್ದು, ಕ್ಷಣಾರ್ಧದಲ್ಲೇ ಮನೆಗೆ ವ್ಯಾಪಿಸಿದೆ ಎಂದು ತಿಳಿದುಬಂದಿದೆ.

ಅಗ್ನಿ ಅವಘಡದ ಪರಿಣಾಮ ಮನೆಯಲ್ಲಿದ್ದ ಧಾನ್ಯ, ಗೃಹೋಪಯೋಗಿ ವಸ್ತುಗಳು ಸೇರಿದಂತೆ ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿ ಸುಟ್ಟು ಹೋಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ಬೆಂಕಿಯನ್ನು ನಂದಿಸುವ ಕಾರ್ಯ ಕೈಗೊಂಡರು. ಘಟನೆ ಸಂಬಂಧ ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ.

ಮೌನಕ್ಕೆ ಶರಣಾದ ಅಧಿಕಾರಿಗಳು | ಗ್ರಾಮಸ್ಥರ ಆರೋಪ

ಕೃಷ್ಣೆಯ ಒಡಲಲ್ಲಿ ಮರಳು, ಮಣ್ಣು ಮಾಫಿಯಾ!

ಗೋಪಾಲ ಪಾಟೀಲ

ದಿಗಂತ ವಿಶೇಷ

ಜಮಖಂಡಿ: ಕೃಷ್ಣೆಯ ಒಡಲು ಖಾಲಿಯಾಗುತ್ತಿದ್ದಂತೆಯೇ ತಾಲೂಕಿನ ನದಿ ತೀರದಲ್ಲಿ ಮರಳು ಮತ್ತು ಮಣ್ಣು ಮಾಫಿಯಾ ಎಗ್ಗಿಲ್ಲದೆ ಸಾಗುತ್ತದೆ. ಅಧಿಕಾರಿಗಳು ಮಾತ್ರ ಮೌನಕ್ಕೆ ಶರಣಾಗಿದ್ದಾರೆ. ಮರಳು ಮಾಫಿಯಾದಿಂದ ನದಿಯ ಗತಿಯೂ ಸಹ ಬದಲಾಗುವ ಸಾಧ್ಯತೆಯಿದೆ ಎಂದು ಗ್ರಾಮಸ್ಥರು ಆರೋಪಿಸುತ್ತಾರೆ.

ನದಿಯಲ್ಲಿನ ಮರಳು ತೆಗೆಯುವುದರಿಂದ ನದಿ ಪಾತ್ರದಲ್ಲಿ ಭೂ ಕೊರೆತ ಉಂಟಾಗಿ ನದಿಯ ಪಾತ್ರವೂ ಸಹ ಬದಲಾಗುವ ಸಾಧ್ಯತೆಯಿದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ, ಇದ್ಯಾವುದ್ಕೂ ಸಂಬಂಧವೇ ಇಲ್ಲವೆಂಬಂತೆ ಮರಳು ಹೆಕ್ಕುವುದೇ ತಮ್ಮ ಕಾರ್ಯವನ್ನಾಗಿಸಿದ್ದಾರೆ. ಇದರ ಜೊತೆಗೆ ಅಕ್ರಮ ಇಟ್ಟಿಗೆಭಟ್ಟಿಗಳೂಸಹ ಅಕ್ರಮ ಮಣ್ಣು ಅಗೆಯುವ ಕಾರ್ಯ ಯಥಾವತ್ತಾಗಿ ನಡೆಸುತ್ತಲೇ ಇದ್ದಾರೆ. ಅಧಿಕಾರಿಗಳು ಮಾತ್ರ ತಮ್ಮ ಕರ್ತವ್ಯದಲ್ಲಿ ಬೀಜಿಯಾಗಿದ್ದಾರೆ ಎಂದು ನಾಗರಿಕರ ಆಕ್ರೋಶವಾಗಿದೆ.

ಭೀಕರ ಬರಗಾಲ ಛಾಯೇ ಮೂಡುತ್ತಿದೆ. ನದಿಯ ತಳಮಟ್ಟ ಸೇರುತ್ತಿರುವ ನೀರನ್ನು ನದಿ ತೀರದ ಜನತೆ, ಜನ ಜಾನುವಾರುಗಳಿಗೆ ಕುಡಿಯುವುದಕ್ಕೆ ಬಳಸುತ್ತಾರೆ.



ಮರಳುಗಾರಿಕೆಯಿಂದ ಕೆಲ ದಿನ ಹೀಗೆ ಬಿಟ್ಟರೆ ನದಿ ಹತ್ತಿರ ಯಾರು ಸುಳಿಯದಂತೆ ಸ್ಥಿತಿ ಉಂಟಾಗಲಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಬೇಸಿಗೆಯಲ್ಲಿ ಹಿಪ್ಪರಗಿ ಬ್ಯಾರೇಜಿನ ಕೆಳಭಾಗದ ನದಿಯಲ್ಲಿ ನೀರು ಖಾಲಿಯಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಅದರಂತೆ, ನದಿಯಲ್ಲಿ ನೀರು ಖಾಲಿಯಾದ ನಂತರ ಕೆಲವೊಂದು ವ್ಯಕ್ತಿಗಳು ಭಾರೀ ಪ್ರಮಾಣದ ವಾಹನಗಳನ್ನು ಉಪಯೋಗಿಸಿ ಮರಳು ಸಾಗಾಣಿಕೆ, ಗಣಿಗಾರಿಕೆ ಮತ್ತು ಮರಳು ಸಂಗ್ರಹಣೆ ಮಾಡುತ್ತಾರೆ.

ನದಿಯಲ್ಲಿ ನೀರು ಖಾಲಿಯಾದ ನಂತರ ಹಿಪ್ಪರಗಿ ಬ್ಯಾರೇಜಿನಿಂದ ಕೆಳಭಾಗಕ್ಕೆ ನೀರು ಹರಿಸಿದರೆ ಮರಳು ಗಣಿಗಾರಿಕೆಯಿಂದ ಆಳವಾದ ತೆಗ್ಗು ಗುಂಡಿಗಳಲ್ಲಿಯೇ ನೀರು ತುಂಬಿ ಮುಂದಿನ ಗ್ರಾಮಗಳಿಗೆ ನೀರು ತಲುಪುವುದಿಲ್ಲ, ಇದರಿಂದ ಬೇಸಿಗೆಯಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ. ಆದ್ದರಿಂದ ತಾವು ಈ ಎಲ್ಲ ಅಂಶಗಳನ್ನು ಗಮದಲ್ಲಿಟ್ಟುಕೊಂಡು ಹಿಪ್ಪರಗಿ ಬ್ಯಾರೇಜಿನ ಕೆಳಭಾಗದಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ, ಗಣಿಗಾರಿಕೆ ಮತ್ತು ಮರಳು ಸಂಗ್ರಹಣೆ ತಡೆಗಟ್ಟಿದರೆ ಅನುಕೂಲವಾಗುತ್ತದೆ.

ಕಳೆದ ಕೆಲವು ತಿಂಗಳುಗಳ ಹಿಂದೆ ಹಿಪ್ಪರಗಿ ಬ್ಯಾರೇಜಿನ 22ನೇ ಗೇಟು ನೀರಿನ ರಭಸಕ್ಕೆ ಕಿತ್ತು ಹೋಗಿದ್ದರಿಂದ ಈಗಾಗಲೇ ಅಪಾರ ಪ್ರಮಾಣದ ನೀರು ಪೋಲಾಗಿದೆ. ಆದ್ದರಿಂದ ತಾವು ವಿಷಯದ ಬಗ್ಗೆ ವಿಶೇಷ ಕಾಳಜಿ ವಹಿಸಿ ಹಿಪ್ಪರಗಿ ಬ್ಯಾರೇಜಿನ ಕೆಳಭಾಗದಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ, ಗಣಿಗಾರಿಕೆ ಮತ್ತು ಮರಳು ಸಂಗ್ರಹಣೆ ತಡೆಗಟ್ಟಲು ಮುಂಜಾಗ್ರತೆಗಾಗಿ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹಿಪ್ಪರಗಿ ಗ್ರಾಮಸ್ಥರು ಮನವಿ ಮಾಡಿದ್ದಾರೆ.

> ನದಿ ತೀರದ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಟಾಸ್ಕ್‌ಫೋರ್ಸ್ ಸಮಿತಿಯಲ್ಲಿದ್ದು, ಎಲ್ಲಿ ಅಕ್ರಮ ಮರಳು ಮತ್ತು ಮಣ್ಣು ದಂಧೆ ನಡೆಯುತ್ತದೆಯೋ ಅಲ್ಲಿ ಎಲ್ಲ ಅಧಿಕಾರಿಗಳಿಗೆ ನಿಗಾ ವಹಿಸಲು ತಿಳಿಸಿದ್ದೇವೆ.
> ■ ಅನಿಲ ಬಡಿಗೇರ, ತಹಶೀಲ್ದಾರ್, ಟಾಸ್ಕ್‌ಫೋರ್ಸ್ ಸಮಿತಿ ಅಧಿಕಾರಿ

ವಿಜಯನಗರ ಜಿಲ್ಲೆಗೆ 4,107 ಕೋಟಿ ರೂ.ಅನುದಾನ ಗುರಿ: ಬಿಜ್ಜೂರ

ಗಣಿ ಬಾಧಿತ ಪ್ರದೇಶ ಅಭಿವೃದ್ಧಿಗೆ ಕೆಇಎಂಆರ್‌ಸಿ ಬದ್ಧ

ವಿಜಯನಗರ: ಗಣಿ ಬಾಧಿತ ಪ್ರದೇಶ ಅಭಿವೃದ್ಧಿಗೆ ಕೆಇಎಂಆರ್‌ಸಿ ಬದ್ಧವಾಗಿದೆ. ವಿಜಯನಗರ ಜಿಲ್ಲೆಗೆ 4,107 ಕೋಟಿ ರೂ.ಅನುದಾನ ಲಭ್ಯವಿದೆ. ಜಿಲ್ಲೆಯ ವಿವಿಧ ಇಲಾಖೆಗಳು ಸಲ್ಲಿಸಿರುವ ಪ್ರಸ್ತಾವನೆಗಳ ಪೈಕಿ 99 ಪ್ರಸ್ತಾವನೆಗಳಿಗೆ 1710 ಕೋಟಿ ರೂ. ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಕರ್ನಾಟಕ ಗಣಿಗಾರಿಕೆ ಸಂತ್ರಸ್ತ ಪ್ರದೇಶಗಳ ಪುನರುಜ್ಜೀವನ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಬಿಜ್ಜೂರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರಿಂದ ಈವರೆಗೆ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳ ಅಡಿಯಲ್ಲಿ ಸಲ್ಲಿಕೆಯಾದ 99 ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅರಣ್ಯ ಇಲಾಖೆಗೆ 148 ಕೋಟಿ ರೂ., ಮರಿಯಮ್ಮನಹಳ್ಳಿಯಲ್ಲಿ ಜಿಟಿಟಿಸಿ ಕಾಲೇಜ್ ಕಾಮಗಾರಿಗೆ 19.65 ಕೋಟಿ ರೂ. ಹೀಗೆ ವಿವಿಧ ಇಲಾಖೆಗಳ ಅಭಿವೃದ್ಧಿಗಾಗಿ ಒಟ್ಟು 1,710 ಕೋಟಿ ರೂ. ಅನುದಾನ ಒದಗಿಸಲಾಗಿದೆ.

ಗಣಿ ಬಾಧಿತ ಪ್ರದೇಶಗಳಲ್ಲಿ ಶಿಕ್ಷಣ, ಆರೋಗ್ಯ, ಮೂಲಸೌಕರ್ಯಗಳಾದ ಕುಡಿಯುವ ನೀರು, ರಸ್ತೆ ಸಂಪರ್ಕ ಮತ್ತು ಶಾಲಾಕಟ್ಟಡಗಳ ಕಾಮಗರಿಗಳಿಗೆ ಮತ್ತು ಪರಿಸರ ಸಂರಕ್ಷಣೆಗೆ ಪ್ರಥಮ ಆದ್ಯತೆ ನೀಡಲಾಗುತ್ತಿದೆ. ಅಲ್ಲದೇ ಕಾಮಗಾರಿಗಳ ಅನುಷ್ಠಾನದಲ್ಲಿ ಯಾವುದೇ ವಿಳಂಬಕ್ಕೆ ಆಸ್ಪದ ನೀಡದೆ ಪಾರದರ್ಶಕವಾಗಿ ಕೆಲಸ ನಿರ್ವಹಿಸುವಂತಾಗಿದೆ. ಗಣಿಗಾರಿಕೆಯಿಂದ ಜಿಲ್ಲೆಯ ನೈಸರ್ಗಿಕ ಸಂಪನ್ಮೂಲಗಳಿಗೆ ಆಗಿರುವ ಹಾನಿಯನ್ನು ಸರಿದೂಗಿಸಿ, ಸ್ಥಳೀಯರ ಜೀವನಮಟ್ಟವನ್ನು ಸುಧಾರಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.



ಗಣಿ ಪೀಡಿತ ಪ್ರದೇಶಗಳ ಮೂಲಸೌಕರ್ಯ, ಶಿಕ್ಷಣ, ಆರೋಗ್ಯ ಮತ್ತು ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಲಾಗಿದೆ. ಪಾರದರ್ಶಕ ಅನುಷ್ಠಾನಕ್ಕೆ ಆದ್ಯತೆ ಯೋಜನೆಗಳ ಅನುಷ್ಠಾನದಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲಾಗುತ್ತಿದ್ದು, ಪ್ರಸ್ತಾವನೆ ಸಲ್ಲಿಸಿದ ಯೋಜನೆ ಸಾಮಾಜಿಕ ಕಳಕಳಿಯನ್ನು 3 ಹಂತಗಳಲ್ಲಿ ಪರಿಶೀಲಿಸಿ ನಂತರ ಅನುಮೋದನೆ ನೀಡಲಾಗುತ್ತದೆ. ಗಣಿಗಾರಿಕೆಯಿಂದ ಹೆಚ್ಚು ಹಾನಿಗೊಳಗಾದ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಒಟ್ಟು 10 ತಾಲೂಕುಗಳನ್ನು ಗಣಿಭಾದಿತ ಪ್ರದೇಶಗಳೆಂದು ಗುರುತಿಸಲಾಗಿದೆ. ಈ ಭಾಗದ ಜನರ ಜೀವನಮಟ್ಟ ಸುಧಾರಣೆ ಮತ್ತು ಪರಿಸರದ ಮರುಸ್ಥಾಪನೆಗೆ ನಿಗಮವು ಕಟಿಬದ್ಧವಾಗಿದೆ ಎಂದು ಮಾಹಿತಿ ನೀಡಿದರು.

2500 ಕೋಟಿ ರೂ. ಮೊತ್ತದ ಪ್ರಸ್ತಾವನೆ ಬಾಕಿ: ಕರ್ನಾಟಕ ಗಣಿಗಾರಿಕೆ ಪರಿಸರ ಪುನಃಸ್ಥಾಪನೆ ನಿಗಮದಲ್ಲಿ ಗಣಿ ಭಾದಿತ ಪ್ರದೇಶ ವ್ಯಾಪ್ತಿಯ ವಿವಿಧ ಇಲಾಖೆಗಳಿಂದ 2500 ಕೋಟಿ ರೂ. ಮೊತ್ತದ ಪ್ರಸ್ತಾವನೆ ಬರಬೇಕಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ಡಿಪಿಆರ್ ಸಿದ್ಧಪಡಿಸಿ ನೀಡಿದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಸರಿ ಇದ್ದರೆ ಅನುಮೋದನೆ ನೀಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಅರಣ್ಯ ಇಲಾಖೆ ಉಪ ಸಂರಕ್ಷಣಾಧಿಕಾರಿ ಅನುಪಮ ಇದ್ದರು.

ಸಹಕಾರ ಭಾರತಿ ರಾಜ್ಯ ಕಾರ್ಯಕಾರಿಣಿ, ಸಹಕಾರಿಗಳ ಸಮಾವೇಶ ನಾಳೆ

ವಿಜಯನಗರ: ಸಹಕಾರ ಭಾರತಿಯ ರಾಜ್ಯ ಕಾರ್ಯಕಾರಿಣಿ ಹಾಗೂ ಪ್ರಮುಖ ಸಹಕಾರಿಗಳ ಸಮಾವೇಶವನ್ನು ಹೊಸಪೇಟೆಯಲ್ಲಿ ಏ.10ರಂದು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಸಾಣೂರು ನರಸಿಂಹ ಕಾಮತ್ ಹೇಳಿದರು.

ಹೊಸಪೇಟೆಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಮಲ್ಲಿಗೆ ಹೋಟೆಲ್‌ನಲ್ಲಿ ಏ.10ರಂದು ಬೆಳಗ್ಗೆ 10ಗಂಟೆಗೆ ನಡೆಯಲಿದ್ದು, ಸಂಘಟನಾತ್ಮಕ ವಿಚಾರಗಳ ಬಗ್ಗೆ ವಿಸ್ತೃತ ಚರ್ಚೆ ನಡೆದು ಮಹತ್ವದ ನಿರ್ಧಾರ ಕೈಗೊಳ್ಳಲಾಗುವುದು. ಸಮಾವೇಶದಲ್ಲಿ ರಾಜ್ಯಾದ್ಯಂತದಿಂದ 200ಕ್ಕೂ ಅಧಿಕ ವಿವಿಧ ಜವಾಬ್ದಾರಿ ಹೊಂದಿರುವ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಡಿಜಿಟಲ್ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಿದ್ದು, ಸಹಕಾರ ಭಾರತಿಯ ಪರಿಚಯ ಪುಸ್ತಕ, ಪದಾಧಿಕಾರಿಗಳ ವಿಳಾಸ ಕೈಪಿಡಿ ಬಿಡುಗಡೆಗೊಳಿಸಲಾಗುವುದು ಎಂದರು. ಅಂದು ಸಂಜೆ 5 ಗಂಟೆಗೆ ಬಳ್ಳಾರಿ, ವಿಜಯನಗರ, ಕೊಪ್ಪಳ, ರಾಯಚೂರು ಜಿಲ್ಲೆಗಳ ಪ್ರಮುಖ ಸಹಕಾರಿಗಳ ಸಮಾವೇಶ ನಡೆಯಲಿದೆ. ಈ ಕಾರ್ಯಕ್ರಮಗಳಲ್ಲಿ ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷ ಉದಯ್ ವಾಸುದೇವ ಜೋಶಿ, ಪ್ರಧಾನ ಕಾರ್ಯದರ್ಶಿ ದೀಪಕ್ ಚೌರಾಸಿಯಾ, ರಾಜ್ಯ ಅಧ್ಯಕ್ಷ ಪ್ರಭುದೇವ ಆರ್. ಮಾಗನೂರು, ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ್ ಭೆಂಡೆ, ರಾಜ್ಯ ಮಹಿಳಾ ಪ್ರಮುಖರಾದ ವಿದ್ಯಾ ಪೈ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಜಿ.ನಂಜನಗೌಡ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.



ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಉದಯ್ ಜೋಶಿ ಮಾತನಾಡಿ, ಸಹಕಾರ ಭಾರತಿ ದೇಶದ ಸಹಕಾರ ಕ್ಷೇತ್ರದ ಏಕೈಕ ಸರ್ಕಾರೇತರ ರಾಜಕೀಯ ರಹಿತ ಸ್ವಯಂಸೇವಾ ಸಂಘಟನೆ. ಇದರ ಒತ್ತಡದ ಫಲವಾಗಿಯೇ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಆರಂಭವಾಗಿದೆ ಹಾಗೂ ಕಳೆದ ಮೂರು ವರ್ಷಗಳಿಂದ ಸಾಕಷ್ಟು ಸುಧಾರಣಾ ಕೆಲಸಗಳಾಗಿವೆ. ರಾಜ್ಯಗಳು ಗ್ಯಾರಂಟಿ ಯೋಜನೆಗಳನ್ನು ಪ್ರಕಟಿಸುವುದು ರಾಜ್ಯಗಳ ಆರ್ಥಿಕತೆಗೆ ಅಪಾಯಕಾರಿ, ಇದು ಸಹಕಾರ ಕ್ಷೇತ್ರಕ್ಕೆ ಸಹ ಬಿಸಿ ತಟ್ಟಿಸುವ ಸಂಗತಿಯೇ ಆಗಿದೆ ಎಂದರು.

ಸಹಕಾರ ಭಾರತಿಯ ಜಿಲ್ಲಾ ಅಧ್ಯಕ್ಷ ಕರಿಬಸವರಾಜ ಬಾದಾಮಿ, ಮಾಜಿ ರಾಷ್ಟ್ರೀಯ ಅಧ್ಯಕ್ಷ ರಮೇಶ್ ವೈದ್ಯ, ದೀಪಕ್ ಚೌರಾಸಿಯಾ ಉಪಸ್ಥಿತರಿದ್ದರು.

ಕುಟುಂಬಸ್ಥರಿಂದ ಮದುವೆಗೆ ಒಪ್ಪಿಗೆ ಇದ್ದರೂ

ಪ್ರೇಮಿಗಳಿಬ್ಬರ ಆತ್ಮಹತ್ಯೆ: ಕಾರಣ ನಿಗೂಢ

ರಬಕವಿ-ಬನಹಟ್ಟಿ: ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ಇಬ್ಬರು ಪ್ರೇಮಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ಮೃತರನ್ನು ಆಸಂಗಿ ಗ್ರಾಮದ ಕಾರ್ತಿಕ ಚಿನ್ನಪ್ಪ ನಾಯಕ(20) ಹಾಗೂ ಬನಹಟ್ಟಿ ಕೆಹೆಚ್‌ಡಿಸಿ ಕಾಲೋನಿಯ ಪವಿತ್ರಾ ರಾಜಶೇಖರ ವಂಟಿ(19) ಎಂದು ಗುರುತಿಸಲಾಗಿದ್ದು, ಈ ಸಾವು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ನಡೆದಿದ್ದೇನು?: ಕಾರ್ತಿಕ ಎಂಬಾತನು ಮಂಗಳವಾರ ಸಂಜೆ ತನ್ನ ಪ್ರಿಯತಮೆ ಪವಿತ್ರಾ ಮನೆಗೆ ತೆರಳಿ ಹಲವು ವಿಚಾರವಾಗಿ ಗಲಾಟೆ ಮಾಡಿದ್ದಾನೆ. ಇದರಿಂದ ಹುಡುಗಿ ಮನೆಯವರು ರೊಚ್ಚಿಗೆದ್ದು ಪೊಲೀಸ್ ಪ್ರಕರಣ ದಾಖಲಿಸುವುದಾಗಿ ತಿಳಿಸಿದಾಗ ಹುಡುಗನ ಕಡೆಯವರಿಂದ ಸಂಧಾನ ಮಾತುಕತೆಯಾಗಿದೆ.

ಬುಧವಾರ ಬೆಳಗ್ಗೆ ದೈನಂದಿನದಂತೆ ಹುಡುಗಿ ಪವಿತ್ರಾ ಮನೆಯಲ್ಲಿ ನೀರು ತುಂಬುವ ಕೆಲಸದಲ್ಲಿ ತೊಡಗಿದಾಗ ಫೋನ್ ಕರೆಯೊಂದು ಬಂದಿದೆ. ತದನಂತರ ತಮ್ಮ ಸ್ವಂತ ಅಡುಗೆ ಮನೆಯ ಕೋಣೆಯಲ್ಲಿ ಸುಮಾರು 7:30ರ ಹೊತ್ತಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.



ಈ ಘಟನೆ ತಿಳಿದ ಹುಡುಗ ಕಾರ್ತಿಕನೂ ಸಹಿತ ಸುಮಾರು 8:30ರ ಸುಮಾರಿಗೆ ಆಸಂಗಿಯ ಅಕ್ಕಿ ಹತ್ತಿರದ ಸರಸ್ವತಿ ತೋಟದ ಸಮೀಪ ಮರವೊಂದಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ವರದಿಯಾಗಿದೆ.

ಪವಿತ್ರಾ ರಬಕವಿಯ ಖಾಸಗಿ ಟೆಕ್ಸ್‌ಟೈಲ್ಸ್‌ವೊಂದರಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು. ಕಾರ್ತಿಕ ಕಾಲೇಜು ಓದುತ್ತ ಮನೆಯಲ್ಲಿದ್ದ ವಾಹನಗಳ ಓಡಾಟ ನಡೆಸುತ್ತಿದ್ದ. ಕೇವಲ ಎರಡು ಕಿ.ಮೀ. ಅಂತರದಲ್ಲಿ ಅತ್ತ ಮನೆಯಲ್ಲಿ ಪವಿತ್ರಾ ಹಾಗೂ ತನ್ನ ಗ್ರಾಮವಾದ ಅಕ್ಕಿ(ಆಸಂಗಿ)ಯಲ್ಲಿ ಇಬ್ಬರೂ ನೇಣಿಗೆ ಶರಣಾಗಿರುವ ಘಟನೆ ಕುಟುಂಬಸ್ಥರಿಗೆ ಆಘಾತ ತಂದಿದೆ.

ಸಾವಿಗೆ ಆ ಒಂದು ಫೋನ್ ಕರೆ ಕಾರಣವೇ?: ಪ್ರೇಮಿಗಳಿಬ್ಬರ ಕುಟುಂಬಸ್ಥರಲ್ಲಿಯೂ ಪರಸ್ಪರ ಮದುವೆಗೆ ಒಪ್ಪಿಗೆ ಸೂಚಿಸಿದ್ದರು. ಬುಧವಾರ ಸಾವಿಗೆ ಮುನ್ನ ಪವಿತ್ರಾಳ ಮೊಬೈಲ್ ಕರೆ ನಂತರ ಸಾವಿಗೀಡಾಗಿರುವುದು ಹಲವಾರು ಅನುಮಾನಗಳಿಗೆ ಆಸ್ಪದವಾಗಿದೆ.

ವಿಷಯ ತಿಳಿಯುತ್ತಿದ್ದಂತೆ ಪಿಎಸ್‌ಐ ಶಿವರಾಜ ಧರಿಗೋಣ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇಬ್ಬರೂ ಕುಟುಂಬಸ್ಥರಿಂದ ಪ್ರಕರಣ ದಾಖಲುಗೊಂಡಿವೆ. ಪೊಲೀಸರು ಮೃತದೇಹಗಳನ್ನು ವಶಕ್ಕೆ ಪಡೆದು ರಬಕವಿ-ಬನಹಟ್ಟಿ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ. ಸಾವಿನ ನಿಖರ ಕಾರಣ ತಿಳಿಯಲು ದೇಹದ ಪ್ರಮುಖ ಅಂಗಾಂಗಗಳನ್ನು ಪ್ರಯೋಗಾಲಯಕ್ಕೆ ಕಳಿಸಲಾಗಿದೆ.

ಪ್ರೇಮಿಗಳ ಈ ತೀವ್ರ ನಿರ್ಧಾರಕ್ಕೆ ನಿಖರವಾದ ಕಾರಣವೇನುವೆಂಬುದು ಇನ್ನೂ ನಿಗೂಢವಾಗಿದ್ದು, ಪೊಲೀಸರ ವಿಚಾರಣೆಯ ನಂತರಷ್ಟೇ ಸತ್ಯಾಂಶ ಹೊರಬರಬೇಕಿದೆ. ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ತನಿಖೆ ಮುಂದುವರಿದಿದೆ.

ಪ್ರವಾಸಕ್ಕೆ ಬಂದಿದ್ದ ಕೇರಳದ ಬಾಲಕಿ ನಿಗೂಢ ನಾಪತ್ತೆ

• **ಚಿಕ್ಕಮಗಳೂರು:** ಕೇರಳದ ಪಾಲಕ್ಕಾಡ್ ಜಿಲ್ಲೆಯ ಕುಟುಂಬದವರೊಂದಿಗೆ ಪ್ರವಾಸಕ್ಕೆ ಬಂದಿದ್ದ 15 ವರ್ಷದ ಶ್ರೀನಂದಾ ಎಂಬ ಬಾಲಕಿ ದತ್ತಪೀಠ ಸಮೀಪದ ಮಾಣಿಕ್ಯಧಾರ ಜಲಪಾತದ ಬಳಿ ನಿಗೂಢವಾಗಿ ನಾಪತ್ತೆಯಾಗಿದ್ದಾಳೆ.

ಪೋಷಕರೂ ಸೇರಿದಂತೆ 60 ಮಂದಿ ಜತೆ ಮಂಗಳವಾರ ಮಾಣಿಕ್ಯಧಾರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಂಜೆ 5.30ರ ವೇಳೆಗೆ ಶ್ರೀನಂದಾ ಕಾಣೆಯಾಗಿದ್ದಾಳೆ. ಗಾಬರಿಗೊಂಡ ಪೋಷಕರು, ಜೊತೆಯಲ್ಲಿದ್ದವರೆಲ್ಲರೂ ಸುತ್ತಲ ಪ್ರದೇಶದಲ್ಲಿ ಹುಡುಕಾಡಿದ್ದಾರೆ. ಅಷ್ಟರ ವೇಳೆಗೆ ಕತ್ತಲಾವರಿಸಿದ ಹಿನ್ನೆಲೆಯಲ್ಲಿ 8.30ರ ವೇಳೆಗೆ ಐಡಿ ಪೀಠ ಠಾಣೆಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಕಾರ್ಯ ಪ್ರವೃತ್ತರಾದ ಪೊಲೀಸರು ಅರಣ್ಯ ಸಿಬ್ಬಂದಿ ತಂಡವೊಂದನ್ನು ರಚಿಸಿ ತಡರಾತ್ರಿವರೆಗೆ ಶೋಧ ಕಾರ್ಯ ಆರಂಭಿಸಿದ್ದಾರೆ. ಆದರೆ ಆಕೆಯ ಸುಳಿವು ಸಿಕ್ಕಿಲ್ಲ.

60 ಸಿಬ್ಬಂದಿ ತಂಡ: ಬುಧವಾರ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಅವರು ಎಸ್‌ಡಿಆರ್‌ಎಫ್ ಸೇರಿದಂತೆ ಪೊಲೀಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳನ್ನೊಳಗೊಂಡ 60 ಜನರ ತಂಡವೊಂದನ್ನು ರಚಿಸಿ ಬೆಳಗ್ಗೆ 5 ಗಂಟೆಯಿಂದಲೇ ಪತ್ತೆ ಕಾರ್ಯ ಆರಂಭಿಸಿದ್ದಾರೆ.

ಕುಟುಂಬದಲ್ಲಿ ಮಡುಗಟ್ಟಿದ ಆತಂಕ: ಘಟನೆಯಿಂದ ಬಾಲಕಿಯ ಇಡೀ ಕುಟುಂಬದಲ್ಲಿ ಆತಂಕ ಮಡುಗಟ್ಟಿದೆ. ಆಕೆ ಸುರಕ್ಷಿತವಾಗಿ ಪತ್ತೆಯಾಗಲಿ ಎಂದು ಕ್ಷಣ ಕ್ಷಣಕ್ಕೂ ಪ್ರಾರ್ಥಿಸುತ್ತಿದ್ದಾರೆ. ಕುಟುಂಬ ಸಮೇತ ಪ್ರವಾಸದ ಸಡಗರವನ್ನು ಆಸ್ವಾದಿಸಬೇಕಿದ್ದ ಅಷ್ಟೂ ಮಂದಿ ಮಂಕಾಗಿದ್ದಾರೆ. ದುಗುಡದಿಂದಲೇ ಸಮಯ ದೂಡುತ್ತಿರುವ ಎಲ್ಲರೂ ಶೋಧ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿಗಳಿಂದ ಸಿಹಿಸುದ್ದಿ ಬರಲೆಂದು ಕಾತರದಿಂದ ಕಾಯುತ್ತಿದ್ದಾರೆ.

ಬಾಲಕಿ ಕುಟುಂಬದವರಿಂದ ದೂರು ಪಡೆದು ನಾಪತ್ತೆ ಪ್ರಕರಣ ದಾಖಲಿಸಲಾಗಿದೆ. ಇದು ಕುಟುಂಬ ಸಮೇತ ಹಮ್ಮಿಕೊಳ್ಳಲಾದ ಪ್ರವಾಸವಾಗಿತ್ತು. ಬಾಲಕಿಯ ಪೋಷಕರೂ, ಚಿಕ್ಕಪ್ಪ, ಚಿಕ್ಕಮ್ಮ ಸೇರಿದಂತೆ ಕುಟುಂಬದ ಹಿರಿಯರೂ ಸಹ ಇದ್ದರು. ಶೋಧ ಕಾರ್ಯವನ್ನು ಮುಂದುವರಿಸಲಾಗಿದೆ.
■ **ಜಿತೇಂದ್ರ ಕುಮಾರ್ ದಯಾಮ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸವಾಲಿನ ಶೋಧ ಕಾರ್ಯ

ಸಂಪೂರ್ಣ ಹುಲ್ಲುಗಾವಲು, ಕಲ್ಲು ಬೆಟ್ಟ ಹಾಗೂ ಇಳಿಜಾರು ಪ್ರದೇಶದಿಂದ ಕೂಡಿರುವ ಈ ಪ್ರದೇಶದಲ್ಲಿ ಕಾರ್ಯಾಚರಣೆ ಸವಾಲಿನದ್ದಾಗಿದೆ. ಘಟನೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಬಾಲಕಿ ನಾಪತ್ತೆಯಾಗಿರುವ ಬಗ್ಗೆ ಸ್ಥಳೀಯರಿಂದ ಹಲವು ರೀತಿ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಥರ್ಮಲ್ ಕ್ಯಾಮೆರಾ ಬಳಕೆ

ಅರಣ್ಯ ಇಲಾಖೆಯ ಥರ್ಮಲ್ ಕ್ಯಾಮೆರಾಗಳನ್ನೂ ಶೋಧ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಮಾಣಿಕ್ಯಧಾರ ಸೇರಿದಂತೆ ದತ್ತಪೀಠದ ಸುತ್ತಲೂ ಇಂಚಿಂಚು ಜಾಗವನ್ನೂ ಬಿಡದೆ ಡ್ರೋನ್ ಕ್ಯಾಮೆರಾದಲ್ಲಿ ಶೋಧ ನಡೆಸಿದರೂ ಸಂಜೆವರೆಗೆ ಬಾಲಕಿಯ ಸುಳಿವು ಸಿಕ್ಕಿಲ್ಲ.

ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿಗೆ ಕೇಂದ್ರ ಅನುಮತಿ

ಪುಟ ೧➡ ಪ್ರಸ್ತುತ ಜಾರಿಯಲ್ಲಿರುವ ವ್ಯವಸ್ಥೆಯಂತೆ ಮಹಿಳಾ ಮೀಸಲಾತಿ 2027ರ ಜನಗಣತಿಯ ಆಧಾರದ ಮೇಲಿನ ಕ್ಷೇತ್ರ ಪುನರ್‌ವಿಂಗಡಣೆ ಬಳಿಕ ಮಾತ್ರ ಜಾರಿಗೆ ಬರಬೇಕಾಗಿತ್ತು. ಇದರಿಂದ 2034ರೊಳಗೆ ಮಾತ್ರ ಜಾರಿಗೆ ಸಾಧ್ಯತೆ ಇತ್ತು. ಆದರೆ ಹೊಸ ತಿದ್ದುಪಡಿಯ ಮೂಲಕ ಅದನ್ನು 2029ರ ಲೋಕಸಭಾ ಚುನಾವಣೆಯಿಂದಲೇ ಜಾರಿಗೆ ತರಲು ಸರ್ಕಾರ ಮುಂದಾಗಿದೆ.

ಈ ಕ್ರಮಕ್ಕೆ ಸಂಬಂಧಿಸಿ ಎರಡು ಪ್ರತ್ಯೇಕ ಮಸೂದೆಗಳನ್ನು ಸರ್ಕಾರ ತರಲಿದೆ. ಒಂದರಿಂದ ನಾರಿ ಶಕ್ತಿ ವಂದನ್ ಅಧಿನಿಯಮಕ್ಕೆ ಸಂವಿಧಾನ ತಿದ್ದುಪಡಿ, ಮತ್ತೊಂದರಿಂದ ಡಿಲಿಮಿಟೇಶನ್ ಕಾಯ್ದೆಗೆ ತಿದ್ದುಪಡಿ ಮಾಡಲಾಗುತ್ತದೆ. ಸಂಸತ್ತಿನಲ್ಲಿ ಅಂಗೀಕಾರವಾದ ಬಳಿಕ ಹೊಸ ಕಾನೂನುಗಳು 2029ರ ಮಾರ್ಚ್ 31ರಿಂದ ಜಾರಿಗೆ ಬರುವ ಸಾಧ್ಯತೆ ಇದ್ದು, ಮುಂದಿನ ಲೋಕಸಭಾ ಚುನಾವಣೆ ಜೊತೆಗೆ ಒಡಿಶಾ, ಅರುಣಾಚಲ ಪ್ರದೇಶ, ಸಿಕ್ಕಿಂ ಮತ್ತು ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿಯೂ ಮಹಿಳಾ ಮೀಸಲು ಜಾರಿಯಾಗಲಿದೆ.

ರಸಗೊಬ್ಬರ ಸಬ್ಸಿಡಿ ಶೇ.12 ಹೆಚ್ಚಳ

• **ಹೊಸದಿಲ್ಲಿ:** 2026ರ ಖಾರಿಫ್ ಹಂಗಾಮಿನ ಫಾಸ್ಫೇಟಿಕ್ ಮತ್ತು ಪೊಟ್ಯಾಸಿಕ್ ರಸಗೊಬ್ಬರಗಳ ಸಬ್ಸಿಡಿಯನ್ನು ಶೇ.12ರಷ್ಟು ಹೆಚ್ಚಿಸಿ ಒಟ್ಟು 41,534 ಕೋಟಿ ರೂ.ಗಳಿಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, 2026ರ ಏ.1ರಿಂದ ಸೆ.30ರವರೆಗೆ ಜಾರಿಗೆ ಬರುವಂತೆ ಹೊಸ ಸಬ್ಸಿಡಿ ದರಗಳನ್ನು ನಿಗದಿಪಡಿಸಲಾಗಿದೆ. ಸಾರಜನಕಕ್ಕೆ ಪ್ರತಿ ಕೆಜಿಗೆ 47.32 ರೂ., ಫಾಸ್ಫೇಟ್‌ಗೆ 52.76 ರೂ. ಮತ್ತು ಗಂಧಕಕ್ಕೆ (ಸಲ್ಫರ್) 3.16 ರೂ. ನಿಗದಿಪಡಿಸಲಾಗಿದೆ. ಪೊಟ್ಯಾಶ್ ಸಬ್ಸಿಡಿಯನ್ನು ಪ್ರತಿ ಕೆಜಿಗೆ 2.38 ರೂ.ಗಳಲ್ಲಿ ಸ್ಥಿರವಾಗಿರಿಸಲಾಗಿದೆ. ಈ ಹಂಚಿಕೆ, 2025ರ ಖಾರಿಫ್ ಹಂಗಾಮಿಗಿಂತ 4,317 ಕೋಟಿ ರೂ. ಹೆಚ್ಚಾಗಿದೆ. ಪಶ್ಚಿಮ ಏಷ್ಯಾದ ಸಂಘರ್ಷಗಳಿಂದಾಗಿ ಜಾಗತಿಕ ಬೆಲೆಗಳು ಏರುತ್ತಿದ್ದರೂ, ಡೈ-ಅಮೋನಿಯಂ ಫಾಸ್ಫೇಟ್ ಚಿಲ್ಲರೆ ಬೆಲೆಯನ್ನು 50 ಕೆಜಿ ಚೀಲಕ್ಕೆ 1,350 ರೂ.ಗಳಲ್ಲಿ ಕಾಯ್ದುಕೊಳ್ಳಲಾಗುವುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

1.74 ಲಕ್ಷ ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಅಸ್ತು

ಕೈಗಾರಿಕಾ ಬೆಳವಣಿಗೆ, ರಾಷ್ಟ್ರೀಯ ಸಾಮರ್ಥ್ಯ ಹೆಚ್ಚಿಸಲು ಇಂಧನ, ಮೂಲಸೌಕರ್ಯ, ನಗರ ಸಾರಿಗೆಗೆ ಸಂಬಂಧಿಸಿದ 1.74 ಲಕ್ಷ ಕೋಟಿ ರೂಪಾಯಿ ಮೊತ್ತದ ವಿವಿಧ ಯೋಜನೆಗಳಿಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಕೃಷ್ಣ ಹುಟ್ಟಿಬಂದ. ಕಂಸನನ್ನು ಕೊಂದ. ಮಥುರೆಯನ್ನು ಭಯಮುಕ್ತವಾಗಿಸಿದ. ತನ್ನವರಿಗಾಗಿ ದ್ವಾರಕೆಯೆಂಬ ಹೊಸದಾದ ಪಟ್ಟಣವನ್ನು ಕಟ್ಟಿಸಿದ.

ಯಾದವರಿಗೆ ಇದರಿಂದ ನೆಮ್ಮದಿಯ ಜೀವನ ಸಾಧ್ಯವಾಯಿತು. ಅಲ್ಲಿಯವರೆಗೆ ಶ್ರೀಮಂತರಾಗಿರಲಿಲ್ಲ, ಪಶುಪಾಲನೆಯಂತಹ ವೃತ್ತಿಯನ್ನು ಅನುಸರಿಸುತ್ತಿದ್ದರು. ನಿಧಾನಕ್ಕೆ ಅವರೂ ಸಂಪನ್ನರಾದರು. ರಾಜಕಾರಣಿಗಳಾದರು. ಪರಾಕ್ರಮಿಗಳಾದರು.

ಇದೆಲ್ಲ ಅವರ ಸಾಮುದಾಯಿಕ ವರ್ಚಸ್ಸು, ಗೌರವಗಳನ್ನು ವರ್ಧಿಸಿತು. ಯಾದವರು ತಲೆಯೆತ್ತಿ ಸ್ವಾಭಿಮಾನದಿಂದ ಬಾಳುವುದು ಸಾಧ್ಯವಾಯಿತು.

ಜೀವನದಲ್ಲಿ ನೋವನ್ನುಂಡವರು ಅಹಂಕಾರಿಗಳಾಗುವ ಸಾಧ್ಯತೆ ಕಡಿಮೆಯಿರುತ್ತದೆ. ಯಾದವರು ಸಾಕಷ್ಟು ಸಂಕಟವನ್ನು ಅನುಭವಿಸಿದವರು. ಹಾಗಾಗಿ ಜೀವನದಲ್ಲಿ ಉನ್ನತಿಗೇರಿದಾಗ ಅದರಿಂದ ಅವರಲ್ಲಿ ಮದ ತಲೆಯೆತ್ತಬಾರದಿತ್ತು. ಅಲ್ಲದೆ ಕುರುಕ್ಷೇತ್ರದಲ್ಲಿ ನಡೆದ ಆ ಮಹಾಯುದ್ಧಕ್ಕೆ ಸಾಕ್ಷಿಯಾದವರು. ಅದರಲ್ಲಿ ಭಾಗವಹಿಸಿದವರು. ನೆತ್ತರ ಹೊಳೆ ಹರಿದುದನ್ನು, ತರುಣರ ಬರ್ಬರ ಹತ್ಯೆಗಳನ್ನು ಕಂಡವರು. ಮಾನವೀಯತೆಯ ಈ ಪತನವನ್ನು ನೋಡಿಯೂ ಅವರಿಗೆ ಅಂತರಂಗದಲ್ಲಿ ಮಾರ್ದವತೆ ಮೂಡಲಿಲ್ಲ. ಅಂತಹ ಒಂದು ಸ್ಪಂದನ ಶಕ್ತಿಯನ್ನು ಕಳೆದುಕೊಂಡಿರಬೇಕು. ಅದು ಹೋಗಲಿ, ಅವರಿಗೆ ದೊರೆತ ನಾಯಕತ್ವವೇನು ಸಾಮಾನ್ಯವೆ? ಯುಗಪುರುಷ, ಪರಮಾತ್ಮನ ಅವತರಣವೆನಿಸಿದ ಕೃಷ್ಣ ಅವರಿಗೆ ನಾಯಕನಾಗಿದ್ದ. ಕಪಿಗಳಿಗೆ ಆದರ್ಶ ಪುರುಷ ರಾಮನಿದ್ದಂತೆ ಯಾದವರಿಗೆ ಕೃಷ್ಣನಿದ್ದ.

ಅವನ ಮುತ್ಸದ್ದಿತನದ ಕಾರಣ ಯಾದವರು ಗುರುತಿಸಲ್ಪಟ್ಟಿದ್ದರು. ಆದರೆ ಅವರ ಪತನಕ್ಕೆ ಇದ್ದಾವುದು ತಡೆಯಾಗಲಿಲ್ಲ.

ಪಾಂಡವರು ಕುರುಕ್ಷೇತ್ರದಲ್ಲಿ ನಡೆದ ಯುದ್ಧದಲ್ಲಿ ಗೆದ್ದು ಹಸ್ತಿನಾವತಿಯನ್ನು ತಮ್ಮದಾಗಿಸಿಕೊಂಡರು. ಇತ್ತ ಯಾದವರು ದಿನೇ ದಿನೇ ಪ್ರಮತ್ತರಾಗುತ್ತ ಹೋದರು. ಅವರೊಳಗೆ ಸ್ಪರ್ಧೆ, ದ್ವೇಷ, ಅಸಹನೆಗಳು ಹೆಚ್ಚಿದವು. ಕುಡಿತ ವಿಪರೀತವಾಯಿತು. ಸೊಕ್ಕು ತುಂಬಿಕೊಂಡಿತು. ಇದೇ ಸೊಕ್ಕಿನಿಂದಾಗಿ, ದ್ವಾರಕೆಗೆ ಬಂದ ಋಷಿಗಳನ್ನು ಅವಮಾನಿಸಿದರು. ಸಾಂಬನಿಗೆ ಗರ್ಭಿಣಿ ಹೆಂಗಸಿನ ವೇಷ ಹಾಕಿ, ''ಇವಳು ಹೆರುವುದು ಹೆಣ್ಣೋ ಗಂಡೋ?'' ಎನ್ನುವ ಕುಹಕದ ಪ್ರಶ್ನೆ ಕೇಳಿದರು. ಪರಿಣಾಮದಿಂದ, ''ಇವಳು ಹೆರುವುದು ಒಂದು ಒನಕೆಯನ್ನು. ಅದರಿಂದ ಸರ್ವನಾಶ ಹೊಂದಿ'' ಎಂಬ ಶಾಪವನ್ನೂ ಪಡೆದರು. ಆ ಬಳಿಕ ಪಾಪ ಕಳೆದುಕೊಳ್ಳುವುದಕ್ಕೆ ಪ್ರಭಾಸ ಎಂಬ ತೀರ್ಥಕ್ಷೇತ್ರಕ್ಕೆ ಹೋದವರು, ಅಲ್ಲಿ ಮೂಗಿನವರೆಗೆ ಮದ್ಯ ಕುಡಿದರು. ತಮ್ಮೊಳಗೆ ಕಚ್ಚಾಡಿಕೊಂಡರು. ಪರಸ್ಪರ ಬಡಿದಾಡಿಕೊಂಡು. ಎಲ್ಲರೂ ಸತ್ತರು. ಯಾದವೀ ಕಲಹ ಅಂದರೆ ಅದು. ಅವರಲ್ಲಿ ಏನಿದ್ದರೇನು? ಎಷ್ಟು ಸಂಪತ್ತು ತುಂಬಿದ್ದರೇನು? ಮೂಲತಃ ಇರಬೇಕಾದ ಸಂಸ್ಕಾರವೇ ಇರಲಿಲ್ಲ. ಅದನ್ನು ಕಲಿಯಲೂ ಇಲ್ಲ.

ಕಪಿಗಳಾದರೋ ಸಂಸ್ಕಾರವಿಲ್ಲದ ಪ್ರಾಣಿವರ್ಗಕ್ಕೆ ಸೇರಿದವರು. ಮಧುವನದ ಪ್ರಕರಣ ಬಿಟ್ಟರೆ ಬೇರೆಲ್ಲಿಯೂ ಅವರು ಪ್ರಮತ್ತತೆಯಿಂದಾಗಲಿ, ಅಹಂಕಾರದಿಂದಾಗಲಿ ವರ್ತಿಸಿದ್ದು ಕಾಣುವುದಿಲ್ಲ. ವಾಲಿ ಸುಗ್ರೀವರ ನಡುವಿನ ಜಗಳದಂತಹ ಜಗಳ ಅವರೊಳಗೆ ನಡೆಯಲಿಲ್ಲ, ಅಥವಾ ಅಂತಹ ಒಂದು ಅಸಹ್ಯ ಘಟನೆಯಿಂದ ಪಾಠವನ್ನು ಕಲಿತರೋ ಏನೋ. ಒಂದು ಸಲ, ಒಂದೇಸಲ ಸುಗ್ರೀವ ತನಗೊದಗಿದ ಕಿಷ್ಕಿಂಧೆಯ ಒಡೆತನವನ್ನು ಅನುಭವಿಸುತ್ತ ರಾಮಕಾರ್ಯವನ್ನು ಅಲ್ಪಕಾಲ ವಿಸ್ಮರಿಸಿದನೇ ಹೊರತು, ವಾಲಿಯಂತೆ ಅನ್ಯರ ಪತ್ನಿಯನ್ನು ಬಲಾತ್ಕರಿಸುವುದಕ್ಕೆ ಹೋಗಲಿಲ್ಲ.

ಎಷ್ಟು ಕಾಲ ಕಿಷ್ಕಿಂಧೆಯಲ್ಲಿದ್ದರೋ ಅಷ್ಟೂ ಕಾಲ ಚೆನ್ನಾಗಿಯೇ ಬಾಳಿದರು. ತಮಗೆ ನಾಯಕನಾಗಿದ್ದ ವಾಲಿಯನ್ನು ಅನುಕರಿಸಲಿಲ್ಲ. ಸಾತ್ವಿಕನಾದ ಸುಗ್ರೀವನನ್ನು ಅನುಸರಿಸಿದರು. ರಾಮನನ್ನು ಆರಾಧಿಸಿದರು. ತಮಗೆ ಸಹಜವಾದ ಚಾಂಚಲ್ಯವನ್ನು, ಚಪಲತೆಯನ್ನು ಬಿಟ್ಟು ಉನ್ನತಿಯನ್ನು ಸಾಧಿಸಿದರು. ಆ ಮೂಲಕ ಸಂಸ್ಕಾರಯುತ ಜೀವನಕ್ಕೆ ಜಾತಿ ವರ್ಗಗಳ ಸೀಮೆಯಿಲ್ಲ ಎಂದು ತೋರಿಸಿದರು.

ಯಾದವರು ವಿದ್ಯಾವಂತರು. ಚಂದ್ರವಂಶದ ಒಂದು ಕವಲಾಗಿ ಬಂದವರು. ಗಾರ್ಗ್ಯರಂತ ಗುರುಗಳನ್ನು ಹೊಂದಿದ್ದರು. ಆದರೂ ಸಂಸ್ಕಾರಹೀನರಾಗಿ ನಡೆದುಕೊಂಡರು. ವಿವೇಕವಂತರಾಗಿದ್ದರೆ ಉನ್ನತಿಯನ್ನು ಸಾಧಿಸಬಹುದಾಗಿದ್ದ ಯಾದವರು ಅದಿಲ್ಲದೆ ಹಾಳಾದರು. ತಮ್ಮ ನಾಯಕನಾಗಿದ್ದ ಶ್ರೀಕೃಷ್ಣನಿಗೂ ಕಿಲ್ಬಿಷದ ಸೋಂಕು ತಗುಲಿಸಿದರು.

ಇರಾನ್-ಅಮೆರಿಕ ಮತ್ತು ಇಸ್ರೇಲ್ ಸಂಘರ್ಷ: 2 ವಾರಗಳ ತಾತ್ಕಾಲಿಕ ಯುದ್ಧ ವಿರಾಮ

ಒಪ್ಪಂದ ಇನ್ನೂ ಅಸ್ಪಷ್ಟ

ದುಬೈ: ಇರಾನ್, ಅಮೆರಿಕ ಮತ್ತು ಇಸ್ರೇಲ್ ನಡುವೆ ಎರಡು ವಾರಗಳ ಯುದ್ಧ ವಿರಾಮ ಒಪ್ಪಂದಕ್ಕೆ ಒಪ್ಪಿಗೆ ದೊರೆತಿದೆ. ಕೊನೆ ಕ್ಷಣದಲ್ಲಿ ನಡೆದ ಈ ಒಪ್ಪಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಮೇಲೆ ಭಾರೀ ಬಾಂಬ್ ದಾಳಿ ನಡೆಸುವ ಬೆದರಿಕೆಯಿಂದ ಹಿಂದೆ ಸರಿಯಲು ಕಾರಣವಾಯಿತು.



ಆದರೆ, ಬುಧವಾರದ ವೇಳೆಗೆ ಈ ಒಪ್ಪಂದ ನಿಜವಾಗಿ ಜಾರಿಯಲ್ಲಿದೆಯೇ?, ಅದರ ಷರತ್ತುಗಳು ಏನು?, ಇದು ದೀರ್ಘಕಾಲಿಕ ಶಾಂತಿಗೆ ದಾರಿ ಮಾಡಿಕೊಡುತ್ತದೆಯೇ? ಎಂಬುದು ಸ್ಪಷ್ಟವಾಗಿಲ್ಲ. ಒಪ್ಪಂದ ಘೋಷಣೆಯ ಕೆಲವೇ ಗಂಟೆಗಳ ನಂತರವೂ ವಿವಿಧ ದೇಶಗಳಲ್ಲಿ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳ ವರದಿಗಳು ಬಂದಿವೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಈ ಒಪ್ಪಂದವನ್ನು ''ದುರ್ಬಲ ತಾತ್ಕಾಲಿಕ ಶಾಂತಿ'' ಎಂದು ವರ್ಣಿಸಿದ್ದಾರೆ.

ಯುದ್ಧ ಮುಗಿದಿಲ್ಲ, ಬೆರಳು ಟ್ರಿಗರ್‌ನಲ್ಲಿರಲಿ: ಮೊಜ್ತಬಾ

ಎರಡು ವಾರಗಳ ಕದನ ವಿರಾಮ ಘೋಷಿಸಿದ್ದರೂ ಅಮೆರಿಕ ನೀಡಿದ ಭರವಸೆಯನ್ನು ನಂಬುವಂತಿಲ್ಲ. ಹೀಗಾಗಿ ಬೆರಳುಗಳು ಬಂದೂಕಿನ ಟ್ರಿಗರ್ ಮೇಲಿರಲಿ ಎಂದು ಸರ್ವೋಚ್ಚ ನಾಯಕ ಆಯತ್ತೊಲ್ಲಾ ಸಯ್ಯದ್ ಮೊಜ್ತಬಾ ತಮ್ಮ ಸೈನಿಕರನ್ನು ಎಚ್ಚರಿಸಿದ್ದಾರೆ. ಅಮೆರಿಕ ಯಾವಾಗಲೂ ವಂಚಿಸುತ್ತಲೇ ಬಂದಿದ್ದು, ಅದರ ಮಾತಿನ ಮೇಲೆ ನಮಗೆ ನಂಬಿಕೆಯಿಲ್ಲ. ಅಮೆರಿಕ ಪುನಃ ದಾಳಿ ಆರಂಭಿಸಿದರೆ, ಪ್ರತಿ ಆಕ್ರಮಣಕ್ಕೂ ತಕ್ಕ ಉತ್ತರ ನೀಡಲಿದ್ದೇವೆ ಎಂದು ಇರಾನ್ ಸೇನೆ ಹೇಳಿದೆ.

ಮಧ್ಯಪ್ರಾಚ್ಯದ ಸುವರ್ಣ ಯುಗ ಆರಂಭ: ಟ್ರಂಪ್

ಇರಾನ್ ಅನ್ನು ಶಿಲಾಯುಗಕ್ಕೆ ತಳ್ಳುವುದಾಗಿ ಬೆದರಿಕೆಯೊಡ್ಡಿದ್ದ ಅಧ್ಯಕ್ಷ ಟ್ರಂಪ್ ಸುವರ್ಣಯುಗದ ಮಾತನ್ನಾಡಿದ್ದಾರೆ. ಸುಮಾರು 39 ದಿನಗಳ ಸಂಘರ್ಷದ ಬಳಿಕ ಅಮೆರಿಕ ಮತ್ತು ಇರಾನ್ ಎರಡು ವಾರಗಳ ಕದನವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡಿವೆ. ಇದನ್ನು ಮಧ್ಯಪ್ರಾಚ್ಯದ ಸುವರ್ಣಯುಗ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಣ್ಣಿಸಿದ್ದಾರೆ. ವಿಶ್ವ ಶಾಂತಿಗೆ ದೊಡ್ಡ ದಿನ, ಇರಾನ್ ಬಹಳಷ್ಟು ಹಾನಿಯನ್ನು ಕಂಡಿದ್ದು, ಕದನ ವಿರಾಮವನ್ನು ಬಯಸುತ್ತಿದೆ. ಅದೇ ರೀತಿ ಎಲ್ಲರೂ ಕದನ ವಿರಾಮ ಬಯಸುತ್ತಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ. ಏ.1ರಂದು ಇರಾನ್ ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳ ಮೇಲೆ ದಾಳಿ ಬೆದರಿಕೆಯೊಡ್ಡಿದ್ದ ಟ್ರಂಪ್, ಮುಂದಿನ 2ರಿಂದ 3 ವಾರಗಳಲ್ಲಿ ಇರಾನ್ ಅನ್ನು ಪುನಃ ಶಿಲಾಯುಗಕ್ಕೆ ಕಳುಹಿಸುವುದಾಗಿ ಎಚ್ಚರಿಕೆ ನೀಡಿದ್ದರು. ಧನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ದೊಡ್ಡ ಹಣಕಾಸಿನ ಲಾಭವಾಗಲಿದೆ. ಇರಾನ್ ತನ್ನ ಮರುನಿರ್ಮಾಣ ಆರಂಭಿಸಬಹುದು. ಎಲ್ಲಾ ಪೂರೈಕೆಗಳನ್ನು ಪುನರಾರಂಭ ಆಗಲಿವೆ. ಇದು ಮಧ್ಯಪ್ರಾಚ್ಯದ ಸುವರ್ಣಯುಗ ಆಗಿರಲಿದೆ ಎಂದು ಟ್ರಂಪ್ ಹೇಳಿದ್ದಾರೆ.

ಸೇನೆಗೆ ಖಮೇನಿ ಆದೇಶ

39 ದಿನಗಳ ಸಂಘರ್ಷವನ್ನು ಅಂತ್ಯಗೊಳಿಸಲು ಅಮೆರಿಕದೊಂದಿಗೆ ಎರಡು ವಾರಗಳ ಒಪ್ಪಂದಕ್ಕೆ ಬಂದ ನಂತರ, ಇರಾನ್‌ನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ, ತಮ್ಮ ಎಲ್ಲಾ ಮಿಲಿಟರಿ ಘಟಕಗಳಿಗೆ ದಾಳಿ ನಿಲ್ಲಿಸುವಂತೆ ಆದೇಶಿಸಿದ್ದಾರೆ. ಯುದ್ಧದ ನಡುವೆ ಈ ತಾತ್ಕಾಲಿಕ ವಿರಾಮವಿದ್ದರೂ ಇರಾನ್ ಮಿಲಿಟರಿ ಕಟ್ಟೆಚ್ಚರದಲ್ಲಿದೆ. ಇರಾನ್ ಪಡೆಗಳು ದಾಳಿಗೆ ಸನ್ನದ್ಧವಾಗಿದ್ದು, ಅಮೆರಿಕ ಅಥವಾ ಇಸ್ರೇಲ್‌ನಿಂದ ಯಾವುದೇ ಸಣ್ಣ ತಪ್ಪು ಸಂಭವಿಸಿದರೂ ಪೂರ್ಣ ಬಲದೊಂದಿಗೆ ಪ್ರತಿಕ್ರಿಯಿಸುವುದಾಗಿ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿ ಲ್ ತಿಳಿಸಿದೆ. ಫೆಬ್ರವರಿ 28 ರಂದು ಪ್ರಾರಂಭವಾದ ಈ ಯುದ್ಧದಲ್ಲಿ ಅಯತೊಲ್ಲಾ ಅಲಿ ಖಮೇನಿ ಹತ್ಯೆಯಾಗಿದ್ದರು. ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ 10 ಅಂಶಗಳ ಪ್ರಸ್ತಾವನೆಯನ್ನು ಮಾತುಕತೆಗೆ ಕಾರ್ಯಸಾಧ್ಯವಾದ ಆಧಾರವೆಂದು ಒಪ್ಪಿಕೊಂಡಿದ್ದಾರೆ. ಈ ಯೋಜನೆ, ಈ ಪ್ರದೇಶದಿಂದ ಅಮೆರಿಕದ ಯುದ್ಧ ಪಡೆಗಳ ಹಿಂತೆಗೆತ, ಎಲ್ಲಾ ಪ್ರಾಥಮಿಕ ಮತ್ತು ದ್ವಿತೀಯ ಹಂತದ ನಿರ್ಬಂಧಗಳ ರದ್ದತಿ ಮತ್ತು ಇರಾನ್‌ನ ತಡೆಹಿಡಿಯಲಾದ ಸಂಪತ್ತಿನ ಬಿಡುಗಡೆಯನ್ನು ಒಳಗೊಂಡಿದೆ. ಅಲ್ಲದೆ, ಅಂದಾಜಿನ ಪ್ರಕಾರ ಹಾನಿಗಳಿಗೆ ಅಮೆರಿಕ ಪರಿಹಾರ ಪಾವತಿಸಬೇಕೆಂದು ಇರಾನ್ ಒತ್ತಾಯಿಸಿದೆ.

ಷರತ್ತುಗಳ ಬಗ್ಗೆ ಗೊಂದಲ

ಹಾರ್ಮುಜ್ ಜಲಸಂಧಿಯಿಂದ ಸಾಗುವ ಹಡಗುಗಳಿಂದ ಶುಲ್ಕ ವಸೂಲಿ ಮಾಡುವ ತನ್ನ ಹೊಸ ನೀತಿಯನ್ನು ಅಧಿಕೃತಗೊಳಿಸಲು ಈ ಒಪ್ಪಂದ ಅವಕಾಶ ನೀಡುತ್ತದೆ. ಆದರೆ, ಇದಕ್ಕೆ ಇತರ ದೇಶಗಳು ಒಪ್ಪಿಕೊಂಡಿವೆಯೇ ಎಂಬುದು ತಿಳಿದಿಲ್ಲ. ಇದೇ ವೇಳೆ, ಪಾಕಿಸ್ತಾನ ಮಧ್ಯಸ್ಥಿಕೆಯಿಂದ ಲೆಬನಾನ್‌ನಲ್ಲಿ ನಡೆಯುತ್ತಿರುವ ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಒಪ್ಪಂದದಲ್ಲಿ ಉಲ್ಲೇಖವಿದೆ ಎಂದು ಹೇಳಲಾಗಿದೆ. ಆದರೆ, ಈ ಒಪ್ಪಂದಕ್ಕೂ ಲೆಬನಾನ್ ಮೇಲೆ ನಮ್ಮ ದಾಳಿಗೂ ಸಂಬಂಧವಿಲ್ಲ, ದಾಳಿ ಮುಂದುವರಿಯುತ್ತದೆ ಇಸ್ರೇಲ್ ಸ್ಪಷ್ಟಪಡಿಸಿದೆ. ಟೆಹ್ರಾನ್ ನಗರದಲ್ಲಿ ಈ ಘೋಷಣೆಯ ಬಳಿಕ ಸರ್ಕಾರದ ಬೆಂಬಲಿಗರು ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದ್ದಾರೆ. ಇದು ಕಠಿಣ ನಿಲುವಿನ ಬಣಗಳ ಆಕ್ರೋಶವನ್ನು ತೋರಿಸುತ್ತದೆ.

ಹಾರ್ಮುಜ್ ಮೇಲೆ ಆರ್ಥಿಕ, ರಾಜಕೀಯ ಪ್ರಭಾವ

ಹಾರ್ಮುಜ್ ಜಲಸಂಧಿ ವಿಶ್ವದ ತೈಲ ಸಾಗಣೆಯ ಸುಮಾರು ಶೇ.20 ಸಾಗುವ ಪ್ರಮುಖ ಮಾರ್ಗವಾಗಿದೆ. ಯುದ್ಧದ ಅವಧಿಯಲ್ಲಿ ಈ ಪ್ರದೇಶದ ಮೇಲೆ ಇರಾನ್ ಹಿಡಿತ ಸಾಧಿಸಿದ್ದು, ಜಾಗತಿಕ ಆರ್ಥಿಕತೆಗೆ ದೊಡ್ಡ ಹೊಡೆತ ನೀಡಿತು. ಹೊಸ ಯೋಜನೆಯ ಪ್ರಕಾರ, ಈ ಜಲಸಂಧಿಯಲ್ಲಿ ಸಾಗುವ ಹಡಗುಗಳಿಂದ ಇರಾನ್ ಮತ್ತು ಒಮಾನ್ ಶುಲ್ಕ ವಸೂಲಿ ಮಾಡಬಹುದು. ಇದು ಹಿಂದಿನ ದಶಕಗಳಲ್ಲಿ ಜಲಸಂಧಿಯನ್ನು ಉಚಿತ ಅಂತಾರಾಷ್ಟ್ರೀಯ ಮಾರ್ಗವಾಗಿ ಪರಿಗಣಿಸಿದ್ದ ಪರಿಪಾಠವನ್ನು ಸಂಪೂರ್ಣವಾಗಿ ಬದಲಾಯಿಸಬಹುದು. ಈ ಹಣವನ್ನು ಇರಾನ್ ಪುನರ್ ನಿರ್ಮಾಣಕ್ಕೆ ಬಳಸಲಿದೆ ಎಂದು ಹೇಳಲಾಗಿದೆ. ಆದರೆ ಇದು ಗಲ್ಫ್ ಪ್ರದೇಶದ ಇತರ ದೇಶಗಳಿಗೆ ಒಪ್ಪಿಕೊಳ್ಳಲು ಕಷ್ಟವಾಗಬಹುದು.

ಸಾವಿರಾರು ಜನರ ಸಾವು

ಈ ಯುದ್ಧದಲ್ಲಿ ಸಾವಿರಾರು ಜನರು ಮೃತಪಟ್ಟಿದ್ದಾರೆ. ಇರಾನ್‌ನಲ್ಲಿ ಮಾರ್ಚ್ ಅಂತ್ಯದ ವೇಳೆಗೆ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ಲೆಬನಾನ್‌ನಲ್ಲಿ, ಹೆಜ್ಬೊಲ್ಲಾ ವಿರುದ್ಧ ಇಸ್ರೇಲ್ ನಡೆಸುತ್ತಿರುವ ಯುದ್ಧದಲ್ಲಿ 1,500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಇಸ್ರೇಲ್‌ನಲ್ಲಿ 23 ಜನರು ಮತ್ತು ಅಮೆರಿಕದ 13 ಸೈನಿಕರು ಮೃತರಾಗಿದ್ದಾರೆ. ಗಲ್ಫ್ ಪ್ರದೇಶ ಮತ್ತು ವೆಸ್ಟ್ ಬ್ಯಾಂಕ್‌ನಲ್ಲಿ ಕೂಡ ಹಲವರು ಪ್ರಾಣ ಕಳೆದುಕೊಂಡಿದ್ದಾರೆ.

ಅಣು, ಕ್ಷಿಪಣಿ ಕಾರ್ಯಕ್ರಮಗಳ ಭವಿಷ್ಯ

ಯುದ್ಧದ ವೇಳೆ ಅಮೆರಿಕ ಮತ್ತು ಇಸ್ರೇಲ್ ಇರಾನ್‌ನ ಅಣು ಮತ್ತು ಕ್ಷಿಪಣಿ ಮೂಲಸೌಕರ್ಯಗಳಿಗೆ ಭಾರೀ ಹಾನಿ ಉಂಟುಮಾಡಿದರೂ, ಅವು ಸಂಪೂರ್ಣವಾಗಿ ನಾಶವಾಗಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಇರಾನ್ ತನ್ನ ಅಣು ಕಾರ್ಯಕ್ರಮ ಶಾಂತಿಯುತ ಉದ್ದೇಶಗಳಿಗಾಗಿ ಎಂದು ಹೇಳಿಕೊಂಡರೂ, ಅದು ಶೇ.60 ಮಟ್ಟದ ಯುರೇನಿಯಂ ಶುದ್ಧೀಕರಣ ನಡೆಸಿರುವುದು ಅಣ್ವಸ್ತ್ರ ಮಟ್ಟಕ್ಕೆ ತಲುಪಲು ಬಹಳ ಸಮೀಪದಲ್ಲಿದೆ.

ಒಪ್ಪಂದದ ಫಾರ್ಸಿ ಆವೃತ್ತಿಯಲ್ಲಿ ''ಯುರೇನಿಯಂ ಶುದ್ಧೀಕರಣಕ್ಕೆ ಅನುಮತಿ'' ಎಂಬ ಪದ ಬಳಕೆ ಇದ್ದು, ಇಂಗ್ಲಿಷ್ ಆವೃತ್ತಿಯಲ್ಲಿ ಅದು ಕಾಣಿಸಿಲ್ಲ. ಇದರಿಂದ ಒಪ್ಪಂದದ ನಿಜಸ್ವರೂಪದ ಬಗ್ಗೆ ಅನುಮಾನಗಳು ಹೆಚ್ಚಿವೆ. ಇಸ್ರೇಲ್ ಅಧಿಕಾರಿಗಳು ಅಮೆರಿಕದೊಂದಿಗೆ ಸಂಯೋಜನೆ ಮಾಡಿಕೊಂಡು ಈ ಒಪ್ಪಂದ ಸಾಧಿಸಲಾಗಿದೆ ಎಂದು ತಿಳಿಸಿದ್ದಾರೆ. ಅವರು ಇರಾನ್‌ನ ಅಣು ಮತ್ತು ಕ್ಷಿಪಣಿ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ನಿಲ್ಲಿಸಲು ಒತ್ತಡ ಮುಂದುವರಿಸಲಾಗುವುದು ಎಂದು ಹೇಳಿದ್ದಾರೆ.

ಮುಂದಿನ ಹಾದಿ ಏನು?

ಈ ಎರಡು ವಾರಗಳ ಯುದ್ಧ ವಿರಾಮವು ಶಾಶ್ವತ ಶಾಂತಿಗೆ ದಾರಿ ಮಾಡಿಕೊಡುತ್ತದೆಯೇ ಎಂಬುದು ಇನ್ನೂ ಅನುಮಾನಾಸ್ಪದವಾಗಿದೆ. ಪಾಕಿಸ್ತಾನದಲ್ಲಿ ಶೀಘ್ರದಲ್ಲೇ ಶಾಂತಿ ಮಾತುಕತೆಗಳು ಆರಂಭವಾಗಬಹುದು ಎಂದು ಹೇಳಲಾಗಿದ್ದರೂ, ಪ್ರಮುಖ ವಿಷಯಗಳ ಮೇಲೆ ಭಿನ್ನಾಭಿಪ್ರಾಯಗಳು ಮುಂದುವರಿದಿವೆ. ಒಪ್ಪಂದವು ತಾತ್ಕಾಲಿಕವಾಗಿ ಉದ್ವಿಗ್ನತೆಯನ್ನು ಕಡಿಮೆ ಮಾಡಿದ್ದರೂ, ಅದರ ಅನಿಶ್ಚಿತತೆ ಮತ್ತು ಮುಂದುವರಿಯುತ್ತಿರುವ ದಾಳಿಗಳು ಈ ಪ್ರದೇಶದಲ್ಲಿ ಸ್ಥಿರತೆ ಇನ್ನೂ ದೂರದಲ್ಲಿದೆ ಎಂಬುದನ್ನು ಸೂಚಿಸುತ್ತವೆ.

ಒಪ್ಪಂದ ನಂತರವೂ ಮುಂದುವರಿದ ದಾಳಿ

ಒಪ್ಪಂದ ಘೋಷಣೆಯ ನಂತರವೂ ದಾಳಿಗಳು ಸಂಪೂರ್ಣ ನಿಂತಿಲ್ಲ. ಯುನೈಟೆಡ್ ಅರಬ್ ಎಮಿರೇಟ್ಸ್, ಸೌದಿ ಅರೇಬಿಯಾ, ಬಹ್ರೈನ್ ಮತ್ತು ಕುವೈತ್‌ನಲ್ಲಿ ಕ್ಷಿಪಣಿ ಎಚ್ಚರಿಕೆಯ ಸೈರನ್‌ಗಳು ಮೊಳಗುತ್ತಿವೆ. ಅಬುಧಾಬಿಯಲ್ಲಿ ಅನಿಲ ಸಂಸ್ಕರಣಾ ಘಟಕಕ್ಕೆ ಬೆಂಕಿ ತಗುಲಿದ ಘಟನೆ ವರದಿಯಾಗಿದೆ. ಕುವೈತ್‌ನಲ್ಲಿ ಡ್ರೋನ್ ದಾಳಿಗಳಿಗೆ ಸೇನೆ ಪ್ರತಿಕ್ರಿಯೆ ನೀಡಿದೆ. ಇರಾನ್‌ನ ಲವಾನ್ ದ್ವೀಪದಲ್ಲಿರುವ ತೈಲ ಶುದ್ಧೀಕರಣ ಘಟಕದ ಮೇಲೂ ದಾಳಿ ನಡೆದಿದೆ ಎಂದು ವರದಿಯಾಗಿದೆ. ಈ ಘಟನೆಗಳು ಯುದ್ಧ ವಿರಾಮದ ಪರಿಣಾಮಕಾರಿತ್ವದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸುತ್ತವೆ.



ಕದನ ವಿರಾಮದ ನಿಯಮಗಳು

ಇದರೊಂದಿಗೆ, ಫೆ.28 ರಂದು ಅಮೆರಿಕ-ಇಸ್ರೇಲ್ ದಾಳಿಯ ನಂತರ ಪ್ರಾರಂಭವಾದ ಐದು ವಾರಗಳ ಸಂಘರ್ಷ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ನಿಯಮಗಳ ಪ್ರಕಾರ, ಇರಾನ್‌ನ ವಿದ್ಯುತ್ ಜಾಲ ಮತ್ತು ಸೇತುವೆಗಳ ಮೇಲೆ ಯೋಜಿಸಲಾಗಿದ್ದ ದಾಳಿಯನ್ನು ಅಮೆರಿಕ ಅಮಾನತುಗೊಳಿಸಲಿದೆ. ಬದಲಾಗಿ, ಇರಾನ್ ತನ್ನ ಜಲಮಾರ್ಗವಾದ ಹಾರ್ಮುಜ್ ಜಲಸಂಧಿ ಯನ್ನು ಸಮುದ್ರ ಸಂಚಾರಕ್ಕೆ ಮುಕ್ತಗೊಳಿಸಲಿದೆ. ಜಲಮಾರ್ಗದ ಮೇಲಿನ ನಿಯಂತ್ರಣವನ್ನು ತನ್ನಲ್ಲೇ ಉಳಿಸಿಕೊಂಡು, ಹಡಗುಗಳ ಸಂಚಾರವನ್ನು ಇರಾನ್ ಸೇನೆ ಸಂಯೋಜಿಸಲಿದೆ ಎಂದು ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ತಿಳಿಸಿದ್ದಾರೆ.

ಇರಾನ್ ಬೇಡಿಕೆಗಳು

ಕದನ ವಿರಾಮಕ್ಕೆ ಪ್ರಾಥಮಿಕ ಮತ್ತು ದ್ವಿತೀಯ ಹಂತದ ನಿರ್ಬಂಧಗಳನ್ನು ತೆಗೆದುಹಾಕುವುದು ಹಾಗೂ ಪರಮಾಣು ಪುಷ್ಟೀಕರಣಕ್ಕೆ ಅಂಗೀಕಾರ ನೀಡಬೇಕು, ಎಂದು ಇರಾನ್‌ನ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ ಹೇಳಿದೆ. ಅಂತಿಮ ಒಪ್ಪಂದವನ್ನು ಅಂತರಾಷ್ಟ್ರೀಯ ಕಾನೂನಿನಲ್ಲಿ ಕಡ್ಡಾಯಗೊಳಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯವನ್ನು ಈ ಯೋಜನೆ ಬಯಸಿದೆ.

ಇರಾನ್‌ನ 10 ಅಂಶಗಳ ಷರತ್ತುಗಳು

1. ಆಕ್ರಮಣರಹಿತ ನೀತಿ
2. ಸ್ಟ್ರೈಟ್ ಆಫ್ ಹಾರ್ಮುಜ್ ಮೇಲೆ ಇರಾನ್‌ನ ನಿರಂತರ ನಿಯಂತ್ರಣ
3. ಪರಮಾಣು ಪುಷ್ಟೀಕರಣಕ್ಕೆ ಅಂಗೀಕಾರ
4. ಎಲ್ಲಾ ಪ್ರಾಥಮಿಕ ನಿರ್ಬಂಧಗಳ ರದ್ದತಿ
5. ಎಲ್ಲಾ ದ್ವಿತೀಯಕ ನಿರ್ಬಂಧಗಳ ರದ್ದತಿ
6. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಎಲ್ಲಾ ನಿರ್ಣಯಗಳ ರದ್ದತಿ
7. ಐಎಇಎ ಬೋರ್ಡ್ ಆಫ್ ಗವರ್ನರ್ಸ್‌ನ ಎಲ್ಲಾ ನಿರ್ಣಯಗಳ ರದ್ದತಿ
8. ಇರಾನ್‌ಗೆ ಪರಿಹಾರ ಧನ ಪಾವತಿ
9. ಇರಾನ್ ಪ್ರಾಂತ್ಯದಿಂದ ಅಮೆರಿಕದ ಯುದ್ಧ ಪಡೆಗಳ ಹಿಂತೆಗೆತ
10. ಎಲ್ಲಾ ರಂಗಗಳಲ್ಲಿ ಯುದ್ಧದ ನಿಲುಗಡೆ



ಹೆಜ್ಬೊಲ್ಲಾ ವಿರುದ್ಧ ಕಾರ್ಯಾಚರಣೆ ಮುಂದುವರಿಯಲಿದೆ: ಇಸ್ರೇಲ್

ಜೆರುಸಲೇಂ: ಲೆಬನಾನ್‌ನ ಹೆಜ್ಬೊಲ್ಲಾ ಉಗ್ರಗಾಮಿ ಸಂಘಟನೆಯ ವಿರುದ್ಧ ತನ್ನ ಯುದ್ಧ ಮತ್ತು ಭೂ ಕಾರ್ಯಾಚರಣೆಗಳು ಮುಂದುವರಿಯಲಿವೆ ಎಂದು ಇಸ್ರೇಲ್ ಮಿಲಿಟರಿ ಬುಧವಾರ ತಿಳಿಸಿದೆ. ಇರಾನ್ ಜೊತೆಗಿನ ಕದನ ವಿರಾಮವನ್ನು ಇಸ್ರೇಲ್ ಗೌರವಿಸಲಿದೆ, ಆದರೆ ಹೆಜ್ಬೊಲ್ಲಾ ವಿರುದ್ಧದ ಹೋರಾಟವನ್ನು ಮುಂದುವರಿಸಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಈ ಕುರಿತು ಹೆಜ್ಬೊಲ್ಲಾ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇರಾನ್, ಅಮೆರಿಕ ಮತ್ತು ಇಸ್ರೇಲ್ ಬುಧವಾರ ಎರಡು ವಾರಗಳ ಕದನ ವಿರಾಮ ಒಪ್ಪಂದಕ್ಕೆ ಬಂದಿವೆ.

ಇರಾನ್‌ಗೆ ಶಸ್ತ್ರಾಸ್ತ್ರ ನೆರವು ನೀಡಿದರೆ ಶೇ.50 ಸುಂಕ

ವಾಷಿಂಗ್ಟನ್: ಇರಾನ್‌ಗೆ ಯಾವುದಾದರೂ ರಾಷ್ಟ್ರಗಳು ಆಯುಧ ಪೂರೈಕೆ ಮಾಡಿದರೆ, ಅವುಗಳ ಎಲ್ಲಾ ರಫ್ತುಗಳ ಮೇಲೆ ಶೇ.50 ಸುಂಕ ಹೇರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಕದನ ವಿರಾಮ ಒಪ್ಪಂದದ ಪ್ರಕಾರ, ಇರಾನ್ ಯುರೇನಿಯಂ ಅಭಿವೃದ್ಧಿ ಯೋಜನೆ ನಿಲ್ಲಿಸಲು ಒಪ್ಪಿಕೊಂಡಿದ್ದಾಗಿ ಟ್ರಂಪ್ ಹೇಳಿಕೊಂಡಿದ್ದಾರೆ. ಇರಾನ್‌ಗೆ ಯಾವುದೇ ರಾಷ್ಟ್ರ ಆಯುಧ ಪೂರೈಕೆ ಮಾಡಿದರೂ ವಿನಾಯಿತಿ ನೀಡುವುದಿಲ್ಲ. ಅಮೆರಿಕದಲ್ಲಿ ಮಾರಾಟವಾಗುವ ಅವರ ಸರಕುಗಳ ಮೇಲೆ ಶೇ.50 ಸುಂಕ ಹೇರಲಾಗುತ್ತದೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇರಾನ್ ಭಾಗವಹಿಸುವಿಕೆ ಖಚಿತ

ಇಸ್ಲಾಮಾಬಾದ್: ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಪಾಕಿಸ್ತಾನದಲ್ಲಿ ನಡೆಯಲಿರುವ ಅಮೆರಿಕದೊಂದಿಗಿನ ಶಾಂತಿ ಮಾತುಕತೆಯಲ್ಲಿ ಇರಾನ್ ಭಾಗವಹಿಸಲಿದೆ, ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಖಚಿತಪಡಿಸಿದ್ದಾರೆ ಎಂದು ಪ್ರಧಾನಿ ಶೆಹಬಾಜ್ ಶರೀಫ್ ಬುಧವಾರ ತಿಳಿಸಿದ್ದಾರೆ. ಉಭಯ ನಾಯಕರ ನಡುವೆ ನಡೆದ 45 ನಿಮಿಷಗಳ ದೂರವಾಣಿ ಸಂಭಾಷಣೆಯ ನಂತರ ಈ ಮಾಹಿತಿ ಹೊರಬಿದ್ದಿದೆ. ಹಾರ್ಮುಜ್ ಜಲಮಾರ್ಗವನ್ನು ಪುನಃ ತೆರೆಯುವುದೂ ಸೇರಿದಂತೆ, ಅಮೆರಿಕ ಮತ್ತು ಇರಾನ್ ನಡುವೆ ಎರಡು ವಾರಗಳ ಕದನ ವಿರಾಮ ಏರ್ಪಟ್ಟ ಬೆನ್ನಲ್ಲೇ ಈ ಮಾತುಕತೆಗಳು ನಡೆಯುತ್ತಿವೆ. ಪ್ರಾದೇಶಿಕ ಶಾಂತಿಗಾಗಿ ಇರಾನ್ ನಾಯಕತ್ವ ತೆಗೆದುಕೊಂಡ ನಿರ್ಧಾರವನ್ನು ಪ್ರಧಾನಿ ಶರೀಫ್ ಶ್ಲಾಘಿಸಿದ್ದಾರೆ. ಫೆ. 28 ರಂದು ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ನಡೆಸಿದ ದಾಳಿಯಿಂದ ಈ ಸಂಘರ್ಷ ಉಂಟಾಗಿತ್ತು. ಆ ದಾಳಿಯಲ್ಲಿ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಮತ್ತು ಹಲವು ಕಮಾಂಡರ್‌ಗಳು ಮೃತಪಟ್ಟಿದ್ದು, ಇದು ಪ್ರಾದೇಶಿಕ ಯುದ್ಧಕ್ಕೆ ಕಾರಣವಾಗಿತ್ತು.

ಕದನ ವಿರಾಮ ಸ್ವಾಗತಿಸಿದ ಭಾರತ

ಹೊಸದಿಲ್ಲಿ : ಅಮೆರಿಕ-ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮವನ್ನು ಸ್ವಾಗತಿಸಿರುವ ಭಾರತ, ಪಶ್ಚಿಮ ಏಷ್ಯಾದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗಾಗಿ ವಲಯದಲ್ಲಿನ ಉದ್ವಿಗ್ನತೆ -ಸಂಘರ್ಷ ಶಮನಗೊಳ್ಳಬೇಕು, ಮಾತುಕತೆ ಮತ್ತು ರಾಜತಾಂತ್ರಿಕತೆ ಮುಖೇನ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಆಗ್ರಹಿಸಿದೆ. ಅಂದಾಜು ಶೇ.20 ಜಾಗತಿಕ ತೈಲ ಮತ್ತು ಎಲ್‌ಎನ್‌ಜಿ ಪೂರೈಕೆ ನಿಭಾಯಿಸುವ, ಪರ್ಶಿಯನ್ ಕೊಲ್ಲಿ ಮತ್ತು ಗಲ್ಫ್ ಆಫ್ ಒಮನ್ ನಡುವಿನ ನಿರ್ಣಾಯಕ ಜಲಮಾರ್ಗ , ಹಾರ್ಮುಜ್ ಜಲಸಂಧಿ ಮುಖೇನ ಅಬಾಧಿತವಾಗಿ ನೌಕಾಯಾನ ಮತ್ತು ಜಾಗತಿಕ ವಾಣಿಜ್ಯ ಚಟುವಟಿಕೆಗಳು ನಡೆಯುವಂತಾಗಬೇಕೆಂದೂ ಭಾರತ ನಿರೀಕ್ಷೆ ವ್ಯಕ್ತಪಡಿಸಿದೆ.

ಕದನವಿರಾಮವನ್ನು ನಾವು ಸ್ವಾಗತಿಸುತ್ತೇವೆ ಮತ್ತು ಇದು ಪ.ಏಷ್ಯಾದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗೆ ಪೂರಕವಾಗಲಿದೆ ಎಂಬ ಭರವಸೆ ಹೊಂದಿದ್ದೇವೆ. ಸಂಘರ್ಷ ಆದಷ್ಟು ಶೀಘ್ರ ಕೊನೆಗಾಣಲು ಮಾತುಕತೆ, ರಾಜತಾಂತ್ರಿಕತೆಯ ಹಾದಿಯೇ ವಿಹಿತವೆಂದು ಭಾರತ ಈ ಹಿಂದೆಯೇ ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ . ಸಂಘರ್ಷದಿಂದ ಜನರು ಈಗಾಗಲೆ ಸಾಕಷ್ಟು ತೊಂದರೆಗೀಡಾಗಿದ್ದಾರೆ. ಜಾಗತಿಕ ಇಂಧನ ಪೂರೈಕೆ, ವ್ಯಾಪಾರ ಜಾಲಗಳು ಅಸ್ತವ್ಯಸ್ತಗೊಂಡಿವೆ. ಮಾತುಕತೆ, ರಾಜತಾಂತ್ರಿಕತೆ ಮುಖೇನ ಪ.ಏಷ್ಯಾದ ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳುವಂತೆ ಭಾರತ ಈಗಲೂ ಕರೆ ನೀಡುತ್ತದೆ ಎಂದು ಭಾರತದ ವಿದೇಶಾಂಗ ಖಾತೆ ಹೇಳಿದೆ.

ಹಾರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವುದು ಸೇರಿದಂತೆ ಹಲವು ಶರ್ತಬದ್ಧ ಕದನ ವಿರಾಮಕ್ಕೆ ಇರಾನ್, ಅಮೆರಿಕಗಳು ಒಪ್ಪಿಕೊಂಡಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕದನ ವಿರಾಮ ಘೋಷಿಸುತ್ತಲೇ ಜಾಗತಿಕ ಕಚ್ಚಾತೈಲ ದರಗಳು ದಿಢೀರ್ ಏರಿಕೆಯಾಗಿವೆ. ಈ ಹಿಂದೆ ಇರಾನ್ ಹೋರ್ಮುಜ್ ಜಲಸಂಧಿಯನ್ನು ಮುಚ್ಚಿದ ಬೆನ್ನಲ್ಲೇ ಕಚ್ಚಾತೈಲ ದರಗಳು ಏರಿಕೆಯಾಗಿದ್ದವು. ಜಲಸಂಧಿ ಮುಚ್ಚುಗಡೆ ಕ್ರಮದಿಂದ ಭಾರತ ಸಹಿತ ಜಗತ್ತಿನ ವಿವಿಧ ರಾಷ್ಟ್ರಗಳ ತೈಲ ಪೂರೈಕೆ ವ್ಯವಸ್ಥೆ ಗಂಭೀರವಾಗಿ ಅಸ್ತವ್ಯಸ್ತಗೊಂಡಿತ್ತು. ಭಾರತದ ಇಂಧನ ಖರೀದಿಗೆ ಪ.ಏಷ್ಯಾ ಪ್ರಧಾನ ಮೂಲವಾಗಿದೆ.

ಮಿಲಿಟರಿ ನಿಗಾದಲ್ಲಿ ನೌಕಾ ಸಂಚಾರಕ್ಕೆ ಅವಕಾಶ: ಈ ಮಧ್ಯೆ, ಇರಾನ್‌ನ ಮಿಲಿಟರಿ ನಿಗಾಕ್ಕೊಳಪಟ್ಟು ಹಾರ್ಮುಜ್ ಜಲಸಂಧಿ ಮುಖೇನ ನೌಕೆಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ಇರಾನ್‌ನ ಸಶಸ್ತ್ರ ಪಡೆಗಳೊಂದಿಗೆ ಸಮನ್ವಯತೆಯಲ್ಲಿ ಮತ್ತು ತಾಂತ್ರಿಕ ಇತಿಮಿತಿಗೊಳಪಟ್ಟು ಎರಡು ವಾರ ಕಾಲ ಹೋರ್ಮುಜ್ ಜಲಸಂಧಿಯಲ್ಲಿ ನೌಕೆಗಳ ಸುರಕ್ಷಿತ ಯಾನಕ್ಕೆ ಅವಕಾಶವಿರುವುದು ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ಹೇಳಿದ್ದಾರೆ.

10 ಗ್ರಾಂ. ಚಿನ್ನದ ಬೆಲೆ 4 ಸಾವಿರ ರೂ. ಏರಿಕೆ!

ಹೊಸದಿಲ್ಲಿ: ಮುಂದಿನ ಎರಡು ವಾರದವರೆಗೆ ಹಾರ್ಮುಜ್ ಜಲಸಂಧಿಯಲ್ಲಿ ವ್ಯಾಪಾರ ಹಡಗುಗಳ ಮುಕ್ತ ಸಂಚಾರಕ್ಕೆ ಇರಾನ್ ಒಪ್ಪಿಕೊಂಡ ಹಿನ್ನೆಲೆ ಕೆಲವೇ ಗಂಟೆಗಳಲ್ಲಿ 10 ಗ್ರಾಂ. 24 ಕ್ಯಾರೆಟ್ ಚಿನ್ನದ ದರ 3,980 ರೂ. ಏರಿಕೆ ಕಂಡಿದೆ. ಕಳೆದ 10 ದಿನಗಳಲ್ಲಿ ಇದು ಈ ತಿಂಗಳ ಅತ್ಯಧಿಕ ಬೆಲೆ ಏರಿಕೆಯಾಗಿದೆ. 100 ಗ್ರಾಂ. 24 ಕ್ಯಾರೆಟ್ ಚಿನ್ನದ ಬೆಲೆ 39,800 ರೂ. ಏರಿಕೆಯೊಂದಿಗೆ 15,38,200 ರೂ. ತಲುಪಿದೆ. 10 ಗ್ರಾಂ. ಬೆಳ್ಳಿ ಬೆಲೆ 100 ರೂ. ಏರಿಕೆಯಾಗಿದ್ದು, 2,600 ರೂ. ತಲುಪಿದೆ. 100 ಗ್ರಾಂ. ಬೆಳ್ಳಿ ದರ 1,000 ರೂ. ಏರಿಕೆಯಿಂದ 26,000 ರೂ. ತಲುಪಿದೆ.



ರಾಣಾ ವಿರುದ್ಧ ಕ್ರಮಕ್ಕೆ ಹೈ ಸೂಚನೆ

ಹೊಸದಿಲ್ಲಿ: ಹಿಂದು ದೇವತೆಗಳನ್ನು ಅವಮಾನಿಸುವ ಮತ್ತು ಸಾವರ್ಕರ್ ವಿರುದ್ಧ ಅವಹೇಳನಕಾರಿ ಪೋಸ್ಟ್ ಮಾಡಿದ್ದ ಪತ್ರಕರ್ತೆ ರಾಣಾ ಅಯೂಬ್ ಅವರ ಮೇಲೆ ಕ್ರಮ ಕೈಗೊಳ್ಳುವಂತೆ ದಿಲ್ಲಿ ಹೈಕೋರ್ಟ್ ಕೇಂದ್ರ ಸರ್ಕಾರ, ದಿಲ್ಲಿ ಪೊಲೀಸ್ ಮತ್ತು ಎಕ್ಸ್‌ಗೆ ಆದೇಶಿಸಿದೆ. ಎಕ್ಸ್‌ನಲ್ಲಿ ಅವಹೇಳನಕಾರಿ, ಪ್ರಚೋದನಕಾರಿ ಮತ್ತು ಕೋಮುವಾದ ಹರಡುತ್ತಿದೆ ಎಂದು ಆರೋಪಿಸಿ ಅವುಗಳನ್ನು ಅಳಿಸುವಂತೆ ಕೋರಿ ಅಮಿತಾ ಸಚ್‌ದೇವಾ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ನಡೆಸಿದ್ದಾರೆ.

ಅಧೀರ್ ರಂಜನ್ ಕಾರಿಗೆ ಟ್ರಕ್ ಡಿಕ್ಕಿ

ಮುರ್ಶಿದಾಬಾದ್: ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ಚುನಾವಣಾ ಪ್ರಚಾರದಿಂದ ಹಿಂದಿರುಗುತ್ತಿದ್ದ ವೇಳೆ ಕಾಂಗ್ರೆಸ್ ಅಭ್ಯರ್ಥಿ ಅಧೀರ್ ರಂಜನ್ ಚೌಧರಿ ಅವರ ಕಾರಿಗೆ ಟ್ರಕ್ ಡಿಕ್ಕಿ ಹೊಡೆದಿದ್ದು, ಹಲವು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ಕಂಡಿ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿ ಬೆಹರಾಮ್‌ಪುರ್‌ಗೆ ಹಿಂದಿರುಗಿತ್ತಿದ್ದಾಗ ದುರ್ಘಟನೆ ನಡೆದಿದೆ. ಏ.4ರಂದು ಬೆಹರಾಮ್‌ಪುರ್ ರ‍್ಯಾಲಿ ವೇಳೆ ಅಧೀರ್ ಮೇಲೆ ಟಿಎಂಸಿ ಕಾರ್ಯಕರ್ತರು ಹಲ್ಲೆಗೆ ಯತ್ನಿಸಿದ್ದರು.

ಚುನಾವಣಾ ವೀಕ್ಷಣಾಧಿಕಾರಿ ವಜಾ

ಕೋಲ್ಕತ್ತಾ: ಕೂಚ್ ಬೆಹಾರ್ ದಕ್ಷಿಣದ ಚುನಾವಣಾ ವೀಕ್ಷಕ ಅನುರಾಗ್ ಯಾದವ್ ಅವರಿಗೆ ವಿಧಾನಸಭಾ ಕ್ಷೇತ್ರದ ಮತದಾನ ಕೇಂದ್ರಗಳ ಸಂಖ್ಯೆ ತಿಳಿದಿಲ್ಲ ಎಂಬ ಮಾಹಿತಿ ಬಹಿರಂಗೊಂಡ ಬೆನ್ನಲ್ಲೇ ಚುನಾವಣಾ ಆಯೋಗ ವರನ್ನು ವಜಾ ಗೊಳಿಸಿದೆ. ವೀಕ್ಷಕರ ವಿವರಣೆ ವೇಳೆ, ಯಾದವ್ ಅವರು ತಮ್ಮ ಕ್ಷೇತ್ರದ ಮತದಾನ ಕೇಂದ್ರಗಳ ಸಂಖ್ಯೆಯನ್ನು ಹೇಳಲು ವಿಫಲರಾಗಿದ್ದಾರೆ. ಸಿಎಸಿ ಜ್ಞಾನೇಶ್ ಕುಮಾರ್ ಅವರು ತಮ್ಮ ಕ್ಷೇತ್ರದ ಮತಗಟ್ಟೆಗಳ ಸಂಖ್ಯೆಯ ಬಗ್ಗೆ ಕೇಳಿದ ವೇಳೆ, ದಕ್ಷಿಣದಲ್ಲಿ 125 ಮತಗಟ್ಟೆಗಳಿವೆ ಎಂದು ಉತ್ತರಿಸಲು ತಡವರಿಸಿದ್ದಾರೆ.

ಉದ್ದಿಮೆಗಳ ಬಲಪಡಿಸುವಲ್ಲಿ ಮುದ್ರಾ ಯೋಜನೆ ಯಶಸ್ವಿ

ಹೊಸದಿಲ್ಲಿ: ಉದ್ದಿಮೆಗಳ ಸುಗಮತೆಗಿದ್ದ ಅಡೆತಡೆ ನಿವಾರಿಸಿ, ಜನರ ಆಶೋತ್ತರಗಳಲ್ಲಿ ದೃಢ ವಿಶ್ವಾಸಕಾಯ್ದುಕೊಳ್ಳುವಮುಖೇನ, ದೇಶಾದ್ಯಂತ ಉದ್ದಿಮೆಗಳ ಸ್ಫೂರ್ತಿ ಬಲಪಡಿಸುವಲ್ಲಿ ಮುದ್ರಾ ಯೋಜನೆ ಯಶಸ್ವಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.


ಆತ್ಮವಿಶ್ವಾಸದೊಂದಿಗೆ ಕನಸು ಕಾಣಲು ಮತ್ತು ಕನಸಿನ ಸಾಕಾರಕ್ಕೆ ಅಗತ್ಯ ಮೂಲಗಳನ್ನು ಒದಗಿಸುವ ಮೂಲಕ , ಮಿಲಿಯಂತರ ಜನರ ಸಬಲೀಕರಣ, ತನ್ಮೂಲಕ ಸಾಲಸೌಲಭ್ಯದ ಲಭ್ಯತೆಯನ್ನು ಮುದ್ರಾ ಯೋಜನೆ ಮರು ವ್ಯಾಖ್ಯಾನಿಸಿದೆ ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಬಣ್ಣಿಸಿದ್ದಾರೆ. ಮುದ್ರಾ ಯೋಜನೆಗೆ 11ವರುಷಗಳು ತುಂಬಿದ ಸಂದರ್ಭದಲ್ಲಿ ಪ್ರಧಾನಿ ಮೋದಿ ಯೋಜನೆಯಿಂದ ದೇಶವಾಸಿಗಳಿಗೆ ಆಗಿರುವ ತುಂಬು ಪ್ರಯೋಜನಗಳತ್ತ ಗಮನ ಸೆಳೆದಿದ್ದಾರೆ.

ಆರ್ಥಿಕ ಆಶೋತ್ತರಗಳ ಪ್ರತಿಫಲಿಸಿದೆ ಮುದ್ರಾ: ಸುಗಮವಾಗಿ ಅವಕಾಶಗಳ ಲಭ್ಯತೆ, ಯೋಜನೆಗಳಿಗೆ ಉತ್ತೇಜನ ಮತ್ತು ಪ್ರತಿಯೊಂದು ಕನಸಿನ ಸಾಕಾರಕ್ಕೆ ತುಂಬು ಬೆಂಬಲವಿರುವಂತಹ ಆರ್ಥಿಕ ಆಶೋತ್ತರಗಳನ್ನು ಪಿಎಂ ಮುದ್ರಾ ಪ್ರತಿಫಲಿಸಿದೆ. ಮುದ್ರಾ ಯೋಜನೆಯ ಪರಿವರ್ತನಾತ್ಮಕ ಸಾಮರ್ಥ್ಯದತ್ತ ಬೆಳಕು ಚೆಲ್ಲಿರುವ ಪ್ರಧಾನಿ ಮೋದಿ, ಯೋಜನೆಯು ಯುವಶಕ್ತಿ , ನಾರೀ ಶಕ್ತಿ ಮೇಲೆ ಬೀರಿರುವ ಪ್ರಭಾವವನ್ನು ಬಣ್ಣಿಸಿದ್ದಾರೆ ಮತ್ತು ಮುದ್ರಾ ಯೋಜನೆಗೆ ಸಂಬಂಧಪಟ್ಟಂತೆ, ಸರಕಾರದ ಮೈ ಗವರ್ನ್‌ಮೆಂಟ್ ಇಂಡಿಯಾ ಜಾಲತಾಣದ ಪೋಸ್ಟ್‌ನ್ನು ಟ್ಯಾಗ್ ಮಾಡಿದ್ದಾರೆ.

ನಿಜವಾದ ಆರ್ಥಿಕ ಪರಿವರ್ತನೆಗಳು ಬೋರ್ಡ್‌ರೂಮ್‌ಗಳಿಂದ ಶುರುವಾಗುವುದಲ್ಲ. ಹಲವು ಸಂದರ್ಭಗಳಲ್ಲಿ ಇದು ಸಣ್ಣ ಸಾಲ, ಸ್ಥಳೀಯ ಚಿಂತನೆ ಮತ್ತು ಧೈರ್ಯದಿಂದ ಶುರುವಾಗುತ್ತದೆ. ಮುದ್ರಾ ಯೋಜನೆ ಭಾರತದ ಆರ್ಥಿಕತೆಯ ಬುನಾದಿಯನ್ನು ಮರುನಿರ್ಮಿಸಿದೆ. ಆಧಾರ-ಭದ್ರತೆಗಳ ಆವಶ್ಯಕತೆರಹಿತ ಮುಕ್ತ ಸಾಲಸೌಲಭ್ಯ ಮುಖೇನ ಅನೌಪಚಾರಿಕ ಸಾಲಗಳ ಮೇಲಿನ ಅವಲಂಬನೆ ಕುಗ್ಗಿಸಿದೆ. ವಿತ್ತೀಯ ಅಂತರ್ಗತತೆಯನ್ನು ವಿಸ್ತರಿಸಿದೆ ಮತ್ತು ತಳಮಟ್ಟಗಳಿಂದಲೇ ವಿತ್ತೀಯ ಅನುಶಾಸನವನ್ನು ಬಲಪಡಿಸಿದೆ ಎಂದು ಮೈ ಗವರ್ನ್‌ಮೆಂಟ್ ಇಂಡಿಯಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ವಿಶ್ಲೇಷಿಸಿದೆ.

ಕದನ ವಿರಾಮ: ಸೆನ್ಸೆಕ್ಸ್ 2,900 ಅಂಕಗಳ ಏರಿಕೆ

ಮುಂಬೈ: ಹಾರ್ಮುಜ್‌ನಲ್ಲಿ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಇರಾನ್ ಒಪ್ಪಿಕೊಂಡಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕದನವಿರಾಮ ಘೋಷಣೆ ಬೆನ್ನಲ್ಲೇ ಬ್ಯಾರೆಲ್‌ಗೆ 100 ಡಾಲರ್ ತೈಲ ಬೆಲೆ ಕುಸಿಯಿತು. ಇದರಿಂದಾಗಿ ಬುಧವಾರ ಮಾರುಕಟ್ಟೆ ತೆರೆದಾಗ ಸೆನ್ಸೆಕ್ಸ್ 2,674.05 ಅಂಕಗಳ ಮತ್ತು ನಿಫ್ಟಿ 731.5 ಅಂಕಗಳ ಏರಿಕೆ ಕಂಡಿವೆ. ಬಿಎಸ್‌ಇ ಸೆನ್ಸೆಕ್ಸ್ ಶೇ.3.58 ಏರಿಕೆಯೊಂದಿಗೆ 77,290.63 ಅಂಕಗಳೊಂದಿಗೆ ವ್ಯವಹಾರ ಆರಂಭಿಸಿತ್ತು. ಎನ್‌ಎಸ್‌ಇ ನಿಫ್ಟಿ50 ಶೇ.3.16 ಏರಿಕೆ ಕಂಡು 23,855.15 ಅಂಕಗಳೊಂದಿಗೆ ವಹಿವಾಟು ಆರಂಭಿಸಿತ್ತು. ಜಾಗತಿಕ ಅನಿಶ್ಚಿತತೆ ಸಮಯದಲ್ಲಿ ಆರ್‌ಬಿಐ ರೆಪೋ ದರವೂ ಶೇ.5.25ರೊಂದಿಗೆ ಸ್ಥಿರತೆ ಕಾಯ್ದುಕೊಂಡಿದೆ. ದಿನದ ವಹಿವಾಟು ಮುಕ್ತಾಯದ ವೇಳೆಗೆ ಸೆನ್ಸೆಕ್ಸ್ 2,946.32 ಅಂಕಗಳ ಏರಿಕೆ ಕಂಡು 77,562.9 ಅಂಕಗಳನ್ನು ಮತ್ತು ನಿಫ್ಟಿ 873.7 ಅಂಕಗಳ ಏರಿಕೆಯೊಂದಿಗೆ 23,997.35 ಅಂಕಗಳನ್ನು ತಲುಪಿದೆ.



15 ಲಕ್ಷ ಕೋಟಿ ರೂ. ಹೂಡಿಕೆ: ಅಮೆರಿಕ-ಇರಾನ್ ಕದನ ವಿರಾಮವನ್ನು ಘೋಷಿಸಿದ ಕೆಲವೇ ಗಂಟೆಗಳಲ್ಲಿ ಬಿಎಸ್‌ಇ ಸೆನ್ಸೆಕ್ಸ್ ಹೂಡಿಕೆದಾರರು 15 ಲಕ್ಷ ಕೋಟಿ ರೂ. ಹೂಡಿಕೆ ಮಾಡಿದ್ದಾರೆ. ಕದನವಿರಾಮ ಘೋಷಣೆಯಿಂದಾಗಿ ಭಾರತೀಯ ಮಾರುಕಟ್ಟೆ ಶೇ.65ರಷ್ಟು ನಷ್ಟವನ್ನು ಸುಧಾರಿಸಿದೆ.

ಆರ್‌ಬಿಐ ಕಾದುನೋಡುವ ತಂತ್ರ, ಬಡ್ಡಿದರ ಯಥಾಸ್ಥಿತಿ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ಬಡ್ಡಿದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡಿದೆ. ಮಧ್ಯಪ್ರಾಚ್ಯ ಯುದ್ಧ ಆರನೇ ವಾರ ಪ್ರವೇಶಿಸಿದ ಹಿನ್ನೆಲೆ ತೈಲ ಪೂರೈಕೆ, ದರ ಏರಿಕೆ ಮತ್ತು ಆರ್ಥಿಕ ವೃದ್ಧಿಯ ಮೇಲಿನ ಪರಿಣಾಮಗಳನ್ನು ಮೌಲ್ಯಮಾಪನ ಮಾಡಿಕೊಂಡು ಕಾದುನೋಡುವ ತಂತ್ರವನ್ನು ಅನುಸರಿಸಿದೆ. ಆರ್‌ಬಿಐನ ಆರು ಸದಸ್ಯರ ಹಣಕಾಸು ನೀತಿ ಸಮಿತಿ (ಎಂಪಿಸಿ) ಏಕಮತದಿಂದ ರೆಪೋ ದರವನ್ನು ಶೇ.5.25ದಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ತೀರ್ಮಾನಿಸಿದೆ. ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮ ಕಚ್ಚಾ ತೈಲ ಬೆಲೆ ಏರಿಕೆಯಿಂದ ರೂಪಾಯಿ ಮೌಲ್ಯ ದುರ್ಬಲಗೊಂಡು, ವ್ಯಾಪಾರ ಹರಿವುಗಳಿಗೆ ಅಡಚಣೆಯಾದ ಕಾರಣ ಅನಿಶ್ಚಿತತೆ ಹೆಚ್ಚಿದೆಯೆಂದು ಸಮಿತಿ ಸೂಚಿಸಿದೆ.



ಜಿಡಿಪಿ ಶೇ.6.9ಕ್ಕೆ ಇಳಿಕೆ ಸಾಧ್ಯತೆ: ಪ್ರಸ್ತುತ ವಿತ್ತೀಯ ವರ್ಷದಲ್ಲಿ ಭಾರತ ಶೇ.6.9ರ ಜಿಡಿಪಿ ಪ್ರಗತಿ ದರವನ್ನು ಆರ್‌ಬಿಐ ಬುಧವಾರ ಅಂದಾಜಿಸಿದ್ದು, ಯುದ್ಧ ಹಿನ್ನೆಲೆ 2026-26ನೇ ಸಾಲಿಗೆ ನಿರೀಕ್ಷಿಸಿದ್ದ ಜಿಡಿಪಿ ದರ ಶೇ.7.6ರಿಂದ ಇಳಿಕೆಯಾಗಲಿದೆ. ಭಾರತೀಯ ಆರ್ಥಿಕತೆ ಬಹಳ ಬಲಿಷ್ಠ ಮತ್ತು ದೃಢವಾಗಿದೆ. ನಾವು ತಟಸ್ಥ ಸ್ಥಿತಿ ಕಾಯ್ದುಕೊಂಡಿದ್ದೇವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರ ಹೇಳಿದ್ದಾರೆ.

ಕಿರುಸುದ್ದಿ



ಗದಗ: ನಗರದ ಗಂಗಿಮಡಿಯಲ್ಲಿರುವ ಅಂಗನವಾಡಿ ಕೇಂದ್ರಕ್ಕೆ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ಬುಧವಾರ ಭೇಟಿ ನೀಡಿದರು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಅಮಿತ ಬಿದರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಧಾ ಮಣ್ಣೂರ, ಮುಕ್ತಾರ ಮೌಲ್ವಿ ಮುಜಾಬುಲ್ಲಾ ಜಾಫರ ಇದ್ದರು.

4 ಟ್ರ್ಯಾಕ್ಟರ್ ಹೊಟ್ಟು ಬೆಂಕಿಗಾಹುತಿ



ಲಕ್ಷ್ಮೇಶ್ವರ: ಪಟ್ಟಣದ ಉಳ್ಳಟ್ಟಿ ರಸ್ತೆಗೆ ಹೊಂದಿಕೊಂಡಿರುವ ಜಮೀನಿನಲ್ಲಿ ಹೊಟ್ಟಿನ ಬಣವಿ, ತಗಡಿನ ಶೆಡ್ಡಿಗೆ ಬೆಂಕಿ ತಗುಲಿ ಅಪಾರ ಹಾನಿ ಸಂಭವಿಸಿದ ಘಟನೆ ಮಂಗಳವಾರ ನಡೆದಿದೆ.

ಪಟ್ಟಣದ ನಾಗಪ್ಪ ತಿಪ್ಪಣ್ಣ ಇಚ್ಚಂಗಿ ಅವರು ತಮ್ಮ ಜಮೀನಿನಲ್ಲಿ ಈ ವರ್ಷದಿಂದ ಹೈನುಗಾರಿಕೆ ಮಾಡಲು ಲಕ್ಷಾಂತರ ರೂ. ಖರ್ಚು ಮಾಡಿ ಬೋರ್‌ವೆಲ್ ಹಾಕಿ, ತಗಡಿನ ಶೆಡ್ ನಿರ್ಮಿಸಿ 4 ಟ್ರ್ಯಾಕ್ಟರ್ ಹೊಟ್ಟು ಸಂಗ್ರಹಿಸಿದ್ದರು. ಯಾರೋ ಕಿಡಿಗೇಡಿಗಳು ಹೊತ್ತಿಸಿದ ಕಿಡಿಯಿಂದ ಬೋರ್‌ವೆಲ್ ವೈಯರ್, ಹೊಟ್ಟು, ಶೆಡ್ಡು ಸುಟ್ಟು ಕರಕಲಾಗಿವೆ. ಸ್ಥಳಕ್ಕೆ ಅಗ್ನಿ ಶಾಮಕ ಸಿಬ್ಬಂದಿ ಆಗಮಿಸುವಷ್ಟರಲ್ಲಾಗಲೇ ಎಲ್ಲವೂ ಬೂದಿಯಾಗಿತ್ತು.

ಹೊರ ವಲಯದಲ್ಲಿ ಹಗಲು ಹೊತ್ತಲ್ಲೇ ಹೆಚ್ಚುತ್ತಿರುವ ಸಿಗರೇಟು, ಗಾಂಜಾ, ಮದ್ಯದ ವ್ಯಸನಿಗಳಿಂದ ಬೇಸಿಗೆಯಲ್ಲಿ ಇಂತಹ ಘಟನೆಗಳಿಗೆ ಅಮಾಯಕರು ಬಲಿಯಾಗುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ತಾಲೂಕಿನಲ್ಲಿ ಇಂತಹ ಅನೇಕ ದುರ್ಘಟನೆಗಳು ನಡೆದಿವೆ. ನಷ್ಟಕ್ಕೊಳಗಾದ ಬಡ ರೈತನಿಗೆ ಸರ್ಕಾರದಿಂದ ಪರಿಹಾರಧನ ಕಲ್ಪಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಯವರು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ರೈತ ಮುಖಂಡ ವಿರೂಪಾಕ್ಷ ಆದಿ ಆಗ್ರಹಿಸಿದ್ದಾರೆ.

ರಾಷ್ಟ್ರೀಯ ಸಮ್ಮೇಳನ ನಾಳೆ

ನರಗುಂದ: ಪಟ್ಟಣದ ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೋಶದ ವತಿಯಿಂದ ಐಕ್ಯೂಎಸಿ ಪ್ರಾಯೋಜಿತ ಪ್ರಗತಿ ಮತ್ತು ಪರಂಪರೆ: ವಿಕಸಿತ ಭಾರತ 2047ಗಾಗಿ ನಾವಿನ್ಯತೆ ಮತ್ತು ಪರಂಪರೆಯ ಸಮ್ಮಿಲನ ಎಂಬ ವಿಷಯದ ಕುರಿತು ಬಹುಶಾಸ್ತ್ರೀಯ ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಏ.10ರಂದು ಆನ್‌ಲೈನ್ ಮೂಲಕ ಆಯೋಜಿಸಲಾಗಿದೆ.

ಸಮ್ಮೇಳನದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ಆನಂದಕುಮಾರ ಎಸ್. ಲಾಲಸಂಗಿ ವಹಿಸಲಿದ್ದಾರೆ. ವಿಕಸಿತ ಭಾರತ ಕುರಿತು ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಉಮಾ ಎಚ್. ಆರ್. ಉಪನ್ಯಾಸ ನೀಡಲಿದ್ದಾರೆ. ಸಮ್ಮೇಳನದಲ್ಲಿ ಡಾ. ರಾಮು ಎಂ.ಎಸ್., ಐಕ್ಯೂಎಸಿ ಸಂಚಾಲಕ ಪ್ರೊ. ಯಶೋದಾ ಅಂಗಡಿ ಅವರು ಕಾಲೇಜಿನ ಸಾಧನೆಗಳನ್ನು ಸಾದರಪಡಿಸಲಿದ್ದಾರೆ. ಡಾ. ಭೀಮನಗೌಡ ಕಲಬುರ್ಗಿ ಮತ್ತು ಪ್ರೊ. ಸಾಗರ್ ಜಿ. ಬಂಬೋಲಿ ನಿರೂಪಿಸಲಿದ್ದಾರೆ ಎಂದು ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಮಧು ಜಿ. ಆರ್. ತಿಳಿಸಿದ್ದಾರೆ.

ಗೌರವ ಡಾಕ್ಟರೇಟ್ ನಿರಾಕರಣೆ ಮಾದರಿ

ಮುಂಡರಗಿ: ಮಾಜಿ ಮುಖ್ಯಮಂತ್ರಿ ಮತ್ತು ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಅವರು ಹಾವೇರಿ ವಿಶ್ವವಿದ್ಯಾಲಯ ಕೊಡ ಮಾಡುವ ಗೌರವ ಡಾಕ್ಟರೇಟ್ ಪದವಿಯನ್ನು ನಿರಾಕರಿಸಿರುವುದು ಎಲ್ಲರಿಗೂ ಮಾದರಿಯಾಗಿದೆ ಎಂದು ನಿವೃತ್ತ ಪ್ರಾಧ್ಯಾಪಕ ಎಸ್.ಆರ್. ಬಸಾಪೂರ ಹೇಳಿದ್ದಾರೆ. ಅವರು ಈ ಕುರಿತು ಪ್ರಕಟಣೆ ನೀಡಿ, ಬಸವರಾಜ ಬೊಮ್ಮಾಯಿ ಅವರು ಡಾಕ್ಟರೇಟ್ ನಿರಾಕರಿಸುವುದರ ಮೂಲಕ ಉಳಿದ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ಇಂತಹ ಸರಳ ಸಜ್ಜನಿಕೆ ರಾಜಕಾರಣ ಇಂದಿನ ಅವಶ್ಯಕತೆಯೂ ಹೌದು. ಇಂತಹವರು ನಮ್ಮ ಲೋಕಸಭಾ ಕ್ಷೇತ್ರದ ಸದಸ್ಯರೆಂದು ಹೇಳಲಿಕ್ಕೆ ಅಭಿಮಾನವೆನಿಸುತ್ತದೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ವರಿಗೂ ಇವರು ಮೇಲ್ಪಂಗತಿಯನ್ನು ಹಾಕಿ ಕೊಟ್ಟಿದ್ದಾರೆ. ರಾಜಕಾರಣಿಗಳಾಗಲಿ ಅಥವಾ ಧರ್ಮ ಗುರುಗಳಾಗಲಿ ಅವರ ಹೊಂದಿರುವ ಸ್ಥಾನಮಾನವೇ ಗೌರವಾದರಗಳಿಂದ ಕೂಡಿದ್ದಾಗಿದ್ದು, ಗೌರವ ಡಾಕ್ಟರೇಟ್ ಗಳನ್ನು ಪಡೆದುಕೊಳ್ಳಲು ಮುಗಿದು ಬೀಳದೆ ಅಥವಾ ಸರ್ಕಾರ ಕೊಡಲು ನಿರ್ಣಯ ಕೈಗೊಂಡರೆ ಇಂತಹ ಪದವಿಗಳನ್ನು ನಿರಾಕರಿಸುವುದರಿಂದ, ನಿರಾಕರಿಸುವವರ ಗೌರವ ಉತ್ತುಂಗಕ್ಕೆ ಏರುವುದರಲ್ಲಿ ಯಾವ ಸಂಶಯವೂ ಇಲ್ಲ ಅಂದಿದ್ದಾರೆ.

ಯೋಜನೆಗಳ ಸಮಗ್ರ ಪ್ರಗತಿ ಪರಿಶೀಲನೆ | ನಿಸಾರ್ ಅಹಮದ್ ಅಭಿಮತ

ಶಿಕ್ಷಣ, ಆರೋಗ್ಯದಿಂದ ವಂಚಿತರಾಗದಿರಿ



ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ

ಸರ್ಕಾರದ ವಿವಿಧ ಯೋಜನೆಗಳು ಕೇವಲ ಕಾಗದದಲ್ಲಿ ಮಾತ್ರ ಉಳಿಯದೆ, ನೆಲಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಇದಕ್ಕಾಗಿ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಅರಿತು, ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು. ಅರ್ಹ ಫಲಾನುಭವಿಗಳು ಯಾವುದೇ ಕಾರಣಕ್ಕೂ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಬಾರದು ಎಂದು ಯು. ನಿಸಾರ್ ಅಹಮದ್ ಎಚ್ಚರಿಸಿದರು.

ಗದಗ: ಮಕ್ಕಳ ಶಿಕ್ಷಣದಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗಬಾರದು. ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯದ ಮಕ್ಕಳು ಶಿಕ್ಷಣದಿಂದ ದೂರವಾಗದಂತೆ ಜಾಗೃತಿ ಮೂಡಿಸಬೇಕು ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಹಾಗೂ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಹೊಂದಿರುವ ಯು. ನಿಸಾರ್ ಅಹಮದ್ ಹೇಳಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಬುಧವಾರ ಪ್ರಧಾನ ಮಂತ್ರಿ 15 ಅಂಶಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವಪ್ರಾಥಮಿಕ ಶಿಕ್ಷಣ ಪಡೆದ ಪ್ರತಿಯೊಂದು ಮಗು ಮುಂದಿನ ಹಂತವಾಗಿ ಸರ್ಕಾರಿ ಅಥವಾ ಖಾಸಗಿ ಶಾಲೆಗಳ 1ನೇ ತರಗತಿಗೆ ಸೇರ್ಪಡೆಯಾಗಿರುವುದನ್ನು ಸಂಬಂಧಿತ ಇಲಾಖೆ ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು ಎಂಬುದು ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಇದನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಶಾಲಾಶಿಕ್ಷಣ, ಪೌಷ್ಟಿಕಆಹಾರ, ವಿದ್ಯಾರ್ಥಿವೇತನ,

> ಶಾಲಾ ಕಾಲೇಜು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕರಿಯರ್ ಗೈಡೆನ್ಸ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಅರ್ಹ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ವಿವಿಧ ಇಲಾಖೆಗಳಿಂದ ಇರುವ ಸೌಲಭ್ಯಗಳನ್ನು ವಿಳಂಬವಿಲ್ಲದೇ ದೊರಕಿಸುವಲ್ಲಿ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು.
> ■ ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ

ಆರೋಗ್ಯ ಸೇವೆಗಳು ಸೇರಿದಂತೆ ಸರ್ಕಾರ ನೀಡುವ ಸೌಲಭ್ಯಗಳು ಸಮರ್ಪಕವಾಗಿ ಮಕ್ಕಳಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಪದ್ಮಾವತಿ ಜಿ., ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರುಡಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಅಮಿತ ಬಿದರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಎಸ್. ಎಸ್.ನೀಲಗುಂದ, ಓಎಸ್ ಡಿ ಚೇರಮನ್ ಮುಜಾಬುಲ್ಲಾ ಜಾಫರಿ ಇದ್ದರು.

ಪೊಲೀಸರು ಚುರುಕಾಗಿ ಕಾರ್ಯನಿರ್ವಹಿಸಲಿ

ಜಿಲ್ಲೆಯು ಕೋಮು ಸೌಹಾರ್ದತೆಗೆ ಹೆಸರುವಾಸಿಯಾಗಿದ್ದು, ಎಲ್ಲ ಸಮುದಾಯಗಳು ಪರಸ್ಪರ ಸಹಕಾರದಿಂದ ಬದುಕುತ್ತಿರುವುದು ರಾಜ್ಯಕ್ಕೆ ಮಾದರಿಯಾಗಿದೆ ಎಂದು ಯು. ನಿಸಾರ್ ಅಹಮದ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ತಮ್ಮ ಪೊಲೀಸ್ ವೃತ್ತಿ ಜೀವನದ ಆರಂಭವನ್ನು ಗದಗ ಜಿಲ್ಲೆಯ ನರಗುಂದದಲ್ಲಿ ಮಾಡಿದುದನ್ನು ಸ್ಮರಿಸಿದ ಅವರು, ಪೊಲೀಸ್ ಇಲಾಖೆಯು ಸಮಾಜದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದೆ. ಸಮಾಜದಲ್ಲಿ ಶಾಂತಿ ನೆಲೆಸಲು ಪೊಲೀಸ್ ಇಲಾಖೆ ಇನ್ನಷ್ಟು ಚುರುಕಾಗಿ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

- ಸಮವಸ್ತ್ರ ಮತ್ತು ಶೂ ಮತ್ತು ಸಾಕ್ಸ್ ಯೋಜನೆಯಡಿ 14794 ಫಲಾನುಭವಿಗಳಿಗೆ ಸೌಲಭ್ಯ
- ಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯ ಯೋಜನೆಯಡಿ 19128 ಫಲಾನುಭವಿಗಳಿಗೆ ಸೌಲಭ್ಯ
- ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ 5187 ಲಕ್ಷ ರೂ. ವೆಚ್ಚ
- 798 ಫಲಾನುಭವಿಗಳಿಂದ ಯೋಜನೆಯ ಸೌಲಭ್ಯ
- ಪ್ರಸಕ್ತ ಉದ್ಯೋಗ ಮೇಳದಲ್ಲಿ 8 ಜನ ಅಲ್ಪಸಂಖ್ಯಾತರಿಗೆ ಉದ್ಯೋಗ ಎಂದು ಸಭೆಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ

ಪ್ರಾಣಿಗಳ ದತ್ತು ಪಡೆದ ಜೆಎಸ್ಸೆಸ್



ಧಾರವಾಡ: ಬನಶಂಕರಿ ಕಲಾ-ವಾಣಿಜ್ಯ ಮತ್ತು ಶಾಂತಿಕುಮಾರ ಗುಬ್ಬಿ ವಿಜ್ಞಾನ ಕಾಲೇಜು ಜನತಾ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅವರ 75ನೇ ಜನ್ಮದಿನದ ಅಮೃತ ಮಹೋತ್ಸವದ ಅಂಗವಾಗಿ ಗದಗ ತಾಲೂಕಿನ ಬಿಂಕದಕಟ್ಟಿಯ ಪ್ರಾಣಿ ಸಂಗ್ರಹಾಲಯದ ಮೂರು ವನ್ಯಜೀವಿಗಳನ್ನು ದತ್ತು ತೆಗೆದುಕೊಂಡಿತು.

ಒಂದು ವರ್ಷದ ಅವಧಿಗೆ ಪ್ರಾಣಿ ಸಂಗ್ರಹಾಲಯದ ಉಷ್ಟಪಕ್ಷಿ, ಕೃಷ್ಣಮೃಗ ಮತ್ತು ನಿಲಗಾಯ ಮೂರು ಪ್ರಾಣಿಗಳು ದತ್ತು ಪಡೆದು, ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸಂಗ್ರಹಿಸಿದ ರೂ.55 ಸಾವಿರದ ಚೆಕ್ ಅರಣ್ಯ ಅಧಿಕಾರಿಗೆ ರಾಮಪ್ಪ ಪೂಜಾರ್ ಅವರಿಗೆ ಡಾ.ಅಜಿತ ಪ್ರಸಾದ ಹಸ್ತಾಂತರ ಮಾಡಿದರು.

ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಕಚೇರಿ ಜಂಟಿ ನಿರ್ದೇಶಕ ಪ್ರೊ. ಕರೀಮುನ್ನಿಸಾ ಸೈಯ್ಯದ ಮಾತನಾಡಿ, ವನ್ಯಜೀವಿ ದತ್ತು ತೆಗೆದುಕೊಳ್ಳುವುದು ವನ್ಯಜೀವಿ ರಕ್ಷಣೆ ಮತ್ತು ನಿಸರ್ಗದ ಸುಸ್ಥಿತಿ ನಿರ್ವಹಣೆ ದೇವರಿಗೆ ಸಲ್ಲಿಸುವ ಸೇವೆಗಿಂತ ಮಿಗಿಲು. ಜನತಾ ಶಿಕ್ಷಣ ಸಮಿತಿ ಕಾರ್ಯ ಶ್ಲಾಘಿಸಿದರು.

ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಮಾತನಾಡಿ, ವನ್ಯಜೀವಿ ಸಂರಕ್ಷಣೆ ಹಾಗೂ ದತ್ತು ಸ್ವೀಕಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಇಂದು ಪರಿಸರ ರಕ್ಷಣೆ ಮತ್ತು ಜೀವವೈವಿಧ್ಯತೆ ರಕ್ಷಣೆ ಬಹಳ ಮುಖ್ಯ. ಪ್ರಾಣಿ ಉದ್ಯಾನಗಳ ಕೇವಲ ಮನರಂಜನೆಗೆ ಅಲ್ಲ, ಸಂರಕ್ಷಿಸುವ ಸ್ಥಳಾಗಲಿ ಎಂದರು.

ಪ್ರಾಚಾರ್ಯ ಪ್ರೊ. ವೆಂಕಟೇಶ ಮುತಾಲಿಕ್ ಅಧ್ಯಕ್ಷತೆ ವಹಿಸಿದ್ದರು. ವಾಣಿಶ್ರೀ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ನಿರ್ದೇಶಕ ಡಾ.ಸೂರಜ್ ಜೈನ್, ಪ್ರಾಚಾರ್ಯ ಮಹಾವೀರ ಉಪಾಧ್ಯೆ, ವಿನೋದ ಕುಲಕರ್ಣಿ, ಅವಂತಿಕಾ ರೊಟ್ಟಿ, ಡಾ.ನಳಿನಿ ಕುಲಕರ್ಣಿ, ಡಾ.ರತ್ನಾ ಐರಸಂಗ ಇದ್ದರು.

ರಕ್ತದಾನ ಶ್ರೇಷ್ಠದಾನ: ಜಿಲ್ಲಾಧಿಕಾರಿ

ಗದಗ: ರಕ್ತದಾನವು ಶ್ರೇಷ್ಠದಾನವಾಗಿದ್ದು, ರಕ್ತದಾನ ಮಾಡುವುದರಿಂದ ತುರ್ತು ಸಂದರ್ಭದಲ್ಲಿ, ಅಪಘಾತಗಳು ಸಂಭವಿಸಿದಾಗ, ಶಸ್ತ್ರಚಿಕಿತ್ಸೆ ಸಂದರ್ಭಗಳಲ್ಲಿ ಮತ್ತೊಂದು ಜೀವ ಉಳಿಸಲು ಸಹಾಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಗದಗ-ಬೆಟಗೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಸಹಯೋಗದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಹಾಗೂ ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರ ನಾಯಕ, ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವ ನಿಮಿತ್ತ ಬುಧವಾರ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡಿದರು. ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಎಸ್.ಎನ್.ಬಳ್ಳಾರಿ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಉಪವಿಭಾಗಾಧಿಕಾರಿ ಗಂಗಪ್ಪ ಎಂ., ತಹಶೀಲ್ದಾರ್ ಶ್ರೀನಿವಾಸ ಮೂರ್ತಿ ಕುಲಕರ್ಣಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ.ನಂದಾ ಹಣಬರಟ್ಟಿ, ಡಿಡಿಪಿಐ ಆರ್.ಎಸ್.ಬುರುಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ ಇದ್ದರು.



ಉತ್ತಮ ಆರೋಗ್ಯಕ್ಕೆ ಆಯುರ್ವೇದ ಔಷಧಿ ಸಹಕಾರಿ: ಶಾಸಕ ಪಾಟೀಲ

ನರಗುಂದ: ರಾಜ್ಯದ ಹಾಗೂ ಕ್ಷೇತ್ರದ ಜನತೆ ಆರೋಗ್ಯದಿಂದ ಇರಬೇಕೆಂಬುದು ನನ್ನಾಸೆ. ಹೀಗಾಗಿ ನನ್ನ ಸಹೋದರನ ಹೆಸರಿನಲ್ಲಿ ಆಯುಷ್ಯ ಆಸ್ಪತ್ರೆ ನಿರ್ಮಾಣಕ್ಕೆ ಜಾಗ ಕೊಟ್ಟಿದ್ದೇವೆ. ಕಟ್ಟಡ ಮಾತ್ರ ಸರ್ಕಾರದ್ದಾಗಿದೆ. ಮೂಲಭೂತ ಸೌಲಭ್ಯ ಹಾಗೂ ಔಷಧಿ ಮಳಿಗೆ ನಿರ್ಮಿಸಲು ಹಣಕಾಸಿನ ನೆರವು ಬೇಕಾದರೆ ಅದನ್ನು ನನ್ನ ಕುಟುಂಬವೇ ವೈಯಕ್ತಿಕವಾಗಿ ಭರಿಸಲು ಸಿದ್ಧವಿದೆ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಆಯುಷ್ ಇಲಾಖೆ ಸಹಯೋಗದಲ್ಲಿ 2018-19ನೇ ಸಾಲಿನ ರಾಷ್ಟ್ರೀಯ ಆಯುಷ್ ಅಭಿಯಾನದ ಅಡಿಯಲ್ಲಿ ಶೇಖರಗೌಡ ಚನ್ನಪ್ಪಗೌಡ ಪಾಟೀಲ ಸರ್ಕಾರಿ ಆಯುರ್ವೇದ ಹಾಗೂ ಹೋಮಿಯೋಪತಿ ಆಸ್ಪತ್ರೆಯ ನೂತನ ಕಟ್ಟಡವನ್ನು ಧನ್ವಂತರಿ ಪ್ರಾರ್ಥನೆಯೊಂದಿಗೆ ದೀಪವನ್ನು ಬೆಳಗಿಸಿ ಮಾತನಾಡಿದರು.

ಇಂಗ್ಲಿಷ್ ಔಷಧಿಗಿಂತ ಆಯುರ್ವೇದ ಔಷಧಿ ಆರೋಗ್ಯಕ್ಕೆ ಉತ್ತಮವಾದದ್ದಾಗಿದೆ. ಇಲ್ಲಿ ಪಂಚಕರ್ಮ ಪದ್ಧತಿಯಲ್ಲಿ ಉತ್ತಮ ಚಿಕಿತ್ಸೆ ನೀಡುವಂತಾಗಲಿ. ಪ್ರತಿ ವ್ಯಕ್ತಿ 40ನೇ ವಯಸ್ಸಿನಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಈ ಹಿಂದೆ ಬಿಜೆಪಿ ಸರ್ಕಾರದಲ್ಲಿ 100 ಹಾಸಿಗೆ ಆಸ್ಪತ್ರೆ ನಿರ್ಮಿಸಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಜಿಲ್ಲೆಯಾದ್ಯಂತ ಆಕ್ಸಿಜನ್ ಘಟಕಗಳನ್ನು ನಿರ್ಮಿಸಿದ್ದೇನೆ. ಕೋವಿಡ್ ಸಬ್ ಕಮಿಟಿ ಚೇರಮನ್ ಆಗಿದ್ದ ನಾನು ವ್ಯಾಕ್ಸಿನ್ ಕೊರತೆ ಆಗದಂತೆ ನೋಡಿಕೊಂಡಿದ್ದೇನೆ. ಆಸ್ಪತ್ರೆ ಆವರಣದಲ್ಲಿ ಧನ್ವಂತರಿ ವಿಗ್ರಹ ಹಾಗೂ ಸಂಸ್ಕೃತ ಶ್ಲೋಕಗಳನ್ನು ಅಳವಡಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಸಂತ ಜೋಗಣ್ಣವರ ಮಾತನಾಡಿ, ಜನರ ಆರೋಗ್ಯದ ಬಗ್ಗೆ ಶಾಸಕರು ಹೆಚ್ಚು ಕಾಳಜಿ ವಹಿಸುತ್ತಿರುವುದು ಸಂತಸ ತಂದಿದೆ ಎಂದರು. ಚಂದ್ರಶೇಖರ ದಂಡಿನ ಹಾಗೂ ಎಸ್.ಆರ್. ಪಾಟೀಲ ಮಾತನಾಡಿದರು. ಶಾಸಕ ಸಿ.ಸಿ. ಪಾಟೀಲ ಅವರ ಪತ್ನಿ ಶೋಭಾ, ಪುತ್ರರಾದ ಉಮೇಶಗೌಡ, ಮಹೇಶಗೌಡ, ಸಹೋದರ ಅಣ್ಣಪ್ಪಗೌಡ ಪಾಟೀಲ, ಚಿಕ್ಕಮಠ ಸ್ವಾಮೀಜಿ, ಎನ್.ಕೆ. ಸೋಮಾಪೂರ, ಬಿ.ಕೆ. ಗುಜಮಾಗಡಿ, ವಾಸಣ್ಣ ಜೋಗಣ್ಣವರ, ಎಸ್.ಜಿ. ಮುತ್ತವಾಡ, ಎಸ್.ಆರ್. ಪಾಟೀಲ, ಚಂದ್ರು ದಂಡಿನ, ನಿಂಗಣ್ಣ ಗಾಡಿ, ಮಲ್ಲಪ್ಪ ಮೇಟಿ, ಎ.ವ್ಹಿ. ಗುಡಿಮನಿ, ಬಿ.ಬಿ. ಐನಾಪೂರ, ಯಲ್ಲಪ್ಪ ಚಾಲಿಕಟ್ಟಿ, ಆಯುಷ್ಯ ಇಲಾಖಾಧಿಕಾರಿ ಡಾ.ಅಶೋಕ ಮತ್ತಿಗಟ್ಟಿ, ಪ್ರದೀಪ ಗುಡಿಮನಿ ಇತರರಿದ್ದರು.



ರೈತರಿಗೆ ತುರ್ತು ಪರಿಹಾರ ಘೋಷಿಸಲು ಒತ್ತಾಯ

ಕಲಘಟಗಿ: ಇತ್ತೀಚೆಗೆ ಸಂಭವಿಸಿದ ಭಾರೀ ಪ್ರಮಾಣದ ಆಲಿಕಲ್ಲು ಮಳೆಯಿಂದ ಧಾರವಾಡ ಜಿಲ್ಲೆ ಹಾಗೂ ಕಲಘಟಗಿ ತಾಲೂಕಿನಲ್ಲಿ ಅಪಾರ ಹಾನಿ ಉಂಟಾಗಿದ್ದು, ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಆದ್ದರಿಂದ ಸರ್ಕಾರವು ರೈತರಿಗೆ ತುರ್ತು ಪರಿಹಾರ ಘೋಷಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಘಟಕದಿಂದ ಒತ್ತಾಯಿಸಲಾಯಿತು.

ಈ ಕುರಿತು ಜಿಲ್ಲಾಧ್ಯಕ್ಷ ಮಂಜುನಾಥ ಮಾಳಗಿ ಅವರು ತಹಶೀಲ್ದಾರ್ ಮತ್ತು ಕೃಷಿ ಇಲಾಖೆ ಅಧಿಕಾರಿಗಳಿಗೆ ರಾಜ್ಯ ರೈತ ಸಂಘದಿಂದ ಮನವಿ ನೀಡಿ ಮಾತನಾಡಿ, ಮಳೆಯಿಂದ ವಿದ್ಯುತ್ ಕಂಬಗಳು ಮುರಿದು ಬಿದ್ದು ಹಾಳಾಗಿವೆ. ಸಚಿವ ಸಂತೋಷ್ ಲಾಡ್ ಅವರು ಕೂಡ ಹಾನಿಯಾದ ಪ್ರದೇಶಗಳಿಗೆ ಭೇಟಿ ನೀಡಿದ್ದಾರೆ. ರೈತರು ಬೆಳೆದ ಕಬ್ಬು, ಬಾಳೆ, ಸೋಯಾಬಿನ್, ಗೋವಿನಜೋಳ, ಮಾವು, ಪೇರಲ, ಅಡಿಕೆ ಮರಗಳು ಕೂಡ ಅಪಾರ ಪ್ರಮಾಣದಲ್ಲಿ ಹಾಳಾಗಿವೆ ಎಂದರು.



ಕೆಲವು ಏಜೆಂಟರು ಗ್ರಾಮ ಲೆಕ್ಕಾಧಿಕಾರಿಗಳಿಗೆ ಅರ್ಜಿ ನೀಡಬೇಕೆಂದು ಹೇಳಿ ಏನೂ ಅರಿಯದ ರೈತರ ಹತ್ತಿರ ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ವಿವರ ಪಡೆದು ಗೊಂದಲ ಉಂಟು ಮಾಡುತ್ತಿದ್ದಾರೆ. ಇದರ ಸಲುವಾಗಿ ಸಂಬಂಧಪಟ್ಟ ಇಲಾಖೆಗಳನ್ನು ವಿಚಾರಿಸಿದಾಗ ರೈತರ ಎಫ್.ಐ.ಡಿ. ನಮ್ಮ ಹತ್ತಿರ ಇರುತ್ತದೆ ಯಾವುದೇ ಅರ್ಜಿ ಕೊಡುವ ಅವಶ್ಯಕತೆ ಇಲ್ಲ ಎಂದು ಇಲಾಖೆ ತಿಳಿಸಿದೆ. ಇಂಥ ಏಜೆಂಟರಿಂದ ರೈತರು ಮೋಸ ಹೋಗಬಾರದು ಎಂದಿದ್ದಾರೆ.

ಈ ಸಂದರ್ಭದಲ್ಲಿ ತಾಲೂಕಾಧ್ಯಕ್ಷ ಜ್ಯೋತಿಬಾ ಹುಲಕೊಪ್ಪ, ಆನಂದ್ ಹಾವೇರಿ ಹಾಗೂ ಬಮ್ಮಿಗಟ್ಟಿ, ಬಗಡಗೇರಿ, ಬೇಗೂರು, ದ್ಯಾವನಕೊಂಡ, ಕಲಘಟಗಿ, ಮಡಕಿಹೊನ್ನಳ್ಳಿ, ಹಾರೂಗೇರಿ ರೈತ ಮುಖಂಡರು ಉಪಸ್ಥಿತರಿದ್ದರು.

ದೇವಾಲಯದಲ್ಲಿ ಪ್ರಿ ವೆಡ್ಡಿಂಗ್ ಶೂಟಿಂಗ್ ನಿಷೇಧಿಸಲು ಆಗ್ರಹ

ಲಕ್ಷ್ಮೇಶ್ವರ: ಕರ್ನಾಟಕ ರಾಜ್ಯದ ದೇವಸ್ಥಾನಗಳು ಧಾರ್ಮಿಕ ನಂಬಿಕೆ, ಸಂಸ್ಕೃತಿ ಹಾಗೂ ಆಧ್ಯಾತ್ಮಿಕ ಪರಂಪರೆಯ ಪ್ರತೀಕಗಳಾಗಿವೆ. ಇವು ಭಕ್ತರ ಶ್ರದ್ಧೆಯ ಕೇಂದ್ರಗಳಾಗಿದ್ದು, ಶಾಂತಿ, ಭಕ್ತಿ, ದೈವಿ ಚೈತನ್ಯ ಮತ್ತು ಸಂಪ್ರದಾಯದ ಸಂಕೇತಗಳಾಗಿವೆ. ಇಂತಹ ಪವಿತ್ರ ಧಾರ್ಮಿಕ ಕ್ಷೇತ್ರಗಳಲ್ಲಿ ಪ್ರಿವೆಡ್ಡಿಂಗ್ ಶೂಟಿಂಗ್‌ಗಳನ್ನು ನಿಷೇಧಿಸಿ ಕಾನೂನು ರೂಪಿಸಬೇಕೆಂದು ಕರ್ನಾಟಕ ಮಂದಿರ ಮಹಾಸಂಘದ ಸದಸ್ಯರಾದ ಶಿವಶಂಕರ ಬ್ಯಾಡಗಿ, ಅನಿಲಕುಮಾರ ಮುಳಗುಂದ ಆಗ್ರಹಿಸಿದರು.



ಅವರು ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರ್ ಧನಂಜಯ ಎಂ. ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿ ಮಾತನಾಡಿ, ಇತ್ತೀಚೆಗೆ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಬೆಟ್ಟದ ಭೈರವೇಶ್ವರ ದೇವಸ್ಥಾನದಲ್ಲಿ ಕೆಲವರು ದೇವಸ್ಥಾನದ ಒಳಭಾಗದಲ್ಲಿ ಚಪ್ಪಲಿ ಧರಿಸಿ ಅಸಭ್ಯ ರೀತಿಯಲ್ಲಿ ಪ್ರೀ-ವೆಡ್ಡಿಂಗ್ ಫೋಟೋಶೂಟಿಂಗ್ ನಡೆಸಿದ ಘಟನೆ ವರದಿಯಾಗಿದೆ. ಈ ಕುರಿತು ಆಕ್ಷೇಪ ವ್ಯಕ್ತಪಡಿಸಿದ ಅರ್ಚಕರು ಹಾಗೂ ಸ್ಥಳೀಯ ಭಕ್ತರ ವಿರುದ್ಧ ಅವಾಚ್ಯ ಶಬ್ದ ಬಳಕೆ ಮತ್ತು ಅಸಭ್ಯ ವರ್ತನೆ ನಡೆದಿರುವುದು ಖಂಡನೀಯವಾಗಿದೆ. ಇಂತಹ ಘಟನೆಗಳು ಇತ್ತೀಚಿನ ದಿನಗಳಲ್ಲಿ ರಾಜ್ಯದ ಅನೇಕ ದೇವಸ್ಥಾನಗಳಲ್ಲಿ ನಡೆಯುತ್ತಿರುವುದು ಆತಂಕಕಾರಿ ಸಂಗತಿ. ದೇವಸ್ಥಾನಗಳ ಪ್ರಾಂಗಣದಲ್ಲಿ ಯಾವುದೇ ಅನುಮತಿ ಇಲ್ಲದೆ ಅಶ್ಲೀಲ, ಅಸಭ್ಯ ಅಥವಾ ಸಂಪ್ರದಾಯ ವಿರುದ್ಧ ಉಡುಪುಗಳಲ್ಲಿ ಪ್ರೀ-ವೆಡ್ಡಿಂಗ್ ಶೂಟಿಂಗ್, ರೀಲ್ಸ್ ನಿರ್ಮಾಣ ಮುಂತಾದ ಚಟುವಟಿಕೆಗಳು ಹೆಚ್ಚಾಗುತ್ತಿವೆ. ದೇವಸ್ಥಾನಗಳನ್ನು ವೈಯಕ್ತಿಕ ಪ್ರಚಾರ, ಸಾಮಾಜಿಕ ಜಾಲತಾಣದ ಲೈಕ್ಸ್ ಮತ್ತು ವೀಕ್ಷಣೆಗಳಿಗಾಗಿ ಬಳಸುವುದು ಧಾರ್ಮಿಕ ಸ್ಥಳಗಳ ಗೌರವಕ್ಕೆ ಧಕ್ಕೆ ತರುವುದಲ್ಲದೆ, ಅವುಗಳ ವ್ಯಾಪಾರೀಕರಣಕ್ಕೂ ಕಾರಣವಾಗುತ್ತಿದೆ. ಅದಲ್ಲದೇ ಭಕ್ತಾದಿಗಳ ಧಾರ್ಮಿಕ ಭಾವನೆಗೆ ನೋವುಂಟು ಮಾಡಲಾಗುತ್ತಿದೆ ಎಂದರು.

ಮಂಜುನಾಥ ಸುಣ್ಣದಮನಿ, ಕಾವೇರಿ ಲಮಾಣಿ, ಪವಿತ್ರಾ ಲಮಾಣಿ, ಶಿವಪ್ಪ ಮಂಟೂರ, ಮಂಜುನಾಥ ಹರಿಜನ, ಗಂಗಾಧರ ಗೋಡಿ, ಎಲ್. ಎಫ್. ಗೋಣೆಪ್ಪನವರ, ಶೋಭಾ ಇಟಗಿ ಸೇರಿದಂತೆ ಇತರರಿದ್ದರು.

ವಿಶ್ವಶಾಂತಿಗಾಗಿ ಎರೆಶಿಗಮ್ಮನ ಸನ್ನಿಧಿಯಲ್ಲಿ ಸವಡಿ ಭಕ್ತರಿಂದ ಹೋಮ

ರೋಣ: ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ನಿಲ್ಲಬೇಕು. ವಿಶ್ವ ನೆಮ್ಮದಿಯಿಂದ ಬಾಳಬೇಕು ಎಂಬ ಮಹತ್ವದ ಉದ್ದೇಶವನ್ನು ಇಟ್ಟುಕೊಂಡು ಸವಡಿ ಗ್ರಾಮದ ಎರೆಶಿಗಮ್ಮ ದೇವಿಯ ಸನ್ನಿಧಿಯಲ್ಲಿ ಹೋಮ ಹವನ ಸೇರಿದಂತೆ ಭಕ್ತರು ವಿಶೇಷ ಪೂಜೆಯನ್ನು ಸಲ್ಲಿಸಿದರು.

ಗ್ರಾಮದ ಸಾವಿರಾರು ಭಕ್ತರು ಕೂಡಿಕೊಂಡು ದೇವಸ್ಥಾನದಲ್ಲಿ ಅನೇಕ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಸಕಲ ಜೀವ ರಾಶಿಗಳಿಗೆ ಒಳಿತನ್ನು ಮಾಡುವಂತೆ ಬೇಡಿಕೊಂಡಿದ್ದಾರೆ. ಇನ್ನು ಹೋಮ ಹವನದ ಧಾರ್ಮಿಕ ಕಾರ್ಯಗಳು ಶಾಸಕ ಜಿ.ಎಸ್.ಪಾಟೀಲ ಕುಟುಂಬಸ್ಥರ ನೇತೃತ್ವದಲ್ಲಿ ನಡೆಯಿತು. ಧಾರ್ಮಿಕ ಪದ್ಧತಿಯಂತೆ ಕೆರೆ ಸ್ತಂಭ ಕಾರ್ಯ ಕೂಡ ನಡೆಯಿತು. ಎರೆಶಿಗಮ್ಮ ಸನ್ನಿಧಿಯಲ್ಲಿ ನವಗ್ರಹಗಳನ್ನು ಪ್ರತಿಷ್ಠಾಪಿಸಿ ಮೂಲಕ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ಸಿಗಲಿ ಎಂದು ಅಭಿಮಾನಿಗಳು ಹಾಗೂ ಕಾರ್ಯಕರ್ತರು ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.



ಶಾಸಕ ಜಿ.ಎಸ್.ಪಾಟೀಲ ಮಾತನಾಡಿ, ಮನುಷ್ಯ ಸಕಲಜೀವರಾಶಿಗಳಿಗೆ ಒಳಿತನ್ನು ಬಯಸಬೇಕು. ಅಂದಾಗ ಮಾತ್ರ ನಮ್ಮ ಪ್ರಾರ್ಥನೆಗಳು ದೇವರಿಗೆ ಮುಟ್ಟುತ್ತವೆ. ಇಂದು ನಡೆಯುತ್ತಿರುವ ಧಾರ್ಮಿಕ ಕಾರ್ಯ ವಿಶ್ವವನ್ನು ಒಳಗೊಂಡಿದೆ ಎಂದರು. ಸಮಾಜಕ್ಕೆ ಮಾರಕವಾಗುವ ಯಾವುದೇ ಚಟುವಟಿಕೆಗಳು ನಡೆದರೂ ಅವುಗಳಿಂದ ದೇಶವಾಗಲಿ, ವಿಶ್ವವಾಗಲಿ ಅಥವಾ ನಾಡಾಗಲಿ ಸುಭಿಕ್ಷೆಯಿಂದಿರಲು ಸಾಧ್ಯವಿಲ್ಲ, ದೇಶ,ನಾಡು ಸುರಕ್ಷತೆಯಿಂದರಲು ಮಾನವ ಕುಲ ಒಳಿತನ್ನು ಮಾಡುವ ಕಾರ್ಯಗಳಿಗೆ ಹೆಚ್ಚಿನ ಮಹತ್ವವನ್ನು ನಿಡಬೇಕು. ಮುಖ್ಯವಾಗಿ ದೇವರಲ್ಲಿ ನಂಬಿಕೆ ಹೊಂದಬೇಕು. ಆ ಂದಾಗ ಮಾತ್ರ ಧಾರ್ಮಿಕ ಪದ್ಧತಿಗಳಿಗೆ ನಿಜವಾದ ಅರ್ಥ ಸಿಗುತ್ತದೆ. ಇಂದಿನ ಯುವಕರು ಸಹ ಕೆಟ್ಟ ಹವ್ಯಾಸಗಳಿಂದ ದೂರವಿದ್ದು ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು ಎಂದರು.

ಕೆಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಐ.ಎಸ್.ಪಾಟೀಲ, ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ, ಅನ್ನಪೂರ್ಣದೇವಿ ಪಾಟೀಲ, ಶಶಿಕಲಾ ಪಾಟೀಲ, ಅಕ್ಷಯ ಪಾಟೀಲ, ವೀರಣ್ಣ ಶೆಟ್ಟರ, ಶರಣಗೌಡ ಪಾಟೀಲ, ಮಂಜುಳಾ ಹುಲ್ಲಣ್ಣವರ, ಅಪ್ಪು ಗಿರಡ್ಡಿ, ಪರಶುರಾಮ ಅಳಗವಾಡಿ, ಯಚ್ಚರಗೌಡ ಗೋವಿಂದಗೌಡ್ರ, ಅಭಿಷೇಕ ನವಲಗುಂದ, ಬಸವರಾಜ ತಳವಾರ ಸೇರಿದಂತೆ ಅನೇಕ ಮುಖಂಡರುಗಳು ಧಾರ್ಮಿಕ ಕಾರ್ಯದಲ್ಲಿ ಉಪಸ್ಥಿತರಿದ್ದರು.

> ಮಧ್ಯ ಪ್ರಾಚ್ಯ ದೇಶಗಳು ಯುದ್ಧದ ಭೀತಿ ಎದುರಿಸುತ್ತಿವೆ. ಇದರಿಂದ ಸಂಕಷ್ಟದ ಸ್ಥಿತಿಯಲ್ಲಿ ನಾವಿದ್ದು, ಇವುಗಳೆಲ್ಲ ದೂರವಾಗಿ ವಿಶ್ವ ಶಾಂತಿ ಮತ್ತು ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಬೇಕು ಎಂಬ ಮಹತ್ತರ ಉದ್ದೇಶದಿಂದ ಎರೆಶಿಗಮ್ಮ ದೇವಿಯ ಸನ್ನಿಧಿಯಲ್ಲಿ ವಿಶೇಶ ಪೂಜಾ ಕಾರ್ಯವನ್ನು ನಡೆಸಿದ್ದು, ದೇವಿಯ ಶಕ್ತಿಯಿಂದ ಎಲ್ಲರಿಗೂ ಒಳ್ಳೆಯದಾಗಲಿದೆ.
> ■ ಜಿ.ಎಸ್.ಪಾಟೀಲ, ಶಾಸಕ

ಗ್ರಾಮಗಳಲ್ಲಿ ನೀರಿನ ಸಮಸ್ಯೆ ತಡೆಯಲು ತುರ್ತು ಕ್ರಮಕ್ಕೆ ಸೂಚನೆ

ಗದಗ: ಬೇಸಿಗೆ ತೀವ್ರತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈಗಿನಿಂದಲೇ ಪೂರ್ವ ಸಿದ್ಧತೆ ಕೈಗೊಳ್ಳುವುದು ಅತ್ಯಂತ ಅಗತ್ಯ. ಜನರಿಗೆ ಕುಡಿಯುವ ನೀರಿನ ತೊಂದರೆ ಎದುರಾಗುವ ಪರಿಸ್ಥಿತಿ ಬರಬಾರದು ಎಂದು ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ ಹೇಳಿದರು.

ರೋಣ ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಬುಧವಾರ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಬೇಸಿಗೆ ಹಂಗಾಮಿನ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪ್ರಮುಖ ಚರ್ಚೆಯ ವಿಷಯವಾಗಿ ಹೊರಹೊಮ್ಮಿತು. ರೋಣ ಹಾಗೂ ಗಜೇಂದ್ರಗಡ ತಾಲೂಕಗಳ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ನೀರಿನ ಕೊರತೆಯನ್ನು ಗಂಭೀರವಾಗಿ ಪರಿಗಣಿಸಿ, ಯಾವುದೇ ಗ್ರಾಮದಲ್ಲಿಯೂ ಕುಡಿಯುವ ನೀರಿನ ಅಭಾವ ಉಂಟಾಗದಂತೆ ತಕ್ಷಣ ಮತ್ತು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. ಹಾಳಾಗಿರುವ ಬೋರ್‌ವೆಲ್‌ಗಳನ್ನು ತ್ವರಿತವಾಗಿ ದುರಸ್ತಿ ಮಾಡುವುದು, ಅಗತ್ಯವಿರುವ ಕಡೆಗಳಲ್ಲಿ ಹೊಸ ಬೋರ್‌ವೆಲ್‌ಗಳ ತೋಡಿಕೆ, ಕುಡಿಯುವ ನೀರಿನ ಟ್ಯಾಂಕರ್‌ಗಳನ್ನು ಸಿದ್ಧವಾಗಿಡುವುದು ಹಾಗೂ ನೀರಿನ ಸಂಗ್ರಹಣೆ ಮತ್ತು ವಿತರಣೆ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಿ. ಗ್ರಾಮ ಪಂಚಾಯತ್ ಮಟ್ಟದಲ್ಲಿ ನೀರಿನ ಮೂಲಗಳ ಸಮಗ್ರ ಪರಿಶೀಲನೆ ನಡೆಸಿ, ನೀರಿನ ಮಟ್ಟ ಕುಸಿಯುತ್ತಿರುವ ಪ್ರದೇಶಗಳನ್ನು ಗುರುತಿಸಿ ಮುಂಚಿತ ಕ್ರಮ ಕೈಗೊಳ್ಳಬೇಕು. ನೀರಿನ ಸರಬರಾಜಿನಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂಬ ಎಚ್ಚರಿಕೆಯನ್ನೂ ನೀಡಲಾಯಿತು.



ಸುಸ್ಥಿರ ಅಭಿವೃದ್ಧಿ ಗುರಿ

ಮಾನವ ಅಭಿವೃದ್ಧಿ ಸೂಚ್ಯಂಕಗಳ ಆಧಾರದ ಮೇಲೆ ತಾಲೂಕಿನ ಅಭಿವೃದ್ಧಿ ಮಟ್ಟವನ್ನು ಸಮಗ್ರವಾಗಿ ಅಳೆಯುವ ಜೊತೆಗೆ 2031ರ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಅಗತ್ಯವಾದ ಕ್ರಮಗಳ ಕುರಿತು ಸಭೆಯಲ್ಲಿ ಸಲಹೆ ಸೂಚನೆಗಳನ್ನು ನೀಡಲಾಯಿತು. ಸಭೆ ಅಂತ್ಯದಲ್ಲಿ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ನಿಖರ ಹಾಗೂ ಸಂಪೂರ್ಣ ದತ್ತಾಂಶ ಒದಗಿಸಲು ಸೂಚನೆ ನೀಡಲಾಯಿತು.

ತ್ವರಿತ ಪೂರ್ಣಗೊಳಿಸಿ

ಲೈಬ್ರರಿ ಸೆಸ್‌ನ್ನು ಜಿಲ್ಲಾ ಪಂಚಾಯತ್ ಖಾತೆಗೆ ಸರಿಯಾಗಿ ಜಮಾ ಮಾಡುವಂತೆ ಸೂಚನೆ ನೀಡಲಾಗಿದ್ದು, ಶೇ.25 ಪ.ಜಾ/ಪ.ಪಂ ಸಮುದಾಯದವರಿಗೆ ಮೀಸಲಾದ ಅನುದಾನದ ಸಮರ್ಪಕ ಬಳಕೆ ಬಗ್ಗೆ ವಿಶೇಷ ಗಮನ ಹರಿಸಲು ತಿಳಿಸಲಾಯಿತು. ಪಂಚತಂತ್ರ 2.0 ಯೋಜನೆಯ ವಾರ್ಷಿಕ ಮುಕ್ತಾಯದ ಹಿನ್ನೆಲೆಯಲ್ಲಿ ಪ್ರಗತಿ ವರದಿ ಪರಿಶೀಲಿಸಿ, ಬಾಕಿ ಉಳಿದ ಕೆಲಸ ತ್ವರಿತ ಪೂರ್ಣಗೊಳಿಸಲು ಸೂಚಿಸಲಾಯಿತು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಚೇರಿ, ಹುಬ್ಬಳ್ಳಿ.

ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು: 15 :2026-27 ದಿನಾಂಕ: 08-04-2026.

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ರ ಪ್ರಕಾರ ಇಡಿಗಂಟು (Lumpsum) ಟೆಂಡರ್ ದ್ವಿ-ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕೆಲಸಕ್ಕಾಗಿ ಅರ್ಹ ಕನ್ಸಲ್ಟಂಟ್ (Third party Consultant) ರವರ ನೇಮಕಕ್ಕಾಗಿ ದಿನಾಂಕ : **08.04.2026**ರಂದು ಟೆಂಡರ್ ಬಿಡುಗಡೆಯಾಗಿರುವಂತೆ, ನೊಂದಾಯಿತ ಅರ್ಹ ಕನ್ಸಲ್ಟಂಟ್ಸ್ ಟೆಂಡರ್‌ನ ವಿವರಗಳಿಗಾಗಿ ವೆಬ್‌ಸೈಟ್‌ಗೆ **(https://kppp.karnataka.gov.in)** ಲಾಗಿನ್ ಆಗಿ ಟೆಂಡರ್‌ನ್ನು ಅರ್ಹ ದಸ್ತಾವೇಜ್‌ನೊಂದಿಗೆ ನಿಗದಿತ ದಿನಾಂಕ ಮತ್ತು ವೇಳೆಯಲ್ಲಿ ಅಪ್-ಲೋಡ್ ಮಾಡಬೇಕಾಗಿರುತ್ತದೆ

ಟೆಂಡರ್ ಇಂಡೆಂಟ್ ಸಂಖ್ಯೆ	ಕೆಲಸದ ಹೆಸರು	ಇ.ಎಂ.ಡಿ ಮೊತ್ತ ರೂಗಳಲ್ಲಿ	ಕಾಲಮಿತಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ
NWKRTC/2025-26/SE2617	Third party inspection services for the work of Improvement works to Depot at Dharwad	33,885/-	09 Months or till the completion of project.	23-04-2026 & 16.00hr
NWKRTC/2025-26/SE2245	Providing Third Party Inspection Services for the Work Of Construction of Assistant Regional Traffic office building at Honnavar.	21,045/-	09 Months or till the completion of project.	23-04-2026 & 16.00hr
NWKRTC/2025-26/SE2246	Third Party Inspection for the work of Construction of Automated Driving test track in Existing RTO Premises at Honnavar	24,636/-	09 Months or till the completion of project.	23-04-2026 & 16.00hr

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. **0836-2332383** ಗೆ ಸಂಪರ್ಕಿಸಬಹುದಾಗಿದೆ ಹಾಗೂ ಸಹಾಯವಾಣಿ **(help desk) : -+91-8046010000, +91-8068948777** ಸಂಪರ್ಕಿಸಬಹುದಾಗಿದೆ. ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/
ಕಾರ್ಯನಿರ್ವಾಹಕ ಅಭಿಯಂತರರು
ವಾ.ಕ.ರ.ಸಾ. ಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ.

ವಾ.ಸಾ.ಇ./ಧಾರವಾಡ/38/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಬಿ-1/2026-27/01 ದಿ: 07.04.2026

ಟೆಂಡರ್ ಪ್ರಕಟಣೆ-01/2026-27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ **2000** ಹಾಗೂ **Standard Tender Document** ನ **K.W-1** ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) 2025-26ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಅನುದಾನದಡಿ ಹೊನ್ನಾವರ ತಾ: ಕೆಳಗಿನೂರು ಗ್ರಾಮ ಪಂಚಾಯತದ ಮುಗಳಿ ದೇವಸ್ಥಾನ ಹತ್ತಿರದಿಂದ ಕೇರಿಗೆ ಹೋಗುವ ರಸ್ತೆ ಕಾಂಕ್ರೀಟೀಕರಣ. RDPR/2025-26/RD/WORK_INDENT24958/CALL-2, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(2) 2024-25 ನೇ ಸಾಲಿನ ಐ.ಸಿ.ಡಿ.ಎಸ್ ಹಾಗೂ ನರೇಗಾ ಅನುದಾನದ ಕ್ರಿಯಾ ಯೋಜನೆಯಡಿ ಭಟ್ಕಳ ತಾಲೂಕಿನ ಬೇಂಗ್ರೆ ಗ್ರಾಪಂ ಕೋಗ್ತಿ ಅಂಗನವಾಡಿ ಕಟ್ಟಡ ನಿರ್ಮಾಣ. RDPR/2025-26/BD/WORK_INDENT24592/Call-3, ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(3) --ಸದರ-- ಭಟ್ಕಳ ತಾಲೂಕಿನ ಶಿರಾಲಿ ಗ್ರಾಪಂ ನೀರಕಂಠ-2 ಅಂಗನವಾಡಿ ಕಟ್ಟಡ ನಿರ್ಮಾಣ. RDPR/2025-26/BD/WORK_INDENT24586/Call-3, ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (4) 2025-26ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಅನುದಾನದಡಿ ಹೊನ್ನಾವರ ತಾಲೂಕಿನ ಇಡಗುಂಜಿ ಗ್ರಾಮ ಪಂಚಾಯತದ ಮಾಳಕೋಡ ದೊಡ್ಡಶಾಲೆ ಕೇರಿಯಿಂದ ಆಚಾರಿ ಕೇರಿಗೆ ಹೋಗುವ ರಸ್ತೆ ಕಾಂಕ್ರೀಟೀಕರಣ. RDPR/2025-26/RD/WORK_INDENT25022/CALL-2, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು Technical Bid ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 21.04.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 22.04.2026 ಮದ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/30/26-27 dt. 08.04.2026

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2026-27/162 ದಿನಾಂಕ : 08.04.2026

-:ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1,2,3&4 ರಲ್ಲಿ ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ,4059 ಎಸ್.ಸಿ.ಪಿ-ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ, 5054 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವಚ್ಚ, 4059 ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ,4059 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಗಿರಿಜನ ಉಪಯೋಜನೆ,3054 ರಾಜ್ಯ ಹೆದ್ದಾರಿ ನಿರ್ವಹಣೆ, 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ 3054 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, 2059 ವಿವಿದ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ, 5054-ರಾಜ್ಯ ಹೆದ್ದಾರಿ ಸುಧಾರಣೆ, ಅಡಿಯಲ್ಲಿ ಸೇರಿ ಒಟ್ಟು 25 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 16.05 ಲಕ್ಷಗಳು ಹಾಗೂ ರೂ.472.00 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 20,100/- ಹಾಗೂ ರೂ.7,08,100/- ಇರುತ್ತದೆ. ಭಾಗ-1: ಟೆಂಡರ ಸ್ವೀಕರಿಸುವ ದಿನಾಂಕ 17.04.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 18.04.2026 ರ ಸಂಜೆ 4.45 ಘಂಟೆ ನಂತರ ಭಾಗ-2: ಟೆಂಡರ ಸ್ವೀಕರಿಸುವ ದಿನಾಂಕ 27.04.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 28.04.2026 ರ ಸಂಜೆ 4.45 ಘಂಟೆ ನಂತರ, ಭಾಗ-3: ಟೆಂಡರ ಸ್ವೀಕರಿಸುವ ದಿನಾಂಕ 30.04.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 02.05.2026 ರ ಸಂಜೆ 4.45 ಘಂಟೆ ನಂತರ, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 08.04.2026 ರ ನಂತರ ಪಡೆಯಬಹುದು.

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.

DIPR/BGM/RO-NO-61/KSMCA/2026-27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/910/877 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಕಹಾಮ/ಖರೀದಿ/ಟೆಂಡರ್-903/2026-27 ದಿನಾಂಕ: 08.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಹಾಮದ ನಂದಿನಿ ಹಾಲು ಉತ್ಪನ್ನ ಘಟಕ ಬೆಂಗಳೂರು ಘಟಕದ ಉಪಯೋಗಕ್ಕೆ ಅಗತ್ಯವಿರುವ ಪ್ಯಾಕಿಂಗ್ ಸಾಮಗ್ರಿಗಳನ್ನು ಖರೀದಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Tender Nos	Particulars	Approx. Qty. & EMD Details
01	KMF/PUR/Tender-903/2026-27 (KMF/2025-26/IND2141)	Supply of Packing Materials to Nandini Milk Products Plant, Bangalore for a Period of Three Months	Please refer the tender document

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ **17.04.2026** ರಂದು **05.00** ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ, ಪರಿಮಾಣ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

CHANGE OF NAME

I, **AKSHATA NETALKAR** (Old Name) Resident of #1796 B-2 Tara Building, Narayan Shet Road Sonarwada Baad, Karwar, Uttara Kannada, Karnataka, Pin Code: 581301, have changed my name as **AKSHATA ANANDU NETALKAR** (New Name) henceforth I will be called and recognized by new name for all future purposes, dated: 08/04/2026.

CHANGE OF NAME

I, **AKTAR BANU SATTARKHAN KITTUR** (Old Name) Resident of Gulaganjikoppa Janata Colony 2nd Cross Dharwad Pin - 580001, have changed my name as **AKTAR BANU MULAGUND** (New Name) henceforth I will be called and recognized by new name for all future purposes, dated: 08/04/2026.

CHANGE OF NAME

I, **HUMAKAUSAR** (Old Name) Resident of #138 First Floor, JP Nagar 3rd Main Road 2nd Cross, JP Nagar Park, Hubli Udyamnagar, Dharwad, State: Karnataka, Pin Code: 580030, have changed my name as **HUMAKOUSAR SANGRESKOP** (New Name) henceforth I will be called and recognized by new name for all future purposes, dated: 08/04/2026.

CHANGE OF NAME

I, **MUSHAFEEQ BANU MAHABOOB BADSHA KAZI (Old Name),** have changed my name as **MUSHAFEEQ BANU MAHABOOB BADASHA KAZI (New Name),** because letter `A' is missing in the previous name **BADSHA.** R/o. Dasar Oni, Kaji Chal, Gadag-582101. Tq: Dist: Gadag, State: Karnataka. Submitted an affidavit dtd: 08.04.2026 through M.M. Hiremath, Notary, Gadag.

CHANGE OF NAME

I, **KHASIM ALI DADAPEER BYADAGI** (Old Name) Resident of Near Masooti Mudur, Tq: Hangal, Dist: Haveri - 581104, have changed my name as **KHASIMALI BYADGI** (New Name) henceforth I will be called and recognized by new name for all future purposes, dated: 08/04/2026.

CHANGE OF NAME

I, **PRIYANKA ASHOK PATIL** (Old Name) Resident of 17, Mahableshwar Nagar, Nipani - 591237, have changed my name as **PRIYANKA ASHISH PATIL** (New Name) henceforth I will be called and recognized by new name for all future purposes, dated: 08/04/2026.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಶ್ರೀ ಕ್ಷೇತ್ರ ಹುಲಿಗಿ, ತಾ:ಜಿ:ಕೊಪ್ಪಳ
email. eosrihuligemmadevi@gmail.com mob.9483391000, 9483761000

ಸಂಖ್ಯೆ:ಹುದೇಕ್ಷೇಅಪ್ರಾ/ಸಿಆರ್/28/2026-2027 ದಿನಾಂಕ:07/04/2026.

ದರಪಟ್ಟಿ ಪ್ರಕಟಣೆ

ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕಿನ, ಹುಲಿಗಿಯ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ 2026ನೇ ಸಾಲಿನ ಜಾತ್ರಾ ಮಹೋತ್ಸವವು **ದಿನಾಂಕ : 10/05/2026**ರಂದು ಪ್ರಾರಂಭಗೊಂಡು **ದಿನಾಂಕ : 14/05/2026**ರಂದು ಮುಕ್ತಾಯಗೊಳ್ಳಲಿದೆ. ಸದರಿ ಜಾತ್ರಾ ಮಹೋತ್ಸವದ ಪ್ರಯುಕ್ತ **ದಿನಾಂಕ : 08/05/2026 ರಿಂದ ದಿನಾಂಕ : 14/05/2026**ರವರೆಗೆ ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳಿಗೆ ನೆರಳಿಗಾಗಿ ಬಿದಿರಿನ ತಟ್ಟೆಯಿಂದ ಪೆಂಡಾಲ್, ಚೆಕ್ ಪೋಸ್ಟ್, ನೀರಿನ ಅರವಟಿಗೆ, ಟವರ್‌ಗಳು ಮತ್ತು ಸ್ಟಾಲ್‌ಗಳನ್ನು ಹಾಕಬೇಕಾಗಿದ್ದು, ಒಟ್ಟಾರೆ ತಗಲುವ ಗುತ್ತಿಗೆ ದರವನ್ನು ದರಪಟ್ಟಿಯ ಮೂಲಕ ಸಲ್ಲಿಸಲು ಆಸಕ್ತಿಯುಳ್ಳವರು ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಕಾರ್ಯದರ್ಶಿಗಳು, ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಶ್ರೀ ಕ್ಷೇತ್ರ ಹುಲಿಗಿ, ತಾ:ಜಿ: ಕೊಪ್ಪಳ, ಈ ವಿಳಾಸಕ್ಕೆ **ದಿನಾಂಕ : 22/04/2026 ರಂದು ಬುಧವಾರ ಮಧ್ಯಾಹ್ನ 4.00 ಗಂಟೆಯ** ಒಳಗಾಗಿ ಕಳುಹಿಸಲು ಅಥವಾ ಖುದ್ದಾಗಿ ಸಲ್ಲಿಸಲು ಈ ಮೂಲಕ ಪ್ರಕಟಣೆಯನ್ನು ಹೊರಡಿಸಿದೆ. ಆಸಕ್ತಿಯುಳ್ಳವರು ಸಮಯಕ್ಕೆ ಸರಿಯಾಗಿ ದೇವಸ್ಥಾನದ ಕಾರ್ಯದರ್ಶಿಗಳ ಕಚೇರಿಯಲ್ಲಿ ಹಾಜರಿದ್ದು, ಟೆಂಡರಿನಲ್ಲಿ ಭಾಗವಹಿಸಲು ಕೋರಿದೆ. ದರಪಟ್ಟಿಗಳನ್ನು ಬಹಿರಂಗವಾಗಿ ಸಾರ್ವಜನಿಕರ ಸಮ್ಮುಖದಲ್ಲಿ 4.30 ಗಂಟೆಗೆ ತೆರೆಯಲಾಗುವುದು.

ಸಹಿ/-ಎಂ.ಹೆಚ್. ಪ್ರಕಾಶರಾವ್,
ಕಾರ್ಯದರ್ಶಿಗಳು,
ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಶ್ರೀ ಕ್ಷೇತ್ರ ಹುಲಿಗಿ, ತಾ:ಜಿ:ಕೊಪ್ಪಳ.

ವಾ.ಸಾ.ಸಂ.ಇ/ಕೊಪ್ಪಳ/13/
ದೇಶಪಾಂಡೆಪಬ್ಲಿಸಿಟಿ/2026-27

ಪುರಸಭೆ ಕಾರ್ಯಾಲಯ, ನವಲಗುಂದ-582208
ಜಿಲ್ಲೆ : ಧಾರವಾಡ, ರಾಜ್ಯ : ಕರ್ನಾಟಕ
Phone : 08380-229247,
Website: www.navalgundtown.mrc.gov.in
email ID: ka.navalagund.tmc@gmail.com

ಕ್ರ.ಸಂ:ಪುಸನ/ಅಭಿವೃದ್ಧಿ/ಟೆಂಡರ್/ವಹಿ/2026-27 ದಿನಾಂಕ: 08-04-2026

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ)

ನವಲಗುಂದ ಪುರಸಭೆಯಿಂದ ಕೇಂದ್ರ ಪುರಸ್ಕೃತ ಅಮೃತ 2.0 ಅನುದಾನದಲ್ಲಿ ರೂ. **269.00** ಲಕ್ಷಗಳ ಇಂಡೆಂಟ ನಂ 1) DMA/2026-27/OW/WORK_INDENT56996 (ಇತರೆ), ನೇದ್ದರ ಕಾಮಗಾರಿಯನ್ನು ಅನುಷ್ಠಾನ ಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999-2000 ಪ್ರಕಾರ ಆಕ್ಟ 2000ರ ನಿಯಮದಂತೆ ಸ್ಟಾಂಡರ್ಡ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **07-05-2026** ರಂದು ನಿಗದಿಪಡಿಸಿ ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಮುಖಾಂತರ ದ್ವಿ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಟೆಂಡರನಲ್ಲಿ ಭಾಗವಹಿಸಲು ಇಚ್ಛಿಸುವ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

ಸೂಚನೆ : ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ಸಹಿ/- (ಎಸ್.ಪಿ. ಪೂಜಾರ)
ಮುಖ್ಯಾಧಿಕಾರಿ, ಪುರಸಭೆ, ನವಲಗುಂದ

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/34/2026-27

PUBLIC NOTICE

Be it known to the public at large that my clients are intending to purchase **Residential open plot bearing CTS No.6316, corresponding E- Aasthi PID No.2-4-589-63 16, admeasuring 1022.55 Sq. Mtrs (As per E-Aasthi 32.16 Mtrs X 29.875 Mtrs = 960.96 Sq.Mtrs), comprised in R.S.No.731/ 1, situated at Rani Channanma Nagar, C-Scheme Angol Extension, Belagavi** from its owners Smt. Sharada @ Sharadabai W/o Chandrakant Vernekar, Shri. Pramod S/o. Chandrakant Vernekar and shri. Mukesh S/o. Chandrakant Vernekar. The said property is bounded as under: To the East By : R.S.No732, To the West By : Plot No.1/A in same R.S.Number, CTS NO 6315, To the North By : Service Road, To the South By : 30 Fts Road, The above said owner's stats that, they are the absolute owners of the property and same is free from encumbrance and they have got clear marketable title and is in actual possesion and wahiwat of the above said property. If anybody has any objection, right, title or interest or any claim over the said property, of whatsoever nature may put forth along with documentary proof to the below mentioned address along with original documents within 15 days of this notice. Thereafter no such objections or claims etc will be entertained.

Advocate :
[GAURAV D. PATIL]
#64, 'Shanta Nivas', Sambaji Road,
Near 3rd Railway gate,
Hindu Nagar, Tilakwadi,
BELAGAVI - 590006
Mob. No 9206627777

Belagavi,
Date 08.04.2026

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22112809

ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/2026-27/47 ದಿನಾಂಕ: 08.04.2026

ಗಂಗಾವತಿ ಕ್ರಿಮಿ.577/2026

ಅರ್ಜಿದಾರರು:ಶಿವಶಂಕರೇಶ ತಂದೆ ಇಂದ್ರಪ್ಪ ನಾಯಕ್ ವ: 42 ವರ್ಷ, ಉದ್ಯೋಗ: ಒಕ್ಕಲುತನ
ತಾ: ಗಂಗಾವತಿ, : ಕೊಪ್ಪಳ & ಇತರರು.

ವಿರುದ್ಧ:

ಎದುರುದಾರರು: ಮಾನ್ಯ ಪೌರಾಯುಕ್ತರು. ನಗರಸಭೆ ಕಾರ್ಯಾಲಯ, ಗಂಗಾವತಿ

ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1969 ಅಧಿನಿಯಮ ಕಲಂ 13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ.1 ರವರ ತಂದೆ, ಅರ್ಜಿದಾರ ನಂ.02 ರವರ ಮಾವ, ಅರ್ಜಿದಾರ ನಂ.3 ರಿಂದ 5 ರವರ ಅಜ್ಜನಾದ ದಿ॥ಲಚಮಪ್ಪ ತಂದೆ ದ್ಯಾವಣ್ಣ ಇವರು ದಿನಾಂಕ: 15-09-1995 ರಂದು ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಗಂಗಾವತಿ ಗ್ರಾಮದ ವಾರ್ಡ ನಂ.31, ವಿರುಪಾಪೂರದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ: 30-04-2026 ಬೆಳಿಗ್ಗೆ 8:00 ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲ. ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷೀಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 02-04/-2026 ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.

ಸ್ಥಳ: ಗಂಗಾವತಿ
ದಿ: 02-04-2026

ನ್ಯಾಯಾಲಯದ ಆದೇಶ ಅನುಸಾರ
ಪ್ರಧಾನ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ
ಮುಖಾಂತರ ಪ್ರಕಾಶಗೌಡ ವಕೀಲರು
ಅರ್ಜಿದಾರರ ಪರ ವಕೀಲರು

ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿ: 555/2026

ಅರ್ಜಿದಾರರು: ಈರಪ್ಪ ಬಸಪ್ಪ ಹಡಪದ ತಂದೆ ಆ: ಸಣ್ಣ ಈರಪ್ಪ ಬಸಪ್ಪ ಹಡಪದ ವ: 70 ವರ್ಷ, ಉದ್ಯೋಗ: ವ್ಯವಸಾಯ, ಸಾ: ಕನ್ನೇರಮಡು, ತಾ: ಕನಕಗಿರಿ, ಜಿ: ಕೊಪ್ಪಳ,

ವಿರುದ್ಧ

ಎದುರುದಾರರು: ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೋಂದಣಿ ಇಲಾಖೆ ತಹಶೀಲ್ದಾರರ ಕಾರ್ಯಾಲಯ ಕನಕಗಿರಿ ಜಿ: ಕೊಪ್ಪಳ

ಸಂಬಂಧಪಟ್ಟವರು :

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ ಕಲಂ 13(3) ನಿಯಮ 9(3) ರ ಅಡಿಯಲ್ಲಿ ಅರ್ಜಿದಾರಳ ಗಂಡನಾದ ಬಸಪ್ಪ ತಂದೆ ಈರಪ್ಪ ಹಡಪದ ಇವರು ದಿನಾಂಕ 14-02-1996 ರಂದು ಕನಕಗಿರಿ ತಾಲೂಕಿನ ಕನ್ನೇರಮಡು ಗ್ರಾಮದ ಸ್ವಂತ ಮನೆಯಲ್ಲಿ ಮರಣ ಹೊಂದಿದ್ದು, ಸದ್ರಿಯವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ಅರ್ಜಿಯನ್ನು ದಾಖಲು ಮಾಡಿದ್ದು, ಈ ಪ್ರಕರಣವು ದಿನಾಂಕ:29-04-2026. ರಂದು ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿಯಲ್ಲಿ ಬೆಳಿಗ್ಗೆ 8-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೇ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.

ಸ್ಥಳ : ಗಂಗಾವತಿ
ದಿ: 04-04-2026

ನ್ಯಾಯಾಲಯದ ಆದೇಶದ ಮೇರೆಗೆ
ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ
ಮುಖಾಂತರ: ಅರ್ಜಿದಾರರ ಪರ ವಕೀಲರು,
ಪ್ರಕಾಶಗೌಡ ವಕೀಲರು ಗಂಗಾವತಿ,

ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿ:: 554/2026

ಅರ್ಜಿದಾರರು:ಈರಪ್ಪ ಬಸಪ್ಪ ಹಡಪದ ತಂದೆ ದಿ: ಸಣ್ಣ ಈರಪ್ಪ ಬಸಪ್ಪ ಹಡಪದ ವ: 70 ವರ್ಷ, ಉದ್ಯೋಗ: ವ್ಯವಸಾಯ, ಸಾ: ಕನ್ನೇರಮಡು, ತಾ: ಕನಕಗಿರಿ, ಜಿ: ಕೊಪ್ಪಳ.

ವಿರುದ್ಧ

ಎದುರುದಾರರು:ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೋಂದಣಿ ಇಲಾಖೆ ತಹಶೀಲ್ದಾರರ ಕಾರ್ಯಾಲಯ ಕನಕಗಿರಿ ಜಿ: ಕೊಪ್ಪಳ

ಸಂಬಂಧಪಟ್ಟವರು :

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ ಕಲಂ 13(3) ನಿಯಮ 9(3) ರ ಅಡಿಯಲ್ಲಿ ಅರ್ಜಿದಾರಳ ಗಂಡನಾದ ಕರಡೆಪ್ಪ ತಂದೆ ಈರಪ್ಪ ಹಡಪದ ಇವರು ದಿನಾಂಕ 22-03-1993 ರಂದು ಕನಕಗಿರಿ ತಾಲೂಕಿನ ಕನ್ನೇರಮಡು ಗ್ರಾಮದ ಸ್ವಂತ ಮನೆಯಲ್ಲಿ ಮರಣ ಹೊಂದಿದ್ದು, ಸದ್ರಿಯವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ಅರ್ಜಿಯನ್ನು ದಾಖಲು ಮಾಡಿದ್ದು, ಈ ಪ್ರಕರಣವು ದಿನಾಂಕ : 29-04-2026. ರಂದು ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿಯಲ್ಲಿ ಬೆಳಿಗ್ಗೆ 8-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೇ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.

ಸ್ಥಳ : ಗಂಗಾವತಿ
ದಿ: 04-04-2026

ನ್ಯಾಯಾಲಯದ ಆದೇಶದ ಮೇರೆಗೆ
ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ
ಮುಖಾಂತರ: ಅರ್ಜಿದಾರರ ಪರ ವಕೀಲರು,
ಪ್ರಕಾಶಗೌಡ ವಕೀಲರು ಗಂಗಾವತಿ,

ಕ್ರಿ ಮಿ. ನಂ. 471/2025
ರಟ್ಟಿಹಳ್ಳಿ ಸಂಚಾರಿ ಸಿವ್ಹಿಲ್ ಜಡ್ಜ್ ವ ಜೆ.ಎಮ್.ಎಫ್.ಸಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು: ಮಹದೇವಕ್ಕ ಕೊಂ ಕರಬಸಪ್ಪ ಬಣಕಾರ, ಹಾಗೂ ಇತರರು.

ವಿರುದ್ಧ

ಎದುರುಗಾರರ :ತಹಶೀಲ್ದಾರರು, ಜನನ ವ ಮರಣ ನೋಂದಣಾಧಿಕಾರಿಗಳು, ತಾ:ರಟ್ಟಿಹಳ್ಳಿ, ಜಿ:ಹಾವೇರಿ,

ಇಸ್ತಿಯಾರ ನಾಮೆ

ಈ ಪ್ರಕರಣದಲ್ಲಿಯ ಅರ್ಜಿದಾರನಾದ ನಾನು ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಿದ ನೋಟಿಸ್ ಏನೆಂದರೆ:-ಸದರ ಪ್ರಕರಣದ 1 ರಿಂದ 4 ಅರ್ಜಿದಾರರಿಗೆ ತಾಯಿ ಹಾಗೂ 5 ರಿಂದ 8 ರವರ ಅಜ್ಜಿಯವರಾದ ಈರಮ್ಮ ಕೋಂ ನಿಂಗಪ್ಪ ಕನಗನಹಳ್ಳಿ, ಇವರು ತಾ:15-10-1994 ರಂದು ಹಳ್ಳಿಹಾಳ ಗ್ರಾಮದಲ್ಲಿ ಮರಣ ಹೊಂದಿದ್ದು ಇರುತ್ತದೆ, ಫೋತಿಯವರ ಜನನ ಮತ್ತು ಮರಣ ನೋಂದಣಿ ಅಧಿನಿಯಮ 1969 ಕಲಂ 13(3), ಅಡಿಯಲ್ಲಿ ಅರ್ಜಿದಾರನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಸಲ್ಲಿಸಿರುತ್ತಾರೆ.

ಕಾರಣ ಸದರ ಪ್ರಕರಣದಲ್ಲಿ ಹಿತಾಸಕ್ತಿಯುಳ್ಳವರು ಯಾರಾದರು ತಕರಾರು ಸಲ್ಲಿಸುವವರು ದಿ:29-04-2026 ರಂದು ಮುಂಜಾನೆ 11-00 ಘಂಟೆಗೆ ನೀವಾಗಲಿ ನಿಮ್ಮ ಪರ ವಕೀಲರ ಮೂಲಕವಾಗಲೀ ಸದರಿ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಸದರ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು ಅಂತಾ ಸಾರ್ವಜನಿಕ ಪ್ರಕಟಣೆ,

ಈ ದಿವಸ ತಾ: 02-04-2026 ರಂದು ಮಾನ್ಯ ನ್ಯಾಯಾಲಯದ ಮೋಹರಿನೊಂದಿಗೆ ಕೊಡಲ್ಪಟ್ಟಿತು.

ಸ್ಥಳ: ರಟ್ಟಿಹಳ್ಳಿ,
ದಿನಾಂಕ :2-4-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು
ಪ್ರಿನ್ಸಿಪಲ್ ಸಿವ್ಹಿಲ್ ಜಡ್ಜ ವ ಜೆ.ಎಂ.ಎಫ್.ಸಿ
ನ್ಯಾಯಾಲಯ ರಟ್ಟಿಹಳ್ಳಿ
ಸಹಿ/-ಶ್ರೀ ವಿ.ಪಿ. ಬಸನಗೌಡ್ರ,
ಅರ್ಜಿದಾರರ ಪರ ವಕೀಲರು

ಪಿ & ಎಸ್.ಸಿ. ನಂ . 03/2026
ಮಾ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : 1) ಸಂಗಯ್ಯ ತಂ. ಗುರುಬಸಯ್ಯ ಸಾಲಿಮಠ

-ವಿರುದ್ಧ-

ಎದುರುದಾರರು : 1) ಯಾರು ಇಲ್ಲ

ಸಾರ್ವಜನಿಕ ನೋಟಿಸು

ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರನಿಗೆ ಮೃತ ಚಂದ್ರಶೇಖರ ತಂ. ಗುರುಬಸಯ್ಯ ಸಾಲಿಮಠ ಇವರ ಹೆಸರಿನಲ್ಲಿ ವಿಜಯಪೂರ ಜಿಲ್ಲೆಯ ನಿಡಗುಂದಿ ತಾಲೂಕ ಪೈಕಿ ನಿಡಗುಂದಿ ಗ್ರಾಮದ ಜಮೀನು ರಿ.ಸ. ನಂ. 239/2 ಕ್ಷೇತ್ರ 06 ಎಕರೆ 00 ಗುಂಟೆ, ಈ ಆಸ್ತಿಯನ್ನು ಅರ್ಜಿದಾರನು ಪಡೆಯಲು ಉತ್ತರ ಜೀವಿತ ಪ್ರಮಾಣ ಪತ್ರವನ್ನು ಸಲುವಾಗಿ ಈ ಅರ್ಜಿಯನ್ನು ಮಾಡಿಕೊಂಡಿದ್ದು ಕಾರಣ ಸದರಿ ಅರ್ಜಿಯು ವಿಚಾರಣೆಯನ್ನು ಮಾನ್ಯ ನ್ಯಾಯಾಲಯದವರು ದಿನಾಂಕ: 10/6/2026 ನಿಗಧಿಪಡಿಸಿರುತ್ತಾರೆ. ಸಾರ್ವಜನಿಕರು ಮೃತರಿಗೆ ಸಂಬಂಧಪಟ್ಟವರು ವ ಹಿತೈಷಿಗಳು ತಮ್ಮ ಹಕ್ಕುಗಳು ಇದ್ದಲ್ಲಿ ಅವರುಗಳು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿ ಸದರಿ ಪ್ರಕರಣದಲ್ಲಿ ಹಾಜರಾಗಿ ನಿಮ್ಮ ತಕರಾರು ಏನಾದರು ಇದ್ದಲ್ಲಿ ತಿಳಿಸಬೇಕು. ಅದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರು ಅಂತಾ ಪರಿಗಣಿಸಿ ಸದರಿ ಪ್ರಕರಣವನ್ನು ಏಕತರ್ಫೆಯಾಗಿ ನಿಕಾಲೆ ಮಾಡಲಾಗುವದು ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸದರಿ ನೋಟಿಸನ್ನು ಇವತ್ತು ದಿನಾಂಕ: 8/4/2026 ರಂದು ಮಾ॥ ನ್ಯಾಯಾಲಯದ ಶೀಲು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.

ಸ್ಥಳ: ಬಾಗಲಕೋಟ
ದಿನಾಂಕ : 11-03-2026

ನ್ಯಾಯಾಲಯದ ಆಜ್ಞೆಯೊಂದಿಗೆ
ಸಹಿ/- ಶಿರಸ್ತೇದಾರರು
ಮಾ॥ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಬಾಗಲಕೋಟ
ಸಹಿ/- ಎಸ್. ವ್ಹಿ. ಕಡಕೋಳಮಠ
ಅರ್ಜಿದಾರನ ಪರ ವಕೀಲರು

ಮಾ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ,
ಕ್ರಿಮಿ. ನಂ. 3/2026

ಅರ್ಜಿದಾರ : 1) ಶ್ರೀಮತಿ, ಪ್ರೇಮಾ ಗಂ. ಪರಶುರಾಮ ರಾಠೋಡ ಹಾಗೂ ಇತರರು

ವಿರುದ್ಧ

ಎದುರುದಾರರು : 1) ಮಾ॥ ತಹಶೀಲ್ದಾರ, ಜನನ ಮತ್ತು ಮರಣ ವಿಭಾಗ ನವನಗರ, ಬಾಗಲಕೋಟ

ಸಾರ್ವಜನಿಕ ನೋಟಿಸು

ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರ ನಂ. 1 ರಿಂದ 3 ರವರ ತಾಯಿಯಾದ ಸೀತಾಬಾಯಿ ಗಂ. ಮಾನಪ್ಪ ಲಮಾಣಿ ಇವರು ದಿನಾಂಕ: 10/07/2015 ರಂದು ಹಿರೇಗುಳಬಾಳ ಗ್ರಾಮದ ಮನೆಯಲ್ಲಿ ಮೃತವಾಗಿರುತ್ತಾಳೆ ಅಂತಾ ದಿನಾಂಕವನ್ನು ನೋಂದಣಿ ಮಾಡುವ ಕುರಿತು ಎದುರುದಾರರ ವಿರುದ್ಧ ಆದೇಶ ಕೋರಿ ಈ ಮಾ॥ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿರುತ್ತಾರೆ.

ಆದ್ದರಿಂದ ಸದರಿ ವಿಷಯದ ಸಂಬಂಧದಲ್ಲಿ ಯಾರಾದರೂ ಹಿತಾಸಕ್ತಿ ಉಳ್ಳವರು ಇದ್ದಲ್ಲಿ ದಿನಾಂಕ: 16/4/2026 ರಂದು ಮಾ॥ ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದ ಮುಂದೆ ಹಾಜರಿದ್ದು ತಮ್ಮ ತಕರಾರುಗಳನ್ನು ಸಲ್ಲಿಸಲು, ಅದಕ್ಕೆ ತಪ್ಪಿದಲ್ಲಿ ಯಾರದೂ ಏನೂ ತಕರಾರು ಇರುವದಿಲ್ಲ ಅಂತಾ ಪರಿಗಣಿಸಿ ಮಾ॥ ರವರು ಮುಂದಿನ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸದರಿ ನೋಟಿಸನ್ನು ಇವತ್ತು ದಿನಾಂಕ: 7/4/2026 ರಂದು ಮಾ॥ ನ್ಯಾಯಾಲಯದ ಶೀಲು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.

ಸ್ಥಳ: ಬಾಗಲಕೋಟ
ದಿನಾಂಕ : 7-4-2026

ನ್ಯಾಯಾಲಯದ ಆದೇಶದೊಂದಿಗೆ
ಸಹಿ/- ಶಿರಸ್ತೆದಾರರು
ಮಾ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ಬಾಗಲಕೋಟ
ಸಹಿ/- (ಎಸ್. ಬಿ. ಗೌಡರ)
ಅರ್ಜಿದಾರರ ಪರ ವಕೀಲರು

ಕಿರುಸುದ್ದಿ



ಬಾಂಗ್ಲಾ ಕ್ರಿಕೆಟ್ ಸಂಸ್ಥೆಗೆ ತಮಿಮ್ ಇಕ್ಬಾಲ್ ಅಧ್ಯಕ್ಷ

ಢಾಕಾ: ಮಾಜಿ ಕ್ರಿಕೆಟಿಗ ತಮಿಮ್ ಇಕ್ಬಾಲ್ ಅವರು ಬಾಂಗ್ಲಾದೇಶ ಕ್ರಿಕೆಟ್ ಸಂಸ್ಥೆಯ ಹೊಸ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಬದಲಾಗಿರುವ ಸರ್ಕಾರ ಮಂಗಳವಾರದಂದು ಹಳೆಯ ಅಧ್ಯಕ್ಷ ಆಮಿನುಲ್ ಇಸ್ಲಾಮ್ ಅವರನ್ನು ಸರ್ಕಾರ ಅಮಾನತುಗೊಳಿಸಿದ ನಂತರ ಅವರ ಜಾಗಕ್ಕೆ ನೇಮಕ ಮಾಡಲಾಗಿದೆ. ಅಲ್ಲಿನ ರಾಷ್ಟ್ರೀಯ ಕ್ರೀಡಾ ಇಲಾಖೆ ಈ ಬಗ್ಗೆ ಘೋಷಣೆ ಮಾಡಿದೆ.

ಟಿ20 ವಿಶ್ವಕಪ್ ಪಂದ್ಯಾವಳಿಯಿಂದ ಹೊರ ಬಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಹಳೆಯ ಆಡಳಿತ ಮಂಡಳಿಯನ್ನು ತೆಗೆದುಹಾಕಲಾಗಿದೆ ಎಂದು ಹೇಳಲಾಗುತ್ತಿದೆ. ಹೀಗಿರುವಾಗ ಹೊಸ ಅಧ್ಯಕ್ಷ ನಾನು ಬಾಂಗ್ಲಾ ಕ್ರಿಕೆಟ್ ಏಳಿಗಾಗಿ ಶತಪ್ರಯತ್ನ ನಡೆಸುತ್ತೇನೆ ಎಂದು ಹೇಳಿದ್ದಾರೆ. ಬಿಸಿಸಿಐನೊಂದಿಗೆ ಎಲ್ಲಾ ಸಮಸ್ಯೆ ಬಗೆಹರಿಸಿಕೊಳ್ಳಲು ಬಾಂಗ್ಲಾದೇಶ ಕ್ರಿಕೆಟ್ ಸಂಸ್ಥೆ ಬಿಸಿಸಿಐಗೆ ಪತ್ರ ಬರೆದಿದ್ದು ಇಕ್ಬಾಲ್ ಅವರ ನೇತೃತ್ವದಲ್ಲೇ ಬಿಸಿಬಿ, ಬಿಸಿಸಿಐನೊಂದಿಗೆ ಮಾತುಕತೆ ನಡೆಸಲಿದೆ ಎನ್ನಲಾಗುತ್ತಿದೆ.

ಶೂಟಿಂಗ್: ಭಾರತಕ್ಕೆ ನಿರಾಶೆಯ ದಿನ

ಹೊಸದಿಲ್ಲಿ: ಐಎಸ್ಎಸ್ಎಫ್ ಪಿಸ್ತೂಲ್/ರೈಫಲ್ ವಿಶ್ವಕಪ್‌ನಲ್ಲಿ ಪುರುಷರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತೀಯ ಶೂಟರ್‌ಗಳಿಗೆ ನಿರಾಶಾದಾಯಕ ದಿನ ಎದುರಾಯಿತು. ಮಿಶ್ರ ತಂಡದಲ್ಲಿ ವಿಶ್ವ ದಾಖಲೆ ಸಾಧಿಸಿ ಚಿನ್ನ ಗೆದ್ದ ನಂತರದ ದಿನವೇ ಮೂವರು ಭಾರತೀಯರು ಫೈನಲ್‌ಗೆ ಅರ್ಹತೆ ಪಡೆಯಲು ವಿಫಲರಾದರು.

ವಿಶ್ವ ದಾಖಲೆ ಸಾಧಿಸಿದ ಮುಖೇಶ್ ನೆಲಾವಲ್ಲಿ 579 ಅಂಕಗಳೊಂದಿಗೆ 14ನೇ ಸ್ಥಾನದಲ್ಲಿ ಅಂತ್ಯಗೊಳಿಸಿ, ಅಂತಿಮ ಎಂಟು ಮಂದಿಯ ಪಟ್ಟಿಗೆ ಸೇರುವಲ್ಲಿ ವಿಫಲರಾದರು. ಆರಂಭ ಮತ್ತು ಅಂತಿಮ ಸರಣಿಗಳಲ್ಲಿ 94 ಹಾಗೂ 95 ಅಂಕಗಳನ್ನು ಗಳಿಸಿದ್ದು ಅವರಿಗೆ ಹಿನ್ನಡೆಯಾಯಿತು. ಮಧ್ಯದ ಸರಣಿಗಳಲ್ಲಿ 98, 98, 97, 97 ಅಂಕಗಳೊಂದಿಗೆ ಉತ್ತಮ ಪ್ರದರ್ಶನ ನೀಡಿದರೂ, ಅದು ಸಾಕಾಗಲಿಲ್ಲ. ಚೀನಾದ ವಿಶ್ವ ನಂ.1 ಹೂ ಕೈ ಕೂಡ 578 ಅಂಕಗಳೊಂದಿಗೆ 15ನೇ ಸ್ಥಾನದಲ್ಲೇ ತೃಪ್ತಿಪಟ್ಟಿದ್ದು, ದಿನದ ಸ್ಪರ್ಧೆ ಕಠಿಣವಾಗಿತ್ತು. ಪ್ಯಾರಿಸ್ ಒಲಿಂಪಿಕ್ ಚಿನ್ನ ಪದಕ ವಿಜೇತ ಯು ಷಿಯೆ 588 ಅಂಕಗಳೊಂದಿಗೆ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದು ಫೈನಲ್‌ಗೆ ಪ್ರವೇಶಿಸಿದರು. ಇನ್ನೊಬ್ಬ ಭಾರತೀಯ ಉಜ್ವಲ್ ಮಲಿಕ್ 577 ಅಂಕಗಳೊಂದಿಗೆ 22ನೇ ಸ್ಥಾನ ಪಡೆದರೆ, ಪ್ರಮೋದ್ 574 ಅಂಕಗಳೊಂದಿಗೆ 39ನೇ ಸ್ಥಾನದಲ್ಲಿ ಅಂತ್ಯಗೊಳಿಸಿದರು. ಒಟ್ಟು 86 ಸ್ಪರ್ಧಿಗಳ ನಡುವೆ ನಡೆದ ಈ ಕಠಿಣ ಸ್ಪರ್ಧೆಯಲ್ಲಿ ಭಾರತೀಯರಿಗೆ ನಿರೀಕ್ಷಿತ ಫಲಿತಾಂಶ ದೊರೆಯಲಿಲ್ಲ.

ಮಿಂಚಿದ ಗಿಲ್, ಬಟ್ಲರ್ | ವಾಷಿಂಗ್ಟನ್ ಅರ್ಧ ಶತಕ

ದಿಲ್ಲಿಗೆ ಕಠಿಣ ಗುರಿ

ಹೊಸದಿಲ್ಲಿ: ಬಟ್ಲರ್, ಗಿಲ್ ಹಾಗೂ ವಾಷಿಂಗ್ಟನ್ ಸುಂದರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ದೊಡ್ಡ ಮೊತ್ತ ಕಲೆ ಹಾಕಿರುವ ಗುಜರಾತ್ ಟೈಟಾನ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 14ನೇ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್‌ಗೆ ಕಠಿಣ ಗುರಿ ನೀಡಿತು.

ಆರಂಭಿಕ ಓವರ್‌ಗಳಲ್ಲಿ ಬಟ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದರೆ, ಮಧ್ಯಮ ಓವರ್‌ಗಳಲ್ಲಿ ಗಿಲ್ ಮತ್ತು ಸುಂದರ್ ಕಮಾಲ್ ನಡೆಯಿತು. ಎರಡು ಪಂದ್ಯಗಳಲ್ಲಿ ಸತತ ಸೋಲು ಕಂಡಿರುವ ಗುಜರಾತ್ ತನ್ನ ಪಂದ್ಯದಲ್ಲಿ ಬರೋಬ್ಬರಿ 211 ರನ್ ಗುರಿ ನೀಡಿತು. ಗಿಲ್, ಬಟ್ಲರ್ ಮತ್ತು ಸುಂದರ್ ಭರ್ಜರಿ ಬ್ಯಾಟಿಂಗ್ ಮಾಡಿ ರೂವಾರಿ ಅನ್ನಿಸಿಕೊಂಡರು. ಗುಜರಾತ್ 4 ಮಾತ್ರ ವಿಕೆಟ್ ಕಬಳಿಸಿತು. ಲುಂಗಿ ಎನ್‌ಗಿಡಿ 4 ಓವರ್‌ಗಳಲ್ಲಿ 24 ರನ್ ಮಾತ್ರ ನೀಡಿ 1 ವಿಕೆಟ್ ಪಡೆದುಕೊಂಡರು.

ಬಟ್ಲರ್ ಅಬ್ಬರ: ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್‌ಗೆ ಭರ್ಜರಿ ಆರಂಭ ಸಿಕ್ಕಿತು. ಸ್ಫೋಟಕ ಬ್ಯಾಟರ್ ಸಾಯಿ ಸುದರ್ಶನ್ ಮೊದಲನೇ ಎಸೆತದಲ್ಲೇ ಬೌಂಡರಿಯಿಂದ ಪಂದ್ಯವನ್ನು ಶುರು ಮಾಡಿದರು. ಆದಾಗ್ಯೂ ಅವರು 12 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಬಟ್ಲರ್ ತಮ್ಮ ಅಸಲು ಲಯಕ್ಕೆ ಬಂದರು. ಮೊದಲನೇ ಓವರ್‌ನಿಂದಲೂ ದಂಡಿಸಲಾರಂಭಿಸಿದ ಅವರು, ಬಂದ ಎಸೆತಗಳನ್ನೆಲ್ಲಾ ಬೌಂಡರಿಯಾಚೆಗಟ್ಟು ನಿರ್ಧಾರ ಸ್ಪಷ್ಟಪಡಿಸಿದರು. ಶುಭಮನ್ ಗಿಲ್ ಅವರಿಗೆ ಸಾಥ್ ನೀಡುತ್ತಾ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಪವರ್‌ಪ್ಲೇ ಮುಗಿಯುವಷ್ಟರಲ್ಲಿ ಬಟ್ಲರ್ 27 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಕುಲ್ದೀಪ್ ಯಾದವ್ ಬಟ್ಲರ್ ವಿಕೆಟ್ ಕಿತ್ತರು. ಶುಭಮನ್ ಗಿಲ್ ತಮ್ಮ ಸ್ವಾಭಾವಿಕ ಆಟದೊಂದಿಗೆ ಮಿಂಚಿದರು. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ವಾಷಿಂಗ್ಟನ್ ಸುಂದರ್ ಬಿರುಸಿನ ಬ್ಯಾಟಿಂಗ್ ಮಾಡಲಾರಂಭಿಸಿದರು. ಮೊದಲಿನಿಂದಲೂ ದಂಡಿಸಿದ ಅವರು ಯಾವುದೇ ಮುಲಾಜಿಗೆ ಬೀಳಲೇ ಇಲ್ಲ. ಗಿಲ್ ಹಾಗೂ ಸುಂದರ್ ಭರ್ಜರಿ ಬ್ಯಾಟಿಂಗ್ ಮಾಡಿದರು.



ಶತಕದ ಜೊತೆಯಾಟ

ಶುಭಮನ್ ಗಿಲ್ ಮತ್ತು ವಾಷಿಂಗ್ಟನ್ ಸುಂದರ್ 104 ರನ್‌ಗಳ ಜೊತೆಯಾಟ ನಿರ್ಮಿಸಿದರು. ಸಿಂಗಲ್‌ಗಳ ನಂತರ ಸ್ಫೋಟಕ ಬ್ಯಾಟಿಂಗ್ ಶುರುಮಾಡಿದ ಗಿಲ್ 33 ಬಾಲ್‌ಗಳಲ್ಲಿ ಅರ್ಧಶತಕ ಮುಗಿಸಿಕೊಂಡು. 40 ಬಾಲ್‌ಗಳಲ್ಲಿ 70 ರನ್ ಗಳಿಸಿದರು. ವಾಷಿಂಗ್ಟನ್ ಸುಂದರ್ ಸ್ಲಾಗ್ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 31 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಅವರು 55 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಉಳಿದಂತೆ ಫಿಲಿಪ್ಸ್ 14 ರನ್ ಗಳಿಸಿದರು.

ಕೋಲ್ಕತ್ತಾಗೆ ಲಖನೌ ಸವಾಲು

ಕೋಲ್ಕತ್ತಾ: ಪಂದ್ಯಾವಳಿಯಲ್ಲಿ ಮೊದಲ ಗೆಲುವು ಸಾಧಿಸಿರುವ ಲಖನೌ ಸೂಪರ್ ಜೇಂಟ್ಸ್ ಹಾಗೂ ಎರಡು ಸೋಲು ಒಂದು ರದ್ದಿನ ನಂತರ ಒಂದು ಅಂಕದೊಂದಿಗೆ ಆಡುತ್ತಿರುವ ಕೆಕೆಆರ್ ತಂಡಗಳು ಗುರುವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಮೊದಲ ಪಂದ್ಯದಲ್ಲಿ ಸೋತ ನಂತರ ಎರಡನೇ ಪಂದ್ಯದಲ್ಲಿ ಪಂತ್ ಅವರ ಆಟದ ಬಲದಿಂದ ಗೆಲುವು ಸಾಧಿಸಿರುವ ಲಖನೌ ಸೂಪರ್ ಜೇಂಟ್ಸ್ ತನ್ನ ಗೆಲುವಿನೋಟವನ್ನು ಮುಂದುವರಿಸುವ ಯೋಜನೆಯಲ್ಲಿದ್ದರೆ ಇತ್ತ ಕೆಕೆಆರ್ ಸೋಲಿನಿಂದ ಹೊರಬಂದು ಗೆಲುವಿನ ಹಳಿಗೆ ಮರಳಲು ಸಿದ್ಧವಾಗಿದೆ. ಮೊದಲೆರಡು ಪಂದ್ಯಗಳಲ್ಲಿ ಸೋತ ನಂತರ ಮೂರನೇ ಪಂದ್ಯ ರದ್ದಾಗಿತ್ತು. ಈ ನಿಟ್ಟಿನಲ್ಲಿ ಕೆಕೆಆರ್ 1 ಮಾತ್ರ ಅಂಕದೊಂದಿಗೆ ಹಿನ್ನಡೆಯಲ್ಲಿದೆ. ಇತ್ತ ಲಖನೌ ಆಡಿರುವ ಪಂದ್ಯಗಳಲ್ಲಿ ಸೋಲು ಮತ್ತು ಗೆಲುವು ಸಾಧಿಸಿ ಸಮಾನ ಫಲಿತಾಂಶ ಹೊಂದಿದೆ.

ಲಖನೌಗೆ ಪಂತ್ ಲಯದ ಬಲ: ಸೂಪರ್ ಜೇಂಟ್ಸ್ ತಂಡಕ್ಕೆ ರಿಷಭ್ ಪಂತ್ ಲಯಕ್ಕೆ ಮರಳಿರುವ ವಿಶ್ವಾಸವಿದೆ. ಕಳೆದ ಕೂಟದಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ಪಂತ್ ಕೇವಲ ಒಂದೇ ಪಂದ್ಯಲ್ಲಿ ಮಿಂಚಿದ್ದರು. ಪಂದ್ಯಾವಳಿಯ ಆರಂಭಿಕ ಪಂದ್ಯದಲ್ಲಿ ಬೇಗನೆ ವಿಕೆಟ್ ಒಪ್ಪಿಸಿದರೂ ಪಂತ್ ಎರಡನೇ ಪಂದ್ಯದಲ್ಲಿ ಮಿಂಚಿನಾಟದೊಂದಿಗೆ ಪಂದ್ಯ ಗೆಲ್ಲಿಸಿದ್ದರು. ಅವರಲ್ಲದೆ ಮಾಕ್ರಂ, ಮಾರ್ಷ್ ಕೂಡ ರನ್ ಮಾಡಿದ್ದಾರೆ.



ಬೌಲಿಂಗ್ ವಿಭಾಗದಲ್ಲಿ ಶಮಿ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದು ಅವರಿಗೆ ಪ್ರಿನ್ಸ್ ಯಾದವ್, ರಾಥಿ ಸಾಥ್ ಕೂಡ ಸಿಗುತ್ತಿದೆ.

ಕೆಕೆಆರ್‌ಗೆ ಗೆಲುವಿನ ಹಂಬಲ: ಇನ್ನು ಕೋಲ್ಕತ್ತಾ ತಂಡದಲ್ಲಿ ಗೆಲುವಿನ ಹಂಬಲವಿದೆ. ಕಳೆದ ಮೂರು ಪಂದ್ಯಗಳ ಪೈಕಿ ಎರಡರಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ಮೂರನೇ ಪಂದ್ಯದಲ್ಲೂ ಬ್ಯಾಟಿಂಗ್ ವಿಭಾಗ ಆರಂಭಿಕ ಹಿನ್ನಡೆ ಅನುಭವಿಸಿತ್ತು. ಅಜಿಂಕ್ಯಾ ರಹಾನೆ ಬ್ಯಾಟ್‌ನಿಂದ ರನ್ ಬರಬೇಕಿದೆ. ಆಲೆನ್ ಸ್ಫೋಟಕ ಬ್ಯಾಟಿಂಗ್ ಮಾಡಿದರೂ ನಿಲ್ಲುತ್ತಿಲ್ಲ. ಇತ್ತ ಮಧ್ಯಮ ಕ್ರಮಾಂಕದಲ್ಲಿ ಗ್ರೀನ್ ಸೇರಿದಂತೆ ವಿವಿಧ ಆಟಗಾರರು ಹಿನ್ನಡೆ ಅನುಭವಿಸಿದ್ದಾರೆ.

ಏಷ್ಯನ್ ಬ್ಯಾಡ್ಮಿಂಟನ್: ಸೇನ್, ಶ್ರೀಕಾಂತ್‌ಗೆ ಸೋಲು

ಆಯುಷ್, ಪ್ರಣೋಯ್ ಶುಭಾರಂಭ





ನಿಂಗ್ಬೋ(ಚೀನಾ): ಭಾರತದ ಭರವಸೆಯ ಷಟ್ಲರ್‌ಗಳಾದ ಆಯುಷ್ ಶೆಟ್ಟಿ, ಪ್ರಣೋಯ್ ಎಚ್.ಎಸ್ ಗೆಲುವಿನೊಂದಿಗೆ ಮಿಂಚಿದರೆ, ಕಿಡಂಬಿ ಶ್ರೀಕಾಂತ್, ಲಕ್ಷ್ಯ ಸೇನ್ ಸೋತು ನಿರಾಸೆ ಮೂಡಿಸಿದರು.

ಬುಧವಾರದಂದು ಶುರುವಾಗಿರುವ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಪಂದ್ಯಾವಳಿಯ ಮುಖ್ಯ ಡ್ರಾ ಪಂದ್ಯಗಳು ಶುರುವಾದವು. ನಾಲ್ವರು ಭಾರತೀಯ ಷಟ್ಲರ್‌ಗಳು ಕಣದಲ್ಲಿದ್ದರು. ಮೊದಲಿಗೆ ಪ್ರಣೋಯ್ ವಿಯೇಟ್ನಾಂನ ಡಾಂಗ್ ಅವರನ್ನು ಎದುರಿಸಿದರು. ಮೊದಲಿನಿಂದಲೂ ನಿಯಂತ್ರಣ ಪ್ರದರ್ಶನ ನೀಡಿ ನೇರಸೆಟ್ ಗೆಲುವು ದಾಖಲಿಸಿದರು. ಮೊದಲನೇ ಸುತ್ತಿನಪಂದ್ಯದಲ್ಲಿ ಎದುರಾಳಿ ಡಾಂಗ್ ತಮ್ಮ ಸರ್ವ್‌ಗಳ ಮೂಲಕ ಪ್ರಣೋಯ್ ಅವರ ಮೇಲೆ ಒತ್ತಡ ಹೇರಿದರೂ ಸ್ಮ್ಯಾಷ್‌ಗಳ ಮೂಲಕ ಮಿಂಚಿದ ಭಾರತೀಯ 24-22ರಿಂದ ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲೂ ಅದೇ ಪ್ರದರ್ಶನ ಮುಂದುವರಿಸುತ್ತಾ 21-12ರಿಂದ ಗೆಲುವು ಸಾಧಿಸಿದ್ದಾರೆ.

ಎರಡನೇ ಪಂದ್ಯದಲ್ಲಿ ಅನುಭವಿ ಕಿಡಂಬಿ ಶ್ರೀಕಾಂತ್ ಅವರು ಸಿಂಗಾಪುರದ ಕೆ. ವೈ. ಲೋಹ್ ಅವರೊಂದಿಗೆ ಆಡಿದರು. ಮೊದಲನೇ ಸೆಟ್‌ನಲ್ಲಿ ಮುನ್ನಡೆ. ಕಿಡಂಬಿ ಶ್ರೀಕಾಂತ್ ಎದುರಾಳಿ ಮೇಲೆ ನಿರಂತರ ಹಿಡಿತ ಸಾಧಿಸುತ್ತಾ 21-18ರಿಂದ ಗೆದ್ದರು. ಆದರೆ ಈ ಬಳಿಕ ಪುಟಿದೆದ್ದ ಎದುರಾಳಿ ಎರಡನೇ ಸೆಟ್‌ನಲ್ಲಿ ಅತ್ಯುತ್ತಮ ಸರ್ವ್‌ಗಳೊಂದಿಗೆ 21-9 ರಿಂದ ಗೆದ್ದು ಸಮಬಲ ಸಾಧಿಸಿದರು. ಪಂದ್ಯ ರೋಚಕವಾಯಿತು. ನಿರ್ಣಾಯಕ ಸೆಟ್‌ನಲ್ಲಿ ಸಿಂಗಾಪುರ ಆಟಗಾರ ಯಾವುದೇ ಮುನ್ನಡೆ ಬಿಟ್ಟುಕೊಡದೆ 21-11 ರಿಂದ ಗೆದ್ದು 16ರ ಸುತ್ತಿಗೆ ಲಗ್ಗೆ ಹಾಕಿದರು. ಇನ್ನೊಂದು ಪಂದ್ಯದಲ್ಲಿ ಭಾರತದ ಭರವಸೆಯ ಆಟಗಾರ ಲಕ್ಷ್ಯ ಸೇನ್ ಸಿ. ವೈ. ಲೀ ವಿರುದ್ಧ 21-12, 21-19ರಿಂದ ಗೆಲುವು ಸಾಧಿಸಿದರು.

7ನೇ ಶ್ರೇಯಾಂಕದ ಆಟಗಾರನನ್ನು ಸೋಲಿಸಿದ ಆಯುಷ್: ಇನ್ನು ದಿನದ ಮತ್ತೊಂದು ಪಂದ್ಯದಲ್ಲಿ ಭಾರತದ ರೈಸಿಂಗ್ ಸ್ಟಾರ್ ಆಯುಷ್ ಶೆಟ್ಟಿ ಚೀನಾದ ಲಿ ಶಿಫೆಂಗ್ ಅವರನ್ನು ಎದುರಿಸಿದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಅವರು, ಎದುರಾಳಿಗೆ ಯಾವುದೇ ಅವಕಾಶ ಬಿಟ್ಟುಕೊಡಲಿಲ್ಲ. ವಿಶ್ವ ಶ್ರೇಯಾಂಕದಲ್ಲಿ ತನಗಿಂತ ಮುಂದಿರುವ ಆಟಗಾರನ ವಿರುದ್ಧ ಶೆಟ್ಟಿ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿದರು. ಮೊದಲನೇ ಸೆಟ್ ಅನ್ನು 21-13ರಿಂದ ಗೆದ್ದ ಅವರು ಎರಡನೇ ಸೆಟ್‌ನಲ್ಲಿ 21-21ರಿಂದ ಗೆಲ್ಲುವತ್ತ ಸಾಗುವಾಗ ಎದುರಾಳಿ ನಿವೃತ್ತಿಯಾದರು. ಶೆಟ್ಟಿ ಪ್ರೀಕ್ವಾರ್ಟರ್ ಫೈನಲ್ ತಲುಪಿದರು.

ಸಿಂಧುಗೆ ಮುನ್ನಡೆ

ಇನ್ನು ಭಾರತದ ಮಹಿಳಾ ಆಟಗಾರ್ತಿ ಪಿ.ವಿ. ಸಿಂಧು ವೋಂಗ್ ಅವರೊಂದಿಗಿನ ಪಂದ್ಯದಲ್ಲಿ 15-21, 21-11, 21-11ರಿಂದ ಭರ್ಜರಿ ಗೆಲುವು ಸಾಧಿಸಿದರು. ಮೊದಲನೇ ಸುತ್ತಿನ ಪಂದ್ಯದಲ್ಲಿ ಸೋತರೂ ಮುಂದಿನ ಎರಡು ಸುತ್ತಿನ ಪಂದ್ಯಗಳಲ್ಲಿ ಸಿಂಧು ಗೆಲುವು ಸಾಧಿಸಿದರು. ಉದಯೋನ್ಮುಖ ತಾರೆ ತನ್ವಿ ಕಾರುಪತ್ತೇವನ್ ಅವರೊಂದಿಗೆ ಸೋತರೆ, ಬನ್ಸೋದ್ ಇಂಟಾನೋನ್ ಅವರೊಂದಿಗೆ ಸೋತರು. ಮಹಿಳೆಯರ ಡಬಲ್ಸ್ ಪಂದ್ಯದಲ್ಲಿ ಭಟ್ ಹಾಗೂ ಶಿಖಾ ಗೌತಂ, ಮಿಜಾದ್-ತುಂಗ್ಕಾಸ್ತಾನ್ ಅವರೊಂದಿಗಿನ ಪಂದ್ಯದಲ್ಲಿ ಸೋತರು.

ಫುಟ್‌ಬಾಲ್: ಕಿರಿಯರ ತಂಡಕ್ಕೆ ಜಯ

ಹೊಸದಿಲ್ಲಿ: ತೈವಾನ್ ವಿರದ್ಧದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿರುವ ಭಾರತ ಅಂಡರ್-20 ಮಹಿಳಾ ಫುಟ್‌ಬಾಲ್ ತಂಡವು ಎಎಫ್‌ಸಿ ಅಂಡರ್-20 ಮಹಿಳೆಯರ ಏಷ್ಯನ್ ಕಪ್ ಪಂದ್ಯಾವಳಿಯ ಅರ್ಹತೆ ಆಸೆ ಜೀವಂತವಾಗಿರಿಸಿಕೊಂಡಿತು.

ಥೈಲ್ಯಾಂಡಿನ ಪಾಥುಮ್ ಥಾನಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ತೈವಾನ್ ವಿರುದ್ಧ 3-1ರ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನ ಮೂಲಕ ಮುನ್ನಡೆ ಸಾಧಿಸಿರುವ ಭಾರತ ಬಿ ಗುಂಪಿನಲ್ಲಿ ನಡೆಯಲಿರುವ ಉಜ್ಬೇಕಿಸ್ತಾನ ಮತ್ತು ಜಾರ್ಡನ್ ನಡುವೆ ನಡೆಯುವ ಪಂದ್ಯದ ಫಲಿತಾಂಶಕ್ಕಾಗಿ ಕಾಯುತ್ತಿದೆ. ಅಲ್ಲಿನ ಪಂದ್ಯ ಭಾರತದ ಪ್ಲೇಆಫ್ ಭವಿಷ್ಯವನ್ನು ನಿರ್ಧರಿಸಲಿದೆ. 2004ರಲ್ಲಿ ಕೊನೆಯ ಬಾರಿಗೆ ಭಾರತ ಅರ್ಹತಾ ಸುತ್ತಿನ ಕ್ವಾರ್ಟರ್ ಫೈನಲ್‌ಗೇರಿತ್ತು. ಅದೇ ವರ್ಷ ಕೊನೆಯ ಬಾರಿಗೆ ಏಷ್ಯನ್ ಫುಟ್‌ಬಾಲ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಭಾಗವಹಿಸಿತ್ತು. ಬುಧವಾರದ ಪಂದ್ಯದಲ್ಲಿ ಭಾರತದ ಭೂಮಿಕಾ ದೇವಿ 26ನೇ ನಿಮಿಷ ಮತ್ತು ಸಿವಾನಿ ದೇವಿ 32, 87ನೇ ನಿಮಿಷದಲ್ಲಿ ಗೋಲು ಗಳಿಸಿದರು. ಎದುರಾಳಿ ತಂಡದ ಪರ ಕಾವೊ 90+3ನೇ ನಿಮಿಷದಲ್ಲಿ ಗೋಲು ಗಳಿಸಿದರು.



- ಮಹಿಳೆಯರ ಅಂಡರ್-20 ಫುಟ್‌ಬಾಲ್ ಏಷ್ಯನ್ ಕಪ್ ಅರ್ಹತಾ ಸುತ್ತು
- ಕ್ವಾರ್ಟರ್‌ಫೈನಲ್ ಆಸೆ ಇನ್ನೂ ಜೀವಂತ
- ತೈವಾನ್ ವಿರುದ್ಧ 3-1ರಿಂದ ಗೆಲುವು
- ಜಾರ್ಡನ್ -ಉಜ್ಬೇಕಿಸ್ತಾನ ಪಂದ್ಯ ನಿರ್ಣಾಯಕ

ರಾಜಸ್ಥಾನಕ್ಕೆ ಹ್ಯಾಟ್ರಿಕ್ ಗೆಲುವಿನ ಯಶ

ಗುವಾಹಟಿ: ಮುಂಬೈ ತಂಡದ ದಿಗ್ಗಜ ಬೌಲರ್‌ಗಳನ್ನು ದಂಡಿಸಿದ ನಂತರ ಹಾರ್ದಿಕ್ ಪಡೆಯ ಪ್ರಮುಖ ಬ್ಯಾಟರ್‌ಗಳ ಬೆವರಿಳಿಸಿದ ರಾಜಸ್ಥಾನ ರಾಯಲ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 19ನೇ ಆವೃತ್ತಿಯಲ್ಲಿ ಸತತ ಮೂರನೇ ಗೆಲುವು ಸಾಧಿಸಿದೆ. ಚೆನ್ನೈ, ಗುಜರಾತ್ ತಂಡಗಳನ್ನು ಸೋಲಿಸಿದ ನಂತರ ಮುಂಬೈ ತಂಡವನ್ನು ಸೋಲಿಸಿರುವ ತಂಡವು ದಾಖಲೆಯ ಹ್ಯಾಟ್ರಿಕ್ ಸಾಧನೆ ಮಂಗಳವಾರ ತಡರಾತ್ರಿ ಮಾಡಿತು.

ಮಳೆ ಬಂದ ಕಾರಣ 11 ಓವರ್‌ಗಳ ಮಟ್ಟಕ್ಕೆ ಇಳಿಸಲಾಗಿದ್ದ ಪಂದ್ಯದಲ್ಲಿ ಮುಂಬೈ ಮೊದಲು ಬೌಲಿಂಗ್ ಮಾಡುವ ನಿರ್ಧಾರ ಮಾಡಿಕೊಂಡಿತು. ಯಶಸ್ವಿ ಜೈಸ್ವಾಲ್ ಮತ್ತು ವೈಭವ್ ಸೂರ್ಯವಂಶಿ ದಂಡಿಸಲಾರಂಭಿಸಿದರು. ಪರಿಣಾಮ 11 ಓವರ್‌ಗಳಲ್ಲಿ ಆರ್‌ಆರ್ ಬರೋಬ್ಬರಿ 150 ರನ್ ಚಚ್ಚಿತು. ಗುರಿ ಬೆನ್ನಟ್ಟಿದ ಮುಂಬೈ ವಿವಿಧ ಪ್ರಯತ್ನಗಳನ್ನು ಮಾಡಿದ ನಂತರ 123 ರನ್ ಮಾತ್ರ ಗಳಿಸಿ ಸೋಲೊಪ್ಪಿಕೊಂಡಿತು. ತಂಡದ ಪರ ರುದರ್‌ಫೋರ್ಡ್ 25, ನಮನ್ ಧಿರ್ 25 ರನ್ ಗಳಿಸಿದರು. ರಾಜಸ್ಥಾನ ಪರ ನಾಂದ್ರೆ, ಸಂದೀಪ್ ಹಾಗೂ ಬಿಷ್ಣೋಯ್ ತಲಾ 2 ವಿಕೆಟ್ ಕಿತ್ತರು. 32 ಬಾಲ್ ಮಾತ್ರದಲ್ಲಿ ಅಜೇಯ 77 ರನ್ ಬಾರಿಸಿದ ಜೈಸ್ವಾಲ್ ಪಂದ್ಯದ ಹೀರೋ ಅನ್ನಿಸಿಕೊಂಡು ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ವೈಭವ್ 39 ರನ್ ಗಳಿಸಿದರು. 26 ರನ್ ನೀಡಿ 6 ವಿಕೆಟ್ ಪಡೆದ ಸಂದೀಪ್ ಬೆಸ್ಟ್ ಬೌಲರ್ ಅನ್ನಿಸಿಕೊಂಡರು. ಮುಂಬೈ ಪರ ಯಾವುದೇ ಬ್ಯಾಟರ್ ಗೆಲುವಿನ ಇನ್ನಿಂಗ್ಸ್ ಆಡಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ನಮನ್ ಹಾಗೂ ರುದರ್‌ಫೋರ್ಡ್ ಸ್ವಲ್ಪ ಪ್ರಯತ್ನ ಪಟ್ಟರು. ಅವರಿಬ್ಬರ ವಿಕೆಟ್ ಬಿದ್ದ ನಂತರ ಪಂದ್ಯ ರಾಜಸ್ಥಾನದ ಕಡೆ ಹೋಯಿತು.




ಬೂಮ್ರಾ ಬಾಲ್‌ಗೆ ವೈಭವ್ ಸಿಕ್ಸರ್: ಪಂದ್ಯದ ಅತ್ಯಂತ ಗಮನಾರ್ಹ ವಿಷಯದಲ್ಲಿ ಜಸ್‌ಪ್ರೀತ್ ಬೂಮ್ರಾ ಅವರ ಮೊದಲನೇ ಬಾಲ್‌ನಲ್ಲೇ 15 ವರ್ಷದ ವೈಭವ್ ಸಿಕ್ಸರ್ ಬಾರಿಸಿದರು. ಒಟ್ಟು ಆ ಓವರ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಬಾರಿಸಿ ಗಮನ ಸೆಳೆದಿದ್ದಾರೆ. ಇತ್ತ ಜೈಸ್ವಾಲ್ ಕೂಡ ಟ್ರೆಂಟ್ ಬೋಲ್ಟ್ ಅವರ ಬೌಲಿಂಗ್‌ನಲ್ಲಿ 22 ರನ್ ಚಚ್ಚಿದ್ದೂ ವಿಶೇಷವಾಗಿತ್ತು.

ಪದಬಂಧ

5948

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
3.ಬಲಿಷ್ಠ ಆನೆಯನ್ನು ಹೀಗೂ ಹೇಳುತ್ತೇವೆ (4)
5.ಕಬ್ಬಿನ ರಸದಿಂದ ಮಾಡಿದ ಸಿಹಿ ಪದಾರ್ಥ (3)
7.ಸಸ್ಯ ಸಂಪತ್ತಿನ ಬಣ್ಣ (3)
8.ಈಕೆ ಸಶಕ್ತಳಾದವಳು (3)
10.ಪಟ್ಟದ ಬಗ್ಗೆ ಆಡುತ್ತಿರುವ ಒಣಮಾತು (3)
11.ಮನೆಯ ಮೇಲಿನ ಅಂತಸ್ತು (3)
14.ಕಿಟಕಿಯ ಬಳಿ ನಿಂತು ಆಡಿದ ಚುಚ್ಚು ಮಾತು (3)
16.ಶೋಭೆ-ಕಂಗೊಳಿಸುವ ಸ್ಥಿತಿ (3)
17.ನಮ್ಮದೇ ದೇಶಕ್ಕೆ ಸಂಬಂಧಿಸಿದುದು (3)
18.ಊರೂರುಗಳನ್ನು ತಿರುಗುವುದು (4)

ಮೇಲಿನಿಂದ ಕೆಳಕ್ಕೆ
1.ಹಾಲಲ್ಲಿ ಅಡಗಿದ ತೀಕ್ಷ್ಣವಾದ ವಿಷ (4)
2.ಹಾಲಿನಿಂದಾದ ಬಿಳಿ ಮೃದು ಆಹಾರ (3)
4.ಆ ದಿವಸ ತಂದ ಕಾಳುಕಡಿ (3)
6.ಒಂದು ಬಗೆಯ ಜಲಪುಷ್ಪ ತಲೆಕೆಳಗಾಗಿದೆ (3)
9.ಬಗೆಯ ನಡುವೆ ದೊಣ್ಣೆಯಡಗಿದೆ (3)
10.ಪಟದ ನಡುವೆ ಆದ ಬದಲಾವಣೆ (3)
12.ತನ್ನದೇ ಮನೆ ತಲೆಕೆಳಗಾಗಿದೆ (3)
13.ಈತ ಆನೆಯನ್ನು ನಡೆಸುವವನು (4)
15.ರತ್ನಖಚಿತ ಶಿರೋಭೂಷಣ (3)
16.ವಿಶೇಷತೆ-ಹೆಚ್ಚುಗಾರಿಕೆಯಿದು (3)

5947 ಉತ್ತರ

ಎಡದಿಂದ ಬಲಕ್ಕೆ:
1.ಯಮಕ 3.ಗಾಯನ
5.ರಕ್ಷಣಾದಳ
6.ಗರಗಸ 8.ರಂದಣಿಗ
9.ದೃಢಕಾಯ
10.ಕತ್ತರಿಸು
12.ಮೌಲ್ಯಮಾಪನ
14.ಲಶುನ 15.ಗಣಿತ

ಮೇಲಿನಿಂದ ಕೆಳಕ್ಕೆ :
1.ಯವ್ವನಿಗ 2.ಕರ 3.ಗಾಳ
4.ನವರಂಗ 7.ಸಹಾಯ
8.ರಂಜಕ 9.ದೃಗುಜಲ
11.ಸುಲಲಿತ 12.ಮೌನ
13.ನಗ

ಎಲ್ಲಿ ಜಾರಿತೋ ಮನವು... ಎಲ್ಲೆ ಮೀರಿತೋ ...

ಆಪ್ತ ಸಲಹೆ
ಮಧುರ ಪ್ರಸಾದ್.
ಆಪ್ತ ಸಮಾಲೋಚಕರು

ಪ್ರತಿಷ್ಠಿತ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ 31 ವರ್ಷದ ಹರೀಶ ಸಹೋದ್ಯೋಗಿಯಾದ ಪ್ರಿಯಾಳನ್ನು ಪ್ರೀತಿಸಿ ವಿವಾಹವಾಗಲು ಯೋಚಿಸುತ್ತಿದ್ದಾನೆ. ಒಬ್ಬರೊನ್ನಬ್ಬರು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಹರೀಶ ತನ್ನ ಬಾಲ್ಯದ ಗೆಳತಿ ಸುಮಾಳನ್ನು ಪ್ರಿಯಾಳಿಗೆ ಪರಿಚಯಿಸುತ್ತಾನೆ. ಹರೀಶ-ಸುಮಾಳ ಸಲಿಗೆ, ಒಡನಾಟ ನೋಡಿ ಪ್ರಿಯಾಳಿಗೆ ಮುಜುಗರವಾಗಿ, ಅವರಿಬ್ಬರ ಸಂಬಂಧದ ಬಗ್ಗೆ ನೇರವಾಗಿ ಪಶ್ನಿಸುತ್ತಾಳೆ. ಆಗ, ಹರೀಶ 'ಸುಮಾ ನನ್ನ ಬಾಲ್ಯದ ಸಹಪಾಠಿ, ನಮ್ಮ ಪಾಲಕರೂ ಸ್ನೇಹಿತರು. ಹಾಗಾಗಿ ನನ್ನಲ್ಲಿ ಅವಳಿಗೆ ಸಲಿಗೆ ಅಷ್ಟೇ. ಅವಳು ಮುಕ್ತ ಸ್ವಭಾವದವಳು. ಯಾವುದನ್ನೂ ಮುಚ್ಚುಮರೆ ಇಲ್ಲದೆ ನೇರವಾಗಿ ಹೇಳಿಬಿಡುತ್ತಾಳೆ. ನಾನೂ ಹಾಗೆ ಇರಬೇಕೆಂದು ಅವಳ ಆಸೆ. ನಮ್ಮಿಬ್ಬರಿಗೂ ಬೇರೆ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಸ್ಪಷ್ಟೀಕರಣ ಕೊಡುತ್ತಾನೆ. ಪ್ರಿಯಾಳಿಗೆ ಸಮಾಧಾನವಾಗದೆ, ಸುಮಾಳ ಜತೆ ಒಡನಾಟ ಕಡಿಮೆ ಮಾಡುವಂತೆ ಒತ್ತಾಯಿಸುತ್ತಾಳೆ. ಹರೀಶ ಸಮ್ಮತಿಸುತ್ತಾನೆ. ಆದರೆ ತಿಂಗಳ ನಂತರ, ಹೀಗೆ ಒಮ್ಮೆ ಹರೀಶನ ಮೊಬೈಲ್ ನಲ್ಲಿ ಸುಮಾಳ ಚಾಟ್ ನೋಡಿದಾಗ , ಪ್ರಿಯಾಳಿಗೆ ಆಘಾತವಾಗುತ್ತದೆ. ದಿನಂಪ್ರತಿ ಸುಮಾಳ ಮೆಸೇಜ್ 'ನಿನ್ನ ಹಾಗೂ ಪ್ರಿಯಾಳ ಸಂಬಂಧ ಎಲ್ಲಿವರೆಗೆ ಬಂತು, ಏನೇನು ನಡೆಯುತ್ತಿದೆ' ಇತ್ಯಾದಿ. ಅದಕ್ಕೆಹರೀಶನೂಮುಚ್ಚುಮರೆಯಿಲ್ಲದೆಉತ್ತರಿಸಿದ್ದಾನೆ. ಇದನ್ನು ಓದಿದ ಪ್ರಿಯಾಳ ಸಹನೆಯ ಕಟ್ಟೆ ಒಡೆಯಿತು. ಕೋಪದಿಂದ ಸ್ಪಷ್ಟಿಕರಣ ಕೇಳಿದಾಗ, ಹರೀಶ 'ನಾನೇನು ಅವಳನ್ನು ಮಾತಾಡಿಸಿಕೊಂಡು ಹೋಗಲಿಲ್ಲ. ಅವಳು ನನ್ನ ಬಗ್ಗೆ ಕೇಳಿದ್ದಕ್ಕೆ ನಾನು ಉತ್ತರಿಸಿದ್ದೇನೆ ಅಷ್ಟೇ' ಎಂದು ಹೇಳುತ್ತಾನೆ. ಅಕ್ಕೆ ಪ್ರಿಯಾ 'ನೀನು ಸ್ನೇಹ ಸಂಬಂಧ ಕಡಿಯಬೇಕೆಂದು ನಾನು ಹೇಳುತ್ತಿಲ್ಲ. ಆದರೆ ನಮ್ಮ ಖಾಸಗಿ ವಿಷಯವನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದು ನನಗೆ ಇಷ್ಟವಿಲ್ಲ. ಈ ವಿಷಯದಲ್ಲಿ ನೀನು ಅವಳಿಂದ ದೂರವಿರಬೇಕು' ಎನ್ನುತ್ತಾಳೆ. ಹರೀಶ 'ನೀನು ಸಿಟ್ಟು ಮಾಡಿಕೊಳ್ಳಬೇಡ. ನಾನು ಸುಮಾಳೊಂದಿಗೆ ಮಾತಾಡಿ ಗೊಂದಲ ಬಗೆಹರಿಸುತ್ತೇನೆ' ಎನ್ನುತ್ತಾನೆ.

ತನ್ನ ಕೆಲಸದಲ್ಲಿ ದೃಢ ಹಾಗೂ ಕೆಲವೊಮ್ಮೆ ನಿಷ್ಠುರವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಹರೀಶ, ಭಾವನಾತ್ಮಕವಾದ ಸಂಬಂಧಗಳಲ್ಲಿ ಬದ್ಧ ನಿಲುವು ತೆಗೆದುಕೊಳ್ಳಲು ಹಿಂಜರಿಯುತ್ತಾನೆ. ತನ್ನ ನಿರ್ಧಾರದಿಂದ ಯಾರಿಗೂ ನೋವು, ಬೇಜಾರಗಬಾರದೆಂದು ಅವನ ಅನಿಸಿಕೆ. ಸಂಬಂಧಗಳಲ್ಲಿ ಯಾವುದೇ ಸಂಘರ್ಷವಿರಬಾರದು ಎಂಬುದು ಅವನ ಉದ್ದೇಶ. ಈ ಪ್ರಕ್ರಿಯೆಯಲ್ಲಿ ಪ್ರಿಯಾಳನ್ನು ಕಳೆದುಕೊಳ್ಳಬಹುದು ಎಂಬ ಭಯದಿಂದ ಅವಳಿಗೆ ತಾನು ಸುಮಾಳಿಂದ ದೂರವಿರುತ್ತೇನೆ ಎಂದು ಹೇಳಿದ್ದಾನೆ . ಆದರೆ,'ಸುಮಾ ನನ್ನ ಬಾಲ್ಯದ ಗೆಳತಿ, ಅವಳನ್ನು ನಾನು ದೂರ ಮಾಡಿದರೆ, ಅವಳು ಕೋಪದಿಂದ ತನ್ನ ಮತ್ತು ನನ್ನ ತಂದೆ ತಾಯಿಯರಿಗೂ ಹೇಳಿ ದೊಡ್ಡ ರಂಪ ಮಾಡುತ್ತಾಳೆ. ಪರಿಣಾಮವಾಗಿ ಪಾಲಕರ ನಡುವೆ ಮೂಡುವ ವೈಮನಸ್ಯಕ್ಕೆ ನಾನೇ ಕಾರಣನಾಗುತ್ತೇನೆ, ಇದನ್ನೆಲ್ಲಾ ಹೇಗೆ ಸಹಿಸಿಕೊಳ್ಳಲಿ' ಎಂದು ಯೋಚಿಸಿ ಹತಾಶನಾಗುತ್ತಾನೆ; ಸುಮಾಳೊಂದಿಗೆ ಈ ವಿಷಯವನ್ನು ಚರ್ಚಿಸಲು ಧೈರ್ಯ ಬರುವುದಿಲ್ಲ. ಇದೇ ತೊಳಲಾಟದಲ್ಲಿ ಮನಸ್ಸು ಖಿನ್ನತೆಗೆ ಜಾರುತ್ತದೆ.

ಈ ಪ್ರಕರಣದಲ್ಲಿ ಬರುವ ಪಾತ್ರಗಳು, ಸಂಬಂಧಗಳ ಮಿತಿಯನ್ನು ನಿಭಾಯಿಸುವುದರಲ್ಲಿ ಎಡವಿರುವುದು ಗೋಚರವಾಗುತ್ತದೆ. ಪ್ರತಿ ವ್ಯಕ್ತಿಗೂ ತನ್ನ ವ್ಯಕ್ತಿತ್ವವನ್ನು ಸ್ವಸ್ಥವಾಗಿ ರೂಪಿಸಿಕೊಳ್ಳಲು ಎಲ್ಲೆಗಳನ್ನು ಹಾಕಿಕೊಳ್ಳುವುದು ಅಗತ್ಯ. ಭೌತಿಕ, ಬೌದ್ಧಿಕ, ಭಾವನಾತ್ಮಕ ಮಿತಿಗಳೊಂದಿಗೆ ಪ್ರಸ್ತುತ ಕಾಲಕ್ಕೆ ಅತ್ಯಗತ್ಯವಾದ ಡಿಜಿಟಲ್ ಪರಿಮಿತಿ , ಕಾಲಮಿತಿ ಹೀಗೆ ಹಲವಾರು ವಿಧದ ಸೀಮೆಗಳನ್ನು ನಿರ್ಧರಿಸುವುದು ವ್ಯಕ್ತಿಯ ಕರ್ತವ್ಯ.

ಮನೆಯ ಸುತ್ತಲೂ ನಮ್ಮ ಗಡಿಯನ್ನು ಗುರುತಿಸಲು ಸುತ್ತುಗೋಡೆಗಳನ್ನು ಕಟ್ಟುತ್ತೇವೆ. ಇದು ನಮ್ಮನ್ನು ಅನಗತ್ಯ ಮನುಷ್ಯರು, ಪ್ರಾಣಿಗಳಿಂದ ರಕ್ಷಿಸುತ್ತದೆ. ನಮಗೆ ಮತ್ತು ನಮ್ಮನ್ನು ಸಂಪರ್ಕಿಸುವ ಅಗತ್ಯವಿರುವವರಿಗೆ ಅನುಕೂಲವಾಗುವಂತೆ ಗೋಡೆಗೆ ದ್ವಾರ ಇಟ್ಟಿರುತ್ತೇವೆ. ಮನೆಯ ಸುರಕ್ಷತೆಗಾಗಿ ಗಡಿಯನ್ನು ಹಾಕಿದ ಹಾಗೆ, ಮನದ ಸುರಕ್ಷತೆಗಾಗಿ ನಾವು ಸಂಬಂಧಗಳಲ್ಲಿ ಎಲ್ಲೆಗಳನ್ನು ನಿರ್ಮಿಸುವುದು ಅವಶ್ಯ.

ಬಾಲ್ಯದಿಂದಲೇ ವ್ಯಕ್ತಿ ತನ್ನ ಎಲ್ಲೆಗಳನ್ನು ಗುರುತಿಸಿಕೊಳ್ಳಲು ಆರಂಭಿಸುತ್ತಾನೆ. ಮಕ್ಕಳು ತಮ್ಮ ವ್ಯಕ್ತಿತ್ವ ಬೆಳೆಸಿಕೊಳ್ಳುವ ಹಂತದಲ್ಲಿ ಅಗತ್ಯವಾಗಿರುವ ಎಲ್ಲೆಗಳನ್ನು ನಿರ್ವಹಿಸಲು ಸಹಕರಿಸಬೇಕಾದದ್ದು ಪಾಲಕರ ಕರ್ತವ್ಯ. ಇನ್ನೊಬ್ಬರ ವಸ್ತುಗಳನ್ನು ಅನುಮತಿಯಿಲ್ಲದೆ ಬಳಸುವುದು, ಹಿರಿಯರೊಂದಿಗೆ ಅಗೌರವದಿಂದ ಮಾತನಾಡುವುದು, ಸುರಕ್ಷತಾ ನಿಯಮಗಳನ್ನು ನಿರ್ಲಕ್ಷಿಸುವುದು; 'ಬೇಡ' ಎಂದ ಮೇಲೂ ಅದೇ ಕೆಲಸವನ್ನು ಮಾಡುವುದು; ತನ್ನ ಒಡಹುಟ್ಟಿದವರನ್ನು ನಿಯಂತ್ರಿಸಲು ಪ್ರಯತ್ನಿಸುವುದು, ಪ್ರೌಢ ಮಕ್ಕಳು 'ಪಾಲಕರಾಗಿ ನನ್ನ ಬೇಕು ಬೇಡಗಳನ್ನು ನೀವು ಗಮನಿಸುವುದೇ ಇಲ್ಲ ' ಎಂದು ಪಾಲಕರನ್ನು ತಪ್ಪಿತಸ್ಥರನ್ನಾಗಿ ಮಾಡಿ ಹಣಕ್ಕಾಗಿ ಪೀಡಿಸುವುದು... ಹೀಗೆ ಕಿರಿಯರು ಎಲ್ಲೆ ಮೀರಿ ವರ್ತಿಸುತ್ತಾರೆ. ಹಿರಿಯರು ಅವರ ನಡತೆಯನ್ನು ತಿದ್ದಿಕೊಳ್ಳುವ ಹಾಗೆ ನೋಡಿಕೊಳ್ಳಬೇಕು. ಮಿತಿಮೀರಿದ ವರ್ತನೆಗಳನ್ನು ಹಿರಿಯರಲ್ಲೂ ನಾವು ಕಾಣುತ್ತೇವೆ. ಉದಾ: ಹದಿಹರೆಯದ ಮಗ ತನ್ನ ಏಕಾಂತತೆಗೆ ಭಂಗವಾಗುತ್ತೆ, ಬಾಗಿಲು ತಟ್ಟಿ ಕೊಠಡಿಗೆ ಬನ್ನಿ ಎಂದು ತಾಯಿಗೆ ಹೇಳಿದರೆ, ಮಗನ ಮಾತನ್ನು ನಿರ್ಲಕ್ಷಿಸಿ ,'ನಾನು ನಿನ್ನ ತಾಯಿ. ನಾನು ಯಾವಾಗ ಬೇಕಾದರೂ ಒಳಗೆ ಬರಬಹುದು' ಎನ್ನುವುದು; ಹಿರಿಯರು ಮಕ್ಕಳ ವೃತ್ತಿ, ಸಂಬಂಧ ಅಥವಾ ಜೀವನಶೈಲಿಯ ಆಯ್ಕೆಗಳನ್ನು ನಿರಂತರವಾಗಿ ಟೀಕಿಸುವುದು; ಮಕ್ಕಳ ಆಲೋಚನೆಗಳು, ಭಾವನೆಗಳು ಅಥವಾ ಅಭಿಪ್ರಾಯಗಳನ್ನು ತಳ್ಳಿಹಾಕುವುದು; 'ನಾನು ನಿನಗೋಸ್ಕರ ಇಷ್ಟೆಲ್ಲಾ ಮಾಡಿದರೂ, ನೀನು ಮಾತ್ರ....' ಹೀಗೆ ನಕಾರಾತ್ಮಕ ಮಾತುಗಳ ಮೂಲಕ ತಪ್ಪಿತಸ್ಥ ಭಾವನೆಯನ್ನು ಮೂಡಿಸಿವುದನ್ನು ನಾವು ಕಾಣುತ್ತೇವೆ. ಇಂತಹ ಸನ್ನಿವೇಶಗಳಲ್ಲಿ ಮಿತಿಗಳ ಅಗತ್ಯವನ್ನು ಅರ್ಥ ಮಾಡಿಕೊಳ್ಳದ ಸಾಕಷ್ಟು ಜನರಿಗೆ ದ್ವಂದ್ವ ಮೂಡುವುದು ಸಹಜ. ತಾನು ನಿರ್ಮಿಸಿದ ಮಿತಿಯನ್ನು, ಇತರರು ಗೌರವಿಸದಿದ್ದರೆ, ತಾನು ಅವರಿಗೆ ಅಗೌರವ ತೋರಿಸಿದಂತೆಯೇ? ನಾನು ಹಾಕಿಕೊಂಡ ಚೌಕಟ್ಟು ಅಸಮಂಜಸವೆ? ನನಗೆ ಯಾವುದು ಒಪ್ಪಿಗೆ, ಯಾವುದಲ್ಲ ಎಂದು ನಿರ್ಧರಿಸುವ ಹಕ್ಕು ನನಗಿಲ್ಲವೇ? ಇಂತಹ ಪ್ರಶ್ನೆಗಳು ಮೂಡಿ, ಇತರರನ್ನು ತೃಪ್ತಿ ಪಡಿಸಲು ಸಾಕಷ್ಟು ಬಾರಿ ನಮ್ಮ ಮಿತಿಗಳನ್ನು ನಾವೇ ದುರ್ಬಲಗೊಳಿಸುತ್ತೇವೆ. ಇದರಿಂದ ತಾತ್ಕಾಲಿಕವಾಗಿ ಸಮಸ್ಯೆ ಬಗೆಹರಿದಿದೆ ಎನಿಸಬಹುದು. ಆದರೆ ಪ್ರಕ್ರಿಯೆಯಲ್ಲಿ ನಮ್ಮ ಆದ್ಯತೆಗಳನ್ನು ಕಡೆಗಣಿಸುತ್ತೇವೆ. ಇಂತಹ ಘಟನೆಗಳು ಪುನರಾವರ್ತಿಸಿದಾಗ ಗೊಂದಲ, ಮನಸ್ತಾಪವಾಗುತ್ತದೆ. ಸಂಬಂಧಗಳನ್ನು ಕಳೆದುಕೊಳ್ಳುವ ಭಯ, ಪಾಪ ಪ್ರಜ್ಞೆ, ದೃಢ ನಿಶ್ಚಯದ ಕೊರತೆ, ಹಿಂದಿನ ಅನುಭವಗಳು, ಸಾಮಾಜಿಕ ಕಟ್ಟುಪಾಡುಗಳು ಹೀಗೆ ಹಲವಾರು ಕಾರಣಗಳಿಂದ ವ್ಯಕ್ತಿ ತನ್ನ ಎಲ್ಲೆಗಳನ್ನು ನಿರ್ಮಿಸಲು ಹೆಣಗುತ್ತಾನೆ. ಮೇಲಿನ ಪ್ರಕರಣದಲ್ಲಿ ಪ್ರಿಯಳು ತನ್ನ ಅನಿಸಿಕೆಗಳನ್ನು ಹರೀಶನ ಮೇಲೆ ಹೇರುವ ಪ್ರಯತ್ನದಿಂದ ಮಿತಿ ಮೀರುತ್ತಿದ್ದರೆ, ಹರೀಶನಿಗೆ ತನ್ನ ಇತಿ ಮಿತಿಗಳನ್ನು ತಾನೇ ನಿರ್ಧರಿಸಲು ಸಾಧ್ಯವಾಗುತ್ತಿಲ್ಲ.

ಸ್ನೇಹ, ಪ್ರೀತಿಯಿದೆ ಎಂದಮಾತ್ರಕ್ಕೆ ಎಲ್ಲ ಖಾಸಗಿ ವಿಷಯಗಳನ್ನು ಯಾರ ಹತ್ತಿರವೂ ಹಂಚಿಕೊಳ್ಳಬೇಕೆಂಬುದು ನಿಯಮವೂ ಅಲ್ಲ, ಅನಿವಾರ್ಯವೂ ಅಲ್ಲ. ಯಾವುದನ್ನು, ಯಾರ ಹತ್ತಿರ, ಎಷ್ಟು ಹೇಳಬೇಕೆಂದು ವ್ಯಕ್ತಿ ತಾನಾಗಿಯೇ ನಿರ್ಧರಿಸಬೇಕು. ಎಲ್ಲೆಗಳನ್ನು ನಿರ್ಮಿಸುವ ಹಂತದಲ್ಲಿ ಮತ್ತೊಬ್ಬರಿಗೆ ಬೇಸರವಾಗುವುದು ಸಹಜವೇ. ಮಿತಿಯ ಅಗತ್ಯ ಅವರಿಗೆ ತಿಳಿದಿರುವುದಿಲ್ಲ. ನಿಮ್ಮನ್ನು ಗೌರವಿಸುವ ಮಂದಿ ನಿಮ್ಮ ಮಿತಿಗಳನ್ನು ಅರ್ಥ ಮಾಡಿಕೊಳ್ಳಲು, ಗೌರವಿಸುವ ಪ್ರಯತ್ನ ಮಾಡುತ್ತಾರೆ.

ಅದೇ ರೀತಿ ಎಲ್ಲೆಗಳು ಕಠಿಣ ಗೋಡೆಗಳಲ್ಲ. ಅವು ವ್ಯಕ್ತಿ, ಸಮಯ, ಸಂದರ್ಭಗಳಿಗೆ ಅನುಗುಣವಾಗಿ ಹೊಂದಿಕೊಳ್ಳಬಹುದಾದ ಸುರಕ್ಷಾ ಕವಚದಂತೆ. ಎಲ್ಲೆಗಳನ್ನು ನಿರ್ಮಿಸುವುದು ಎಂದರೆ ಸಂಬಂಧಗಳನ್ನು ನಿರ್ಬಂಧಿಸುವುದಲ್ಲ, ಬದಲಾಗಿ ವ್ಯಕ್ತಿಯ ಅಗತ್ಯಗಳನ್ನು ಆರೋಗ್ಯಕರವಾಗಿ ನಿಭಾಯಿಸುವುದು. ಹಿರಿಯರಿರಲಿ, ಕಿರಿಯರಿರಲಿ, ಮತ್ತೊಬ್ಬರ ಮಿತಿಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದಿಂದ ಸಂಬಂಧಗಳು ಗಟ್ಟಿಯಾಗುತ್ತವೆ. ಮಿತಿಗಳನ್ನು ಗುರುತಿಸುವಾಗ ಮೊದಲಿಗೆ ಕಷ್ಟವೆನಿಸಿದರೂ, ಸಂಬಂಧಗಳಲ್ಲಿ ನಿಧಾನವಾಗಿ ಗೌರವ ಹೆಚ್ಚುವುದು, ಸುರಕ್ಷೆಯ ಭಾವನೆಯನ್ನು ಮೂಡಿಸುವುದು, ಪರಸ್ಪರ ನಿರೀಕ್ಷೆಗಳಲ್ಲಿ ಸ್ಪಷ್ಟತೆ ಮೂಡುವುದು, ಋಣಾತ್ಮಕ ಪರಾವಲಂಬನೆಯನ್ನು ತಡೆಯುವುದು ಸಾಧ್ಯವಾಗುತ್ತದೆ. ಇದರಿಂದ ಮಾನಸಿಕ ನೆಮ್ಮದಿ ಪಡೆಯುವುದು ಖಚಿತ. ಇಂತಹ ಸಮಸ್ಯೆಗಳ ಬಗ್ಗೆ ಸಲಹೆ ಸೂಚನೆಗಳ ಅಗತ್ಯವಿದ್ದಲ್ಲಿ ನಮ್ಮ ಉಚಿತ ಸಹಾಯವಾಣಿಯನ್ನು ಸಂಪರ್ಕಿಸಬಹುದು.

ವಿ.ಸೂ. : ಇಲ್ಲಿ ಬರುವ ಪಾತ್ರಗಳ ಹೆಸರುಗಳನ್ನು ಬದಲಾಯಿಸಲಾಗಿದೆ,

ಉಚಿತ ಸಹಾಯವಾಣಿ ಸಂಖ್ಯೆ: 6362055380

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಕೃತಿಕೆ
೧೩

ಕಿರುಸುದ್ದಿ

ಸಂಸ್ಕೃತಿ-ಸಂಸ್ಕಾರ ಶಿಬಿರ

ಗದಗ: ನಗರದ ಯೋಗ ಪಾಠಶಾಲೆ ಮತ್ತು ಜಗದ್ಗುರು ತೋಂಟದಾರ್ಯ ಜಾತ್ರಾಮಹೋತ್ಸವ ಸಮಿತಿ ಸಹಯೋಗದಲ್ಲಿ ಬೇಸಿಗೆ ರಜೆ ಪ್ರಯುಕ್ತವಾಗಿ 21ನೇ ಸಂಸ್ಕೃತಿ-ಸಂಸ್ಕಾರ ಶಿಬಿರ ಆಯೋಜಿಸಲಾಗಿದೆ. ಶಿಬಿರವು ಏ.12 ರಿಂದ 10 ದಿನಗಳು ಸಿದ್ಧಲಿಂಗ ನಗರದಲ್ಲಿನ ಬಸವ ಯೋಗ ಮಂದಿರ (ಬಸವೇಶ್ವರ ಶಾಲಾ ಆವರಣ) ದಲ್ಲಿ ಪ್ರತಿದಿನ ಬೆಳಗ್ಗೆ 6.30 ರಿಂದ 10.30ರವರೆಗೆ ನಡೆಯುವುದು. ಶಿಬಿರದಲ್ಲಿ ಆರೋಗ್ಯ ಭಾಗ್ಯಕ್ಕೆ ನಿತ್ಯ ಯೋಗಾಭ್ಯಾಸ, ದೈಹಿಕ ಸದೃಢತೆಗಾಗಿ ಭಾರತೀಯ ಕ್ರೀಡೆಗಳು, ಮನೋಲ್ಲಾಸಕ್ಕಾಗಿ ಸಂಗೀತ / ನೃತ್ಯ / ಮೋಜಿನ ಆಟಗಳು, ವ್ಯಕ್ತಿತ್ವ ವಿಕಸನಕ್ಕಾಗಿ ತಜ್ಞರಿಂದ ಉಪನ್ಯಾಸಗಳು ಪರಿವರ್ತನೆಗಾಗಿ ಜಾಣ್ಮೆ ಪರೀಕ್ಷೆ / ಪರಿಸರ ಪ್ರಜ್ಞಾ ಪ್ರವಾಸ ವಿಷಯಗಳ ಬೌದ್ಧಿಕ ಮತ್ತು ಪ್ರಾಯೋಗಿಕವಾಗಿ ತರಬೇತಿ ನೀಡಲಾಗುವುದು. ಶಿಬಿರದಲ್ಲಿ 5 ರಿಂದ 10 ನೇ ತರಗತಿವರೆಗಿನ ಬಾಲಕ / ಬಾಲಕಿಯರು ಭಾಗವಹಿಸಲು ಅವಕಾಶವಿದೆ. ಪ್ರವೇಶ ಉಚಿತವಾಗಿರುವುದು. ಭಾಗವಹಿಸಲಿರುವ ಆಸಕ್ತ ವಿದ್ಯಾರ್ಥಿಗಳು ಏ.12 ರಂದು ಬೆಳಗ್ಗೆ 8.30ಕ್ಕೆ ಜರುಗಲಿರುವ ಶಿಬಿರ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕೆಂದು ಶಿಬಿರ ಸಂಯೋಜಕ ಕೆ.ಎಸ್ .ಪಲ್ಲೇದ ತಿಳಿಸಿರುವರು.

ಪೂರ್ವಭಾವಿ ಸಭೆ

ಗದಗ: ಸರ್ಕಾರದ ಆದೇಶದನ್ವಯ ಏ.21 ರಂದು ಆಚರಿಸಲಾಗುವ ಜಗದ್ಗುರು ಶಂಕರಾಚಾರ್ಯರ ಜಯಂತಿ ಅಂಗವಾಗಿ ಏ.9 ರಂದು ಬೆಳಗ್ಗೆ 10.30ಕ್ಕೆ ಅಪರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾಡಳಿತ ಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ಸಭೆಗೆ ಹಾಜರಾಗಿ ಸಲಹೆ/ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗದಗ: ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಅನುಷ್ಠಾನ ಮಾಡುತ್ತಿರುವ ಲ್ಯಾಪ್ ಟಾಪ್ ಯೋಜನೆಯಡಿ ಉನ್ನತ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ವಿತರಣೆ ಮಾಡಲು ಆಫ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಲು ಏ.17 ರಂದು ಕೊನೆಯ ದಿನವಾಗಿದೆ ಎಂದು ಜಿಲ್ಲೆಯ ಕನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಅಶೋಕ ಜಡಿಯವರ

ನರಗುಂದ: ಪಟ್ಟಣದ ದೇಸಾಯಿ ಗಲ್ಲಿ ನಿವಾಸಿ, ನರಗುಂದ ಘಟಕದ ಕೆಎಸ್‌ಆರ್‌ಟಿಸಿ ನೌಕರ ಅಶೋಕ ಖಂಡಪ್ಪ ಖಂಡಪ್ಪನವರ(ಜಡಿಯವರ) (56) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ.



ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4969-6709
ಅಜವಾನ	7669-9069
ಅಲಸಂದಿ	3677-6237
ಕಡಲೆ	1509-5470
ಉದ್ದು	5412-5412
ಹವೀಜ	8519-8519
ಒಣಮೆಣಸಿನಕಾಯಿ	2786-41109
ಹೆಸರು	1129-6412
ಹುರಳಿ	2469-4351
ಜೋಳ	1689-4589
ಗೋವಿನಜೋಳ	1212-1830
ಮಡಕಿ	10005-10005
ಸಾಸವಿ	3412-4829
ಕುಸಬಿ	5050-5656
ಎಳ್ಳು	6509-6509
ಸೂರ್ಯಕಾಂತಿ	4839-6252
ತೊಗರಿ	2012-5344
ಗೋಧಿ	1412-4112
ಹತ್ತಿ	7100-7100



ಗದಗ: ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಯ್ಕರ್ ದಂಪತಿ 40ನೇ ವರ್ಷದ ಮದುವೆ ವಾರ್ಷಿಕೋತ್ಸವದ ನಿಮಿತ್ತ ವಿದ್ಯಾರ್ಥಿಗಳಿಗೆ ನೋಟ್‌ಬುಕ್-ಪೆನ್ನು ವಿತರಣೆ, ಅನ್ನದಾಸೋಹ ಹಾಗೂ ಅಭಿನಂದನಾ ಸಮಾರಂಭ ನಡೆಯಿತು. ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಗದಗ-ಬೆಟಗೇರಿ ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಗುರಣ್ಣ ಬಳಗಾನೂರ, ನಗರಸಭಾ ಸದಸ್ಯ ಎಲ್.ಡಿ.ಚಂದಾವರಿ, ನಿವೃತ್ತ ಪ್ರಾಚಾರ್ಯ ಆರ್.ಎಸ್. ಪೂಜಾರ, ವೀರೇಶ್ವರ ಪುಣ್ಯಾಶ್ರಮದ ವ್ಯವಸ್ಥಾಪಕ ಹೇಮರಾಜಶಾಸ್ತ್ರೀಗಳು ಹಡಿಗೊಂಡ ಇದ್ದರು.

ಫಲಾನುಭವಿಗಳಿಗೆ ನಿವೇಶನ ನೀಡಲು ಆಗ್ರಹ

ನರಗುಂದ: ಆಶ್ರಯ ಯೋಜನೆಯ ಫಲಾನುಭವಿಗಳಿಗೆ ಹಕ್ಕು ಪತ್ರ ಹಾಗೂ ನಿವೇಶನ ನೀಡುವಂತೆ ಕೆ.ಆರ್.ಎಸ್ ಪಕ್ಷದ ಜಿಲ್ಲಾಧ್ಯಕ್ಷ ವೀರನಗೌಡ ಮೂಗನೂರ ಆಗ್ರಹಿಸಿದರು.

ತಾಲೂಕಿನ ಬನಹಟ್ಟಿ ಗ್ರಾಪಂ ವ್ಯಾಪ್ತಿಯಲ್ಲಿನ ಮೂಗನೂರ ಗ್ರಾಮದಲ್ಲಿನ ಆಶ್ರಯ ಯೋಜನೆಯ ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು ತಾಲೂಕ ದಂಡಾಧಿಕಾರಿಗಳ ಕಾರ್ಯಾಲಯದಲ್ಲಿ ತಹಶೀಲ್ದಾರ್ ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು. ತಾಲೂಕಿನ ಮೂಗನೂರ ಗ್ರಾಮದಲ್ಲಿನ ಬಡ ಜನತೆಗೆ 2002 ರಲ್ಲಿ ನಿವೇಶನಗಳನ್ನು ನೀಡಲು, ರ.ಸ.ನಂ.116/ಅ/2ಬ2 ರಲ್ಲಿಯ 1 ಎಕರೆ 10 ಗುಂಟೆ ಜಮೀನು ಸರ್ಕಾರ ಖರೀದಿಸಿದೆ. ಆ ಜಮೀನು ಈಗಾಗಲೇ ನರಗುಂದ ತಹಶೀಲ್ದಾರ್ ಅವರ ಹೆಸರಲ್ಲಿದೆ. ಬನಹಟ್ಟಿ ಗ್ರಾಪಂ ಸಾಮಾನ್ಯ ಸಭೆಯಲ್ಲಿ ಫಲಾನುಭವಿಗಳ ಹೆಸರನ್ನು ಠರಾವು ಪಾಸ್ ಮಾಡುವ ಮೂಲಕ ಆಯ್ಕೆ ಮಾಡಲಾಗಿದೆ. ಅಲ್ಲಿಂದ ಇಲ್ಲಿಯವರೆಗೂ ಬಡಜನತೆಗೆ ನಿವೇಶನಗಳನ್ನು ಹಂಚಿಕೆ ಮಾಡಿಲ್ಲ, ಕೂಡಲೇ ನಿವೇಶನಗಳನ್ನು ಆಯ್ಕೆಯಾದ ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕೆಂದು ಆಗ್ರಹಿಸಿದ್ದಾರೆ. ಹನುಮಂತಪ್ಪ ಆದೆಪ್ಪನವರ, ಶೋಭಾ ಮಲ್ಲನಗೌಡ್ರ, ಪೀರಾಭಿ ನದಾಫ, ಅಮೀನಬಿ ನದಾಫ, ಲಕ್ಷ್ಮವ್ವ ತಳವಾರ, ಶಾಂತವ್ವ ಶಾನವಾಡ, ಎಸ್.ಆರ್. ನದಾಫ, ನಾಗವ್ವ ಕ್ಯಾರಕೂಪ್ಪ, ನಾಗಪ್ಪ ಬಾರಕೇರ, ರುದ್ರಪ್ಪ ಬಾರಕೇರ, ಅರ್ಜುನಪ್ಪ ತಳವಾರ, ಫಕೀರಪ್ಪ ತಳವಾರ, ಯಲ್ಲಪ್ಪ ತಳವಾರ, ಪರಪ್ಪ ಬುಳ್ಳನ್ನವರ, ನಾಗಪ್ಪ ಮ್ಯಾಗೇರಿ, ಮೈಲಾರಪ್ಪ ನಾಯ್ಕರ, ಮೈಲಾರಪ್ಪ ಮಡಿವಾಳರ, ಹನುಮಂತಪ್ಪ ಚಾಲಿಹಾಳ, ಬಾಳಪ್ಪ ನಾಗನೂರ, ರುದ್ರಪ್ಪ ತಳವಾರ ಇತರರಿದ್ದರು.



ನರಗುಂದ: ತಾಲೂಕಿನ ಬನಹಟ್ಟಿ ಗ್ರಾಪಂ ವ್ಯಾಪ್ತಿಯಲ್ಲಿನ ಮೂಗನೂರ ಗ್ರಾಮದಲ್ಲಿನ ಆಶ್ರಯ ಯೋಜನೆಯ ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು ತಾಲೂಕ ದಂಡಾಧಿಕಾರಿಗಳ ಕಾರ್ಯಾಲಯದಲ್ಲಿ ತಹಶೀಲ್ದಾರ್ ಅವರಿಗೆ ಕೆ.ಆರ್.ಎಸ್ ಪಕ್ಷದ ಜಿಲ್ಲಾಧ್ಯಕ್ಷ ವೀರನಗೌಡ ಮೂಗನೂರ ಮನವಿ ಅರ್ಪಿಸಿ, ಆಶ್ರಯ ಯೋಜನೆಯ ಫಲಾನುಭವಿಗಳಿಗೆ ಹಕ್ಕು ಪತ್ರ ಹಾಗೂ ನಿವೇಶನ ನೀಡುವಂತೆ ಆಗ್ರಹಿಸಿದರು.

ಸಾರ್ವಜನಿಕರಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಲಹೆ

ಹವಾಮಾನ ಮುನ್ಸೂಚನೆಯ ಗಮನವಿರಲಿ

ಗದಗ: ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಗುಡುಗು ಮತ್ತು ಸಿಡಿಲು ಬಡಿತದಿಂದ ಉಂಟಾಗುವ ಪ್ರತಿಕೂಲ ಪರಿಣಾಮಗಳನ್ನು ತಗ್ಗಿಸಲು ಸಲಹೆ, ಸೂಚನೆಗಳನ್ನು ನೀಡಿದೆ. ಕರ್ನಾಟಕದ ಹಲವು ಭಾಗಗಳಲ್ಲಿ ಗುಡುಗು, ಸಿಡಿಲು ಸಾಮಾನ್ಯವಾಗಿ ಮುಂಗಾರು ಪೂರ್ವದಲ್ಲಿ ಹಾಗೂ ಮುಂಗಾರಿನಲ್ಲಿ ಕಾಣಿಸಿಕೊಳ್ಳುತ್ತದೆ. ಸಿಡಿಲು ಸಾಮಾನ್ಯವಾಗಿ ಮಧ್ಯಾಹ್ನ ಅಥವಾ ಸಂಜೆಯಲ್ಲಿ ಸಂಭವಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಗುಡುಗು ಸಿಡಿಲಿನಿಂದಾಗುವ ಅಪಾಯಗಳನ್ನು ತಗ್ಗಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

ಹೊರಗೆ ಹೋಗುವ ಅನಿವಾರ್ಯವಿದ್ದಲ್ಲಿ ಹವಾಮಾನ ಮುನ್ಸೂಚನೆ ಹಾಗೂ ಕಾಮನ್ ಅಲರ್ಟಿಂಗ್ ಪ್ರೊಟೋಕಾಲ್ ಮುಖಾಂತರ ಬರುವ ಸಂದೇಶಗಳನ್ನು ಮೊಬೈಲ್‌ನಲ್ಲಿ ಗಮನಿಸಬೇಕು. ಪ್ರತಿಕೂಲ ಹವಾಮಾನದ ಸಮಯದಲ್ಲಿ ವಿಶೇಷವಾಗಿ ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡಲು, ಜಾನುವಾರುಗಳನ್ನು ಮೇಯಿಸಲು, ಮೀನುಗಾರಿಕೆ, ಮತ್ತು ದೋಣಿಗಳನ್ನು ಚಲಾಯಿಸದಿರುವುದು ಅಥವಾ ಸಾಮಾನ್ಯ ಪ್ರಯಾಣಕ್ಕಾಗಿ ಮನೆಯಿಂದ ಹೊರಗೆ ಹೋಗದಿರುವುದು, ಗುಡುಗು ಸಿಡಿಲಿನ ಸಂದರ್ಭದಲ್ಲಿ ಲೋಹದ ತಗಡನ್ನು ಹೊದಿಸಿರುವ ಮನೆಗಳು ಸುರಕ್ಷಿತವಾಗಿರುವುದಿಲ್ಲ, ಸುರಕ್ಷಿತ ಕಟ್ಟಡಗಳಲ್ಲಿ ಆಶ್ರಯ ಪಡೆಯುವುದು, ಬೆಟ್ಟಗಳು, ಪರ್ವತ ಶ್ರೇಣಿಗಳು ಅಥವಾ ಶಿಖರಗಳಂತಹ ಎತ್ತರದ ಪ್ರದೇಶಗಳಿಂದ ಕೆಳಗೆ ಇಳಿದು ಪ್ರವಾಹ ಬರದಂತಹ ತಗ್ಗು ಪ್ರದೇಶವನ್ನು ಖಚಿತಪಡಿಸಿ ಆಶ್ರಯ ಪಡೆಯುವುದು, ನೀರಿನ ಮೂಲಗಳಾದ ಕೆರೆ ಮತ್ತು ನದಿಗಳಿಂದ ದೂರವಿರುವುದು, ವಿದ್ಯುತ್ ಉಪಕರಣ ಹಾಗೂ ವಿದ್ಯುತ್ ಸರಬರಾಜು ಮಾರ್ಗ, ದೂರವಾಣಿ ಸಂಪರ್ಕ, ಮೊಬೈಲ್ ಟವರ್, ಪವನ ವಿದ್ಯುತ್ ಗೋಪುರ ಹಾಗೂ ರೈಲು ಹಳಿಗಳಿಂದ ದೂರವಿರಬೇಕು. ಗುಡುಗು ಸಿಡಿಲಿನ ಸಮಯದಲ್ಲಿ ಗುಂಪಿನಲ್ಲಿದ್ದರೆ ಅಪಾಯವನ್ನು ಕಡಿಮೆ ಮಾಡಲು ಸಾಕಷ್ಟು ಅಂತರವನ್ನು ಕಾಯ್ದುಕೊಳ್ಳಲು ತಿಳಿಸಲಾಗಿದೆ.



- ಗುಡುಗು ಸಿಡಿಲಿನ ಮುನ್ಸೂಚನೆ ಇದ್ದಲ್ಲಿ ಪ್ರಯಾಣ ಮುಂದೂಡಿ
- ಮೋಟಾರ್ ಸೈಕಲ್ ಅಥವಾ ಇನ್ನಿತರೆ ಯಾವುದೇ ತೆರೆದ ವಾಹನಗಳ ಸಂಚಾರ ಮಾಡದಿರಿ
- ವಾಹನ ಚಾಲನೆಯಲ್ಲಿದ್ದರೆ ತಕ್ಷಣ ವಾಹನ ನಿಲ್ಲಿಸಿ ವಾಹನದಲ್ಲಿ ಆಶ್ರಯ ಪಡೆಯಿರಿ
- ಸಿಡಿಲಿನ ಸಂದರ್ಭದಲ್ಲಿ ವಾಹನ ಕಿಟಕಿ ಮುಚ್ಚಿ ವಾಹನದ ಒಳಗಿರಿ
- ಆಟದ ಮೈದಾನ, ಉದ್ಯಾನವನಗಳು, ಈಜುಕೊಳ ಮತ್ತು ಕಡಲ ತೀರಗಳಿಗೆ ಹೋಗುವುದನ್ನು ತಡೆಯಿರಿ ಎಂದು ಸಲಹೆ ನೀಡಿದ ಜಿಲ್ಲಾಧಿಕಾರಿ

ಮೊಬೈಲ್ ಫೋನ್ ಬಳಸದಿರಿ

ಗುಡುಗು ಮತ್ತು ಸಿಡಿಲಿನ ಸಂದರ್ಭದಲ್ಲಿ ಹೊರಾಂಗಣದಲ್ಲಿ ಕೆಲಸ ಮಾಡುತ್ತಿದ್ದರೆ ಮತ್ತು ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯಲು ಸಾಕಷ್ಟು ಸಮಯವಿಲ್ಲದಿದ್ದರೆ ಎರಡು ಕಾಲುಗಳನ್ನು ಜೋಡಿಸಿ ಮಂಡಿಯೂರಿ ಕುಳಿತುಕೊಂಡು ತಲೆಯನ್ನು ಬಗ್ಗಿಸಿ ಕಿವಿಗಳನ್ನು ಮುಚ್ಚಿಕೊಳ್ಳಬೇಕು. ವಿದ್ಯುತ್ ಅಥವಾ ಟೆಲಿಫೋನ್ ಕಂಬಗಳು ಅಥವಾ ಮರಗಳ ಕೆಳಗೆ ಆಶ್ರಯ ಪಡೆಯಬಾರದು, ಇವು ಸಿಡಿಲನ್ನು ಆಕರ್ಷಿಸುತ್ತವೆ. ಅರಣ್ಯ ಪ್ರದೇಶದಲ್ಲಿದ್ದರೆ ಚಿಕ್ಕ ಮರಗಳ ಕೆಳಗೆ ಆಶ್ರಯ ಪಡೆಯಬೇಕು. ಲೋಹದ ವಸ್ತುಗಳನ್ನು ಬಳಸಬಾರದು. ದ್ವಿ ಚಕ್ರ ವಾಹನಗಳು, ವಿದ್ಯುತ್ ಅಥವಾ ದೂರವಾಣಿ ಕಂಬಗಳು, ತಂತಿ ಬೇಲಿ, ಯಂತ್ರಗಳು ಮುಂತಾದವುಗಳಿಂದ ದೂರವಿರಬೇಕು. ಸಿಡಿಲಿನ ಸಂದರ್ಭದಲ್ಲಿ ಮೊಬೈಲ್ ಫೋನ್‌ಗಳನ್ನು ಬಳಸಬಾರದು. ಕಬ್ಬಿಣದ ಸಲಾಕೆಗಳಿಂದ ಕೂಡಿದ ಛತ್ರಿಗಳನ್ನು ಬಳಸಬಾರದು ಎಂದು ಸಲಹೆ ನೀಡಲಾಗಿದೆ.

> ದೋಣಿ ವಿಹಾರ ಅಥವಾ ಈಜುತ್ತಿದ್ದರೆ ಸಾಧ್ಯವಾದಷ್ಟು ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯಬೇಕು. ಮಿಂಚಿನ ಹೊಡೆತದಿಂದಾಗಿ ಕಾಡ್ಗಿಚ್ಚು ಸಂಭವಿಸುವ ಸಾಧ್ಯತೆಯಿರುವುದರಿಂದ ಅರಣ್ಯ ಪ್ರದೇಶದಿಂದ ದೂರವಿದ್ದು ಗಿಡಗಡ್ಡೆಗಳಿಲ್ಲದ ಸ್ವಚ್ಛ ಪ್ರದೇಶದ ಕಡೆಗೆ ಚಲಿಸಬೇಕು. ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
> ■ ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ

ವಿದ್ಯುತ್ ಶಕ್ತಿ ಸಂಪರ್ಕದಿಂದ ದೂರವಿರಿ

ಗುಡುಗು ಸಿಡಿಲಿನ ಸಮಯದಲ್ಲಿ ಕಿಟಕಿ, ಬಾಗಿಲುಗಳನ್ನು ಮುಚ್ಚಿ, ಬೆಂಕಿ ಮತ್ತು ವಿದ್ಯುತ್ ಶಕ್ತಿ ಸಂಪರ್ಕದಿಂದ ದೂರವಿರಬೇಕು. ಮಕ್ಕಳು, ವಯೋವೃದ್ಧರು ಹಾಗೂ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಲ್ಲಿ ಇರುವಂತೆ ಗಮನ ಹರಿಸಬೇಕು. ಹಾರುವ ಮತ್ತು ಅಪಘಾತಕ್ಕೆ ಕಾರಣವಾಗಬಹುದಾದ ಮರದ ಕಟ್ಟಿಗೆ ಅಥವಾ ಇತರೆ ಯಾವುದೇ ಅವಶೇಷಗಳನ್ನು ತೆಗೆದು ಹಾಕಬೇಕು. ಸಿಡಿಲು ಕಟ್ಟಡದ ಕೊಳಾಯಿ ಮತ್ತು ಲೋಹದ ಕೊಳವೆಗಳ ಮೂಲಕ ಹರಿಯುವ ಸಾಧ್ಯತೆ ಇರುವುದರಿಂದ ಸಿಡಿಲು ಸಂದರ್ಭದಲ್ಲಿ ಸ್ನಾನ ಅಥವಾ ಶವರ್ ತೆಗೆದುಕೊಳ್ಳಬಾರದು. ಪಾತ್ರೆಗಳನ್ನು ತೊಳೆಯಬಾರದು. ಬಟ್ಟೆ ಒಗೆಯಬಾರದು ಎಂದು ಸಲಹೆ ನೀಡಲಾಗಿದೆ.

ಮೃತರ ಕುಟುಂಬಗಳಿಗೆ ಪರಿಹಾರ ವಿತರಿಸಿದ ಶಾಸಕ ಜೆ.ಎಸ್. ಪಾಟೀಲ



ರೋಣ: ಕಳೆದ ವರ್ಷ ತಾಲೂಕಿನ ತಳ್ಳಿಹಾಳ ಗ್ರಾಮದ ಭಕ್ತರು ಪಾದಯಾತ್ರೆ ಮೂಲಕ ಹುಲಿಗೆಮ್ಮ ದೇವಿಯ ದರ್ಶನಕ್ಕೆ ತೆರಳುತ್ತಿದ್ದ ಸಂಧರ್ಭದಲ್ಲಿ ಅಪಘಾತಕ್ಕಿಡಾಗಿ ಸ್ಥಳದಲ್ಲಿ ಮೂವರು ಸಾವನ್ನಪ್ಪಿದ್ದರು.ಈ ಹಿನ್ನೆಲೆಯಲ್ಲಿ ಶಾಸಕ ಜಿ.ಎಸ್.ಪಾಟೀಲ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಮೃತ ಪಟ್ಟ ಕುಟುಂಬಸ್ಥರಿಗೆ ತಲಾ 2 ಲಕ್ಷ ರೂ.ಗಳ ಚೆಕ್‌ನ್ನು ಬುಧವಾರ ಗ್ರಾಮಕ್ಕೆ ತೆರಳಿ ವಿತರಣೆ ಮಾಡಿದರು.

ತಳ್ಳಿಹಾಳ ಗ್ರಾಮಸ್ಥರು ಪ್ರತಿ ವರ್ಷ ಹುಲಿಗೆಮ್ಮ ದೇವಿಯ ದರ್ಶನ ಪಡೆಯಲು ಪಾದಯಾತ್ರೆಯನ್ನು ಮಾಡುತ್ತಾ ಬಂದಿದ್ದಾರೆ. ಮೃತ ಪಟ್ಟ ಅನ್ನಪೂರ್ಣ ಮ್ಯಾಗೇರಿ, ಶರಣಪ್ಪ ಮ್ಯಾಗೇರಿ, ಪ್ರಕಾಶ ಮಾಡಲಗೇರಿ ಸಹ ಪ್ರತಿ ವರ್ಷ ದೇವಿಯ ದರ್ಶನಕ್ಕೆ ಹೊಗುತ್ತಿದ್ದರು. ಆದರೆ ಅ.6 2025ರಂದು ಶೀಗೆ ಹುಣ್ಣಿಮೆಯ ದಿನ ಬೆಳಗಿನ ಜಾವಾ ಗ್ರಾಮದ ಮೂವರು ಸಾವನ್ನಪ್ಪಿದ್ದು, ಶಾಸಕ ಜಿ.ಎಸ್.ಪಾಟೀಲ ಅಂದಿನ ಸಂದರ್ಭದಲ್ಲಿ ಗ್ರಾಮದಲ್ಲಿದ್ದು ಮೃತರ ಕುಟುಂಬಸ್ಥರಿಗೆ ಧೈರ್ಯ ತುಂಬಿ ಸರ್ಕಾರದಿಂದ ನೆರವು ಒದಗಿಸಲಾಗುವುದು ಎಂದಿದ್ದರು. ಈ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಭೇಟಿ ನೀಡಿ ಸಂತ್ರಸ್ತ ಕುಟುಂಬಗಳಿಗೆ ಸರ್ಕಾರದ ನೆರವು ಒದಗಿಸಿದರು.

ಈ ಸಂದರ್ಭದಲ್ಲಿ ಐ.ಎಸ್ .ಪಾಟೀಲ,ಯೂಸುಫ್ ಇಟಗಿ, ಯಚ್ಚರಗೌಡ ಗೋವಿಂದಗೌಡ್ರ, ಸೋಮು ನಾಗರಾಜ,ಅಭೀಷೇಕ ನವಲಗುಂದ ಸೇರಿದಂತೆ ಅನೇಕ ಮುಖಂಡರುಗಳಿದ್ದರು.

ಹಳೆಯ ವಿದ್ಯಾರ್ಥಿಗಳೇ ಶಿಕ್ಷಣ ಸಂಸ್ಥೆಯ ಆಸ್ತಿ

ನರೇಗಲ್ಲ: ಗ್ರಾಮೀಣ ಪ್ರದೇಶದಲ್ಲಿ 23 ವರ್ಷಗಳ ಹಿಂದೆ ನಮ್ಮ ಶಾಲೆಯಲ್ಲಿ ಅಧ್ಯಯನ ಮಾಡಿ ಇಂದು ದೇಶದ ವಿವಿಧ ಮೂಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸುತ್ತಾ ಕಲಿತ ಶಾಲೆಯ ಕೀರ್ತಿಯನ್ನು ಬಾನೆತ್ತರಕ್ಕೆ ಕೊಂಡೊಯ್ಯುವ ಮೂಲಕ ತಾವು ಶಾಲೆಯ ಹೆಸರನ್ನು ಬೆಳೆಸಿದ ನಿವು ನಮ್ಮ ಹೆಮ್ಮೆಯ ಆಸ್ತಿ ಎಂದು ಬಸವೇಶ್ವರ ಶಾಲೆಯ ಆಡಳಿತ ಮಂಡಳಿ ಚೇರಮನ್ ಹಾಗೂ ಸಂಸ್ಥೆಯ ಆಡಳಿತಾಧಿಕಾರಿ ಡಾ. ಜಿ.ಕೆ. ಕಾಳೆ ಹೇಳಿದರು.

ಸ್ಥಳೀಯ ಬಸವೇಶ್ವರ ಕನ್ನಡ ಮಾಧ್ಯಮ ಶಾಲೆಯಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿ, ಇತ್ತೀಚಿನ ದಿನಮಾನಗಳಲ್ಲಿ ವಿದ್ಯಾರ್ಥಿಗಳಲ್ಲಿ ಗುರುವಿನ ಬಗೆಗಿನ ಕಳಕಳಿ ಕಡಿಮೆಯಾಗುತ್ತಿರುವ ಇಂದಿನ ದಿನಮಾನಗಳಲ್ಲಿ ತಾವೆಲ್ಲ ಎರಡು ದಶಕ ಕಳೆದರೂ ಕಲಿತ ಶಿಕ್ಷಣ ಸಂಸ್ಥೆ ಹಾಗೂ ಗುರುವಿನ ಮೇಲಿನ ಗೌರವವನ್ನು ಕಾಯ್ದುಕೊಂಡಿರುವುದು ಹೆಮ್ಮೆಯ ಸಂಗತಿ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಎಂ.ಎ. ಹಿರೇವಡೆಯರ ಮಾತನಾಡಿ, ಹಿಂದಿನ ದಿನಮಾನಗಳಲ್ಲಿ ವಿದ್ಯಾರ್ಥಿ ಹಾಗೂ ಗುರುವಿನ ಮಧ್ಯೆ ಅವಿನಾಭಾವ ಸಂಬಂಧವಿತ್ತು. ಆಗ ಸಿಗುತ್ತಿದ್ದ ಸಂಬಳ ಅಲ್ಪವಾಗಿದ್ದರೂ ವೃತ್ತಿಗೌರವ ಅಲ್ಲಿನ ಪ್ರತಿ ಮಕ್ಕಳನ್ನು ತಮ್ಮ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುವ ಮೂಲಕ ಅವರೆಲ್ಲರಗೂ ಶಿಕ್ಷಣ ಧಾರೆಯರೆಯಲಾಗಿತ್ತು ಆ ಪ್ರಭಾವವೇ ಇಂದು ಈ ಗುರುವಂದನೆಯ ದಾರಿದೀಪ ಎಂದರು.

ವಿದ್ಯಾರ್ಥಿ ಪ್ರತಿನಿಧಿ ಡಾ. ವಿ.ಸಿ. ಇಲ್ಲೂರ ಮಾತನಾಡಿ, ಈ ಶಾಲೆ ನಮ್ಮಂತ ಸಹಸ್ರಾರು ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದು, ಇಲ್ಲಿನ ಗುರುವಿನ ಋಣಬಾರ ತೀರಿಸಲಾಗದು. ಆ ನಿಟ್ಟಿನಲ್ಲಿ ಎಲ್ಲ ಗುರುಗಳನ್ನು ಒಂದೆಡೆ ಶಾಲಾ ಆವರಣದಲ್ಲಿ ಸೇರಿಸುವದರ ಜೊತೆಗೆ ನಮ್ಮ ಬ್ಯಾಚಿನ ಸಮಸ್ತ ವಿದ್ಯಾರ್ಥಿಗಳನ್ನು ಸೇರಿಸಿ ಅವರಿಗೆ ಗೌರವ ಸಮರ್ಪಿಸುತ್ತಿರುವುದು ನಮ್ಮೆಲ್ಲರ ಪೂರ್ವ ಜನ್ಮದ ಪುಣ್ಯ ಎಂದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಮುಖ್ಯೋಪಾಧ್ಯಾಯಿನಿ ಬಿ.ಜಿ. ಶಿರಸಿ, ವಿದ್ಯಾರ್ಥಿ ಪ್ರತಿನಿಧಿಗಳಾದ ಡಾ.ವಿ.ಸಿ. ಇಲ್ಲೂರ, ಡಾ. ಜೀತೇಂದ್ರ ಮುಗಳಿ ಹಾಗೂ ಪೂರ್ಣಿಮಾ ಕುರಿ ಮಾತನಾಡಿದರು. ವಿದ್ಯಾರ್ಥಿ ಬಳಗದಿಂದ ಅಗಲಿದ 5 ಜನ ಸ್ನೇಹಿತರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. 33 ಜನ ಶಿಕ್ಷಕರನ್ನು ಸನ್ಮಾನಿಸಲಾಯಿತು. ಸಂಜೀವ ಮೇಟಿ ಸ್ವಾಗತಿಸಿದರು. ವಿಜಯಲಕ್ಷ್ಮೀ ಕೊರಧಾನ್ಯಮಠ ಹಾಗೂ ನೌಶಾದಬೇಗಂ ನಿರೂಪಿಸಿದರು. ಜ್ಯೋತಿ ಬಸವರಡ್ಡೇರ ವಂದಿಸಿದರು.



ಮತ್ತೊಬ್ಬರ ತುತ್ತಿಗೆ ಕೈಹಾಕುವ ಆಸೆ ಬಿಡಿ: ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ

ಮುಂಡರಗಿ: ಜೀವನ ನಮ್ಮ ಇಚ್ಛೆಯಂತೆ ನಡೆಯುವುದಿಲ್ಲ, ನಿಸರ್ಗಕ್ಕೆ ನಾವು ಹೊಂದಿಕೊಂಡು ಬದುಕಬೇಕು. ಜೀವನದಲ್ಲಿ ಬಯಸಿದ್ದು ಸಿಗಬೇಕು ಅಂದುಕೊಳ್ಳುತ್ತಾರೆ. ಆದರೆ ನಿಸರ್ಗವು ತೋಚಿದಂತೆ ಅದನ್ನು ಸ್ವೀಕಾರ ಮಾಡಿಕೊಂಡು ಮುನ್ನಡೆಯಬೇಕು ಎಂದು ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದರು.



ತಾಲೂಕಿನ ಪೇಠಾಲೂರ ಗ್ರಾಮದ ಆರಾಧ್ಯ ದೇವರಾದ ಹಾಲೇಶ್ವರ ಕೃಪಾ ಪೋಷಿತ ಶಿವಯೋಗಾಶ್ರಮದ 48ನೇ ಜಾತ್ರಾ ಮಹೋತ್ಸವದ ನಿಮಿತ್ತ ಜರುಗಿದ ಧರ್ಮಸಭೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಮನುಷ್ಯ ಜೀವನದಲ್ಲಿ ಉತ್ಸಾಹದಿಂದ ಬದುಕುವುದನ್ನು ಮರೆತಿದ್ದಾನೆ.ಹೀಗಾಗಿ ದುಃಖ ಆವರಿಸುತ್ತದೆ.ಮನುಷ್ಯನ ಮನಸ್ಸಿನೊಳಗೆ ವೈರತ್ವ ಇದೆ. ಆದರೆ ನಿಸರ್ಗದೊಳಗೆ ಎಲ್ಲಿ ಕೂಡ ವೈರತ್ವ ಇಲ್ಲ, ನಾವೆಲ್ಲ ಬಯಸಿದಂಗೆ ಅಪೇಕ್ಷೆ ಪಡುತ್ತೇವೆ ಇದೇ ದುಃಖಕ್ಕೆ ಕಾರಣವಾಗಿದೆ ಎಂದರು. ಜೀವನದಲ್ಲಿ ಮತ್ತೊಬ್ಬರ ನೋಡಿ ಅವರಂತೆ ನಾವು ಇರಬೇಕು ಅನ್ನಬಾರದು. ಮನುಷ್ಯ ಸಂತೋಷವಾಗಿ ಇರಬೇಕೆಂದರೆ ಮತ್ತೊಬ್ಬರ ತುತ್ತಿಗೆ ಕೈಹಾಕುವ ಆಸೆ ಬಿಡಬೇಕು. ದೇವರು ಏನು ನೀಡಿದ್ದಾನೋ ಅದನ್ನು ಸ್ವೀಕರಿಸಿ ಬಾಳಬೇಕು ಎಂದರು.

ನೆಗಳೂರಿನ ಗುರುಶಾಂತೇಶ್ವರ ಸ್ವಾಮೀಜಿ ಮಾತನಾಡಿ, ತಂದೆ-ತಾಯಿ ಮಕ್ಕಳಲ್ಲಿ ಸಂಸ್ಕಾರದ ಜೀವನವನ್ನು ನೀಡಬೇಕಾದರೆ ಜಾತ್ರೆ, ಧರ್ಮಸಭೆಗಳಲ್ಲಿ ಧರ್ಮ ಗುರುಗಳು ನೀಡುವ ಧಾರ್ಮಿಕ ಆಚಾರ ವಿಚಾರಗಳನ್ನು ಮಕ್ಕಳಲ್ಲಿ ಮೂಡಿಸಬೇಕು ಎಂದರು. ಪೇಠಾಲೂರಿನ ಹಾಲೇಶ್ವರ ಶರಣರು ಮಾತನಾಡಿ, ಮಣ್ಣು, ನೀರು, ಗಾಳಿಯಷ್ಟೇ ಗುರುವಿನ ಆಶೀರ್ವಾದ ಮುಖ್ಯ. ದಾನ-ಧರ್ಮದ ಮನೋಸ್ಥಿತಿಯುಳ್ಳ ಕೆಲವು ಜನರಿಂದ ಮಾತ್ರ ಧರ್ಮದ ಉಳಿವು ನಿಂತಿದೆ ಎಂದರು.

ಜಾತ್ರಾ ಸಮಿತಿಯ ಅಧ್ಯಕ್ಷ ವೇ.ಮೂ.ಮಲ್ಲಯ್ಯ ಹಿರೇಮಠ, ಜನಪದ ಕಲಾವಿದ ಗವಿಸಿದ್ಧಯ್ಯ ಹಳ್ಳಿಕೇರಿಮಠ, ಹಾಲಪ್ಪ ಕಬ್ಬೇರಳ್ಳಿ, ಹಾಲೇಶ ಸೂಡಿ, ಹಾಲಪ್ಪ ಹರ್ತಿ, ರವಿ ಸಂಶಿ, ಜಾತ್ರಾ ಸಮಿತಿ ಪದಾಧಿಕಾರಿಗಳು ಇತರರಿದ್ದರು.

ಹೋಟೆಲ್ ಒಡೆಯರ ಸಂಘದ ನೂತನ ಕಟ್ಟಡದ ಉದ್ಘಾಟನೆ ನಾಳೆ: ಎಚ್. ವಿಶ್ವನಾಥ ಶೆಟ್ಟಿ

ಗದಗ: ನಗರದ ಹೋಟೆಲ್ ಒಡೆಯರ ಸಂಘದ ನೂತನ ಕಟ್ಟಡದ ಉದ್ಘಾಟನೆ ಏ.10 ರಂದು ಬೆಳಗ್ಗೆ 10.30ಕ್ಕೆ ಹೊಸ ಬಸ್ ನಿಲ್ದಾಣದ ಹತ್ತಿರದಲ್ಲಿ ಜರುಗಲಿದೆ ಎಂದು ಹೋಟೆಲ್ ಒಡೆಯರ ಸಂಘದ ಜಿಲ್ಲಾಧ್ಯಕ್ಷ ಎಚ್.ವಿಶ್ವನಾಥ ಶೆಟ್ಟಿ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಉದ್ಘಾಟಿಸುವರು. ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಾಕ್ಷ ಡಿ.ಆರ್.ಪಾಟೀಲ, ರಾಜ್ಯ ಹೋಟೆಲ್‌ಗಳ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ಆಗಮಿಸುವರು. ಅಧ್ಯಕ್ಷತೆ ಹೋಟೆಲ್ ಒಡೆಯರ ಸಂಘದ ಜಿಲ್ಲಾಧ್ಯಕ್ಷ ಎಚ್. ವಿಶ್ವನಾಥ ಶೆಟ್ಟಿ ವಹಿಸುವರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ನಗರಸಭೆ ಸದಸ್ಯೆ ಪದ್ಮಾ ಕಟಗಿ, ಹೋಟೆಲ್ ಒಡೆಯರ ಸಂಘದ ಗೌರವಾಧ್ಯಕ್ಷ ಕೆ.ಸುಧಾಕರರಾವ ಹಾಗೂ ಬಿ.ರಾಜೀವ ಶೆಟ್ಟಿ ಉಪಸ್ಥಿತರಿರುವರು ಎಂದು ಹೇಳಿದರು. 45 ವರ್ಷಗಳ ಹಿಂದೆ ಅಂದಿನ ಹೋಟೆಲ್ ಉದ್ದಿಮೆದಾರ ಕೆ.ನಾರಾಯಣರಾವ್, ಶಂಕರರಾವ್, ಸುಧಾಕರ ರಾವ್, ಭಾಗವತರು, ಮೈಯ್ಯರ, ಶಿವಪುರ, ಪಿ.ಡಿ. ಕಾಮತ್, ಎನ್.ಎನ್. ಶಾನಭಾಗ, ಗದಗ ರೆಸ್ಟೋರೆಂಟ್ ಜಯದೇವ ಬಟ್ಟರು, ಅಜಂತಾ ಹೋಟೆಲ್ ಶೇಖರ ಶೆಟ್ಟಿ, ಕೃಷ್ಣ ವಿಲಾಸ ಉಚ್ಚಿಲ್, ಸುಖನಿವಾಸ ಖಾರಂತವರು, ಆಯೋಧ್ಯ ಹೋಟೆಲ್ ಬಿ.ರಾಜೂಶೆಟ್ಟಿಯವರು ಮೊದಲಾದವರಿಂದ ಪ್ರಾರಂಭಗೊಂಡ ಗದಗ-ಬೆಟಗೇರಿ ಹೋಟೆಲ್ ಸಂಘವು ಅಂದಿನಿಂದ ಇಂದಿನವರೆಗೆ ಕ್ರಿಯಾಶೀಲವಾಗಿ ಹಲವಾರು ಸಮಾಜ ಮುಖಿ ಕಾರ್ಯಕ್ರಮಗಳನ್ನು ಗದಗ ಜನತೆಗೆ ಕೊಡುವಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸುಧಾಕರ ಶೆಟ್ಟಿ, ಜಯಪಾಲ ಶೆಟ್ಟಿ, .ಪಿ.ವಿ.ಹೆಗಡೆ, ಕೆ.ಎ. ಸುಧಾಕರರಾವ್, ಬಿ.ರಾಜೀವ ಶೆಟ್ಟಿ, ಯಲ್ಲಪ್ಪ ಬಾವಿಕಟ್ಟಿ, ಉಮೇಶ ಶಾನಬಾಗ ಇದ್ದರು.



ಪುತ್ಥಳಿ ಸ್ಥಾಪನೆ ಶ್ಲಾಘನೀಯ: ಮುನಿಯಪ್ಪ



ನರಗುಂದ: ಕರ್ನಾಟಕ ಉತ್ತರ ಭಾಗದಲ್ಲಿ ಗುಲ್ಬರ್ಗ ಹೊರತುಪಡಿಸಿದರೆ, ಗದಗ ಜಿಲ್ಲೆಯ ನರಗುಂದ ತಾಲೂಕಿನಲ್ಲಿ ಮಾತ್ರ ಡಾ.ಬಾಬು ಜಗಜೀವನರಾವ ಅವರ ಪುತ್ಥಳಿ ಸ್ಥಾಪನೆಗೊಂಡಿದ್ದು ಸಂತೋಷದಾಯಕವಾಗಿದೆ ಎಂದು ನಾಗರಿಕ ಮತ್ತು ಆಹಾರ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.


ನಗರದಲ್ಲಿ ನೂತನವಾಗಿ ಸ್ಥಾಪನೆಗೊಳ್ಳುತ್ತಿರುವ ಡಾ.ಬಾಬು ಜಗಜೀವನ ರಾಂ ಅವರ ಮೂರ್ತಿಗೆ ಮತ್ತು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಧ್ವಜ ಸ್ತಂಭಕ್ಕೆ ಮಾಲಾರ್ಪಣೆ ಮಾಡಿದ ನಂತರ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ ರಾಂ ಅವರ ಪುತ್ಥಳಿ ಸ್ಥಾಪನೆಯ ವೃತ್ತದ ಅಭಿವೃದ್ಧಿಗಾಗಿ ಸಹಕಾರ ಬೇಕಾದರೆ ಏ.10ರಂದು ಬೆಂಗಳೂರು ಕಚೇರಿಗೆ ಬನ್ನಿ. ವ್ಯವಸ್ಥಿತ ರೀತಿಯಲ್ಲಿ ಪುತ್ಥಳಿ ಸ್ಥಾಪನೆ ಹಾಗೂ ಅಭಿವೃದ್ಧಿ ಕುರಿತು ಚರ್ಚಿಸೋಣ ಎಂದರು.

ಸುಬ್ಬಣ್ಣ ಹೊಸಕೋಟೆ, ಕೆ.ಬಿ. ಶಿವಣ್ಣ ಹಾಗೂ ಬೆಂಗಳೂರಿನ ವಿಶ್ವನಾಥ್ ಕೆ.ಎಚ್., ಡಾ.ಮುತ್ತು ಸುರಕೋಡ, ದತ್ತು ಜೋಗನ್ನವರ, ವಿಜಯ ಛಲವಾದಿ, ಗುರು ಕೆಂಗಾರಕರ್, ಫೈರುಲ್ ಕುರಹಟ್ಟಿ, ಯಶವಂತ ನಡುವಿನಮನಿ, ಕಿರಣ ಜೋಗನ್ನವರ, ನವೀನ್ ಜೋಗನ್ನವರ, ರವಿ ಚಿಂತಾಲ ಉಪಸ್ಥಿತರಿದ್ದರು.

ಅಪ್ಪಣ್ಣನವರ ಮೂರ್ತಿ ಪುನಃ ಪ್ರತಿಷ್ಠಾಪಿಸಿ

ಮುಂಡರಗಿ: ಬೀದರ ಜಿಲ್ಲೆ ಬಸವಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ ಇರುವ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಅಪ್ಪಣ್ಣನವರ ಮೂರ್ತಿ ಪುನಃ ಪ್ರತಿಷ್ಠಾಪನೆ ಮಾಡಬೇಕು ಎಂದು ಆಗ್ರಹಿಸಿ ತಾಲೂಕು ಶ್ರೀ ಶರಣ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ವತಿಯಿಂದ ಮುಖ್ಯಮಂತ್ರಿಗಳಿಗೆ ತಹಶೀಲ್ದಾರ್ ಮೂಲಕ ಮನವಿ ಸಲ್ಲಿಸಿ ಆಗ್ರಹಿಸಿದರು.

ಶ್ರೀ ಜ.ಅನ್ನದಾನೀಶ್ವರ ಸಂಸ್ಥಾನಮಠದಿಂದ ಪಾದಯಾತ್ರೆಯ ಮೂಲಕ ಆಗಮಿಸಿದ ಸಮಾಜದ ಜನರು ತಹಶೀಲ್ದಾರ್ ಕಚೇರಿ ಆವರಣದಲ್ಲಿ ಸಭೆ ನಡೆಸಿ ಘಟನೆಯನ್ನು ಖಂಡಿಸಲಾಯಿತು. ಸಮಾಜದ ರಾಜ್ಯಾಧ್ಯಕ್ಷ ದೇವು ಹಡಪದ ಮಾತನಾಡಿ, ಬಸವ ಕಲ್ಯಾಣದಲ್ಲಿ ವಿಶ್ವಗುರು ಬಸವಣ್ಣನವರ ಅರುವಿನ ಗುಹೆ ಪಕ್ಕದಲ್ಲಿಯೇ ಹಡಪದ ಅಪ್ಪಣ್ಣನವರ ಗುಹೆ ಇದ್ದು, ಅದರಲ್ಲಿ ಬೇರೆಯವರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದ ಪಂಚಕಮಿಟಿಯ ನಡೆ ಸರಿಯಾಗಿಲ್ಲ, ಗುಹೆಯಲ್ಲಿ ಹಡಪದ ಅಪ್ಪಣ್ಣವರ ಇಲ್ಲದಿರುವುದು ಹಡಪದ ಸಮೂದಾಯದವರಿಗೆ ನೋವುಂಟಾಗಿದೆ. ಮೂರ್ತಿಯನ್ನು ಪ್ರತಿಷ್ಠಾಪಿಸದಿದ್ದರೆ ಸ್ವಾಮಿಗಳ ಸಮೇತ ಬಸವಕಲ್ಯಾಣದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಅನ್ನದಾನ ಭಾರತಿ ಅಪ್ಪಣ್ಣ ಸ್ವಾಮಿಗಳನ್ನು ಪ್ರಾಧಿಕಾರದ ಸದಸ್ಯರನ್ನಾಗಿ ಮಾಡಬೇಕೆಂದು ಮನವಿ ಮಾಡಿದರು. ಸಮಾಜದ ತಾಲೂಕಾಧ್ಯಕ್ಷ ಈರಣ್ಣ ಹಡಪದ ಮಾತನಾಡಿದರು. ಚಂದ್ರಶೇಖರ ಹಡಪದ ಮನವಿ ಓದಿದರು. ಶರಣಪ್ಪ ಹಡಪದ, ರವಿ ಹಡಪದ, ದೇವರಾಜ ಹಡಪದ,ಮಂಜುನಾಥ ಹಡಪದ, ಸೇಖಣ್ಣ ಹಡಪದ, ಶಿವಾನಂದ ಹಡಪದ, ಗಂಗಧರ ಹಡಪದ, ಶಂಕ್ರಪ್ಪ ಹಡಪದ, ರೇವಣಸಿದ್ದಪ್ಪ ಹಡಪದ, ಚಿದಾನಂದಪ್ಪ ಹಡಪದ, ಕಳಕಪ್ಪ ಹಡಪದ, ಈರಣ್ಣ ಹಡಪದ ಮುಂತಾದವರಿದ್ದರು.



ಅನ್ಯ ಶರಣರ ಮೂರ್ತಿ ಪ್ರತಿಷ್ಠಾಪನೆಗೆ ಖಂಡನೆ




ಲಕ್ಷ್ಮೇಶ್ವರ: ಬೀದರ ಜಿಲ್ಲೆಯ ಬಸವಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತಕ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಅನ್ಯ ಶರಣರ ಮೂರ್ತಿ ಪ್ರತಿಷ್ಠಾಪಿಸಿರುವುದನ್ನು ಖಂಡಿಸಿ ಪಟ್ಟಣದಲ್ಲಿ ಹಡಪದ ಅಪ್ಪಣ್ಣ ಸಮಾಜದ ತಾಲೂಕು ಅಧ್ಯಕ್ಷ ಗುಡ್ಡಪ್ಪ ಹಡಪದ ಅವರನೇತೃತ್ವದಲ್ಲಿ ಪಟ್ಟಣದ ಪಂಪ್ ಸರ್ಕಲ್‌ನಿಂದ ಪಟ್ಟಣದ ಪ್ರಮುಖ ಬೀದಿಗಳ ಮುಖಾಂತರ ಸಾಗಿ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಉಪತಹಸೀಲ್ದಾರ್ ಪ್ರಶಾಂತ ಕಿಮಾಯಿ ಮನವಿ ಸ್ವೀಕರಿಸಿದರು. ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷ ಗುಡ್ಡಪ್ಪ ಹಡಪದ ಮತ್ತು ಯುವ ಮುಖಂಡ ಅಂಬರೀಶ ತೆಂಬದಮನಿ ಅವರು ಮಾತನಾಡಿದರು. ನಗರ ಘಟಕದ ಅಧ್ಯಕ್ಷ ಎಚ್.ಎಸ್. ವಿನೋದ, ಲಕ್ಷ್ಮಣ ನಾವಿ, ಮುತ್ತಪ್ಪ ನಾವಿ, ವೀರಣ್ಣ ಹಡಪದ, ಸೋಮು ನಾವಿ, ಶಂಕರ್ ನಾವಿ, ಯಲ್ಲಪ್ಪ ಹಡಪದ, ನಾಗಪ್ಪ ಹಡಪದ, ಮಂಜುನಾಥ ನಾವಿ, ನಿಂಗಪ್ಪ ಹಡಪದ, ತಿಪ್ಪಣ್ಣ ಹಡಪದ, ಸೋಮಣ್ಣ ಹಡಪದ, ಜಗದೀಶ ಹಡಪದ, ಈರಣ್ಣ ಹಡಪದ, ಆನಂದ ಹಡಪದ, ಪರಶುರಾಮ್ ಹಡಪದ, ಬಸಣ್ಣ ಹಡಪದ ಇತರರಿದ್ದರು.

ಹಡಪದ ಅಪ್ಪಣ್ಣ ಮೂರ್ತಿ ಮರು ಸ್ಥಾಪಿಸಿ

ಶಿರಹಟ್ಟಿ: ಶಿವಶರಣ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಬಸವೇಶ್ವರ ದೇವಸ್ಥಾನದ ಪಂಚಕಮಿಟಿಯವರು ಅಕ್ರಮವಾಗಿ ಹಡಪದ ಅಪ್ಪಣ್ಣನ ಮೂರ್ತಿ ತೆಗೆದು ಬೇರೆ ಇನ್ನೊಬ್ಬ ಶರಣರ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು ಖಂಡನೀಯ ಎಂದು ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ನಗರ ಘಟಕ ಅಧ್ಯಕ್ಷ ಯಲ್ಲಪ್ಪ ಮಾಗಡಿ ಕಿಡಿಕಾರಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಬೀದರ ಜಿಲ್ಲೆ ಬಸವ ಕಲ್ಯಾಣದಲ್ಲಿರುವ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಅಪ್ಪಣ್ಣನವರ ಮೂರ್ತಿ ಮರುಸ್ಥಾಪಿಸುವಂತೆ ಆಗ್ರಹಿಸಿ ತಹಶೀಲ್ದಾರ್ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. ಹಡಪದ ಅಪ್ಪಣ್ಣನ ಅರಿವಿನ ಗವಿಯಲ್ಲಿರುವ ಮೂರ್ತಿ ತೆಗೆದು ಹಾಕುವುದಲ್ಲದೇ ಬೇರೊಬ್ಬ ಶರಣರ ಮೂರ್ತಿ ಪ್ರತಿಷ್ಠಾಪಿಸಿ, ರಾತ್ರೋರಾತ್ರಿ ಬೋರ್ಡ್ ಕಿತ್ತುಹಾಕುವ ಮೂಲಕ ಹಡಪದ ಅಪ್ಪಣ್ಣ ಸಮಾಜಕ್ಕೆ ನೋವುಂಟು ಮಾಡಿದ್ದಾರೆ. ರಾಜ್ಯ ಸರ್ಕಾರ ಪಂಚಕಮಿಟಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಯಥಾವತ್ತಾಗಿ ಹಡಪದ ಅಪ್ಪಣ್ಣನ ಮೂರ್ತಿ ಅದೇ ಸ್ಥಳದಲ್ಲಿ ಮರುಸ್ಥಾಪಿಸಬೇಕು. ಈ ಸ್ಥಳವನ್ನು ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿ, ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ತಾಲೂಕಾಧ್ಯಕ್ಷ ಶರಣಪ್ಪ ಹಡಪದ, ರಮೇಶ ಮಾಗಡಿ, ಶ್ರೀಕಾಂತ ಹಡಪದ, ಮಂಜುನಾಥ ನಾವಿ, ವಿರೂಪಾಕ್ಷಪ್ಪ, ಪ್ರಕಾಶ, ರೇಣುಕಾ, ಸರೋಜಾ ನಾವಿ, ಮಲ್ಲಿಕಾರ್ಜುನ, ಸುಭಾಸ್, ದಯಾನಂದ, ನಾಗಪ್ಪ, ಮುದುಕಪ್ಪ, ಚಂದ್ರಶೇಖರ ಹಡಪದ, ರಾಜಶೇಖರ, ಮಹೇಶ, ಎಸ್.ಬಿ. ನಾವಿ ಇದ್ದರು.



ಮತ ಕೇಂದ್ರಗಳಿಗೆ ತೆರಳಿದ ಸಿಬ್ಬಂದಿ | 322 ಮತಗಟ್ಟೆ ಸ್ಥಾಪನೆ

ಉಪಚುನಾವಣೆಗೆ ಇಂದು ಮತದಾನ

ಬಾಗಲಕೋಟೆ : ಬಾಗಲಕೋಟೆಯ ಉಪಚುನಾವಣೆಗೆ ಗುರುವಾರ ಮತದಾನ ನಡೆಯಲಿದ್ದು, ಮತದಾನ ಕೇಂದ್ರಗಳಿಗೆ ಸಾಮಾಗ್ರಿಗಳ ಜತೆಗೆ ಸಿಬ್ಬಂದಿ, ಅಧಿಕಾರಿಗಳು ತೆರಳಿದರು. ಪ್ರತಿಯೊಂದು ಮತ ಯಂತ್ರಗಳನ್ನು ಪರಿಶೀಲಿಸಿಕೊಂಡು ಸಿಬ್ಬಂದಿ ತೆರಳಿದರು.

ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ ಏ.9ರಂದು ಮತದಾನ ನಡೆಯಲಿದ್ದು, ನವನಗರದ ಸೆಕ್ಟರ್ ನಂ.43ರಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ಥಾಪಿಸಲಾದ ಮಸ್ಟರಿಂಗ್ ಕೇಂದ್ರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಅವರು ಬುಧವಾರ ಭೇಟಿ ನೀಡಿ, ಪರಿಶೀಲಿಸಿದರು.

ಮಸ್ಟರಿಂಗ್ ಕಾರ್ಯದ ಮಾಹಿತಿ ಪಡೆದುಕೊಂಡ ಸಾಮಾನ್ಯ ವೀಕ್ಷಕರು ಸಿದ್ಧತೆಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ, ಚುನಾವಣಾ ಸಾಮಗ್ರಿ, ಸಿದ್ಧತಾ ಕೊಠಡಿಗಳಿಗೆ ತೆರಳಿ ಚುನಾವಣಾ ಆಯೋಗದ ಮಾರ್ಗಸೂಚಿ ಪಾಲಿಸಿಕೊಂಡು ಚುನಾವಣಾ ಕರ್ತವ್ಯ ನಿರ್ವಹಿಸುವಂತೆ ಮತಗಟ್ಟೆ ಅಧಿಕಾರಿಗಳಿಗೆ ತಿಳಿಸಿದರು. ಮತದಾನಕ್ಕೆ ಬೇಕಾದ ಎಲ್ಲ ಅಗತ್ಯ ಸಾಮಗ್ರಿಗಳನ್ನು ಪರಿಶೀಲಿಸಿಕೊಂಡು ಮತಗಟ್ಟೆಗೆ ತೆರಳಲು ತಿಳಿಸಿದ ಅವರು, ಮತಗಟ್ಟೆ ಸಿಬ್ಬಂದಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಿ ಚುನಾವಣಾ ಕಾರ್ಯಗಳು ನಿಯಮಾನುಸಾರ ಹಾಗೂ ಯಾವುದೇ ಅಡಚಣೆಗಳಿಲ್ಲದೇ ನಡೆಯುವಂತೆ ಸೂಚನೆಗಳನ್ನು ನೀಡಿದರು. ನಂತರ ಚುನಾವಣಾ ಸಾಮಗ್ರಿಗಳನ್ನು ಮತಗಟ್ಟೆ ಅಧಿಕಾರಿಗಳಿಗೆ ವಿತರಣೆ ಮಾಡಿದರು.

ಬಾಗಲಕೋಟೆ ವಿಧಾನಸಭಾ ಉಪ



> ಬಾಗಲಕೋಟೆ ಉಪಚುನಾವಣೆಯ ಮತಗಟ್ಟೆಗಳಿಗೆ ಭಿಗಿ ಭದ್ರತೆ ಕೈಗೊಳ್ಳಲಾಗಿದೆ. ಚುನಾವಣಾ ಆಯೋಗ ರೂಪಿಸಿದ ನಿಯಮಗಳನ್ನು ಉಲ್ಲಂಘಿಸಿದರೆ ಮುಲಾಜಿಲ್ಲದೇ ಕ್ರಮ ವಹಿಸಲಾಗುವುದು. ಪ್ರತಿಯೊಂದು ಮತಗಟ್ಟೆಗೆ ಪೊಲೀಸ್ ಸಿಬ್ಬಂದಿ, ಸಶಸ್ತ್ರ ಮೀಸಲು ಪಡೆಯ ಸಿಬ್ಬಂದಿ ನಿಯೋಜಿಸಲಾಗಿದೆ. ಮತಕ್ಷೇತ್ರದ ಪ್ರತಿಯೊಬ್ಬರೂ ಶಾಂತಿಯುತವಾಗಿ ಮತದಾನ ಮಾಡಬೇಕು.
>
> ■ **ಸಿದ್ಧಾರ್ಥ ಗೋಯಲ್**, ಎಸ್ಪಿ, ಬಾಗಲಕೋಟೆ

ಚುನಾವಣೆಯಲ್ಲಿ 1,26,999 ಪುರುಷ ಮತ್ತು 1,32,775 ಮಹಿಳಾ ಮತದಾರರು ಹಾಗೂ 23 ಇತರೆ ಸೇರಿ ಒಟ್ಟು 2,59,797 ಮತದಾರರಿದ್ದು, 385 ಸೇವಾ ಮತದಾರರು, 170 ಅಂಚೆ ಮತಪತ್ರಗಳು 90 ಪಿಡಬ್ಲ್ಯೂಡಿ ಮತದಾರರಿದ್ದಾರೆ. ಉಪ ಚುನಾವಣೆಗೆ ಒಟ್ಟು 322 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಮತಗಟ್ಟೆಗೆ ಒಬ್ಬ ಪ್ರಿಸೆಂಡಿಂಗ್ ಅಧಿಕಾರಿ, ಹಾಗೂ 3 ಜನ ಪೋಲಿಂಗ್ ಅಧಿಕಾರಿಗಳನ್ನು ನೇಮಿಸಲಾಗಿದೆ.

- ಮಸ್ಟರಿಂಗ್ ಕೇಂದ್ರಕ್ಕೆ ಡಿಸಿ, ವೀಕ್ಷಕರ ಭೇಟಿ, ಪರಿಶೀಲನೆ
- 1564 ಸಿಬ್ಬಂದಿ ನಿಯೋಜನೆ
- ಸೂಕ್ಷ್ಮ, ಅತೀ ಸೂಕ್ಷ್ಮ ಮತಗಟ್ಟೆಗೆ ಸಶಸ್ತ್ರ ಮೀಸಲು ಪಡೆ ಸಿಬ್ಬಂದಿ ನೇಮಕ

ಕಾಯ್ದಿರಿಸಿದ ಸಿಬ್ಬಂದಿಯೂ ಒಳಗೊಂಡಂತೆ ಒಟ್ಟು 1564 ಮತಗಟ್ಟೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಮತಗಟ್ಟೆ ಸಿಬ್ಬಂದಿಗಳು ಆಯಾ ಮತಗಟ್ಟೆಗಳಿಗೆ ತೆರಳಲು 35 ಬಸ್, 9 ಮಿನಿ ಬಸ್‌ಗಳು, 11 ಮ್ಯಾಕ್ಸಿ ಕ್ಯಾಬ್, 10 ಟ್ರ್ಯಾಕ್ಸ್ ವಾಹನಗಳ ವ್ಯವಸ್ಥೆ ಮಾಡಲಾಗಿದ್ದು, ಸಂಜೆ ಹೊತ್ತಿಗೆ ಮತಗಟ್ಟೆಗಳಿಗೆ ತೆರಳಿದರು.

ಜಿಪಂ ಸಿಇಒ ಶಶೀಧರ ಕುರೇರ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಮತದಾನಕ್ಕೆ ಬೇಕಾದ ಅಗತ್ಯ ಸಾಮಗ್ರಿಗಳ ವಿತರಣೆ ಕಾರ್ಯವನ್ನು ವೀಕ್ಷಣೆ ಮಾಡಿದರು. ತಮಗೆ ನೀಡಲಾದ ಸಾಮಗ್ರಿಗಳನ್ನು ಚೆಕ್ ಲಿಸ್ಟ್ ಪ್ರಕಾರ ಪರೀಕ್ಷಿಸಿಕೊಂಡು ಮತಗಟ್ಟೆಗೆ ತೆರಳಲು ತಿಳಿಸಿದರು.

ಚುನಾವಣಾ ಕಾರ್ಯಕ್ಕೆ ನಿಯೋಜಿಸಿದ ಮತಗಟ್ಟೆ ಸಿಬ್ಬಂದಿಗಳಿಗೆ ಬೆಳಗಿನ ಉಪಹಾರ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದ್ದು, ಎಲ್ಲರೂ ಊಟ ಸವಿದು ತಮ್ಮ ತಮ್ಮ ಕೇಂದ್ರಗಳಿಗೆ ತೆರಳಿದರು. ಚುನಾವಣಾ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಮತ್ತು ಶಾಂತಿಯುತವಾಗಿ ನಡೆಸುವ ಉದ್ದೇಶದಿಂದ ಸಿಬ್ಬಂದಿಗಳು ಅಗತ್ಯ ಸಾಮಗ್ರಿಗಳೊಂದಿಗೆ ನಿಯೋಜಿತ ಮತಗಟ್ಟೆಗಳಿಗೆ ಆಗಮಿಸಿದ್ದಾರೆ.

ಶಾಂತಿ–ಸಹಬಾಳ್ವೆಗೆ ಕೊಳ್ಳಿ ಇಟ್ಟ ಘಟನೆಗಳು

ಬದುಕು ಕಸಿಯುವ 'ಲವ್ ಜಿಹಾದ್'!

ಮಹಾಂತೇಶ ಕಣವಿ

ಧಾರವಾಡ: ಶಾಂತಿ–ಸಹಬಾಳ್ವೆಗೆ ಹೆಸರಾದ ಹುಬ್ಬಳ್ಳಿ–ಧಾರವಾಡದಲ್ಲಿ ಕಾಲೇಜು ವಿದ್ಯಾರ್ಥಿನಿಯರನ್ನೇ ಗುರಿಯಾಗಿಸಿಕೊಂಡು ನಡೆದ ಸರಣಿ ಹತ್ಯೆಗಳು ಮತ್ತು ಪ್ರೀತಿಯ ಹೆಸರಲ್ಲಿ ವಂಚನೆ ಮತ್ತು 'ಲವ್ ಜಿಹಾದ್' ಪ್ರಕರಣಗಳು ರಾಜ್ಯವನ್ನೇ ಬೆಚ್ಚಿ ಬೀಳಿಸಿವೆ.


ಹುಬ್ಬಳ್ಳಿ–ಧಾರವಾಡ ಅವಳಿನಗರದಲ್ಲಿ ಈಚೇಗೆ ನಡೆದಿರುವ ಹಲವಾರು ಘಟನೆಗಳು ಸಾಮಾಜಿಕ ಹಾಗೂ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಯ ಜೊತೆಗೆ ಆತಂಕಕ್ಕೂ ಕಾರಣವಾಗಿ, ಲವ್ ಜಿಹಾದ್ ಕುರಿತು ಜನರಲ್ಲಿ ಆಕ್ರೋಶ ವ್ಯಕ್ತವಾಗಿದೆ.

ನೇಹಾ ಹಿರೇಮಠ ಪ್ರಕರಣ: ಹುಬ್ಬಳ್ಳಿಯ ಬಿವಿಬಿ ಕಾಲೇಜು ಮೈದಾನದಲ್ಲಿಯೇ ನಡೆದ ನೇಹಾ ಹಿರೇಮಠ ಎಂಬ ಭೀಕರ ಹತ್ಯೆ ಇಡೀ ಪ್ರಕರಣಕ್ಕೆ ದೊಡ್ಡ ತಿರುವು ನೀಡಿತು. ಆರೋಪಿ ಫಯಾಜ್ ಎಂಬಾತ ಪ್ರೀತಿಯನ್ನು ನಿರಾಕರಿಸಿದ ಕಾರಣಕ್ಕೆ ಈ ಕೃತ್ಯ ಎಸಗಿದ್ದ ಎನ್ನಲಾಗಿದೆ.

ವಾಸ್ತವದಲ್ಲಿ ಇದು ಕೇವಲ ವೈಯಕ್ತಿಕ ದ್ವೇಷವಲ್ಲ, ಇದೊಂದು ಯೋಜಿತ 'ಲವ್ ಜಿಹಾದ್' ಎಂದು ಹಿಂದುಪರ ಸಂಘಟನೆಗಳು ಮತ್ತು ಸ್ವತಃ ನೇಹಾಳ ತಂದೆಯೇ ಗಂಭೀರ ಆರೋಪ ಮಾಡಿದ್ದು, ಸದ್ಯ ಆರೋಪಿಯು ಕಾನೂನು ಕುಣಿಯ ಕಂಬಿ ಹಿಂದಿದ್ದಾನೆ.

ಅಂಜಲಿ ಅಂಬಿಗೇರ ಕೊಲೆ: ನೇಹಾ ಪ್ರಕರಣದ ಬೆನ್ನಲ್ಲೇಯೇ ಅಂಜಲಿ ಎಂಬ ಯುವತಿಯನ್ನು

ಸಾಂದರ್ಭಿಕ ಚಿತ್ರ



ಆಕೆಯ ಮನೆಯಲ್ಲೇ ಇರಿದು ಕೊಂದ ಘಟನೆ ಹುಬ್ಬಳ್ಳಿಯ ಜನರಲ್ಲಿ ಭೀತಿಯನ್ನು ಹೆಚ್ಚಿಸಿತು. ಈ ಘಟನೆಯಲ್ಲೂ ಪ್ರೀತಿ ಮತ್ತು ಮದುವೆ ಒತ್ತಡದ ಅಂಶಗಳು ಕೇಳಿ ಬಂದಿದ್ದು ಗಮನಾರ್ಹ.

ದಿಗಂತ ವಿಶೇಷ

ಪೋಷಕರಲ್ಲಿ ಆತಂಕ: ಈ ಘಟನೆಗಳು ಕೇವಲ ಅಪರಾಧಗಳಾಗಿ ಉಳಿಯದೆ, ಅವುಗಳು ಸಮಾಜದಲ್ಲಿ ಧ್ರುವೀಕರಣಕ್ಕೆ ಕಾರಣವಾಗಿವೆ. ಅಲ್ಲದೇ, ಇಂದು ಅವಳಿನಗರದ ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ಕಾಲೇಜಿಗೆ ಕಳುಹಿಸಲು ಹಿಂದೇಟು ಹಾಕುವಂತಾಗಿದ್ದು ಸುಳ್ಳಲ್ಲ.

ಟ್ರೈನಿಂಗ್ ಧೋಕಾ: ಈಚೇಗೆ ಜಿಮ್ ಟ್ರೈನಿಂಗ್ ಹೆಸರಲ್ಲಿ ಯುವತಿ ಮೇಲಿನ ಲೈಂಗಿಕ ದೌರ್ಜನ್ಯ ನಾಚಿಗೇಡಿನ ಸಂಗತಿ. ಸಾಮಾಜಿಕ ಜಾಲತಾಣಗಳ ಮೂಲಕ ಹೆಣ್ಣು ಮಕ್ಕಳನ್ನು

> ಹುಬ್ಬಳ್ಳಿ–ಧಾರವಾಡದ ಸಾಂಸ್ಕೃತಿಕ ಪರಂಪರೆಗೆ ಲವ್ ಜಿಹಾದಿ, ವಂಚನೆ, ಕೊಲೆ ಪ್ರಕರಣಗಳು ಕಪ್ಪುಚುಕ್ಕೆ. ಪ್ರೀತಿಯ ಮುಖವಾಡದ ಹಿಂದಿರುವ ಕ್ರೌರ್ಯ ಮೆಟ್ಟಿ ನಿಲ್ಲಲು ಸಮಾಜ ಮತ್ತು ಕಾನೂನು ಒಟ್ಟಾಗಿ ಕೆಲಸ ಮಾಡಬೇಕಿದೆ. ನಮ್ಮ ಹೆಣ್ಣು ಮಕ್ಕಳಿಗೆ ಸುರಕ್ಷಿತ ವಾತಾವರಣ ನಿರ್ಮಿಸಬೇಕಿದೆ.
>
> ■ **ಪ್ರಮೋದ ಮುತಾಲಿಕ್**, ರಾಷ್ಟ್ರೀಯ ಅಧ್ಯಕ್ಷರು, ಶ್ರೀರಾಮಸೇನೆ

ಪರಿಚಯಿಸಿಕೊಂಡು ವಂಚಿಸುವ ಜಾಲದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ.

ಪೊಲೀಸ್ ಇಲಾಖೆಗೆ ಸವಾಲು: ಪ್ರೀತಿ ಹೆಸರಲ್ಲಿ ವಂಚನೆ, ಕೊಲೆ ಮತ್ತು ಲವ್ ಜಿಹಾದ್ ಪ್ರಕರಣ ಪೊಲೀಸರಿಗೆ ಸವಾಲಾಗಿವೆ. ಇವುಗಳನ್ನು ಪ್ರತ್ಯೇಕ ಅಪರಾಧ ಪ್ರಕರಣಗಳಾಗಿ ನೋಡುತ್ತಿದ್ದರೆ, ಜನರ ಒತ್ತಾಯಕ್ಕೆ ಸೈಬರ್ ಕ್ರೈಂ, ಮಹಿಳಾ ಸುರಕ್ಷತಾ ದಳಗಳು ಈಗ ಹೆಚ್ಚು ಸಕ್ರಿಯವಾಗಿವೆ.

ಪಾಲಕರಲ್ಲಿ ಜಾಗೃತಿ ಮುಖ್ಯ: ಪ್ರೀತಿಯ ಹೆಸರಿನಲ್ಲಿ ನಡೆಯುವ ವಂಚನೆ, ಲವ್ ಜಿಹಾದ್ ತಡೆಯಲು ಕೇವಲ ಕಾನೂನು ಸಾಲದು. ಕುಟುಂಬದ ಮಟ್ಟದಲ್ಲಿ ಮಕ್ಕಳೊಂದಿಗೆ ಮುಕ್ತ ಸಂವಾದ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯ ಕುರಿತು ಎಚ್ಚರಿಕೆ ವಹಿಸುವುದು ಅತ್ಯಗತ್ಯ.

ಕಿರುಸುದ್ದಿ

ಏ.12ರಿಂದ ಪ್ಲಾಟ್‌ಫಾರ್ಮ್ ಸಂಖ್ಯೆ ಬದಲಾವಣೆ

ಹುಬ್ಬಳ್ಳಿ: ಎಸ್‌ಎಸ್‌ಎಸ್ ಹುಬ್ಬಳ್ಳಿ ರೈಲ್ವೆ ನಿಲ್ದಾಣಕ್ಕೆ ಹೊಸ ರೈಲುಗಳ ಸೇರ್ಪಡೆ ಹಾಗೂ ಸಮಯ ಪರಿಷ್ಕರಣೆಯ ಹಿನ್ನೆಲೆಯಲ್ಲಿ ಕಾರ್ಯಾಚರಣೆಯ ಸುಗಮ ನಿರ್ವಹಣೆಗಾಗಿ ಹುಬ್ಬಳ್ಳಿ–ರಾಮೇಶ್ವರಂ ವಿಶೇಷ ರೈಲುಗಳ ಪ್ಲಾಟ್‌ಫಾರ್ಮ್ ಸಂಖ್ಯೆಯನ್ನು ಬದಲಾವಣೆ ಮಾಡಲಾಗಿದೆ. ಏ.12ರಿಂದ ಜಾರಿಗೆ ಬರಲಿದೆ. ಹುಬ್ಬಳ್ಳಿಯಿಂದ ಪ್ರತಿ ಭಾನುವಾರ ಬೆಳಗ್ಗೆ 6.50ಕ್ಕೆ ನಿರ್ಗಮಿಸುವ ಹುಬ್ಬಳ್ಳಿ–ರಾಮೇಶ್ವರ (07355) ರೈಲು ಇನ್ನು ಮುಂದೆ ಪ್ಲಾಟ್‌ಫಾರ್ಮ್ ಸಂಖ್ಯೆ 8 (3ನೇ ಪ್ರವೇಶ ದ್ವಾರ)ದಿಂದ ಸಂಚರಿಸಲಿದೆ. ಪ್ರತಿ ಮಂಗಳವಾರ ರಾತ್ರಿ 7.40ಕ್ಕೆ ಹುಬ್ಬಳ್ಳಿ ನಿಲ್ದಾಣಕ್ಕೆ ಆಗಮಿಸುವ ರಾಮೇಶ್ವರ–ಹುಬ್ಬಳ್ಳಿ(07356) ರೈಲು ಇನ್ಮುಂದೆ ಪ್ಲಾಟ್‌ಫಾರ್ಮ್ ಸಂಖ್ಯೆ 7 (3ನೇ ಪ್ರವೇಶ ದ್ವಾರ)ಕ್ಕೆ ಬಂದು ಸೇರಲಿದೆ. ಹೊಸ ರೈಲುಗಳ ಓಡಾಟ ಹಾಗೂ ಸೇವೆಗಳ ವಿಸ್ತರಣೆಯಿಂದಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಪ್ರಯಾಣಿಕರು ಗೊಂದಲಕ್ಕೀಡಾಗದೆ ನಿಗದಿತ ಪ್ಲಾಟ್‌ಫಾರ್ಮ್‌ಗಳಿಗೆ ಆಗಮಿಸಬೇಕು ಎಂದು ಕೋರಲಾಗಿದೆ.

37 ಮಕ್ಕಳ ರಕ್ಷಣೆ

ಹುಬ್ಬಳ್ಳಿ: ನೈರುತ್ಯ ರೈಲ್ವೆ ಸುರಕ್ಷಾ ಬಲ ಮಾರ್ಚ್ ತಿಂಗಳಲ್ಲಿ ನನ್ಹೆ ಫರಿಸ್ತೆ ಕಾರ್ಯಾಚರಣೆಯಡಿ 15 ಹುಡುಗಿಯರು ಸೇರಿದಂತೆ 37 ಮಕ್ಕಳನ್ನು ರಕ್ಷಿಸಿದೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ರೈಲ್ವೆ, 50.42 ಲಕ್ಷ ರೂ. ಮೌಲ್ಯದ ಪ್ರಯಾಣಿಕರ ಕಳೆದು ಹೋದ ವಸ್ತುಗಳನ್ನು ತ್ವರಿತವಾಗಿ ಕಂಡು ಹಿಡಿದು ಮರುಳಿಸಿದೆ. ಆರ್‌ಪಿಎಫ್ ಸಿಬ್ಬಂದಿ ಅಕ್ರಮವಾಗಿ ಮಾದಕ ವಸ್ತುಗಳ ಸಾಗಿಸುತ್ತಿದ್ದ 11 ಜನ ಆರೋಪಿಗಳ ಬಂಧಿಸಿ ಅವರಿಂದ 66.86 ಲಕ್ಷ ರೂ. ಮೌಲ್ಯದ ಮಾದಕ ವಸ್ತುಗಳ ವಶಕ್ಕೆ ಪಡೆದಿದೆ.

ಉಪಲಬ್ದ್ ಕಾರ್ಯಾಚರಣೆಯಡಿ 17.95 ಲಕ್ಷ ಮೌಲ್ಯದ ಟಿಕೆಟ್‌ಗಳನ್ನು ವಶಕ್ಕೆ ಪಡೆದಿದೆ. ಇಬ್ಬರು ವೃದ್ಧೆಯರ ರಕ್ಷಿಸಿ ಸಮರ್ಪಕವಾಗಿ ಪರಿಶೀಲಿಸಿ ಅವರ ಕುಟುಂಬ ಹಾಗೂ ಅಥವಾ ಎನ್‌ಜಿಒಗಳಿಗೆ ಹಸ್ತಾಂತರಿಸಲಾಗಿದೆ.

ಎಂಎಸ್‌ಎಂಇ ಪಾಲುದಾರರ ಸಮಾಲೋಚನಾ ಕಾರ್ಯಾಗಾರ

ಎಂಎಸ್‌ಎಂಇಗೆ ಪ್ರತ್ಯೇಕ ಸಚಿವಾಲಯ: ದರ್ಶನಾಪುರ

ಕಲಬುರಗಿ: ಕರ್ನಾಟಕದಲ್ಲಿ ಸೂಕ್ಷ್ಮ,ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್ ಎಂಇ) ಪ್ರತ್ಯೇಕ ಸಚಿವಾಲಯ ಸ್ಥಾಪಿಸಲಾಗುವುದು. 2026–27ನೇ ಸಾಲಿನ ರಾಜ್ಯದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಘೋಷಣೆ ಮಾಡಿದ್ದು, ಎಫ್‌ಕೆಸಿಸಿಐ ಮತ್ತು ಕಾಸ್ಸಿಯಾ ಸಂಸ್ಥೆಗಳ ಶಿಫಾರಸಿನಂತೆ ಈ ಕ್ರಮಕ್ಕೆ ಕೈಗೊಳ್ಳಲಾಗಿದೆ ಎಂದು ಸಚಿವ ಶರಣಬಸಪ್ಪಾ ದರ್ಶನಾಪುರ ಹೇಳಿದರು.

ನಗರದ ಕೆಕೆಸಿಸಿಐ ಎಸ್.ಆರ್. ರಘೋಜಿ ಸಭಾಂಗಣದಲ್ಲಿ ನಡೆದ ಎಂಎಸ್‌ಎಂಇ ಪಾಲುದಾರರ ಸಮಾಲೋಚನಾ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಕೈಗಾರಿಕೆಗಳನ್ನು ಬೆಂಗಳೂರು ಮಾತ್ರಕ್ಕೆ ಸೀಮಿತಗೊಳಿಸದೇ ಕಲ್ಯಾಣ ಕರ್ನಾಟಕ ಸೇರಿದಂತೆ ವಿವಿಧ ಭಾಗಗಳಲ್ಲಿ ಅಭಿವೃದ್ಧಿ ಪಡಿಸುವುದು ಸರ್ಕಾರದ ಉದ್ದೇಶ ಎಂದು ತಿಳಿಸಿದರು.

ಹೊಸ ಕೈಗಾರಿಕಾ ನೀತಿಯಲ್ಲಿ ಹಿಂದುಳಿದ ತಾಲೂಕುಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಲು ಸರ್ಕಾರ ಯೋಜನೆ ರೂಪಿಸಿದ್ದು, ಪಾಲುದಾರರ ಸಲಹೆಗಳನ್ನು ಪಡೆದು ಶೀಘ್ರದಲ್ಲೇ ಎಂಎಸ್‌ಎಂಇ ನೀತಿ ಜಾರಿಗೆ ತರಲಾಗುವುದು ಎಂದರು.



2032ರೊಳಗೆ ಕರ್ನಾಟಕವನ್ನು 1 ಟ್ರಿಲಿಯನ್ ಡಾಲರ್ ಆರ್ಥಿಕ ಶಕ್ತಿಯನ್ನಾಗಿ ರೂಪಿಸುವ ಗುರಿಯೂ ಇದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಕೈಗಾರಿಕಾ ಅಭಿವೃದ್ಧಿಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಕಲಬುರಗಿಯಲ್ಲಿ 595 ಎಕರೆ ಭೂಮಿಯನ್ನು ಕೈಗಾರಿಕಾ ಪ್ರದೇಶಕ್ಕೆ ಮೀಸಲಿಡಲಾಗಿದೆ. ಮಹಿಳಾ ಸಬಲೀಕರಣ, ಹೊಸ ಉದ್ಯಮಿಗಳಿಗೆ ತರಬೇತಿ ಹಾಗೂ ಬೆಂಬಲ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಅಪರ ನಿರ್ದೇಶಕ ಮಾಣಿಕ್ ವಿ.ರಘೋಜಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಲಯದ ಅಪಾರ ನಿರ್ದೇಶಕ ವಿ.ಎಸ್.ಹೊನ್ನಮನೆ, ಮುದ್ದು ಕುಮಾರ್, ಅರುಣ್ ಕುಮಾರ್, ಕಲ್ಯಾಣ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಕಾರ್ಯದರ್ಶಿ ಶಿವರಾಜ್ ಇಂಗಿನಶೆಟ್ಟಿ, ಕಲ್ಯಾಣ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಮಾಜಿ ಅಧ್ಯಕ್ಷ ಶಶಿಕಾಂತ್ ಬಿ ಪಾಟೀಲ್, ಕಲ್ಯಾಣ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಅಧ್ಯಕ್ಷ ಅಭಿಜೀತ್ ಆರ್ ಪಡಶೆಟ್ಟಿ,ವಾಣಿಜ್ಯ ಮಂಡಳಿ ರಾಯಚೂರು ಜಂಬಣ್ಣ ಯಕ್ಲಾಸ್ಪುರ, ಕಾರ್ಯದರ್ಶಿ, ಯಾದಗಿರಿ ಉಪಾಧ್ಯಕ್ಷ ವಿಷ್ಣುವ್ಯಾಸ, ಜಿಲ್ಲಾ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಅಬ್ದುಲ್ ಅಜೀಮ್ ಸೇರಿದಂತೆ ವಿಭಾಗಮಟ್ಟದ ಅಧಿಕಾರಿಗಳು ಇದ್ದರು.

ಉದ್ಯಮಿಗಳಿಗೆ ಬೆಂಬಲ

ಹೊಸ ಉದ್ಯಮಿಗಳಿಗೆ ಒಂದು ವರ್ಷದವರೆಗೆ ಮಾರ್ಗದರ್ಶನ, ಬ್ರ್ಯಾಂಡಿಂಗ್ ಮತ್ತು ಆನ್‌ಲೈನ್ ಮಾರ್ಕೆಟಿಂಗ್ ತರಬೇತಿ ನೀಡುವ ಮೂಲಕ ಜಾಗತಿಕ ಸ್ಪರ್ಧೆಗೆ ಸಿದ್ಧಪಡಿಸಲಾಗುವುದು. ಈ ನೂತನ ನೀತಿಯು ಟಿಯರ್–2 ಮತ್ತು ಟಿಯರ್–3 ನಗರಗಳ ಅಭಿವೃದ್ಧಿ, ಮಹಿಳಾ ಮತ್ತು ಯುವ ಉದ್ಯಮಿಗಳಿಗೆ ಆದ್ಯತೆ, ಹಾಗೂ ಸರಳೀಕೃತ ನಿಯಂತ್ರಣ ಪ್ರಕ್ರಿಯೆಗಳ ಮೇಲೆ ಗಮನ ಹರಿಸಿದೆ. ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಮತ್ತು ಸಬ್ಸಿಡಿಗಳ ಕುರಿತು ಪಾಲುದಾರರಿಂದ ಸಲಹೆಗಳನ್ನು ಪಡೆಯಲಾಗಿದ್ದು, ಕರ್ನಾಟಕವನ್ನು ದೇಶದ ಅತ್ಯಂತ ಎಂಎಸ್‌ಎಂಇ ಸ್ನೇಹಿ ರಾಜ್ಯವನ್ನಾಗಿ ಮಾಡುವುದು ಸರ್ಕಾರದ ಅಂತಿಮ ಗುರಿಯಾಗಿದೆ ಎಂದು ಸಚಿವ ಶರಣಬಸಪ್ಪಾ ದರ್ಶನಾಪುರ ಹೇಳಿದರು.

ಗ್ರಾಮದೇವಿಯರ ಸಂಭ್ರಮದ ಹೊನ್ನಾಟ



ಧಾರವಾಡ: ನಗರದ ಐತಿಹಾಸಿಕ ಮಾಳಾಪೂರದ ದ್ಯಾಮವ್ವ ಮತ್ತು ದುರ್ಗವ್ವ ದೇವಿಯರ ಐದು ದಿನಗಳು ನಡೆಯುವ ಭವ್ಯ ಜಾತ್ರಾ ಮಹೋತ್ಸವದ ಹಿನ್ನೆಲೆ ಬುಧವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಡಗರ–ಸಂಭ್ರಮದಿಂದ ಹೊನ್ನಾಟ ನಡೆಯಿತು.

ಜಾತ್ರೆಯ ನಾಲ್ಕನೇ ದಿನವಾದ ಬುಧವಾರ ಸಕಲ ಧಾರ್ಮಿಕ ವಿಧಾನಗಳೊಂದಿಗೆ ದೇವಿಯರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಮಧ್ಯಾಹ್ನ ದೇವಸ್ಥಾನದ ಆವರಣದಲ್ಲಿ ನಡೆದ ಹೊನ್ನಾಟದಲ್ಲಿ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ಪರಸ್ಪರ ಬಣ್ಣ ಎರಚುತ್ತ ಉಧೋ ಉಧೋ ಎಂಬ ಜಯಘೋಷಗಳೊಂದಿಗೆ ಮಾಳಾಪೂರದ ಗಲ್ಲಿ ಗಲ್ಲಿಗಳಲ್ಲಿ ಹಬ್ಬದ ಕಳೆ ಮನೆ ಮಾಡಿತ್ತು. ಹೊನ್ನಾಟದಿಂದ ಭಕ್ತರು ಪರಸ್ಪರ ಹಳದಿ ಮತ್ತು ಗುಲಾಬಿ ಬಣ್ಣದ ಬುಕ್ಕಾ ಹಾಗೂ ಭಂಡಾರ ಎರಚಿ ಸಂಭ್ರಮಿಸಿದರು. ಡೊಳ್ಳು ಕುಣಿತ, ಕರಡಿ ಮಜಲು, ಭಜನಾ ಮಂಡಳಿಗಳ ವಾದ್ಯ ಘೋಷಗಳು ಜಾತ್ರೆಗೆ ಮೆರುಗು ನೀಡಿದವು. ಅಪಾರ ಜನಸ್ತೋಮವಿದ್ದರೂ, ಹಿರಿಯರು ಮತ್ತು ಯುವಕರ ತಂಡ ಸುಗಮವಾಗಿ ಉತ್ಸವ ನಡೆಯಲು ಬಹಳಷ್ಟು ಅನುಕೂಲ ಮಾಡಿಕೊಟ್ಟರು.

ಬೆಳಗ್ಗೆಯಿಂದ ಮಾಳಾಪೂರ, ಕಮಲಾಪುರ, ನಾರಾಯಣಪೂರ, ಗುಲಗಂಜಿಕೊಪ್ಪ, ಸೈದಾಪೂರದ ಭಕ್ತರ ಸಾಗರ ದೇವಸ್ಥಾನದತ್ತ ಹರಿದುಬಂದಿತ್ತು. ಹರಕೆ ಹೊತ್ತ ಭಕ್ತರು, ದೇವಿಯರಿಗೆ ಉಡಿ ತುಂಬಿ, ನೈವೇದ್ಯ ಅರ್ಪಿಸಿ, ದೇವಿಯರ ದರ್ಶನ ಪಡೆದರು. ನಮ್ಮ ಸಂಸ್ಕೃತಿಯ ಪ್ರತೀಕ. ಪ್ರತಿ ವರ್ಷದಂತೆ ಈ ಬಾರಿಯೂ ದೇವಿಯರ ಆಶೀರ್ವಾದ ಪಡೆಯಲು ಸಾವಿರಾರು ಜನ ಸೇರಿರುವುದು ಸಂತೋಷ ತಂದಿದೆ ಎಂದು ಸ್ಥಳೀಯ ಸಮಿತಿ ಸದಸ್ಯರು ಹರ್ಷ ವ್ಯಕ್ತಪಡಿಸಿದರು.

ಖರ್ಗೆ ಹೇಳಿಕೆ ಜಿಹಾದಿ ಸಂಸ್ಕೃತಿ ಪ್ರತೀಕ: ಟೆಂಗಿನಕಾಯಿ

ಹುಬ್ಬಳ್ಳಿ: ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಸ್ಸಾಂ ಚುನಾವಣಾ ರ‍್ಯಾಲಿಯಲ್ಲಿ ಬಿಜೆಪಿ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ವಿಷಯ ಹಾವಿಗೆ ಹೋಲಿಸಿರುವುದು ಸರಿಯಲ್ಲ, ಅದು ಜಿಹಾದಿ ಸಂಸ್ಕೃತಿ ಪ್ರತೀಕವಾಗಿದೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಕಿಡಿಕಾರಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಬಿಜೆಪಿ, ಆರ್‌ಎಸ್‌ಎಸ್ ವಿಷಯ ಹಾವು, ಮುಸ್ಲಿಮರು ನಮಾಜ್ ಮಾಡುವಾಗ ಅವು ಕಂಡರೆ ಹೊಡೆದು ಕೊಲ್ಲಬೇಕು ಎಂದು ಹೇಳಿದ್ದು, ಹಿರಿಯ ರಾಜಕಾರಣಿಯಾಗಿರುವ ನಿಮಗೆ ಶೋಭೆ ತರುವುದಲ್ಲ ಎಂದಿದ್ದಾರೆ.

ಸಾರ್ವಜನಿಕ ಸ್ಥಳದಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿರುವುದು, ನಿಮ್ಮ ಜಿಹಾದಿ ಮನಸ್ಥಿತಿಗೆ ಹಿಡಿ ಕೈ ಗನ್ನಡಿಯಾಗಿದೆ. ಈಗ ನಿಮಗೆ ವಯಸ್ಸಾಗಿದ್ದು, ಮುಸ್ಲಿಮರ ಓಲೈಕೆ ಮಾಡುವ ನೀವು ಏನು ಬೇಕಾದರೂ ಹೇಳಬಹುದಾ ಎಂದು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷವನ್ನು ದೇಶದ ಜನರು ಆಗಲೇ ಕಿತ್ತು ಮೂಲೆಗುಂಪು ಮಾಡಿದ್ದಾರೆ. ನಿಮಗೆ ಯಾವ ರಾಜ್ಯಗಳಲ್ಲಿಯೂ ನೆಲೆ ಇಲ್ಲದೆ ವಿಲವಿಲ ಒದ್ದಾಡುವಂತಾಗಿದೆ. ನಿಮ್ಮ ಪಕ್ಷದ ಸಿದ್ಧಾಂತ, ತತ್ವ, ಭಾವನೆಗಳನ್ನು ಜನರು ಅರಿತು ಈಗಾಗಲೇ ಜನರು ಕಡೆಗಣಿಸಿದ್ದಾರೆ. ನಿಮ್ಮೆಲ್ಲರನ್ನು ಮನೆಗೆ ಕಳಿಸಿ ನಿವೃತ್ತಿಯನ್ನು ಪಡೆಯಲು ಜನ ಸಲಹೆ ನೀಡಿದ್ದಾರೆ. ಆದರೂ ಸಹ ನಿಮ್ಮ ನಿಲವು ಬದಲಾಗದೆ ಹಾಗೆ ಉಳಿದಿದೆ. ಬದಲಾವಣೆ ಆಗುತ್ತಿಲ್ಲ, ಇನ್ನಾದರೂ ಬುದ್ಧಿ ಕಲಿತು ನಿವೃತ್ತಿ ಹೊಂದಿ ಕುಳಿತುಕೊಳ್ಳುವುದು ಸೂಕ್ತ ಎಂದು ಹೇಳಿದ್ದಾರೆ.

ಭೂತನಾಳ ಕೆರೆಯಲ್ಲಿ ಮುಳುಗಿ ಮೂವರ ಸಾವು

ವಿಜಯಪುರ: ನಗರ ಹೊರ ವಲಯ ಭೂತನಾಳ ಕೆರೆಯಲ್ಲಿ ಬಾಲಕ ಸೇರಿ ಮೂವರು ಬಿದ್ದು ದಾರುಣ ಸಾವಿಗೀಡಾದ ಘಟನೆ ನಡೆದಿದೆ.

ಬೆಂಗಳೂರಿನ ಆರ್.ಟಿ.ನಗರ ನಿವಾಸಿಗಳಾದ ಮಹಮ್ಮದ್ ಹಯಾತ್ (12), ಹೈದರ್ ಪಾಶಾ (32) ಹಾಗೂ ಅಬ್ದುಲ್ ಖುದ್ದುಸ್ (35) ಮೃತ ದುರ್ದೈವಿಗಳು.ಪ್ರವಾಸಕ್ಕಾಗಿ ಬೆಂಗಳೂರಿನಿಂದ ಕುಟುಂಬ ಸಮೇತ ವಿಜಯಪುರಕ್ಕೆ ಬಂದಿದ್ದ ಈ ತಂಡದವರು ಕೆರೆ ವೀಕ್ಷಣೆಗೆ ಹೋದ ವೇಳೆ ಈ ಅವಘಡ ನಡೆದಿದೆ. ಒಟ್ಟು 14 ಜನರ ತಂಡ ವಿಜಯಪುರ ಪ್ರವಾಸಕ್ಕೆ ಆಗಮಿಸಿದ್ದು, ಕೆರೆಯ ಬಳಿ ತೆರಳಿದ್ದ ವೇಳೆ ದುರ್ಘಟನೆ ಸಂಭವಿಸಿದೆ.

ನೀರಿನಲ್ಲಿ ಇಳಿದಿದ್ದ ಬಾಲಕ ಹೈದರ್ ಪಾಶಾ ಮುಳುಗುತ್ತಿದ್ದಂತೆ, ಆತನ ರಕ್ಷಣೆಗೆ ಅಬ್ದುಲ್ ಖುದ್ದುಸ್ ಹಾಗೂ ಮತ್ತೊಬ್ಬರು ಮುಂದಾಗಿದ್ದಾರೆ. ಆದರೆ, ದುರದೃಷ್ಟವಶಾತ್ ಮೂವರೂ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಘಟನೆಯ ಮಾಹಿತಿ ತಿಳಿದ ತಕ್ಷಣ ಅಗ್ನಿಶಾಮಕ ದಳ ಸಿಬ್ಬಂದಿ ಹಾಗೂ ಆದರ್ಶ ನಗರ ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಮೂವರನ್ನು ನೀರಿನಿಂದ ಹೊರ ತೆಗೆದರು.

ಬಾಲಕ ಮಹಮ್ಮದ್ ಹಯಾತ್ ಹಾಗೂ ಹೈದರ್ ಪಾಶಾ ಸ್ಥಳದಲ್ಲೇ



ಮೃತಪಟ್ಟಿದ್ದು, ತೀವ್ರ ಅಸ್ವಸ್ಥಗೊಂಡಿದ್ದ ಅಬ್ದುಲ್ ಖುದ್ದುಸ್ ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಮೃತದೇಹಗಳನ್ನು ವಿಜಯಪುರ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದ್ದು, ಮರಣೋತ್ತರ ಪರೀಕ್ಷೆಯ ನಂತರ ಕುಟುಂಬಸ್ಥರಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗಿದೆ. ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಆದರ್ಶ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಲೆ ಇಲ್ಲದೆ ಕಂಗಾಲಾದ ಅನ್ನದಾತ: 2 ಎಕರೆ ಕ್ಯಾಬೇಜ್ ಬೆಳೆ ನಾಶ

ಬಾಳಗೌಡ ಪಾಟೀಲ



ಬೆಳಗಾವಿ: ತರಕಾರಿ ಬೆಳೆದು ಮಾರಾಟ ಮಾಡಿ ಬಂದ ಆದಾಯದಲ್ಲಿಯೇ ತಮ್ಮ ಕುಟುಂಬದ ಜೀವನ ನಿರ್ವಹಿಸುತ್ತಿದ್ದ ರೈತರಿಗೆ ಮಾರುಕಟ್ಟೆ ಕೈಕೊಟ್ಟಿರುವುದರಿಂದ ತಮ್ಮ ಜಮೀನಿನಲ್ಲಿ ಎರಡು ಎಕರೆ ಕ್ಯಾಬೇಜ್ ಬೆಳೆದು ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಇಲ್ಲದೆ ಟ್ರ್ಯಾಕ್ಟರ್ ಮೂಲಕ ಕೊಚ್ಚಿ ಬೆಳೆ ನಾಶ ಮಾಡಿ ಕಣ್ಣೀರು ಹಾಕಿರುವ ಘಟನೆ ಬೆಳಗಾವಿ ತಾಲೂಕಿನ ಕಡೋಲಿ ಗ್ರಾಮದಲ್ಲಿ ನಡೆದಿದೆ.

ದಿಗಂತ ವಿಶೇಷ

ಕಡೋಲಿ ಗ್ರಾಮದ ರೈತ ಅಪ್ಪಾಸಾಹೇಬ ದೇಸಾಯಿ ಅವರು ಸಾಲಸೂಲ ಮಾಡಿ ಹೆಚ್ಚಿನ ನಿರೀಕ್ಷೆಯೊಂದಿಗೆ ತಮ್ಮ ಎರಡು ಎಕರೆ ಜಮೀನಿನಲ್ಲಿ ಕ್ಯಾಬೇಜ್ ಬೆಳೆ ಬೆಳೆದಿದ್ದರು. ಬೀಜ, ರಾಸಾಯನಿಕ, ಗೊಬ್ಬರ, ನೀರಾವರಿ, ಕೂಲಿ ಕಾರ್ಮಿಕರ ವೆಚ್ಚ ಸೇರಿದಂತೆ ಸಾವಿರಾರು ರೂ. ಹೂಡಿಕೆ ಮಾಡಿ ಬೆಳೆ ಬೆಳೆಸಿದ್ದರು. ಬೆಳೆ ಚೆನ್ನಾಗಿ ಬಂದಿದ್ದು, ಉತ್ತಮ ಆದಾಯದ ನಿರೀಕ್ಷೆಯಲ್ಲಿ ರೈತ ಕುಟುಂಬ



ಕಾದು ಕುಳಿತಿತ್ತು. ಆದರೆ, ಮಾರುಕಟ್ಟೆಯಲ್ಲಿ ದಿಢೀರ್ ಕ್ಯಾಬೇಜ್ ಬೆಲೆ ಭಾರೀ ಕುಸಿತ ಕಂಡಿದ್ದು ರೈತನಿಗೆ ಭಾರೀ ಆಘಾತ ತಂದಿದೆ.

ಬೆಳೆ ಕತ್ತರಿಸಿ ಮಾರುಕಟ್ಟೆಗೆ ಸಾಗಿಸಲು ಖರ್ಚು ಮಾಡಿದ ಹಣ ವಾಪಸ್ ಬರದ ಸ್ಥಿತಿ ಉಂಟಾಗಿದೆ. ಇದರಿಂದ ಬೇಸತ್ತ ರೈತ, ಬೆಳೆ ಮಾರಾಟ ಮಾಡುವುದಕ್ಕಿಂತ ನಾಶಪಡಿಸುವುದೇ ಒಳಿತು ಎಂದು ತೀರ್ಮಾನಿಸಿ ಟ್ರ್ಯಾಕ್ಟರ್ ಮೂಲಕ ಸಂಪೂರ್ಣ ಬೆಳೆ ಹೊಲದಲ್ಲೇ ನಾಶಪಡಿಸಿದ್ದಾರೆ.

ಇದಲ್ಲದೆ ತರಕಾರಿ ಬೆಳೆಗಳಿಗೆ ಸರ್ಕಾರದಿಂದ ಯಾವುದೇ ಬೆಂಬಲ ಬೆಲೆ ಘೋಷಣೆ ಮಾಡದಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದ್ದು, ಸಾಲದ ಭಾರದಿಂದ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ.

> ಸಾಲ ಸೂಲ ಮಾಡಿ ಹೊಲದಲ್ಲಿ ಬೆಳೆ ಮಾಡಿ ಉತ್ತಮ ಆದಾಯ ಮಾಡಬೇಕು ಅಂದುಕೊಂಡಿದ್ದೆ. ಆದರೆ, ಎಲ್ಲವೂ ಶಾಶವಾಗಿದೆ. ನಾವು ದುಡಿದ ಶ್ರಮಕ್ಕೆ ಬೆಲೆ ಇಲ್ಲ. ಬೆಳೆ ಬೆಳೆದರೂ ನಷ್ಟವಾಗುತ್ತಿದೆ ಎಂದು ಬೇಸರವಾಗುತ್ತಿದೆ. ಸರ್ಕಾರ ರೈತರ ಬೆಳೆಗಳಿಗೆ ಸರಿಯಾಗಿ ಬೆಂಬಲ ಬೆಲೆ ನೀಡುತ್ತಿಲ್ಲ ಎಂದು ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.
>
> ■ **ಅಪ್ಪಾಸಾಹೇಬ ದೇಸಾಯಿ**, ರೈತ

> ಜನಪ್ರತಿನಿಧಿಗಳು ಚುನಾವಣೆ ಬಂದಾಗ ಮಾತ್ರ ರೈತರ ಬಗ್ಗೆ ಎಲ್ಲಿಲ್ಲದ ಕಾಳಜಿ ತೋರಿಸುತ್ತಾರೆ. ರೈತರು ಬೆಳೆದ ಬೆಳೆಗೆ ಬೆಲೆ ಸಿಗದೆ ಇದ್ದಾಗ, ಹಾನಿಯಾದಾಗ ಯಾರು ಬರುವುದಿಲ್ಲ. ೀರುಗಿ ನೋಡುವುದಿಲ್ಲ. ಸರ್ಕಾರಕ್ಕೂ ರೈತ ಸಂಕಷ್ಟದ ಬಗ್ಗೆ ತಿಳಿಸಿದರು ಪ್ರಯೋಜನ ಇಲ್ಲ.
>
> ■ **ಬಾಳಾಸಾಹೇಬ ದೇಸಾಯಿ**, ಪ್ರಗತಿಪರ ರೈತ

ನಿಷೇಧಿತ ಮಾದಕ ವಸ್ತು ಮಾರಾಟ: ಮೂವರ ಬಂಧನ

ಬೆಳಗಾವಿ: ನಗರದಲ್ಲಿ ಸಾರ್ವಜನಿಕ ಸ್ಥಳದಲ್ಲಿ ನಿಷೇಧಿತ ಎಂಡಿಎಂಎ ಎಂಬ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವೇಳೆ ಬೆಳಗಾವಿಯ ಮಾರ್ಕೆಟ್ ಪೊಲೀಸ್ ಠಾಣೆಯ ಪೊಲೀಸರು ದಾಳಿ ಮಾಡಿ ಮೂರು ಜನ ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳಾದ ವಿನೋದ ತಾನಾಜಿ ಹರಾಜಿ (35), ಓಂ ಪುರುಷೋತ್ತಮ (22) ಹಾಗೂ ಕೌಶಿಕ ಕಿರಣ ಮುತಗೇಕರ (22) ಬಂಧಿತರು.

ಈ ಮೂರು ಜನ ಆರೋಪಿಗಳು ಬೆಳಗಾವಿ ನಗರದ ಹಳೇ ಬಾಜಿ ಮಾರ್ಕೆಟ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಎಂಡಿಎಂಎ ಎಂಬ ಮಾದಕ ವಸ್ತುವನ್ನು ಮಾರಾಟ ಮಾಡುವಾಗ ಮಾರ್ಕೆಟ್ ಪೊಲೀಸ್ ಠಾಣೆಯ ಪಿಎಸ್‌ಐ ವಿಠ್ಠಲ ಹಾವನ್ನವರ ಹಾಗೂ ಸಿಬ್ಬಂದಿ ದಾಳಿ ಮಾಡಿ ಆರೋಪಿಗಳಿಂದ 20,000 ರೂ. ಮೌಲ್ಯದ 3.45 ಗ್ರಾಂ ಎಂಡಿಎಂಎ ಮಾದಕ ವಸ್ತು. 1,00,000 ರೂ. ಮೌಲ್ಯದ ಬೈಕ್, ಹೀಗೆ ಒಟ್ಟು 1,20,000 ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳನ್ನು ವಿಚಾರಣೆ ನಡೆಸಿದ ವೇಳೆ ರುತಿಕ ಪಾಟೀಲ ಎಂಬಾತನಿಂದ ತಂದಿರುವುದಾಗಿ ತಿಳಿಸಿದ್ದಾರೆ. ಹಾಗಾಗಿ 4 ಜನ ಆರೋಪಿತರ ವಿರುದ್ಧ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಪ್ರಕರಣ ದಾಖಲು

ಹುಬ್ಬಳ್ಳಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ.ಅವರ ವಾಟ್ಸ್‌ಆ್ಯಪ್ ನಕಲಿ ಖಾತೆಯ ವ 'ೂಲಕ ವಂಚಕರು ಹಣ ಕೇಳುತ್ತಿರುವ ಆರೋಪದ ಮೇಲೆ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಂಚಕರು ಅವರ ಭಾವಚಿತ್ರವನ್ನು ವಾಟ್ಸ್ಆ್ಯಪ್ ಪ್ರೊಫೈಲ್‌ಗೆ ಬಳಿಸಿ, ನಕಲಿ ಖಾತೆ ಸೃಷ್ಟಿಸಿದ್ದಾರೆ.ಈ ಮೂಲಕ ಸಾಕಷ್ಟು ಜನರಿಗೆ ಹಣ ಕೇಳುತ್ತಿದ್ದಾರೆ. ಐಎಎಸ್ ಅಧಿಕಾರಿಯ ಹೆಸರು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಯಂತ್ರೋಪಕರಣ ಕಳುವು

ರೊಟ್ಟಿ ಸಿದ್ಧಪಡಿಸುವ ಕಂಪನಿಯಲ್ಲಿದ್ದ 4.80 ಲಕ್ಷ ರೂ. ಮೌಲ್ಯದ ಮಿಕ್ಸರ್ ಹಾಗೂ ಇತರ ವಸ್ತುಗಳನ್ನು ಕಳುವು ಮಾಡಿದ ಘಟನೆ ನಗರದ ಗಾಮನಗಟ್ಟಿಯ ಕೈಗಾರಿಕಾ ಪ್ರದೇಶದಲ್ಲಿ ನಡೆದಿದೆ.

ಸ್ಥಳೀಯ ನಿವಾಸಿಗಳಾದ ರವಿ ಎನ್. ಮತ್ತು ಮಂಜುನಾಥ ವಿರುದ್ಧ ಅಮಿತ್ ಮಾಲದ್ಕರ್ ನವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. 1.80 ಲಕ್ಷ ಮೌಲ್ಯದ ಅಲ್ಟಾ ಮಿಕ್ಸರ್, 2.40 ಲಕ್ಷ ಮೌಲ್ಯದ ರೊಟ್ಟಿ ತಯಾರಿಸುವ ಆರು ಯಂತ್ರಗಳು, 60 ಸಾವಿರ ಮೌಲ್ಯದ ನೈಲಾನ್ ರಾಡ್ ಕಳುವು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ರಾಮೇಶ್ವರ ದೇವರ ವಾರ್ಷಿಕೋತ್ಸವ



ಸಿದ್ದಾಪುರ: ತಾಲೂಕಿನ ಕಾನಸೂರಿನ ಶ್ರೀ ರಾಮೇಶ್ವರ ದೇವಸ್ಥಾನದ 18ನೇ ವರ್ಷದ ವಾರ್ಷಿಕೋತ್ಸವವು ದಿವಗಿ ಶ್ರೀರಾಮಾನಂದ ಮಹಾಸ್ವಾಮಿಗಳ ಮತ್ತು ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಆಶೀರ್ವಾದಗಳೊಂದಿಗೆ ಏ.9ರಂದು ಜರುಗಲಿದೆ. ಈ ನಿಮಿತ್ತ ಶ್ರೀ ದೇವರ ಸನ್ನಿಧಿಯಲ್ಲಿ ಗಣಹವನ, ಶ್ರೀ ದುರ್ಗಾಹವನ ಮತ್ತು ಶ್ರೀ ರುದ್ರ ಹವನ ಜರುಗಲಿದ್ದು ಏ.10ರ ಬೆಳಿಗ್ಗೆ ಶ್ರೀ ನೆಲೆಮಾವು ಮಠಾಧೀಶರಾದ ಮಾಧವಾನಂದ ಭಾರತೀ ಮಹಾಸ್ವಾಮಿಗಳು, ಶ್ರೀ ಕ್ಷೇತ್ರ ಕರ್ಕಿ ದೈವಜ್ಞ ಮಠದ ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಮಹಾಸ್ವಾಮಿಗಳಿಂದ ಮಹಾದ್ವಾರ ಲೋಕಾರ್ಪಣೆಗೊಳ್ಳಲಿದೆ. ನಂತರ ಮಹಾಮಂಗಳಾರತಿ, ಅನ್ನಸಂತರ್ಪಣೆ ನಡೆಯಲಿದೆ. ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ಸಂಘಟಕರು ತಿಳಿಸಿದ್ದಾರೆ.

ಚಂದ್ರಹಾಸ ಚರಿತ್ರೆ ಯಕ್ಷಗಾನ: ಸನ್ಮಾನ



ಸಿದ್ದಾಪುರ: ತಾಲೂಕಿನ ಗವಿನಗುಡ್ಡದ ಶ್ರೀ ಮಹಾಗಣಪತಿ ದೇವರ ವಾರ್ಷಿಕ ಸಮಾರಾಧನೆಯ ನಿಮಿತ್ತ ಗಣಪತಿ ನಾಯ್ಕ ರಾಮಚಂದ್ರಹೊಂಡ ಅವರು ಬೆಳಕಿನ ಸೇವೆಯಾಗಿ ಶ್ರೀ ವೀರಮಾರುತಿ ಕದಂಬೇಶ್ವರ ಯಕ್ಷಗಾನ ಮಂಡಳಿ (ರಿ) ಅವರಿಂದ 'ಚಂದ್ರಹಾಸ ಚರಿತ್ರೆ' ಯಕ್ಷಗಾನ ಪ್ರದರ್ಶನ ಏರ್ಪಡಿಸಿದ್ದರು.

ಈ ಕುರಿತು ನಡೆದ ಸಭಾ ಕಾರ್ಯಕ್ರಮದಲ್ಲಿ ದೇವಾಲಯ ಆಡಳಿತ ಸಮಿತಿ ಅಧ್ಯಕ್ಷ ಕೆ.ಕೆ.ನಾಯ್ಕ ಗವಿನಗುಡ್ಡ, ಗಣ್ಯರಾದ ರಾಘವೇಂದ್ರ ನಾಯ್ಕ, ಕಾನಸೂರ ಗ್ರಾ.ಪಂ. ಅಧ್ಯಕ್ಷೆ ಅನಿತಾ ನಾಯ್ಕ ಮುಂತಾದವರು ಪಾಲ್ಗೊಂಡಿದ್ದರು. ಶಿರಸಿ ಟಿಎಂಎಸ್ ನಿರ್ದೇಶಕ ರತ್ನಾಕರ ನಾಯ್ಕ ಬಬ್ಬೀಸರ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ರಾಜು ನಾಯ್ಕ ನಿಡಗೋಡ, ಎಂ.ಟಿ.ಗೌಡ ಅರೆಹಳ್ಳ, ಗೋಪಾಲ ನಾಯ್ಕ ನೆಬ್ಬೂರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಯಕ್ಷಗಾನ ಮಂಡಳಿಯ ವತಿಯಿಂದ ರಘುಪತಿ ನಾಯ್ಕ ಹಾಗೂ ಟ್ರಸ್ಟಿಗಳು, ದೇವಸ್ಥಾನ ಆಡಳಿತ ಮಂಡಳಿಯವರು ಗಿರಿಜಾ ಹಾಗೂ ಗಣಪತಿ ನಾಯ್ಕ ದಂಪತಿಗಳನ್ನು ಸನ್ಮಾನಿಸಿದರು. ದೇವಾಲಯದ ವತಿಯಿಂದ ರಘುಪತಿ ನಾಯ್ಕ ಹೆಗ್ಗರಣಿ ಅವರನ್ನು ಸನ್ಮಾನಿಸಲಾಯಿತು. ಶ್ರೀಕಾಂತ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ರವಿಕುಮಾರ ನಾಯ್ಕ ವಂದಿಸಿದರು.

ಏ.14ರಿಂದ ಶಿಬಿರ

ಸಿದ್ದಾಪುರ: ತಾಲೂಕಿನ ಶ್ರೀಮನ್ನೆಲೆಮಾವುಮಠದ ಶ್ರೀ ಮಾಧವಾನಂದಭಾರತೀ ಮಹಾಸ್ವಾಮಿಗಳ ದಿವ್ಯಾಶೀರ್ವಾದದೊಂದಿಗೆ ಏ.14 ರಿಂದ ಮೇ.4 ರವರೆಗೆ ಕಿಬ್ಬಳ್ಳಿಯ ಶ್ರೀಮಹಾಗಣಪತಿ ಪ್ರೌಢಶಾಲೆಯಲ್ಲಿ ಉಪವೀತ ವಟುಗಳಿಗೆ ವಸಂತ ವೇದ ಶಿಬಿರ ಏರ್ಪಡಿಸಲಾಗಿದೆ. ಏ.14ರಿಂದ ಏ.28ರವರೆಗೆ ಸ್ವರ್ಣವಲ್ಲಿ ಮಹಾಸಂಸ್ಥಾನದ ಸಹಯೋಗದಲ್ಲಿ ಸರಕುಳಿಯ ಶ್ರೀ ಮಹಿಷಾಸುರ ಮರ್ಧಿನಿ ದೇವಾಲಯದ ಆವರಣದಲ್ಲಿ ಕುಮಾರಿಕಾ ಶಿಬಿರ ಸಂಘಟಿಸಲಾಗುತ್ತಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಶ್ರೀಮನ್ನೆಲೆಮಾವುಮಠದ ಕಾರ್ಯಾಲಯವನ್ನು ಸಂಪರ್ಕಿಸಬೇಕು ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60099	72699
ಬಿಳಿಗೋಟು	29301	41599
ಕೆಂಪುಗೋಟು	18219	38899
ಬೆಟ್ಟೆ	33599	51299
ರಾಶಿ	48810	53699
ಚಾಲಿ	45000	50299
ಬಿ.ಕಾಳುಮೆಣಸು	85000	85000



ಗೋಕರ್ಣ: ಇಲ್ಲಿನ ತಾರಮಕ್ಕಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದೈಹಿಕ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾದ ಸುಮನಾ ನಾಯಕರವರಿಗೆ ಶಾಲಾ ಅಭಿವೃದ್ಧಿ ಸಮಿತಿ ಹಾಗೂ ಶಾಲೆಯ ವತಿಯಿಂದ ಸನ್ಮಾನಿಸಿ ಗೌರವಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಈ ವೇಳೆ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಹುಲಿಯಾ ಗೌಡ, ಸದಸ್ಯರಾದ ಹೊಲೆಯಪ್ಪ ಎಮ್. ಗೌಡ, ಮಹಾದೇವ ಗೌಡ, ವಿನಾಯಕ ಗೌಡ, ಮಂಜುನಾಥ ಗೌಡ, ಮಹೇಶ ಮಿರ್ಜಾನಕರ, ಚಂದ್ರಕಲಾ ನಾಯ್ಕ, ಉಳಿದ ಸದಸ್ಯರು, ಪಾಲಕರು ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಹಾಲಕ್ಕಿ ಒಕ್ಕಲಿಗರ ಸುಗ್ಗಿ ಹಬ್ಬ ಸಂಪನ್ನ

ಗೋಕರ್ಣ: ಇಲ್ಲಿನ ಬಿಜ್ಜೂರು ಹಾಲಕ್ಕಿ ಒಕ್ಕಲಿಗರ ಸುಗ್ಗಿ ಹಬ್ಬ ಭಾನುವಾರ ಸಂಜೆ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಐದು ದಿನಗಳ ಕಾಲ ವಿವಿಧೆಡೆ ಪರ್ಯಟನೆ ಮಾಡಿ ಸುಗ್ಗಿ ಕುಣಿತ ಪ್ರದರ್ಶಿಸಿದ ಸುಗ್ಗಿ ತಂಡ ಸಂಜೆ ಊರ ಗೌಡರ ಮನೆಯಾದ ಮದಕನ ಮನೆಗೆ ಆಗಮಿಸಿ, ಸುಗ್ಗಿ ಕುಣಿತ ಸೇವೆ ನೀಡಿದ ಬಳಿಕ ಇಲ್ಲಿನ ದೇವರ ಸಾನಿಧ್ಯದಲ್ಲಿ ಕಳಸ ಹಾಗೂ ದೇವರಿಗೆ ಪೂಜೆ ಸಲ್ಲಿಸಲಾಯಿತು. ಈ ವರ್ಷದಲ್ಲಿ ಪ್ರಾರಂಭವಾಗಲಿರುವ ಕೃಷಿ ಚಟುವಟಿಕೆಗೆ ಮಳೆ ಉತ್ತಮವಾಗಿ, ಒಳ್ಳೆಯ ಫಸಲು ದೊರೆಯುವಂತಾಗಲಿ ಎಂದು ಪ್ರಾರ್ಥಿಸಲಾಯಿತು.

ನಂತರ ಕಳಸದೊಂದಿಗೆ ಸುಗ್ಗಿ ತಂಡ ಆಲದಕೇರಿಯಲ್ಲಿರುವ ಕರಿಕಾಳ ಸನ್ನಿಧಿಗೆ ಬಂದು ಪೂಜೆ ನೆರವೇರಿಸಿದ ಬಳಿಕ ಹೊಲ ಗದ್ದೆಯ ಮೂಲಕ ಎರಡು ಕಿ.ಮೀ. ಹೆಚ್ಚು ದೂರದ ಕಾಲುದಾರಿಯಲ್ಲಿ ಮುಖ್ಯ ಕಡಲತೀರಕ್ಕೆ ಸಾಗಿತು. ಕರಿಯಪ್ಪನ ಕಟ್ಟೆ ಬಳಿ ಪೂಜೆ ಸಲ್ಲಿಸಿದ ಬಳಿಕ ಕರಿನೀರಿನ ಸ್ನಾನ (ಸಮುದ್ರ ಸ್ನಾನ)ದೊಂದಿಗೆ ಸುಗ್ಗಿ ಹಬ್ಬ ಸಂಪನ್ನವಾಯಿತು. ಕಡಲತೀರದತ್ತ ಓಡುತ್ತಾ ಸಾಗುವ ಕಳಸ ಹಾಗೂ ಸುಗ್ಗಿ ತಂಡ ತೆರಳುವಾಗ ಸುತ್ತಲು ಬೂದಿ ಎರಚುತ್ತಾ ಯುವಕರ ತಂಡ ಸಾಗಿತ್ತು. ಹೊಲಗಳಿಗೆ ರೋಗ ರೂಜಿನ, ಗ್ರಾಮಕ್ಕೆ ಅನಿಷ್ಟಗಳು ಬರದಿರಲಿ ಎಂದು ಪ್ರಾರ್ಥಿಸುವ ಸಾಂಪ್ರದಾಯಿಕ ಪದ್ಧತಿ ಇದಾಗಿದೆ. ಈ ಎಲ್ಲಾ ಕಾರ್ಯಕ್ರಮದಲ್ಲಿ ಹಾಲಕ್ಕಿ ಒಕ್ಕಲಿಗ ಸಮಾಜದವರು ಹಾಗೂ ಎಲ್ಲ ಸಮಾಜದವರು ಪಾಲ್ಗೊಂಡಿದ್ದರು.



ಗೋಕರ್ಣ: ಇಲ್ಲಿನ ಬಿಜ್ಜೂರು ಹಾಲಕ್ಕಿ ಒಕ್ಕಲಿಗರ ಸುಗ್ಗಿ ಹಬ್ಬ ಭಾನುವಾರ ಸಂಜೆ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಮುಂಗಾರು ಹಂಗಾಮಿಗೆ ರಸಗೊಬ್ಬರ ಪೂರೈಕೆ ಸಮರ್ಪಕವಾಗಿರಲಿ: ಡಿಸಿ

ಕಾರವಾರ: ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರೈತರಿಗೆ ರಸಗೊಬ್ಬರದ ಪೂರೈಕೆ ಹಾಗೂ ವಿತರಣೆಯಲ್ಲಿ ಯಾವುದೇ ರೀತಿಯ ವ್ಯತ್ಯಯವಾಗದಂತೆ, ಸಮರ್ಪಕವಾಗಿರುವಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅವರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಪೂರೈಕೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿಗೆ ವಿವಿಧ ಗ್ರೇಡ್‌ಗಳ ಒಟ್ಟು 36,560 ಟನ್ ರಸಗೊಬ್ಬರದ ಅವಶ್ಯಕತೆಯಿದ್ದು, ಪ್ರತಿ ತಿಂಗಳೂ ಬೇಡಿಕೆಗೆ ಅಗತ್ಯವಿರುವಷ್ಟು ರಸಗೊಬ್ಬರ ರೈತರಿಗೆ ದೊರೆಯುವ ನಿಟ್ಟಿನಲ್ಲಿ ಅಗತ್ಯ ದಾಸ್ತಾನು ಮಾಡಿಕೊಳ್ಳುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು, ರಸಗೊಬ್ಬರ ಪೂರೈಕೆ ಮಾಡುವ ಕಂಪನಿಗಳ ಪ್ರತಿನಿಧಿಗಳು ಜಿಲ್ಲೆಯ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ ಸರಬರಾಜು ಆಗುವಂತೆ ಎಚ್ಚರವಹಿಸಬೇಕು ಎಂದರು.

ರೈತರು ತಮ್ಮ ಬೆಳೆಗಳಿಗೆ ಯೂರಿಯಾ ರಸಗೊಬ್ಬರದ ಜೊತೆಗೆ ಇತರೆ ಸಂಯುಕ್ತ ರಸಗೊಬ್ಬರಗಳನ್ನು ಬಳಸುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು, ಈ ಕುರಿತಂತೆ ಜಿಲ್ಲೆಯಾದ್ಯಂತ ರೈತರಿಗೆ ಅರಿವು ಮತ್ತು ತಾಂತ್ರಿಕ ಮಾಹಿತಿಯನ್ನು ತಲುಪಿಸುವಂತೆ ಕೃಷಿ ವಿಜ್ಞಾನಿಗಳು ಮತ್ತು ಕೃಷಿ ಹಾಗೂ ತೋಟಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ರಸಗೊಬ್ಬರ ಜೊತೆಗೆ ಮುಂಗಾರು ಹಂಗಾಮಿಗೆ

> ಪ್ರಸಕ್ತ ಸಾಲಿನಲ್ಲಿ ರೈತರಿಗೆ ಯೂರಿಯಾ ರಸಗೊಬ್ಬರ ಮಾರಾಟ ಮಾಡುವ ಸಂದರ್ಭದಲ್ಲಿ ಫ್ರೂಟ್ಸ್ ನೋಂದಣಿ ಸಂಖ್ಯೆ ಪಡೆಯುವುದು ಕಡ್ಡಾಯವಾಗಿದ್ದು, ಫ್ರೂಟ್ಸ್ ಸಂಖ್ಯೆಯನ್ನು ಪೋರ್ಟಲ್ ನಲ್ಲಿ ಅಳವಡಿಸುವ ಬಗ್ಗೆ ರಸಗೊಬ್ಬರ ಪೂರೈಸುವ ಡೀಲರ್‌ಗಳಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಜಿಲ್ಲೆಯ ರೈತರಿಗೆ ಕೂಡ ಯೂರಿಯಾ ಖರೀದಿ ಸಂದರ್ಭದಲ್ಲಿ ಫ್ರೂಟ್ಸ್ ನೋಂದಣಿ ಸಂಖ್ಯೆಯನ್ನು ನೀಡುವ ಬಗ್ಗೆ ಮಾಹಿತಿ ನೀಡಲಾಗುವುದು.
>
> ■ ಶಿವಪ್ರಸಾದ್ ಗಾಂವಕರ್. ಕೃಷಿ ಇಲಾಖೆಯ ಜಂಟಿ ನಿರ್ದೇಶಕ

- ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಪೂರೈಕೆ ಕುರಿತು ಸಭೆ
- ಯಾವುದೇ ವ್ಯತ್ಯಯವಾಗದಂತೆ ಎಚ್ಚರ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಕಟ್ಟುನಿಟ್ಟಿನ ಸೂಚನೆ

ಅಗತ್ಯವಿರುವ ಭಿತ್ತನೆ ಬೀಜಗಳ ವಿತರಣೆಯಲ್ಲಿ ಕೂಡಾ ಯಾವುದೇ ವ್ಯತ್ಯಯವಾಗದಂತೆ ಎಚ್ಚರ ವಹಿಸುವಂತೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪ್ರಕಾಶ್ ಹಾಲಮ್ಮನವರ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಸತೀಶ್, ಜಿಲ್ಲೆಯ ಎಲ್ಲಾ ತಾಲೂಕುಗಳು ಕೃಷಿ ಮತ್ತು ತೋಟಗಾರಿಕಾ ಇಲಾಖೆಯ ಅಧಿಕಾರಿಗಳು, ರಸಗೊಬ್ಬರ ಪೂರೈಕೆ ಮಾಡುವ ಕಂಪನಿಗಳ ಪ್ರತಿನಿಧಿಗಳು ಮತ್ತಿತರರು ಇದ್ದರು.

ವಿವಿಧ ಕಾಮಗಾರಿಗೆ ಶಾಸಕ ದಿನಕರ ಶೆಟ್ಟಿ ಚಾಲನೆ



ಕುಮಟಾ: ತಾಲೂಕಿನ ಕೊಡ್ಕಣಿ ಗ್ರಾಪಂ ವ್ಯಾಪ್ತಿಯ ಮಾಸೂರಕೂರ್ವೆ ಗ್ರಾಮದ ಕೇಕನಕೋಡಿ ಗಜನಿಗೆ 60 ಲಕ್ಷ ರೂ. ಹಾಗೂ ಹೊಲನಗದ್ದೆ ಗ್ರಾಪಂ ವ್ಯಾಪ್ತಿಯಮಾಣಿಕಟ್ಟಾದಲ್ಲಿ 80 ಲಕ್ಷ ರೂ. ವೆಚ್ಚದ ಜಂತ್ರಡಿ (ಕಾಲ್ಯಾಂಡ್) ನಿರ್ಮಾಣ ಕಾಮಗಾರಿಗೆ ಶಾಸಕ ದಿನಕರ ಶೆಟ್ಟಿ ಅವರು ಶಂಕು ಸ್ಥಾಪನೆ ನೆರವೇರಿಸಿದರು.

ಕೊಡ್ಕಣಿ ಗ್ರಾಪಂ ವ್ಯಾಪ್ತಿಯ ಮಾಸೂರಕೂರ್ವೆ ಗ್ರಾಮದ ಕೇಕನಕೋಡಿ ಗಜನಿಗೆ ಜಂತ್ರಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆಯ ಮೂಲಕ ಚಾಲನೆ ನೀಡಿದ ಶಾಸಕ ದಿನಕರ ಶೆಟ್ಟಿ, ಕಾಗಲ, ಬಾಡ ಹಾಗು ಹುಬ್ಬಣಗೇರಿ ಗ್ರಾಮದ ರೈತರು ಕೇಕನಕೋಡಿ ಮತ್ತು ದೊಡ್ಡಮುಳ್ಳಿ ಗಜನಿಯಲ್ಲಿ ಸಾಗುವಳಿ ಮಾಡುತ್ತಾರೆ. ಆ ಭಾಗದಲ್ಲಿರುವ ಬಂಡ್‌ಗೆ ಅಳವಡಿಸಿರುವ ಜಂತ್ರಡಿ ಶಿಥಿಲಗೊಂಡು ಉಪ್ಪು ನೀರು ನುಗ್ಗಿ ಕೃಷಿ ಮತ್ತು ಮೀನು ಕೃಷಿಗೂ ತೊಂದರೆಯಾಗಿತ್ತು.

ಈ ಭಾಗದ ರೈತ ಮುಖಂಡರಾದ ಜಿ.ಕೆ.ಪಟಗಾರ ಅವರ ನೇತೃತ್ವದಲ್ಲಿ ರೈತರು ನನಗೆ ಮನವಿ ಮಾಡಿದ್ದರು. ಅವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ನಾನು ಸರ್ಕಾರ ಮಟ್ಟದಲ್ಲಿ ನಿರಂತರವಾಗಿ ಪ್ರಯತ್ನಿಸಿ ಈ ಭಾಗದಲ್ಲಿ 60 ಲಕ್ಷ ರೂ. ವೆಚ್ಚದ ಜಂತ್ರಡಿ ಕಾಮಗಾರಿ ಮಂಜೂರಿ ಮಾಡಿಸಿ, ಕಾಮಗಾರಿಗೆ ಚಾಲನೆ ನೀಡಿದ್ದೇನೆ. ಈ ಭಾಗದ ಜನರ ಬೇಡಿಕೆ ಅನುಗುಣವಾಗಿ ಸಾಕಷ್ಟು ಅಭಿವೃದ್ಧಿಯನ್ನು ಮಾಡಿಕೊಟ್ಟಿದ್ದೇನೆ. ಇದರ ಜತೆಗೆ ಹೊಲನಗದ್ದೆ ಗ್ರಾ.ಪಂ ವ್ಯಾಪ್ತಿಯ ಮಾಣಿಕಟ್ಟಾದಲ್ಲಿ 80 ಲಕ್ಷ ರು. ವೆಚ್ಚದ ಜಂತ್ರಡಿ ಕಾಮಗಾರಿಗೂ ಇಂದು ಚಾಲನೆ ನೀಡಿದ್ದೇನೆ. ರೈತರಿಗೆ ಅನುಕೂಲವಾಗುವಂತಹ ಕಾಮಗಾರಿಯನ್ನು ಕೈಗೊಳ್ಳುವ ಮೂಲಕ ಕೃಷಿಕರಿಗೆ ನೆರವಾಗಿದ್ದೇನೆ. ಈ ಕಾಮಗಾರಿಯನ್ನು ಗುಣಮಟ್ಟದಿಂದ ನಡೆಸುವಂತೆ ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ರೈತ ಮುಖಂಡ ಜಿ.ಕೆ.ಪಟಗಾರ, ಬಿಜೆಪಿ ಮುಖಂಡ ಗಜಾನನ ಗುನಗಾ, ಕಾಗಲ್ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ನವೀನ ನಾಯ್ಕ, ಸ್ಥಳೀಯರಾದ ಗಣಪತಿ ಪಟಗಾರ, ವೆಂಕಟ್ರಮಣ ಹರಿಕಂತ್ರ, ಚಂದ್ರಶೇಖರ ನಾಯ್ಕ, ದೇವರಾಯ ಅನಂತ ಗಾವಡಿ, ಶಂಭು ಹನಮು ಪಟಗಾರ, ಸೀತಾರಾಮ ತಿಮ್ಮಪ್ಪ ಪಟಗಾರ, ಮಂಜುನಾಥ ಜೋಗಿ ಪಟಗಾರ, ಮೋಹನ ಪರಮೇಶ್ವರ ಹರಿಕಂತ್ರ ಇದ್ದರು.

ಮಕ್ಕಳಿಗಾಗಿ 'ಮಿಂಚು ಮೇಳ' ಕಾರ್ಯಕ್ರಮ



ಮುಂಡಗೋಡ: ಮಕ್ಕಳಿಗೆ ಮೊಬೈಲ್ ಗೀಳು ತಪ್ಪಿಸಲು ಹಾಗೂ ಮಕ್ಕಳಲ್ಲಿ ಕ್ರೀಡಾ ಮನೋಭಾವನೆ ಬೆಳೆಸುವ ಉದ್ದೇಶದಿಂದ ಬ್ರಿಡ್ಜ್ಸ್ ಆಫ್ ಸ್ಪೋರ್ಟ್ಸ್ ಸಂಸ್ಥೆ ವತಿಯಿಂದ ಬುಧವಾರ 'ಮಿಂಚು ಮೇಳ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಇಲ್ಲಿನ ತಾಲೂಕಾ ಕ್ರೀಡಾಂಗಣದಲ್ಲಿ ಮಿಂಚು ಮೇಳ ಹೆಸರಿನಲ್ಲಿ ಮಕ್ಕಳಿಗಾಗಿ ಕ್ರೀಡೆಗಳನ್ನು ಆಯೋಜಿಸಲಾಯಿತು.

ಫಾರ್ಮರ್ ಕ್ಯಾರಿ, ಬ್ಯಾಲೆನ್ಸಿಂಗ್ ಬೀಮ್, ಮಂಕಿ ಬಾರ್, ಬ್ರೋಡ್ ಜಂಪ್, ವರ್ಟಿಕಲ್ ಜಂಪ್, ಕೈಯರ್ ಪುಲ್ಲಿಂಗ್ ಹಾಗೂ 60 ಮೀಟರ್ ಓಟ ಸೇರಿದಂತೆ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಿತು. ಭಾಗವಹಿಸಿದ ಕ್ರೀಡಾಪಟುಗಳಿಗೆ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಮುಂಡಗೋಡ, ಯಲ್ಲಾಪುರ, ಹಳಿಯಾಳ ಹಾಗೂ ಹುಬ್ಬಳ್ಳಿ-ಧಾರವಾಡ ಭಾಗಗಳಿಂದ ಅನೇಕ ಕ್ರೀಡಾಪಟುಗಳು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಬಹುಮಾನಗಳನ್ನು ಪಡೆದುಕೊಂಡರು.

ಬೆಳಿಗ್ಗೆ 9 ಗಂಟೆಗೆ ಆರಂಭವಾದ ಕಾರ್ಯಕ್ರಮವು ಸಂಜೆ 5 ಗಂಟೆಯವರೆಗೆ ಜರುಗಿತು.

ಬ್ರಿಡ್ಜ್ಸ್ ಆಫ್ ಸ್ಪೋರ್ಟ್ಸ್ ಸಂಸ್ಥೆಯವರು ನಿರಂತರವಾಗಿ ಕ್ರೀಡಾಮನೋಭಾವನೆ ಬೆಳೆಸುವ ಉದ್ದೇಶದಿಂದ ಕ್ರೀಡಾಕೂಟಗಳನ್ನು ಆಯೋಜಿಸುತ್ತಿದ್ದು, ಕಳೆದ ವರ್ಷ 3 ದಿನಗಳ ಕ್ರೀಡಾಕೂಟದಲ್ಲಿ 700ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದರು. ಈ ಬಾರಿ ಕೇವಲ ಒಂದು ದಿನದ 'ಮಿಂಚು ಮೇಳ' ಕಾರ್ಯಕ್ರಮದಲ್ಲೇ 750ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿ 1000ಕ್ಕೂ ಹೆಚ್ಚು ಬಹುಮಾನಗಳನ್ನು ಪಡೆದಿರುವುದು ವಿಶೇಷ. ಭಾಗಿಯಾದ 750 ಕ್ರೀಡಾಪಟುಗಳಲ್ಲಿ 30 ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಉಚಿತವಾಗಿ ಊಟ, ವಸತಿ ಸಹಿತ ಬೇಸಿಗೆ ಶಿಬಿರ ತರಬೇತಿ ನೀಡಲಿದ್ದಾರೆ.

ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ

ಯಲ್ಲಾಪುರ: ಪಟ್ಟಣದ ಗಾಂಧಿ ಕುಟೀರದಲ್ಲಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಶಾಸಕ ಶಿವರಾಮ ಹೆಬ್ಬಾರ್ ಅರ್ಹ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಿದರು.

ನಂತರ ತಾಲೂಕು ಪಂಚಾಯತ್ ಅನುದಾನದ ಅಡಿಯಲ್ಲಿ ಆಯ್ಕೆಯಾದ ಆರು ಫಲಾನುಭವಿಗಳಿಗೆ ತ್ರಿಚಕ್ರ ಮೋಟಾರ್ ವಾಹನಗಳನ್ನು ವಿತರಿಸಿದರು.

ನಂತರ ತೋಟದಲ್ಲಿ ಕೃಷಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಮೃತಪಟ್ಟ ಕುಟುಂಬಗಳ ಸದಸ್ಯರಿಗೆ ತಲಾ ರೂ. 2 ಲಕ್ಷ ಪರಿಹಾರ ಧನದ ಚೆಕ್ ಅನ್ನು ಶಾಸಕ ಶಿವರಾಮ ಹೆಬ್ಬಾರ್ ವಿತರಿಸಿದರು.ಸುಮಾರು ರೂ. 25 ಲಕ್ಷ ವೆಚ್ಚದಲ್ಲಿ ಕೃಷಿ ಇಲಾಖೆಯ ವತಿಯಿಂದ 40 ಮಂದಿ ಅರ್ಹ ಫಲಾನುಭವಿಗಳಿಗೆ ವಿವಿಧ ಕೃಷಿ ಪರಿಕರಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮಾಜಿ ಸದಸ್ಯರಾದ ವಿಜಯ ಮಿರಾಶಿ, ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ವಿ.ಎಸ್.ಭಟ್, ಉಪಾಧ್ಯಕ್ಷ ಸುಬ್ಬಣ್ಣ ಕುಂಟೆಗಾಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ.ರವಿ ಭಟ್ ಬರಗದ್ದೆ, ಪ್ರಮುಖರಾದ ಗಣಪತಿ ಮುದ್ದೆಪಾಲ್, ಆರ್.ಎಸ್.ಭಟ್ ,ಯುವ ಕಾಂಗ್ರೆಸ್ ತಾಲೂಕಾಧ್ಯಕ್ಷರಾದ ಗಣೇಶ ಹೆಗಡೆ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.



ಮನರಂಜಿಸಿದ ನೃತ್ಯಾರ್ಪಣಂ ಭರತನಾಟ್ಯ

ಭಟ್ಕಳ: ಮುಂಡಳ್ಳಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅಷ್ಟ ಬಂಧ ಬ್ರಹ್ಮ ಕಲಶೋತ್ಸವ ಕಾರ್ಯಕ್ರಮದಲ್ಲಿ ಬಂಟ್ವಾಳದ ಪದಯಾನ ತಂಡದ ನೃತ್ಯಾರ್ಪಣಂ ಭರತ ನಾಟ್ಯ ಕಾರ್ಯಕ್ರಮ ಪ್ರೇಕ್ಷಕರ ಮನರಂಜಿಸಿತು. ವಿದುಷಿ ಪ್ರಣತಿ ಚೈತನ್ಯ ಪದ್ಯಾಣ ಇವರ ನೇತೃತ್ವದಲ್ಲಿ ನಡೆದ ಒಂದೂವರೆ ಗಂಟೆಗಳ ಭರತ ನಾಟ್ಯ ನಡೆಯಿತು.

ಗುರುಗಳ ಜೊತೆ ಅವನಿ ಕೋಡಿಬೈಲು, ದೇವಿಕಾ ಕುರಿಯಾಜೆ,ಹೇಮಸ್ವಾತಿ ಕುರಿಯಾಜೆ ಇವರುಗಳು ನಡೆಸಿಕೊಟ್ಟ ದಶಾವತಾರ ನೃತ್ಯ ರೂಪಕವಂತೂ ಮೈನವಿರೇಳಿಸುವ ಅನುಭವ ನೀಡಿತು. ಕಾರ್ಯಕ್ರಮದ ನಂತರ ದೇವಸ್ಥಾನದ ವತಿಯಿಂದ ಅಧ್ಯಕ್ಷ ಎಸ್ ಬಿ.ಬೊಮ್ಮಾಯ ಸಮಿತಿ ಸದಸ್ಯರು ಕಲಾವಿದರನ್ನು ಸನ್ಮಾನಿಸಿದರು.



ಏ.11ರಿಂದ ಸುವರ್ಣ ಮಹೋತ್ಸವ

ಭಟ್ಕಳ: ಇಲ್ಲಿಯ ಹೆಬಳೆಯ ಕುಕ್ನೀರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು 50 ವರ್ಷ ಪೂರೈಸಿದ್ದು, ಈ ಪ್ರಯುಕ್ತ ಏ. 11 ಮತ್ತು 12ರಂದು ಅದ್ದೂರಿಯಾಗಿ ಸುವರ್ಣ ಮಹೋತ್ಸವ ಆಚರಿಸಲು ನಿರ್ಧರಿಸಲಾಗಿದೆ ಎಂದು ಸುವರ್ಣ ಮಹೋತ್ಸವ ಸಮಿತಿ ಅಧ್ಯಕ್ಷ ಕೃಷ್ಣ ನಾಯ್ಕ ಹೇಳಿದರು.

ಶಾಲಾ ಮುಖ್ಯ ಶಿಕ್ಷಕಿ ರೇಖಾ ಪಟಗಾರ ಮಾಹಿತಿ ನೀಡಿ, ಏ.11ರಂದು ವೆಂಕಟಾಪುರದಿಂದ ಕುಕನೀರ್ ಶಾಲೆಯವರೆಗೆ ಚಂಡೆ ವಾದನದೊಂದಿಗೆ ಮೆರವಣಿಗೆ ನಡೆಯಲಿದ್ದು, ನಿವೃತ್ತ ಶಿಕ್ಷಕರು ಹಾಗೂ ದಾನಿಗಳನ್ನು ಸನ್ಮಾನಿಸಲಾಗುವುದು. ಅದೇ ದಿನ ಬೆಳಿಗ್ಗೆ 10 ಗಂಟೆಗೆ ಬಹುಮಾನ ವಿತರಣಾ ಕಾರ್ಯಕ್ರಮ, ಸಂಜೆ 6 ಗಂಟೆಗೆ ಸುವರ್ಣ ಮಹೋತ್ಸವ ಉದ್ಘಾಟನೆ ನಡೆಯಲಿದೆ. ಉದ್ಘಾಟನೆಯನ್ನು ಜಿಲ್ಲಾ ಮೀನುಗಾರಿಕಾ ಹಾಗೂ ಉಸ್ತುವಾರಿ ಸಚಿವ ಮಂಕಾಳ ವೈದ್ಯ ನೆರವೇರಿಸಲಿದ್ದಾರೆ. ರಾತ್ರಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಏ.12ರಂದು ಮಧ್ಯಾಹ್ನ ಭೋಜನ ವ್ಯವಸ್ಥೆ ಬಳಿಕ ಸಂಜೆ 6 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಮಾಜಿ ಶಾಸಕ ಸುನೀಲ್ ನಾಯ್ಕ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಎಂದರು. ಶಿಕ್ಷಕ ನಾರಾಯಣ ನಾಯ್ಕ ಮಾತನಾಡಿ, ಎಪ್ರಿಲ್ 12 ರಂದು ರಾತ್ರಿ 'ಚಿಟ್ಟೆ'ಎಂಬ ಎ.ಐ ತಂತ್ರಜ್ಞಾನ ಆಧಾರಿತ ಭಾವನಾತ್ಮಕ ಮತ್ತು ಹಾಸ್ಯಮಯ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ. ಕಾರ್ಯಕ್ರಮಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು. ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳು, ಎಸ್.ಡಿ.ಎಮ್.ಸಿ ಸದಸ್ಯರು, ಹಳೆ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಹಾಗೂ ಸ್ಥಳೀಯ ಗಣ್ಯರು ಉಪಸ್ಥಿತರಿದ್ದರು.

ವಿಡಿಐಟಿ ಸಿಬ್ಬಂದಿಗಳಿಂದ ಸ್ವಯಂ ಗಣತಿ ದಾಖಲಾತಿ

ಹಳಿಯಾಳ: ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಜನ ಗಣತಿ 2027 ರ ಅಂಗವಾಗಿ ಸ್ವಯಂ ಗಣತಿ ವ್ಯವಸ್ಥೆ ಪರಿಚಯಿಸಿದ್ದು, ಇದರ ಅಂಗವಾಗಿ, ಎನ್‌ಎಸ್‌ಎಸ್ ಘಟಕದ ಉಪಕ್ರಮದಲ್ಲಿ, ವಿಡಿಐಟಿಯ 65 ಕ್ಕೂ ಹೆಚ್ಚು ಸಿಬ್ಬಂದಿಗಳು ತಮ್ಮ ಮೊಬೈಲ್ ಮೂಲಕ ಸ್ವಯಂ ಗಣತಿ ದಾಖಲಾತಿ ಪೂರ್ಣಗೊಳಿಸಿದ್ದಾರೆ.

2026 ರ ಏಪ್ರಿಲ್ 1 ರಿಂದ 15 ರವರೆಗೆ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಿಕೊಳ್ಳಬಹುದಾಗಿದೆ.

ನಮ್ಮ ಜನಗಣತಿ – ನಮ್ಮ ಅಭಿವೃದ್ಧಿ ಎಂಬ ಧ್ಯೇಯ ವಾಕ್ಯದೊಂದಿಗೆ ಸರ್ಕಾರ ಜನಗಣತಿ 2027 ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಸರ್ಕಾರ ಸ್ವಯಂ ಗಣತಿ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ಪ್ರಕ್ರಿಯೆ ಸರಳ ಮತ್ತು ಸುರಕ್ಷಿತವಾಗಿದೆ.



ಮೊಬೈಲ್ ಸಂಖ್ಯೆ ಮತ್ತು ಓಟಿಪಿ ಮೂಲಕ ಸುಲಭವಾಗಿ 5 ರಿಂದ 10 ನಿಮಿಷಗಳಲ್ಲಿ ಸ್ವಯಂ ಗಣತಿ ಪೂರ್ಣಗೊಳಿಸಬಹುದಾಗಿದೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ತಿಳಿಸಿದರು. ಪ್ರಕ್ರಿಯೆ ಪೂರ್ಣಗೊಂಡ ನಂತರ ಅರ್ಜಿಯ ಸಂಖ್ಯೆ ದೊರೆಯುವುದು. ಈ ಸಂಖ್ಯೆಯನ್ನು ಏ. 16 ರಿಂದ ಮೇ 15ರವರೆಗೆ ಮನೆಮನೆಗೆ ಭೇಟಿ ನೀಡುವ ಗಣತಿದಾರರಿಗೆ ನೀಡಿದಲ್ಲಿ, ಗಣತಿದಾರರು ಸ್ವಲ್ಪ ಸಮಯದಲ್ಲಿ ಗಣತಿ ಪೂರ್ಣಗೊಳಿಸಲು ಹಾಗೂ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ಮಾಡಿಕೊಳ್ಳಬಹುದಾಗಿದೆ.

ನಿಗದಿತ ಅವಧಿಯಲ್ಲಿ ಸ್ವಯಂ ಗಣತಿಯನ್ನು ಪೂರ್ಣಗೊಳಿಸಿ, ಜನಗಣತಿಯನ್ನು ಯಶಸ್ವಿಗೊಳಿಸಲು ನಾವು ಎಲ್ಲರೂ ಕೈಜೋಡಿಸೋಣ ಎಂದು ಎನ್‌ಎಸ್‌ಎಸ್ ಸಂಚಾಲಕ ಪ್ರೊ. ಸಂತೋಷ್ ಸವಣೂರ ತಿಳಿಸಿದ್ದಾರೆ.

ಶಿರಸಿ: ತಾಳಮದ್ದಲೆ ಕಾರ್ಯಕ್ರಮ

ಶಿರಸಿ: ಭೀಷ್ಮ ಹಾಗೂ ಪರಶುರಾಮನ ಸಂವಾದದ ಅಪರೂಪದ ತಾಳಮದ್ದಲೆ ತಾಲೂಕಿನ ಕೆರೇಕೈನ ಛಂದಸ್ವತಿಯಲ್ಲಿ ಸೋಮವಾರ ನಡೆಯಿತು.

ಭೀಷ್ಮ ವಿಜಯದ ಕೊನೇಯ ಭಾಗದ ಯಕ್ಷ ಸಂವಾದ ಗುರುವೇ ನಿನ್ನೊಳು ಸಮರದ ದೃಶ್ಯಕಾವ್ಯವಾಗಿ ಪ್ರೇಕ್ಷಕರಿಗೆ ಕಟ್ಟಿಕೊಟ್ಟಿತು. ಹಿರಿಯ ಕಲಾವಿದರುಗಳಾದ ಡಾ. ಎಂ. ಪ್ರಭಾಕರ ಜೋಶಿ ಹಾಗೂ ಅಶೋಕ ಭಟ್ಟ ಉಜಿರೆ ಭಾಗವಹಿಸಿ ಮಾತನ ಮಂಟಪ ನಿರ್ಮಿಸಿ, ಕರ್ಮ ಧರ್ಮದ ಸಂಕಟವನ್ನೂ ತೆರೆದಿಟ್ಟರು. ಭಾಗವತಿಕೆಯಲ್ಲಿ ಪ್ರಸಿದ್ಧ ಭಾಗವತ ಕೇಶವ ಹೆಗಡೆ ಕೊಳಗಿ ಅವರ ಅಪರೂಪದ ಸ್ವರ ಮಂಗಲದಲ್ಲಿ, ಮದ್ದಲೆಯಲ್ಲಿ ಶಂಕರ ಭಾಗವತ ಯಲ್ಲಾಪುರ, ಚಂಡೆಯಲ್ಲಿ ಪ್ರಸನ್ನ ಹೆಗ್ಗಾರ್ ವಾದನಗಳ ಮೂಲಕ ಝೇಂಕರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿ.ಉಮಾಕಾಂತ ಭಟ್ಟ ಕೆರೇಕೈ, ಛಂದಸ್ವತಿ ಪ್ರವೇಶದ ದಿನದಂದು ನಾಲ್ಕು ದಶಕಗಳ ಕಾಲ ತಾಳಮದ್ದಲೆ ಕ್ಷೇತ್ರದಲ್ಲಿ ಅರ್ಥ ಹೇಳಿದ್ದ ಕೆರೇಕೈ ಕೃಷ್ಣ ಭಟ್ಟ ಅವರ ಸ್ಮರಣೆಯಲ್ಲಿ ತಾಳಮದ್ದಲೆ ಹಮ್ಮಿಕೊಳ್ಳಲಾಗಿದೆ. ಗಾನ ಹಾಗೂ ಮಾತಿನ ಮಿಳಿತದ ಕಾರ್ಯಕ್ರಮ ಎಂದರು. ಇದಕ್ಕೂ ಮೊದಲು ಗಾನ ಸಿಂಚನ ಭಜನಾ ಮಂಡಳಿ ಕೆರೇಕೈ ಹಳದೋಟದ ಮಾತೆಯರು ಭಜನೆ ಹಾಡಿ ಗಮನ ಸೆಳೆದರು.



ಸಂಪನ್ನಗೊಂಡ ನಾಟ್ಯತರಂಗದ ವಾರ್ಷಿಕೋತ್ಸವ

ಸಿದ್ದಾಪುರ: ಸಾಗರದ ನಾಟ್ಯ ತರಂಗ (ರಿ) ಸಂಸ್ಥೆಯ ಸಿದ್ದಾಪುರ ಶಾಖೆಯ ಭರತನಾಟ್ಯ ವಾರ್ಷಿಕೋತ್ಸವವು ಪಟ್ಟಣದ ಶ್ರೀರಾಘವೇಂದ್ರ ಮಠದ ಸಭಾಭವನದಲ್ಲಿ ನೆರವೇರಿತು. ನಾಟ್ಯ ಗುರುಗಳಾದ ವಿದುಷಿ ಅರ್ಚನಾ ಎಸ್. ಹೆಗಡೆ ಹಾಗೂ ಕುಟುಂಬದವರು ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಭಾ ಕಾರ್ಯಕ್ರಮದಲ್ಲಿ ನಾಟ್ಯತರಂಗ ಸಂಸ್ಥೆಯ ಸಂಸ್ಥಾಪಕರಾದ ವಿದ್ವಾನ್ ಜಿ.ಬಿ. ಜನಾರ್ಧನ ಸಾಗರ, ಟಿಎಂಎಸ್ ಅಧ್ಯಕ್ಷ ಆರ್. ಎಂ.ಹೆಗಡೆ ಬಾಳೆಸರ, ಖ್ಯಾತ ವೈದ್ಯ ಡಾ.ಕೆ.ಶ್ರೀಧರ ವೈದ್ಯ ಸಿದ್ದಾಪುರ, ಸಾಹಿತಿ ಜಿ.ಜಿ.ಹೆಗಡೆ ಬಾಳಗೋಡ ಪಾಲ್ಗೊಂಡಿದ್ದರು. ಶಿಕ್ಷಣ ಪ್ರಸಾರಕ ಸಮಿತಿಯ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ಅಧ್ಯಕ್ಷತೆ ವಹಿಸಿದ್ದರು.

ನಾಟ್ಯತರಂಗದ ನೂರಕ್ಕೂ ಹೆಚ್ಚು ಮಕ್ಕಳು ತಮ್ಮ ನೃತ್ಯ ಕಲಿಕೆಯ ಪ್ರದರ್ಶನವನ್ನು ನೀಡಿ ಸೈ ಎನಿಸಿಕೊಂಡರು.ಹಾಡುಗಾರಿಕೆಯಲ್ಲಿ ನಂದಿನಿ ಮೈಸೂರು, ಮೃದಂಗದಲ್ಲಿ ವಿದ್ವಾನ್ ನಾರಾಯಣ ಬಳಕ್ಕೂರಾಯ ಉಡುಪಿ, ವಯೋಲಿನಲ್ಲಿ ಪ್ರಣೀತ ಬಳಕ್ಕೂರಾಯ್ ಉಡುಪಿ, ರಿದಂಪ್ಯಾಡ್‌ನಲ್ಲಿ ರಾಘವೇಂದ್ರ ರಂಗಧೋಳ್ ಶಿವಮೊಗ್ಗ ಹಾಗೂ ನಟುವಾಂಗದಲ್ಲಿ ನೃತ್ಯ ಶಿಕ್ಷಕಿ ಅರ್ಚನಾ ಹೆಗಡೆ ಸಹಕರಿಸಿದರು.

ಆಹ್ವಾನಿತ ಬಾಲ ಕಲಾವಿದರಾದ ಕು.ತೇಜೋಮಯಿ ಗದ್ದಿ ಹಾಗೂ ಕು.ಶಮಂತಕ ಇವರಿಂದ ಆಕರ್ಷಕ ನೃತ್ಯ ಪ್ರದರ್ಶನ ನಡೆಯಿತು.



ಕಾರ್ಯಕ್ರಮದ ಕೊನೆಯಲ್ಲಿ ನಾಟ್ಯ ತರಂಗ ಸಾಗರ ತಂಡದಿಂದ ''ತನ್ನೊದಂತಿ ಪ್ರಚೋದಯಾತ್'' ಎಂಬ ಅತ್ಯದ್ಭುತವಾದ ನೃತ್ಯ ರೂಪಕ ಸಂಪನ್ನಗೊಂಡಿತು.

ಗುರು ವಿದ್ವಾನ್ ಜಿ.ಬಿ.ಜನಾರ್ದನ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.ಕು.ಸಂಸ್ಥಾ ಮತ್ತು ಕು.ಶ್ರಾವ್ಯ ಪ್ರಾರ್ಥಿಸಿದರು. ಸುಮಾ ಹೆಗಡೆ ಸ್ವಾಗತಿಸಿದರು. ಸ್ನೇಹಾ ಹೆಗಡೆ ಮತ್ತು ಅನುಷಾ ಹೆಗಡೆ ನಿರ್ವಹಿಸಿದರು. ನೃತ್ಯ ಶಿಕ್ಷಕಿ ವಿದುಷಿ ಅರ್ಚನಾ ಹೆಗಡೆ ವಂದಿಸಿದರು.

ಕಿರುಸುದ್ದಿ

ಸಚಿವ ಶಿವಾನಂದ ಪಾಟೀಲ ಜಿಲ್ಲಾ ಪ್ರವಾಸ

ಹಾವೇರಿ: ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ಏ.9ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಏ.9 ರಂದು ಬೆಳಿಗ್ಗೆ 9.30 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು, ಬೆ.10.30ಕ್ಕೆ ಹಾವೇರಿಗೆ ಆಗಮಿಸುವರು. ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಾವೇರಿ ಜಿಲ್ಲೆ ಮರಳು ಉಸ್ತುವಾರಿ ಸಮಿತಿ ಮತ್ತು ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಜೆ 4ಗಂಟೆಗೆ ಹುಬ್ಬಳ್ಳಿಗೆ ಪ್ರಯಾಣ ಬೆಳೆಸಲಿದ್ದಾರೆ.

ಹುಬ್ಬಳ್ಳಿಯಿಂದ ಕನ್ಯಾಕುಮಾರಿವರೆಗೆ ಸೈಕ್ಲಿಂಗ್

ಹಾವೇರಿ: ಹುಬ್ಬಳ್ಳಿಯ ಸೈಕಲ್ ಕ್ಲಬ್ ವತಿಯಿಂದ ಹುಬ್ಬಳ್ಳಿಯಿಂದ– ಕನ್ಯಾಕುಮಾರಿವರೆಗೆ 1 ಸಾವಿರ ಕಿಮೀ ಆಯೋಜಿಸಿರುವ ಸೈಕ್ಲಿಂಗ್‌ಗೆ ಏ.9ರಂದು ಬೆಳಗ್ಗೆ ಬಂಕಾಪುರ ಟೋಲ್ ಸಮೀಪ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಲಿದ್ದಾರೆ. ಹಾವೇರಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಗೋವಾ, ಬೆಂಗಳೂರು, ಮೈಸೂರು, ಹೈದರಾಬಾದ್ ಮತ್ತು ಮುಂಬೈನ ಸುಮಾರು 40 ಸೈಕಲ್ ಸವಾರರು ಸೈಕ್ಲಿಂಗ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

ರೈತರ ಮಕ್ಕಳಿಂದ ತೋಟಗಾರಿಕಾ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ: ಗದಗ ಜಿಲ್ಲೆಯ ತೋಟಗಾರಿಕಾ ತರಬೇತಿ ಕೇಂದ್ರದಲ್ಲಿ 2026–27ನೇ ಸಾಲಿಗೆ 10ತಿಂಗಳ ಅವಧಿಯ ತೋಟಗಾರಿಕಾ ತರಬೇತಿ ಪಡೆಯಲು ರೈತರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ ಎಸ್ಸೆಸ್ಸೆಲ್ಸಿ ಉತ್ತೀರ್ಣರಾಗಿರಬೇಕು. ಅಭ್ಯರ್ಥಿಗಳ ತಂದೆ/ತಾಯಿ ಅಥವಾ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು, ಪಹಣಿ ಕಡ್ಡಾಯವಾಗಿ ಸಲ್ಲಿಸಬೇಕು.

ಅರ್ಹ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಏ.15ರೊಳಗಾಗಿ ಸಲ್ಲಿಸಬೇಕು. ಏ.23ರಂದು 11 ಗಂಟೆಗೆ ದೇವಗಿರಿಯ ಜಿಲ್ಲಾಡಳಿತ ಭವನದ ತೋಟಗಾರಿಕೆ ಉಪನಿರ್ದೇಶಕರ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ಏ.27ರಂದು ತರಬೇತಿಗೆ ಆಯ್ಕೆಯಾದವರ ಪಟ್ಟಿ ಪ್ರಕಟಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ಮೇ 2ರಂದು ತರಬೇತಿಗೆ ಹಾಜರಾಗಬೇಕು.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಕನಿಷ್ಟ 18 ವರ್ಷ ಹಾಗೂ ಗರಿಷ್ಠ 33, ಇತರ ಅಭ್ಯರ್ಥಿಗಳಿಗೆ ಗರಿಷ್ಟ 30 ವರ್ಷದೊಳಗಿರಬೇಕು ಹಾಗೂ ಮಾಜಿ ಸೈನಿಕರು 33 ವರ್ಷದಿಂದ 65 ವರ್ಷದೊಳಗಿರಬೇಕು. ಅರ್ಜಿ ಶುಲ್ಕವಾಗಿ ಸಾಮಾನ್ಯ ಅಭ್ಯರ್ಥಿಗೆ ರೂ.30 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಅಂಗವಿಕಲ ಅಭ್ಯರ್ಥಿಗಳು ರೂ.15ಗಳ ಪೋಸ್ಟಲ್ ಆರ್ಡರ್‌ರ ಅಥವಾ ಡಿಡಿಯನ್ನು ತೋಟಗಾರಿಕೆ ಉಪನಿರ್ದೇಶಕರು,(ಜಿ.ಪಂ)ಹಾವೇರಿ ಇವರ ಹೆಸರಿಗೆ ಪಡೆಯಬೇಕು.

ಅರ್ಜಿ ನಮೂನೆ ಇಲಾಖೆ ವೆಬ್‌ಸೈಟ್ https://horticulturedir.karnataka.gov.in ನಲ್ಲಿ ಪಡೆದುಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ವ), ಹಾವೇರಿ ಹಾಗೂ ತಾಲೂಕು ಮಟ್ಟದ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಲು ಹಿರಿಯ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ಪುರುಷ ಶವ ಪತ್ತೆ

ಹಾವೇರಿ: ಹಾವೇರಿ ರೈಲ್ವೆ ನಿಲ್ದಾಣದ ವೇದಿಕೆ ನಂ.2 ಬ್ಯಾಡಗಿ ಎಂಡ್ ಹತ್ತಿರ 50 ರಿಂದ 55 ವರ್ಷದ ಪುರುಷ ರೈಲುಗಾಡಿಗೆ ತಲೆಕೊಟ್ಟು ಮೃತಪಟ್ಟಿದ್ದು, ಮೃತನ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಮೃತ ವ್ಯಕ್ತಿ 5.2 ಅಡಿ ಎತ್ತರ, ಗೋದಿ ಮೈಬಣ್ಣ, ಬಲಗೈ ಮೇಲೆ ಆಂಜನೇಯ ಹಚ್ಚೆ ಹಾಗೂ ಎಡಗೈ ಮೇಲೆ ಗೌರವ ಅಂತ ಕನ್ನಡದಲ್ಲಿ ಹಚ್ಚೆ ಇರುತ್ತದೆ. ಚಾಕಲೇಟ ಬಿಳಿ ಕಪ್ಪು ಬಣ್ಣದ ಉದ್ದನೇಯ ಗೆರೆಯುಳ್ಳ ರೆಡಿಮೆಡ್ ಶರ್ಟ್, ಕಂದು ಬಿಳಿ ಬಣ್ಣದ ಚೌಕಳಿ ಲುಂಗಿ ಹಾಗೂ ಕೆಂಪು ಉಡದಾರ ಧರಿಸಿದ್ದಾನೆ. ಮೃತ ವ್ಯಕ್ತಿಯ ವಾರಸುದಾರರು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0838–2384751 ಅಥವಾ ಮೊ.9480802128 ಸಂಪರ್ಕಿಸಬಹುದೆಂದು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶಿಗ್ಗಾಂವ: ಶ್ರೀರಾಮ ಸೇನಾ ವತಿಯಿಂದ ಮಂಗಳವಾರ ಶ್ರೀರಾಮ ನವಮಿ ಹಾಗೂ ಬೃಹತ್ ಶೋಭಾ ಯಾತ್ರೆಯನ್ನು ಶಿಗ್ಗಾಂವ ನಗರದ ಪ್ರಮುಖ ಬೀದಿಗಳಲ್ಲಿ ನಡೆಸಲಾಯಿತು. ನಂತರ ವೇದಿಕೆ ಕಾರ್ಯಕ್ರಮ ನಡೆಯಿತು. ಈ ವೇಳೆ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಯುವ ಮುಖಂಡ ಭರತ್ ಬೊಮ್ಮಾಯಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ

ಹಾನಗಲ್ಲ: ತಾಲೂಕಿನ ಅಲ್ಲಾಪುರ ಗ್ರಾಮದಲ್ಲಿ 20 ಲಕ್ಷ ರೂ.ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಸಿಸಿ ರಸ್ತೆ, ಸಿಸಿ ಗಟಾರ್ ನಿರ್ಮಾಣ, ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಮಾನೆ, ಗ್ರಾಮ ಭಾರತದ ಜೀವನಾಡಿಯಾಗಿದ್ದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಸ್ವರೂಪ ಬದಲಿಸಿ ಕೇಂದ್ರ ಸರ್ಕಾರ ಗ್ರಾಮೀಣಾಭಿವೃದ್ಧಿಯ ಮೇಲೆ ಗದಾಪ್ರಹಾರ ನಡೆಸಿದೆ. ಸಾಮಾನ್ಯವಾಗಿ ಪ್ರತಿ ಗ್ರಾಮ ಪಂಚಾಯಿತಿಗಳು ಯೋಜನೆಯಡಿ ವಾರ್ಷಿಕ ಒಂದು ಕೋಟಿವರೆಗೆ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುತ್ತಿದ್ದವು. ಕೂಲಿ ಕಾರ್ಮಿಕರ ವಲಸೆ ತಡೆಗಟ್ಟುವಲ್ಲಿ ಸಹ ಯೋಜನೆ ವರದಾನವಾಗಿತ್ತು. ಯೋಜನೆಯ ಸ್ವರೂಪ ಬದಲಾಗಿರುವುದರಿಂದ ಕಾಮಗಾರಿ ಕೈಗೊಳ್ಳುವುದು ಕಷ್ಟಸಾಧ್ಯವಾಗಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು ವರ್ಷದಿಂದ ವರ್ಷಕ್ಕೆ ಕೇಂದ್ರ ಸರ್ಕಾರ ಜಿ.ಎಸ್.ಟಿ. ರೂಪದಲ್ಲಿ ಹೆಚ್ಚು ಹೆಚ್ಚು ತೆರಿಗೆ ಸಂಗ್ರಹಿಸುತ್ತಿದೆ. ಆದರೆ ನ್ಯಾಯಯುತ ಅನುದಾನವನ್ನು ಕಡಿತಗೊಳಿಸಿ ಭಾರಿ ಅನ್ಯಾಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡರಾದ ಅಲ್ಲಾಭಕ್ಷ ಇನಾಂದಾರ, ಯಲ್ಲಪ್ಪ ನಿಂಬಣ್ಣನವರ, ಮಹ್ಮದಹನೀಫ್ ಕಳಗೊಂಡ, ಇಸಾಕ್ ಲಾಲಾನವರ, ಗುಲಾಬ ಕಳಗೊಂಡ, ನಿಜಾಮಸಾಬ ಹುದ್ದಾರ, ಹಜರತ್ ಅಲಿ ಪರಾಸ್, ಅಬ್ದುಲ ರೆಹೆಮಾನ್ ಖಾಜಿ, ಸುಲೇಮಾನ ಪರಾಸ್ ಇದ್ದರು.



ಹಾನಗಲ್: ತಾಲೂಕಿನ ಅಲ್ಲಾಪುರ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಮತ

ಶ್ರಮದ ಬೆವರಿನ ಫಲ ಶಾಶ್ವತ, ಸುಖದಾಯಕ

ಶಿಗ್ಗಾಂವಿ: ಮನುಷ್ಯ ಪ್ರಜ್ಞಾವಂತನಾಗಿ ಹೃದಯ ಶ್ರೀಮಂತಿಕೆವುಳ್ಳವನಾಗಿ ಬಾಳಿದರೆ ಬಾಳು ಸಾರ್ಥಕ. ಶ್ರಮದ ಬೆವರಿನ ಫಲ ಯಾವಾಗಲೂ ಶಾಶ್ವತ ಮತ್ತು ಸುಖದಾಯಕವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಬುಧವಾರ ತಾಲೂಕಿನ ಅರಟಾಳ ಗ್ರಾಮದ ಕ್ಷೇತ್ರನಾಥ ಶ್ರೀ ವರವೀರಭದ್ರಸ್ವಾಮಿ 32ನೇ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಮನುಷ್ಯನಾಗಿ ಬಾಳುವುದು ಸುಲಭ. ಆದರೆ ಮಾನವೀಯತೆಯಿಂದ ನಡೆಯುವುದು ತುಂಬಾ ಕಷ್ಟ. ಒಳ್ಳೆಯ ನಡವಳಿಕೆಯೇ ನಿಜವಾದ ಧರ್ಮ. ಸುಖ ಸಮೃದ್ಧಿಗಳು ಬೆಳೆಯುತ್ತಿವೆ. ಆದರೆ ಸತ್ಕೃತಿ- ಸಂಸ್ಕೃತಿ ಬೆಳೆಯುತ್ತಿಲ್ಲ. ವಿದ್ಯಾ ಬುದ್ಧಿ ಬೆಳೆದ ಪ್ರಮಾಣದಲ್ಲಿ ಹೃದಯ ಪರಿವರ್ತನೆಯಾಗದಿರುವುದೇ ಇಂದಿನ ಎಲ್ಲ ಗೊಂದಲಗಳಿಗೆ ಕಾರಣ ಎಂದು ವಿಷಾಧಿಸಿದರು.

ಬೆಟ್ಟದಷ್ಟು ಕಷ್ಟ ಬಂದರೂ ಅಚಲವಾಗಿರುವ ಗಟ್ಟಿತನ ನಮ್ಮದಾಗಬೇಕು. ವಿವೇಕ ಶ್ರದ್ಧೆ ನಿಷ್ಠೆ ಸದಾ ಜಾಗೃತಗೊಳ್ಳಬೇಕು. ಅರಿವಿನಕಣ್ಣುತೆರೆಸಲುಧರ್ಮ ಮತ್ತು ಗುರು ಕಾರುಣ್ಯ ಬೇಕು. ನಾಗರೀಕತೆಯ ಹೆಸರಿನಲ್ಲಿ ನಿಜವಾದ ಜೀವನ ಮೌಲ್ಯಗಳು ಕಣ್ಮರೆಯಾಗಬಾರದು. ದುಷ್ಟರ ಸಂಹಾರ-ಶಿಷ್ಟರ ಸಂರಕ್ಷಣೆಗಾಗಿ ಅವತರಿಸಿದಾತ ಶ್ರೀ ವೀರಭದ್ರಸ್ವಾಮಿ ಎಂದರು. ಇದೇ ಸಂದರ್ಭದಲ್ಲಿ ಲಿಂ. ರುದ್ರಗೌಡ ಪಾಟೀಲರ ಒಡಲ ಕುಡಿಗಳಾದ ಚನ್ನವೀರಗೌಡರ ಮತ್ತು ವೀರೇಶಗೌಡರ ಷಷ್ಠಿಪೂರ್ತಿ ಶಾಂತಿ ಸಮಾರಂಭ ಸಂಯೋಜಿಸಿರುವುದು ಅವರಲ್ಲಿರುವ ಧರ್ಮ ನಿಷ್ಠೆ ಗುರುಭಕ್ತಿ ಶ್ರದ್ಧೆಗೆ ಈ ಸಮಾರಂಭ ಸಾಕ್ಷಿಯಾಗಿದೆ ಎಂದು ಹರುಷ ವ್ಯಕ್ತಪಡಿಸಿ ಉಭಯ ಸಹೋದರರಿಗೆ ಶ್ರೀ ಪೀಠದಿಂದ ಗುರುರಕ್ಷೆ ಸ್ಮರಣಿಕೆ ನೀಡಿ ಶುಭ ಹಾರೈಸಿದರು.



> ಲಿಂ.ಅರಟಾಳು ರುದ್ರಗೌಡ ಪಾಟೀಲರು ಬೆಳಗಾವಿ ಕೆಎಲ್‌ಇ ಸಂಸ್ಥೆಯ ಬಹಳಷ್ಟು ಪ್ರಗತಿಗಾಗಿ ಪ್ರಮುಖ ಪಾತ್ರ ವಹಿಸಿದ್ದನ್ನು ಮರೆಯಲಾಗದು. ಅರಟಾಳು ಗ್ರಾಮದಲ್ಲಾಗಲಿ ಶಿಗ್ಗಾಂವಿಯಲ್ಲಾಗಲಿ ಅವರ ಹೆಸರು ಚಿರಸ್ಥಾಯಿಯಾಗುವಂತೆ ಕೆಎಲ್‌ಇ ಸಂಸ್ಥೆಯಿಂದ ಶೈಕ್ಷಣಿಕ ಕೇಂದ್ರವನ್ನು ಆರಂಭಿಸಬೇಕು.
>
> ■ ಬಸವರಾಜ ಬೊಮ್ಮಾಯಿ. ಸಂಸದ

ನೆಗಳೂರು ಗುರುಶಾಂತೇಶ್ವರ ಶಿವಾಚಾರ್ಯರು, ಬಂಕಾಪುರ ರೇವಣಸಿದ್ಧೇಶ್ವರ ಶಿವಾಚಾರ್ಯರು, ಗಂಜೀಗಟ್ಟಿ ಡಾ.ಶಿವಲಿಂಗ ಶಿವಾಚಾರ್ಯರು, ಹಾವೇರಿ ಬಣ್ಣದಮಠದ ಅಭಿನವರುದ್ರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು, ನರೇಗಲ್ ಮಲ್ಲಿಕಾರ್ಜುನ ಶಿವಾಚಾರ್ಯರು, ಹನುಮಾಪುರದ ಸೋಮಶೇಖರ ಶಿವಾಚಾರ್ಯರು ಉಪಸ್ಥಿತರಿದ್ದರು.

ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಸಮಾರಂಭ ಉದ್ಘಾಟಿಸಿ ಪಾಟೀಲ ಸಹೋದರರ ಆದರ್ಶ ಗುಣಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಕೆಎಲ್‌ಇ ಸಂಸ್ಥೆ ನಿರ್ದೇಶಕ ಮಹಾಂತೇಶ ಕವಟಗಿಮಠ, ಮಾಜಿ ಸಂಸದ ಮಂಜುನಾಥ ಕುನ್ನೂರ, ಶಶಿಧರ ಯಲಿಗಾರ ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು. ಹಲವಾರು ಗಣ್ಯರಿಗೆ ಮತ್ತು ಧರ್ಮಾಭಿಮಾನಿಗಳಿಗೆ ಗುರುರಕ್ಷೆ ಕೊಡಿಸಲಾಯಿತು. ಸವಣೂರಿನ ಡಾ.ಗುರುಪಾದಯ್ಯ ಸಾಲಿಮಠ ನಿರೂಪಿಸಿದರು. ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಕಳಸ, ಕನ್ನಡಿ ವಾದ್ಯ ವೈಭವಗಳೊಂದಿಗೆ ಸಂಭ್ರಮದಿಂದ ಜರುಗಿತು. ಸಹಸ್ರಾರು ಜನರು ಪಾಲ್ಗೊಂಡು ಆಶೀರ್ವಾದ ಪಡೆದರು. ಸಮಾರಂಭದ ನಂತರ ಅನ್ನ ದಾಸೋಹ ಜರುಗಿತು.

ಕೇಂದ್ರ ಸರ್ಕಾರದಿಂದ ತಾರತಮ್ಯ: ಶಾಸಕ ಮಾನೆ

ಹಾನಗಲ್ಲ: ಕರ್ನಾಟಕದ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ 2025–26ನೇ ಸಾಲಿನಲ್ಲಿ 15 ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ನೀಡಬೇಕಿದ್ದ 15,583 ಕೋಟಿ ರೂ. ನೀಡದೇ ಕನ್ನಡಿಗರನ್ನು ಮಲತಾಯಿ ಮಕ್ಕಳಂತೆ ನೋಡುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಹಿರೇಬಾಸೂರು ಗ್ರಾಮದಲ್ಲಿ 65 ಲಕ್ಷ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು 15 ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಹಾನಗಲ್ ತಾಲೂಕಿನ 42 ಗ್ರಾಮ ಪಂಚಾಯಿತಿಗಳಿಗೆ ಒಟ್ಟು 15.5 ಕೋಟಿ ರೂ., ಹಾನಗಲ್ ಪುರಸಭೆಗೆ 1.19 ಕೋಟಿ ರೂ. ಬಿಡುಗಡೆಯಾಗಬೇಕಿತ್ತು. 2025–26 ನೇ ಸಾಲಿನ ಆರ್ಥಿಕ ವರ್ಷ ಪೂರ್ಣಗೊಂಡರೂ ಬಿಡಿಗಾಸು ಅನುದಾನ ಸಹ ಬಿಡುಗಡೆಯಾಗಿಲ್ಲ, ಕುಡಿಯುವ ನೀರು ಪೂರೈಕೆ, ನೈರ್ಮಲ್ಯ, ಬೀದಿದೀಪ ನಿರ್ವಹಣೆ ಸೇರಿದಂತೆ ಇತರ ಕೆಲಸ, ಕಾರ್ಯಗಳಿಗೆ ಬಳಕೆಯಾಗಬೇಕಿದ್ದ ಅನುದಾನ ಬಾರದೇ ಸ್ಥಳೀಯ ಸಂಸ್ಥೆಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ನ್ಯಾಯಯುತವಾಗಿ ಸಿಗಬೇಕಿದ್ದ ಅನುದಾನದ ಬಗ್ಗೆ ಪ್ರಶ್ನಿಸಿದರೆ ಕೇಂದ್ರ ಸರಕಾರ ಇಲ್ಲಸಲ್ಲದ ಸಂಗತಿಗಳನ್ನು ಎಳೆದು ತರುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ ಸಂಸದರೂ ಕೂಡ ಈ ಕುರಿತು ಪ್ರಶ್ನಿಸಿದರೆ ಎಲ್ಲಿ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆಯೋ ಎನ್ನುವ ಆತಂಕದಲ್ಲಿ ಇದ್ದಂತಿದೆ ಎಂದು ಛೇಡಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಮುಖಂಡರಾದ ದಾವಲಸಾಬ ನಾಗನೂರ, ಶಂಕ್ರಪ್ಪ ತೋಟಗೇರ, ಸಿದ್ದಪ್ಪ ಬ್ಯಾತನಾಳ, ಪರಶುರಾಮ ಜಾಡರ, ಗುಡ್ಡಪ್ಪ ತೋಟಗೇರ, ಸುರೇಶ ಹರಿಜನ, ಉಮೇಶ ಭಜಂತ್ರಿ, ಮರ್ದಾನ್ ಅಂಗಡಿ, ಪ್ರವೀಣ ಹರಿಜ, ಶಿವರಾಜ್ ದೇಸಾಯಿ, ಮರ್ದಾನ್ ತಹಶೀಲ್ದಾರ್, ಮುಕ್ತಾರ ಬಾಸೂರ, ಧರ್ಮಣ್ಣ ತೋಟಗೇರ ಸೇರಿದಂತೆ ಇನ್ನೂ ಹಲವರು ಈ ಸಂದರ್ಭದಲ್ಲಿ ಇದ್ದರು.



ಅರ್ಥಪೂರ್ಣ ಜಯಂತಿಗೆ ಡಿಸಿ ಸೂಚನೆ



ಹಾವೇರಿ: ಜಿಲ್ಲಾಡಳಿತದಿಂದ ಜಗಜ್ಯೋತಿ ಶ್ರೀ ಬಸವೇಶ್ವರ ಹಾಗೂ ಶ್ರೀ ಶಂಕರಾಚಾರ್ಯ ಜಯಂತಿಗಳ ಕಾರ್ಯಕ್ರಮ ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಆಚರಣೆಗೆ ಎಲ್ಲ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ್ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಜಗಜ್ಯೋತಿ ಶ್ರೀ ಬಸವೇಶ್ವರ, ಶ್ರೀ ಶಂಕರಾಚಾರ್ಯ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಮಾಜದ ಮುಖಂಡರೊಂದಿಗೆ ಚರ್ಚಿಸಿ, ಶ್ರೀ ಬಸವೇಶ್ವರ ಜಯಂತಿ ಏಪ್ರಿಲ್ 20ರಂದು ಬೆಳಿಗ್ಗೆ 9ಗಂಟೆಗೆ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ, ಬೆಳಿಗ್ಗೆ 10 ಗಂಟೆಗೆ ಹಾವೇರಿ ನಗರದ ಶ್ರೀ ಹುಕ್ಕೇರಿಮಠದಲ್ಲಿ ವೇದಿಕೆ ಕಾರ್ಯಕ್ರಮ ಹಾಗೂ ಸಂಜೆ 4 ಗಂಟೆಗೆ ಬಸವೇಶ್ವರ ಭಾವಚಿತ್ರ ಮೆರವಣಿಗೆ, ಶ್ರೀ ಶಂಕರಾಚಾರ್ಯ ಜಯಂತಿ ಏ.21ರಂದು ಹಾವೇರಿ ನಗರದ ಸೀತಾರಾಮ ಮಂಗಲ ಕಾರ್ಯಾಲಯದಲ್ಲಿ ವೇದಿಕೆ ಕಾರ್ಯಕ್ರಮ ಹಾಗೂ ಸಂಜೆ 4 ಗಂಟೆಗೆ ಶಂಕರ ಭಾರತಿ ಮಠದಿಂದ ಭಾವಚಿತ್ರ ಮೆರವಣಿಗೆ ನಡೆಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಮಹನೀಯರ ಭಾವಚಿತ್ರ ಮೆರವಣಿಗೆ, ಪೊಲೀಸ್ ಬಂದೋಬಸ್ತ್, ಕಲಾ ತಂಡಗಳ ನೇಮಕ, ಉಪನ್ಯಾಸಕರು, ಆಮಂತ್ರಣಪತ್ರಿಕೆ, ವೇದಿಕೆ, ಧ್ವನಿ-ಬೆಳಕು, ಆಸನ, ಕುಡಿಯುವ ನೀರು, ಉಪಹಾರ, ವ್ಯವಸ್ಥೆಯನ್ನು ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಮನ್ವಯದಿಂದ ಮಾಡಬೇಕೆಂದು ಸಲಹೆ ನೀಡಿದರು.

ಈ ಮಹನೀಯರ ಜಯಂತಿಯನ್ನು ಎಲ್ಲ ಶಾಲಾ-ಕಾಲೇಜುಗಳಲ್ಲಿ ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಆಚರಣೆ ಮಾಡಲು ಆದೇಶ ಹೊರಡಿಸಲಾಗುವುದು ಎಂದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹಾಜರಿದ್ದರು.

ನಿವೃತ್ತ ಯೋಧರಿಗೆ, ರೈತರಿಗೆ, ಪೌರ ಕಾರ್ಮಿಕರಿಗೆ ಸನ್ಮಾನ

ಹಾವೇರಿ: ಮಾಜಿ ಶಾಸಕ, ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಅವರ 63ನೇ ಜನ್ಮದಿನದ ಪ್ರಯುಕ್ತ ನಗರದ ಭಂಟರ ಭವನದಲ್ಲಿ ಹಾವೇರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರಿಂದ ನಿವೃತ್ತ ಯೋಧರಿಗೆ, ರೈತ ಬಾಂಧವರಿಗೆ ಮತ್ತು ಪೌರ ಕಾರ್ಮಿಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣವರ, ಭರತ ಬೊಮ್ಮಾಯಿ, ಜಿಪಂ ಮಾಜಿ ಸದಸ್ಯ ಸಿದ್ದರಾಜ ಕಲಕೋಟಿ, ಎನ್.ಎಂ. ಈಟೇರ, ರಾಜ್ಯ ಅಲ್ಪಸಂಖ್ಯಾತರ ಮೋರ್ಚಾದ ಉಪಾಧ್ಯಕ್ಷ ಅಲ್ಲಾಭಕ್ಷ ತಿಮ್ಮಾಪೂರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಂಜುಂಡೇಶ ಕಳ್ಳೇರ, ನೀಲಪ್ಪ ಚಾವಡಿ, ಸಿದ್ದು ಚಿಕ್ಕಬಿದರಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಬಸಮ್ಮ ಅಬಲೂರ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಕಿರಣ ಕೋಣನವರ, ಹಾವೇರಿ ನಗರ ಮಂಡಲ ಅಧ್ಯಕ್ಷ ಕಿರಣ ಕೊಳ್ಳಿ, ಗ್ರಾಮೀಣ ಮಂಡಲ ಅಧ್ಯಕ್ಷ ಮಾರುತಿ ಗೊರವರ, ಹತ್ತಿಮತ್ತೂರ ಮಂಡಲ ಅಧ್ಯಕ್ಷ ಬಸವರಾಜ ಕೊಳಿವಾಡ, ಬ್ಯಾಡಗಿ ಅಧ್ಯಕ್ಷ ನಿಂಗಪ್ಪ ಬಟ್ಟಲಕಟ್ಟಿ, ಹಾನಗಲ್ ಅಧ್ಯಕ್ಷ ಮಹೇಶ ಕಮಡೊಳ್ಳಿ, ಕೆ.ಸಿ.ಪಾವಲಿ, ಕೆ.ಸಿ.ಕೋರಿ, ಡಾ.ರವಿಕುಮಾರ ಮಲ್ಲಾಡದ, ನಿವೃತ್ತ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಪಿ.ಎಸ್ ಪಾಟೀಲ ಸೇರಿದಂತೆ ಕ್ಷೇತ್ರದ ವಿವಿಧ ಮೋರ್ಚಾಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯಕರ್ತರು ಹಾಜರಿದ್ದರು.



ಆಟೋ ಗ್ಯಾಸ್ ಕೊರತೆ ಇಲ್ಲ, ವದಂತಿಗೆ ಕಿವಿಗೊಡಬೇಡಿ: ಸ್ಪಷ್ಟನೆ

ಹಾವೇರಿ: ರಾಜ್ಯದ ವಿವಿಧ ಆಟೋ ಗ್ಯಾಸ್ ಬಂಕ್‌ಗಳಲ್ಲಿ ಅನಿಲದ ದಾಸ್ತಾನು ಕೊರತೆಯಿದೆ ಎಂಬ ತಪ್ಪು ಮಾಹಿತಿಯ ಆಧಾರದ ಮೇಲೆ, ಕಳೆದ ಕೆಲವು ದಿನಗಳಿಂದ ಆಟೋ ಮಾಲೀಕರು ಮತ್ತು ಚಾಲಕರು ಬಂಕ್‌ಗಳ ಮುಂದೆ ಸುದೀರ್ಘ ಸರತಿ ಸಾಲಿನಲ್ಲಿ ನಿಲ್ಲುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳು ಕೇವಲ ವದಂತಿ ಗಳಾಗಿದ್ದು, ಸಾರ್ವಜನಿಕರು ಆತಂಕಪಡುವ ಅಗತ್ಯ ವಿಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟಪಡಿಸಿದೆ.

ಕೆಲವು ಖಾಸಗಿ ಆಟೋ ಗ್ಯಾಸ್ ಸರಬರಾಜು ಸಂಸ್ಥೆಗಳಲ್ಲಿ ಮಾತ್ರ ಅಲ್ಪಮಟ್ಟಿನ ಕೊರತೆ ಕಂಡುಬಂದಿದ್ದು, ಇದನ್ನು ಸರಿಪಡಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಐಒಸಿ (ಇಂಡಿಯನ್ ಆಯಿಲ್), ಬಿಪಿಸಿ (ಭಾರತ್ ಪೆಟ್ರೋಲಿಯಂ) ಮತ್ತು ಎಚ್‌ಪಿಸಿ (ಹಿಂದೂಸ್ತಾನ್ ಪೆಟ್ರೋಲಿಯಂ) ಮೂಲಕ ಹೆಚ್ಚಿನ ಪ್ರಮಾಣದ ಅನಿಲವನ್ನು ಪೂರೈಕೆ ಮಾಡಲಾಗುತ್ತಿದೆ. ಹಿಂದೆ ಈ ಮೂರು ಸಂಸ್ಥೆಗಳು ಸರಾಸರಿ 56.67 ಮೆಟ್ರಿಕ್ ಟನ್ ಆಟೋ ಗ್ಯಾಸ್ ಅನ್ನು ಸರಬರಾಜು ಮಾಡುತ್ತಿದ್ದವು. ಆದರೆ ಪ್ರಸ್ತುತ ಬೇಡಿಕೆಯನ್ನು ಪೂರೈಸಲು ಸರಬರಾಜು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಾಗಿದ್ದು, ಸದ್ಯ ಪ್ರತಿದಿನ ಸರಾಸರಿ 83.58 ಮೆಟ್ರಿಕ್ ಟನ್ ಗ್ಯಾಸ್ ಅನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೂರೈಸಲಾಗುತ್ತಿದೆ.

ಕಳೆದ ಐದು ದಿನಗಳ ಪೂರೈಕೆ ವಿವರ: ಕಳೆದ ಏಪ್ರಿಲ್ 2ರಿಂದ ಏಪ್ರಿಲ್ 6ರವರೆಗಿನ ಅಂಕಿಅಂಶಗಳನ್ನು ಗಮನಿಸಿದರೆ, ಪೂರೈಕೆಯಲ್ಲಿ ಸ್ಥಿರತೆ ಇರುವುದು ಕಂಡುಬರುತ್ತದೆ. ಏಪ್ರಿಲ್ 2ರಂದು 87.78 ಮೆಟ್ರಿಕ್ ಟನ್, ಏಪ್ರಿಲ್ 3ರಂದು 86.05 ಮೆಟ್ರಿಕ್ ಟನ್, ಏಪ್ರಿಲ್ 4ರಂದು 84.80 ಮೆಟ್ರಿಕ್ ಟನ್, ಏಪ್ರಿಲ್ 5ರಂದು ಗರಿಷ್ಠ 94.11 ಮೆಟ್ರಿಕ್ ಟನ್ ಹಾಗೂ ಏಪ್ರಿಲ್ 6ರಂದು 83.58 ಮೆಟ್ರಿಕ್ ಟನ್ ಅನಿಲವನ್ನು ಈ ಮೂರು ಪ್ರಮುಖ ಸಂಸ್ಥೆಗಳು ಯಶಸ್ವಿಯಾಗಿ ಪೂರೈಕೆ ಮಾಡಿವೆ.

ಆದ್ದರಿಂದ, ರಾಜ್ಯದ ಆಟೋ ಮಾಲೀಕರು ಮತ್ತು ಚಾಲಕರು ಇಂತಹ ಯಾವುದೇ ಸುಳ್ಳು ವದಂತಿಗಳನ್ನು ನಂಬಬಾರದು ಮತ್ತು ಆತಂಕಕ್ಕೊಳಗಾಗಿ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಲ್ಲಬಾರದು ಎಂದು ಸರ್ಕಾರ ಮನವಿ ಮಾಡಿದೆ. ಅನಿಲ ಪೂರೈಕೆ ವ್ಯವಸ್ಥಿತವಾಗಿ ನಡೆಯುತ್ತಿದ್ದು, ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸಬೇಕೆಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಹೊಸ ಬಸ್ ನಿಲ್ದಾಣ ಕಾಮಗಾರಿ ಶೀಘ್ರ ಪ್ರಾರಂಭ: ಶಾಸಕ ಶಿವಣ್ಣನವರ್

ಬ್ಯಾಡಗಿ: ಪಟ್ಟಣವು ಅಂತರಾಷ್ಟ್ರೀಯ ಮಾರುಕಟ್ಟೆ ಹೊಂದಿದ್ದು ಸುಮಾರು 45 ಸಾವಿರಕ್ಕೂ ಹೆಚ್ಚು ಜನರು ವಾಸವಾಗಿದ್ದು ವಾಹನಗಳ ದಟ್ಟನೆ ಹೆಚ್ಚಾಗಿರುವುದರಿಂದ ಈಗಿರುವ ಬಸ್ ನಿಲ್ದಾಣವು ಚಿಕ್ಕದಾಗಿದ್ದು ಶೀಘ್ರದಲ್ಲಿಯೇ ಜಿಲ್ಲಾ ಪಂಚಾಯತ್ ಜಾಗದಲ್ಲಿ ಹೊಸ ಬಸ್ ನಿಲ್ದಾಣ ಕಾಮಗಾರಿಪ್ರಾರಂಭವಾಗಲಿದೆಎಂದು ಶಾಸಕ ಬಸವರಾಜ ಶಿವಣ್ಣನವರ್ ಹೇಳಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದವರು ಈಗಾಗಲೇ ಕಳೆದ ಬಾರಿ ನಾವು ಜಿಲ್ಲಾ ಪಂಚಾಯತ್ ಜಾಗದಲ್ಲಿ ನೂತನ ಬಸ್ ನಿಲ್ದಾಣ ಸ್ಥಾಪನೆ ಮಾಡಲಾಗುವುದೆಂದು ಹೇಳಿದ್ದೆವು. ಇದೀಗಸರ್ಕಾರ ಬಸ್ ನಿಲ್ದಾಣಕ್ಕೆ ಒಪ್ಪಿಗೆ ಕೊಟ್ಟು ಸರ್ಕಾರದಿಂದ ಎರಡು ಕೋಟಿ ಹಣ ಬಿಡುಗಡೆ ಸಹ ಮಾಡಲಾಗುತ್ತದೆ ಕೂಡಲೇ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಕುಡಿಯುವ ನೀರಿನ ಅಭಾವ ಆಗದಂತೆ ಎಚ್ಚರಿಕೆವಹಿಸಿ. ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಅಭಾವ ಪರಿಸ್ಥಿತಿ ಉದ್ಭವಿಸದಂತೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ನೀರಿನ ಅಭಾವ ಆಗದಂತೆ ನೋಡಿಕೊಳ್ಳಬೇಕು ತಾಲೂಕಿನ ಅಧಿಕಾರಿಗಳು ಗ್ರಾಮ ಪಂಚಾಯತಿಯ ಪಿಡಿಒಗಳು ಹಾಗೂ ಪುರಸಭೆ ಸಿಬ್ಬಂದಿ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಬೇಸಿಗೆ ಇರುವುದರಿಂದ ಕುಡಿಯುವ ನೀರಿನ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದರೆ ಅಂತಹ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಮತ್ತು ನೀರಿನ ಅಭಾವ ಉಂಟಾದರೆ ಅಧಿಕಾರಿಗಳೇ ಹೊಣೆ ಎಂದು ಎಚ್ಚರಿಕೆ ನೀಡಿದರು. ಮತ್ತು ಗ್ರಾಮೀಣ ಭಾಗಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪರಿಶೀಲಿಸಬೇಕು ಕುಡಿಯುವ ನೀರಿನ ಸಮಸ್ಯೆ ಉಂಟಾದರೆ ಅಧಿಕಾರಿಗಳು ತಕ್ಷಣ ದುರಸ್ತಿಗೊಳಿಸಿ ಜನರಿಗೆ ತೊಂದರೆ ಆಗದಂತೆ ಮುಂಜಾಗ್ರತೆ ಕ್ರಮ ವಹಿಸಬೇಕು ಎಂದರು.

ಗ್ರಾಮೀಣ ಭಾಗದಲ್ಲಿ ರೈತರಿಗೆ 7 ತಾಸು ವಿದ್ಯುತ್ ಕೊಡಿ. ಮತ್ತು ಪಟ್ಟಣದಲ್ಲಿ ಲೋಡ್ ಶೆಡ್ಡಿಂಗ್ ಹಾಗೂ ಉಂಟಾಗದಂತೆ ನೋಡಿಕೊಳ್ಳಬೇಕು ರೈತರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಬೇಕು ಎಂದು ಹೆಸ್ಕಾಂ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಕಂದಾಯ ಪ್ರಕರಣಗಳನ್ನು ಕೂಡಲೇ ಇತ್ಯರ್ಥ ಗೊಳಿಸಿ. ತಹಶೀಲ್ದಾರ್ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಪಿಡಿಒಗಳು ಬಾಕಿ ಉಳಿದಿರುವ ಕಂದಾಯ ಪ್ರಕರಣಗಳನ್ನು ಯಾವುದೇ ಸಬೂಬು ಹೇಳದೆ ಕೂಡಲೇ ಇತ್ಯೆತಗೊಳಿಸಿ ಎಂದು ಎಚ್ಚರಿಕೆ ನೀಡಿದರು.

ಸಾರ್ವಜನಿಕರನ್ನು ಕಚೇರಿಗೆ ಅಲೆದಾಡಿಸಬೇಡಿ. ತಶೀಲ್ದಾರ್ ಇಲಾಖೆ ಹಾಗೂ ತಾಲೂಕು ಮಟ್ಟದ ಇಲಾಖೆಯ ಹಾಗೂ ಗ್ರಾಮ ಪಂಚಾಯತಿ ಅಧಿಕಾರಿಗಳು ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ ಎಂದು ಆರೋಪಗಳು ಕೇಳು ಬರುತ್ತವೆ ಕೂಡಲೇ ಎಚ್ಚೆತ್ತು ಅಧಿಕಾರಿಗಳು ಸೂಕ್ತ ಸಮಯಕ್ಕೆ ಸಾರ್ವಜನಿಕರಿಗೆ ಸಿಗಬೇಕು ಅವರ ಕೆಲಸಗಳನ್ನು ಮಾಡಿಕೊಡಬೇಕು ಪದೇ ಪದೇ ಒಂದೇ ವಿಷಯಕ್ಕೆ ಸಾರ್ವಜನಿಕರನ್ನು ಅಲೆದಾಡಿಸುವುದನ್ನು ತಪ್ಪಿಸಬೇಕು ಎಂದು ಖಡಕ್ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಎಲ್ಲ ಇಲಾಖೆಯ ಅಧಿಕಾರಿಗಳು ಗ್ರಾಮ ಪಂಚಾಯತಿ ಪಿಡಿಒಗಳು ಉಪಸ್ಥಿರಿದ್ದರು.

ಕಡೆ ಕುಸ್ತಿ ಪಂದ್ಯಾವಳಿ: ಹರಪನಹಳ್ಳಿಯ ಪೈಲ್ವಾನ್‌ಗೆ ಗೆಲುವು

ಹಾವೇರಿ: ಶ್ರೀ ಪಾರ್ವತಿ ಪರಮೇಶ್ವರ ದೇವರ ಜಾತ್ರಾ ಮಹೋತ್ಸವ ಅಂಗವಾಗಿ ತಾಲೂಕಿನ ಕನವಳ್ಳಿ ಗ್ರಾಮದಲ್ಲಿ ಬುಧವಾರ ಸಂಜೆ ಕಡೆ ಕುಸ್ತಿ ಪಂದ್ಯಾವಳಿ ನಡೆದಿದ್ದು, ಹರಪನಹಳ್ಳಿಯ ಕುಸ್ತಿ ಪೈಲ್ವಾನ್ ಗೆಲುವು ಸಾಸುವ ಮೂಲಕ ಬೆಳ್ಳಿ ಕಡೆಯನ್ನು ತನ್ನದಾಗಿಸಿಕೊಂಡರು.

ಕನವಳ್ಳಿಯ ಶ್ರೀ ಪಾರ್ವತಿ ಪರಮೇಶ್ವರ ದೇವರ ಜಾತ್ರಾ ಮಹೋತ್ಸವ ಅಂಗವಾಗಿ ಕಳೆದ ನಾಲ್ಕು ದಿನಗಳಿಂದ ಕುಸ್ತಿ ಪಂದ್ಯಾವಳಿಯನ್ನು ನಡೆಸಿಕೊಂಡು ಬರಲಾಗುತ್ತಿತ್ತು. ಕನವಳ್ಳಿ, ಭರಡಿ, ಕೂರಗುಂದ, ಕಾಟೇನಹಳ್ಳಿ, ಬಸಾಪುರ, ಗುತ್ತಲ, ಕಲ್ಲೇದೇವರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಕುಸ್ತಿಪಟುಗಳು ಕುಸ್ತಿ ಅಖಾಡಕ್ಕೆ ಇಳಿದು ಎದುರಾಳಿಗೆ ಸೆಡ್ಡು ಹೊಡೆಯುವ ಮೂಲಕ ಪಂದ್ಯಾಟವನ್ನು ಆಡುತ್ತಿದ್ದರು. ಸೋತವೆಂದು ಕುಗ್ಗದೆ ಗೆದ್ದವೆಂದು ಹಿಗ್ಗದೇ ಮನರಂಜನೆಗಾಗಿ ಕುಸ್ತಿಯನ್ನು ಆಡುವ ಮೂಲಕ ಆಟವನ್ನು ಸಂಭ್ರಮಿಸುತ್ತಿದ್ದರು.

ಬುಧವಾರ ನಡೆದ ಕಡೆ ಕುಸ್ತಿ ಪಂದ್ಯಾವಳಿಗೆಂದೇ ಧಾರವಾಡ, ದಾವಣಗೇರಿ, ರಾಣೇಬೆನ್ನೂರು, ಹರಪನಹಳ್ಳಿ, ಹೊಸಪೇಟೆ, ಕುಂದಗೋಳ, ಹೊಸರಿತ್ತಿ, ಗುತ್ತಲ, ಹಾವೇರಿ, ಆಗಡಿ ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆ, ತಾಲೂಕು ಹಾಗೂ ಗ್ರಾಮಗಳ ಆಸಕ್ತ ಕುಸ್ತಿಪಟುಗಳು ಆಗಮಿಸಿದ್ದರು. ಎಂದಿನಂತೆ ಕುಸ್ತಿ ಪಂದ್ಯಾವಳಿ ನಡೆದಿದ್ದು, ಸಂಜೆ ನಡೆದ ಕಡೆ ಕುಸ್ತಿಯು ರೋಚಕ ಹಣಾಹಣಿಗೆ ಸಾಕ್ಷಿಯಾಯಿತು. ರಾಣೇಬೆನ್ನೂರು ಹಾಗೂ ಹರಪನಹಳ್ಳಿಯ ಪೈಲ್ವಾನರ ಮಧ್ಯೆ ತೀವ್ರ ಸೆಣಸಾಟ ನಡೆಯಿತು.



» ಕನವಳ್ಳಿಯ ಶ್ರೀ ಪಾರ್ವತಿ ಪರಮೇಶ್ವರ ದೇವರ ಜಾತ್ರಾ ಮಹೋತ್ಸವ

ಕೊನೆಯಲ್ಲಿ ಹರಪನಹಳ್ಳಿಯ ಪೈಲ್ವಾನ್ ಸಂಜೀವ ಭಜಂತ್ರಿ ಅವರು ರಾಣೇಬೆನ್ನೂರಿನ ಪೈಲ್ವಾನ್ ಕಿರಣ್ ಗಾಡಿ ಅವರನ್ನು ಮಣಿಸುವ ಮೂಲಕ ಗೆಲುವಿನ ನಗೆ ಬೀರಿದರು.

ಬೆಳ್ಳಿ ಕಡೆ ಹಾಗೂ ನಗದು ಬಹುಮಾನ ಪಡೆಯುವ ಮೂಲಕ ಗೆಲುವನ್ನು ಸಂಭ್ರಮಿಸಿದ್ದು, ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಜಾತ್ರಾ ಕಮೀಟಿ ಪದಾಕಾರಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹಾಜರಿದ್ದರು.

ಕಿರು ಸುದ್ದಿ

ವಚನ ಕಂಠ ಪಾಠ ಸ್ಪರ್ಧೆ

◆**ರಾಮದುರ್ಗ:** ಕರ್ನಾಟಕ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವೇಶ್ವರರ ಜಯಂತಿ ಉತ್ಸವದ ಸ್ಥಳೀಯ ವಿರಕ್ತಮಠ ಟ್ರಸ್ಟ್ ಕಮಿಟಿ, ಜಾಗತಿಕ ಲಿಂಗಾಯತ ಮಹಾಸಭಾ (ರಿ) ತಾಲೂಕ ಘಟಕ, ಅಕ್ಕನ ಬಳಗ, ಹಾಗೂ ಬಸವಪರ ಸಂಘಟನೆಗಳು ತಾಲೂಕು ಮಟ್ಟದ ವಚನ ಕಂಠ ಪಾಠ ಸ್ಪರ್ಧೆ ಮತ್ತು ಭಜನಾ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎಪ್ರೀಲ್ 17 ಶುಕ್ರವಾರ ರಂದು ಮುಂಜಾನೆ 10 ಗಂಟೆಗೆ 16 ವರ್ಷದ ಒಳಗಿನವರಿಗೆ ಮತ್ತು 16 ವರ್ಷ ಮೇಲ್ಪಟ್ಟವರಿಗಾಗಿ ವಚನ ಕಂಠಪಾಠ ಸ್ಪರ್ಧೆಯನ್ನು ಪಟ್ಟಣದ ಬಸವಾ ಗಾರ್ಡನ್ (ಆರಿಬೆಂಚಿ ಕಲ್ಯಾಣ ಮಂಟಪ, ಹಲಗತ್ತಿ ಬೈಪಾಸ್ ರಸ್ತೆ) ಆಯೋಜಿಸಲಾಗಿದೆ. ಎರಡು ವಿಭಾಗಗಳಲ್ಲಿ ವಿಜೇತರಾದ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದವರಿಗೆ ಕ್ರಮವಾಗಿ ಮೂರು ಸಾವಿರ, ಎರಡು ಸಾವಿರ ನಗದು ಬಹುಮಾನ ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವವರು ರಾಮದುರ್ಗ ತಾಲೂಕಿನವರಾಗಿರಬೇಕು. ಕಡ್ಡಾಯವಾಗಿ ಆಧಾರ ಕಾರ್ಡ ತರಬೇಕು. ಕನಿಷ್ಠ 25 ವಚನಗಳನ್ನು ಹೇಳಬೇಕು. ತಾವು ಹೇಳುವ ವಚನಗಳನ್ನು 3 ಪ್ರತಿಗಳಲ್ಲಿ ಬರೆದುಕೊಂಡು ಬರಬೇಕು. ಬಸವಾದಿ ಶರಣರ ವಚನಗಳನ್ನು ಮಾತ್ರ ಹೇಳಬೇಕು. ಭಜನಾ ಹಾಡುಗಳ ಸ್ಪರ್ಧೆಯು ಎಪ್ರೀಲ್ 17 ಶುಕ್ರವಾರ ಸಂಜೆ 4 ಗಂಟೆಗೆ ಪಟ್ಟಣದ ಬಸವಾ ಗಾರ್ಡನ್ (ಆರಿಬೆಂಚಿ ಕಲ್ಯಾಣ ಮಂಟಪ, ಹಲಗತ್ತಿ ಬೈಪಾಸ್ ರಸ್ತೆ)ದಲ್ಲಿ ನಡೆಯಲಿದ್ದು ಭಜನಾ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ಪ್ರಥಮ ಬಹುಮಾನ ರೂ. ಐದು ಸಾವಿರ, ದ್ವಿತೀಯ ಬಹುಮಾನ ರೂ. ಮೂರು ಸಾವಿರ ಮತ್ತು ತೃತೀಯ ಬಹುಮಾನ ರೂ. ಎರಡು ಸಾವಿರ ನಗದು ಬಹುಮಾನ ನೀಡಲಾಗುವುದು. ವಚನ ಕಂಠಪಾಠ ಮತ್ತು ಭಜನಾ ಸ್ಪರ್ಧೆಯಲ್ಲಿ ಭಾಗವಹಿಸುವವರು ಏ.15ರ ಒಳಗಾಗಿ ಹೆಸರು ನೊಂದಾಯಿಸಬೇಕು. ದೂರವಾಣಿ ಮೂಲಕ ಹೆಸರು ನೊಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ 7019349590 9845893633ಗೆ ಸಂಪರ್ಕಿಸಲು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳೆ ಕಾಣೆ

◆ **ಬೆಳಗಾವಿ :** ರಾಮದುರ್ಗ ತಾಲೂಕಿನ ಚನ್ನಪೂರ ತಾಂಡಾದ (ಹಾಲಿ ಜಗಜೀವನರಾಮ ಗಾರ್ಡನ ಹತ್ತಿರ ಆಜಂ ನಗರ ಬೆಳಗಾವಿ) 33ವರ್ಷದ ನಿವಾಸಿಯಾದ ಲಕ್ಷ್ಮವ್ವ ಲಕ್ಷ್ಮಣ ಲಮಾಣಿ ಇವರು ಕೆಲಸಕ್ಕೆ ಹೋದವರು ಮರಳಿಬಾರದೆ ಕಾಣೆಯಾಗಿರುತ್ತಾರೆ. ಈ ಕುರಿತು ಬೆಳಗಾವಿ ಎ.ಪಿ.ಎಮ್.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ದೆ.



ಕಾಣೆಯಾದ ಮಹಿಳೆಯ ಚಹರೆ: 5 ಪೂಟ 4 ಇಂಚ ಎತ್ತರ ಗೋದಿಗೆಂಪು ಮೈ ಬಣ್ಣ ಮೈಯಿಂದ ಸಡಪಾತಳ. ಕನ್ನಡ, ಲಂಬಾಣಿ, ಹಿಂದಿ ಭಾಷೆ ಮಾತನಾಡುತ್ತಾಳೆ. ಈ ಪ್ರಕಾರ ಚೆಹರೆಯುಳ್ಳ ಮಹಿಳೆಯು ಬಗ್ಗೆ ಮಾಹಿತಿ ದೊರೆತಲ್ಲಿ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಅಥವಾ ಎ.ಪಿ.ಎಂ.ಸಿ ಪೊಲೀಸ ಠಾಣೆಯ ಪೊಲೀಸ್ ಇನಪೆಕ್ಟರ್ ಸಂರ್ಪಕಿಸಬಹುದು ಎಂದು ಎಪಿಎಮ್ಸಿ ಪೊಲೀಸ್ ಠಾಣೆ ಪೊಲೀಸ್ ಸಬ್ ಇನಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ

◆ **ಬೆಳಗಾವಿ :** ನಗರದ ಬಿಮ್ಸ ಕಾಲೇಜಿನಲ್ಲಿ ಎಮ್ ಬಿಬಿಎಸ್ ವಿದ್ಯಾಬ್ಯಾಸ ಮಾಡುತ್ತಿದ್ದ ಕೊಡಗು ಜಿಲ್ಲೆಯ ಸೋಮವಾರ ಪೇಟೆಯ 19 ವರ್ಷದ ನಿವಾಸಿಯಾದ ಅಲನ ಕೃಷ್ಣ ಸ್ನೇಹಿತರ ಜೊತೆ ಪ್ರವಾಸಕ್ಕೆ ಹೋಗಿ ಮರಳಿ ಬಾರದೆ ಕಾಣೆಯಾಗಿರುತ್ತಾನೆ. ಈ ಕುರಿತು ಬೆಳಗಾವಿ ಎ.ಪಿ.ಎಮ್.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಾಣೆಯಾದ ವ್ಯಕ್ತಿಯ ಚಹರೆ: 5 ಪೂಟ 5 ಇಂಚ ಎತ್ತರ ಸಾದಗಪ್ಪು ಬಣ್ಣ ಮೈಯಿಂದ ಸದೃಡ, ಬೂದು ಬಣ್ಣದ ಟೀ ಶರ್ಟ ಕಪ್ಪು ಬಣ್ಣದ ಪ್ಯಾಂಟ ಧರಿಸಿರುತ್ತಾನೆ, ಕನ್ನಡ, ಇಂಗ್ಲೀಷ್, ಹಿಂದಿ, ಮಲಯಾಳಂ ಭಾಷೆ ಮಾತನಾಡುತ್ತಾನೆ. ಈ ಪ್ರಕಾರ ಚೆಹರೆಯುಳ್ಳ ವ್ಯಕ್ತಿ ಬಗ್ಗೆ ಮಾಹಿತಿ ದೊರೆತಲ್ಲಿ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಅಥವಾ ಎ.ಪಿ.ಎಂ.ಸಿ ಪೊಲೀಸ ಠಾಣೆ ಸಂರ್ಪಕಿಸಬಹುದು ಎಂದು ಎಪಿಎಮ್ಸಿ ಪೊಲೀಸ್ ಠಾಣೆ ಪೊಲೀಸ್ ಸಬ್ ಇನಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ

◆**ಬೆಳಗಾವಿ :** ನಗರದ 30 ವರ್ಷದ ಸುರೇಶ ದ್ಯಾಮಪ್ಪಾ ಕರ್ಚಿಕಟ್ಟಿ ಇವನು ದಿ. 04-07-2025 ರಂದು ಬೆಳಿಗ್ಗೆ 8 ಗಂಟೆಯ ಸುಮಾರಿಗೆ ಡ್ರೈವಿಂಗ ಕೆಲಸಕ್ಕೆ ಹೋಗಿ ಬರುವುದಾಗಿ ಹೇಳಿ ಹೋದವನು ಮರಳಿ ಮನೆಗೆ ಬರದೆ ಹೋಗಿ ಕಾಣೆಯಾಗಿರುತ್ತಾನೆ. ಈ ಕುರಿತು ಬೆಳಗಾವಿ ಎ.ಪಿ.ಎಮ್.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಈ ವ್ಯಕ್ತಿ ಬಗ್ಗೆ ಮಾಹಿತಿ ದೊರೆತಲ್ಲಿ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಅಥವಾ ಎ.ಪಿ.ಎಂ.ಸಿ ಪೊಲೀಸ ಠಾಣೆಯ ಪೊಲೀಸ್ ಇನಸ್ಪೆಕ್ಟರ್ ಸಂರ್ಪಕಿಸಬಹುದು ಎಂದು ಎಪಿಎಮ್ಸಿ ಪೊಲೀಸ್ ಠಾಣೆ ಪೊಲೀಸ್ ಸಬ್ ಇನಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೋಕಾಕ: ಇಲ್ಲಿಯ ಜೆಸಿಐ ಸಂಸ್ಥೆಯ ಮಹಿಳಾ ಘಟಕದಿಂದ ವಿಶ್ವ ಮಹಿಳಾ ದಿನಾಚರಣೆ ನಿಮಿತ್ತ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸುಷ್ಮಿತಾ ಕಿಶೋರ ಶೆಟ್ಟಿ ಇವರನ್ನು ಮಂಗಳವಾರದಂದು ಸತ್ಕರಿಸಲಾಯಿತು. ಅಧ್ಯಕ್ಷೆ ಮೀನಾಕ್ಷಿ ಸವದಿ, ರಾಜೇಶ್ವರಿ ಕಿತ್ತೂರ, ನೇತ್ರಾವತಿ ಲಾತೂರ, ಸುವರ್ಣಾ ಹವಾಲ್ದಾರ, ಅನ್ನಪೂರ್ಣ ಉಳ್ಳಾಗಡ್ಡಿ ಸೇರಿದಂತೆ ಇತರರು ಇದ್ದರು.

ಕ್ವಿಜ್ ಸ್ಪರ್ಧಾಳುಗಳಿಗೆ ಬಹುಮಾನ ವಿತರಣೆ

◆**ಚಿಕ್ಕೋಡಿ:** ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಜ್ಞಾನವೃದ್ಧಿಗೆ ರಸಪ್ರಶ್ನೆ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆಗಳು ಸಹಕಾರಿಯಾಗುತ್ತವೆ. ಶಾಲಾ ಕಾಲೇಜುಗಳಲ್ಲಿ ಇಂತಹ ಸ್ಪರ್ಧೆಗಳನ್ನು ಆಗಾಗ ಆಯೋಜನೆ ಮಾಡುವುದು ಅವಶ್ಯಕವಾಗಿದೆ ಎಂದು ವಿಶ್ವ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಕೆ.ಪಿ.ಧರಿಗೌಡರ ಹೇಳಿದರು. ತಾಲೂಕಿನ ಕುಪ್ಪಾನವಾಡಿ ಗ್ರಾಮದ ಮುರುಘೇಂದ್ರ ವಸತಿ ಶಾಲೆಯಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕ್ವಿಜ್ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಸ್ಥೈರ್ಯ ಬರಲು ಸಾಂಸ್ಕೃತಿಕ ಕಾರ್ಯಕ್ರಮ, ಕ್ರೀಡಾಕೂಟದೊಂದಿಗೆ ಇಂತಹ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಜ್ಞಾನ ಶಕ್ತಿ ಹೆಚ್ಚುತ್ತದೆ ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮುರುಘೇಂದ್ರ ವಸತಿ ಶಾಲೆಯ ಸಿಇಒ ಸೃಷ್ಟಿ ಧರಿಗೌಡರ ಮಾತನಾಡಿ,ವಿದ್ಯಾರ್ಥಿಗಳ ಜೀವನದಲ್ಲಿ ಸ್ಫೂರ್ತಿಯನ್ನು ತುಂಬುವ ಕಾರ್ಯಕ್ರಮಗಳನ್ನು ಸಂಘ ಸಂಸ್ಥೆಗಳ ಸಹಯೋಗದಿಂದ ಹಮ್ಮಿಕೊಳ್ಳಲಾಗುತ್ತದೆ. ಸಾಕಷ್ಟು ಜನರು ಇಂತಹ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಚಾರ್ಯ ಎಂ ಬಿ ಗಾವಡೆ, ಜಯಶ್ರೀ ನಾಗರಾಳೆ, ಕವಿತಾ ಧರಿಗೌಡರ, ಅಮೃತಾ ಖೋತ, ಸುಧಾರಾಣಿ ಸಂಕನಗೌಡ, ಓಂ ಧರಿಗೌಡರ, ಅಶ್ವಿನಿ ನೂಲಿ ಇತರರು ಇದ್ದರು.



ಚಿಕ್ಕೋಡಿ: ತಾಲೂಕಿನ ಕುಪ್ಪಾನವಾಡಿ ಗ್ರಾಮದ ಮುರುಘೇಂದ್ರ ವಸತಿ ಶಾಲೆಯಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕ್ವಿಜ್ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ವಿಶ್ವ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಕೆ.ಪಿ.ಧರಿಗೌಡರ ಮಾತನಾಡಿದರು.

ಕನ್ನಡ ಸಂಘ ಉದ್ಘಾಟನೆ | ಸಾಹಿತಿ ಜೋಗಿ ಹೇಳಿಕೆ

ಕನ್ನಡ ನಾಡಿನ ಉಳಿವಿಗಾಗಿ ಶ್ರಮಿಸಿ

◆**ಬೆಳಗಾವಿ :** ಕನ್ನಡ ಭಾಷೆಯ ಶಕ್ತಿ ಮತ್ತು ಸಾಧ್ಯತೆ ಅಗಾಧವಾದದ್ದು, ಈಗಿನ ಯುವಪೀಳಿಗೆ ತಂತ್ರಜ್ಞಾನದಿಂದ ವಿಮುಖರಾಗದೆ, ಕನ್ನಡ ಭಾಷೆಯನ್ನು ಬಳಸಲು, ಬೆಳೆಸಲು ಮತ್ತು ಉಳಿಸಲು ತಂತ್ರಜ್ಞಾನದ ನೆರವು ಪಡೆಯಬೇಕು ಎಂದು ಖ್ಯಾತ ಸಾಹಿತಿ ಜೋಗಿ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುವೆಂಪು ಸಭಾಭವನದಲ್ಲಿ ನಡೆದ ಕನ್ನಡ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡವನ್ನು ಉಳಿಸುವುದು ನಮ್ಮ ಕೈಯಲ್ಲಿಲ್ಲ, ಆದರೆ ಅದನ್ನು ಬಳಸುವುದು ಮತ್ತು ಬೆಳೆಸುವುದು ನಮ್ಮ ಜವಾಬ್ದಾರಿಯಾಗಿದೆ. ಕನ್ನಡದ ಅಳಿವಿಗೆ ಅದೆಷ್ಟೋ ಕಾರಣಗಳಿದ್ದರೂ, ಅದರ ಉಳಿವಿಗೆ, ಭಾಷೆಯ ಬಳಕೆಯೊಂದೇ ಪರಿಹಾರ ಎಂದು ನೆನಪಿಸಿದರು. ಕನ್ನಡ ಸಾಹಿತ್ಯ ಸಮ್ಮೇಳನ ವರುಷಕ್ಕೆ ಒಮ್ಮೆ ಜರುಗದೆ, ನಾಡಿನ ಪ್ರತಿಯೊಬ್ಬರ ಮನೆಯಲ್ಲಿ ಪ್ರತಿದಿನವೂ ನಡೆಯಬೇಕು ಎಂದು ಹೇಳಿದರು.

ಸಿಂಡಿಕೇಟ್ ಸದಸ್ಯ ಮತ್ತು ಬರಹಗಾರ ಪ್ರೊ. ಎಸ್.ಎಸ್. ಅಂಗಡಿ ಮಾತನಾಡಿ, ಭಾಷೆ ಒಂದು ಸಂವಹನ ಮಾಧ್ಯಮವಾಗಿರುವದರಿಂದ, ಭಾಷೆಯಲ್ಲಿ ಮಡಿವಂತಿಕೆ ಬರಬಾರದು. ಕನ್ನಡ ಭಾಷೆಯ ಸೊಗಡು ಮತ್ತು ದೇಶೀಯತೆ ಅಪರೂಪವಾದದ್ದು, ಒಂದು ಭಾಷೆ ಬೆಳೆಯಲು



ಮತ್ತೊಂದು ಭಾಷೆಯ ಸಾಂಗತ್ಯ ಅವಶ್ಯವಾಗಿದೆ, ಹೀಗಾಗಿ ಭಾಷೆಯ ನಡುವೆ ಯಾವುದೇ ಭಾಷಾ ಗೋಡೆಗಳು ಇರಬಾರದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಮಾನ್ಯ ಕುಲಪತಿಗಳಾದ ಪ್ರೊ. ಸಿ. ಎಂ. ತ್ಯಾಗರಾಜ ಅವರು ಮಾತನಾಡಿ, ಭಾಷೆ ಮತ್ತು ಜೀವನ ಒಂದೇ ನಾಣ್ಯದ ಎರಡು ಮುಖಗಳು. ಭಾಷಾ ಶಕ್ತಿಯನ್ನು ವಿದ್ಯಾರ್ಥಿಗಳಲ್ಲಿ ತುಂಬುವ ಕೆಲಸವನ್ನು ಕನ್ನಡ ಸಂಘಗಳು ಮಾಡಬೇಕು. ಗಡಿನಾಡು ಭಾಗದಲ್ಲಿ ಕನ್ನಡದ ಯಾತ್ರೆ ನಿರಂತರವಾಗಿ ನಡೆಸುವ ಪ್ರಯತ್ನಗಳಾಗಬೇಕು ಎಂದು ಹೇಳಿದರು.

ಮೌಲ್ಯಮಾಪನ ಕುಲಸಚಿವ ಪ್ರೊ.ಡಿ.ಎನ್ .ಪಾಟೀಲ್, ಹಣಕಾಸು ಅಧಿಕಾರಿ ಎಂ.ಎ. ಸಪ್ನ, ಕನ್ನಡ ಸಂಘದ ಅಧ್ಯಕ್ಷ ಡಾ.ಗಜಾನನ ನಾಯ್ಕ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರುಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕದ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸೇರಿದಂತೆ ಹಲವರು ಇದ್ದರು.

ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗೆ ಶ್ರಮ

◆**ಗೋಕಾಕ:** ಸರ್ಕಾರಿ ಶಾಲೆಗಳು ಉಳಿಯಬೇಕಾದರೆ ನಮ್ಮ ನಿಮ್ಮೆಲ್ಲರ ಜವಾಬ್ದಾರಿ.

ಪಿಎಂ ಶ್ರೀ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಶಾಲಾ ಗ್ರಂಥಾಲಯಕ್ಕೆ ಶಾಸಕರ ಅನುದಾನದಡಿಯಲ್ಲಿ ಶಾಲೆಯ ಹಳೆ ವಿದ್ಯಾರ್ಥಿಗಳಿಗೆ ಮತ್ತು ಪ್ರಸ್ತುತ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಶಾಸಕರಾದ ಬಾಲಚಂದ್ರ ಜಾರಕಿಹೊಳಿ ಅವರು ಗ್ರಂಥಾಲಯಕ್ಕೆ 5ಲಕ್ಷ ರೂಪಾಯಿಗಳನ್ನು ಸಹಕಾರ ನೀಡುವುದರೊಂದಿಗೆ ಶೈಕ್ಷಣಿಕ ರಂಗಕ್ಕೆ ಯಾವತ್ತಿಗೂ ಬೆನ್ನೆಲುಬಾಗಿ ಇರುತ್ತಾರೆ ಎಂದು ಯುವ ನಾಯಕ ಸರ್ವೋತ್ತಮ ಜಾರಕಿಹೊಳಿ ಸ್ಮರಿಸಿದರು.

ಅವರು, ಪಿಎಂಶ್ರೀ ಸರ್ಕಾರಿ ಪ್ರಾಥಮಿಕ ಶಾಲೆ ಸಿದ್ಧಾರೂಢ ಮಠ ಮೇಳವಂಕಿಗೆ

ಓ ಸ್ಪಾಟ್ ಸಂಸ್ಥೆಯಿಂದ ನಿರ್ಮಿಸಿರುವ ಶಾಲಾ ಕಟ್ಟಡವನ್ನು ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಓ ಸ್ಪಾಟ್ ಪದಾಧಿಕಾರಿ ರಾಮಮೂರ್ತಿ ಮಾತನಾಡಿ, ನಮ್ಮ ಸಂಸ್ಥೆಯಿಂದ 121ನೇ ಕಟ್ಟಡ ಇದಾಗಿದೆ ಈ ಯೋಜನೆಗೆ ಒಂದು ಕೋಟಿ ರೂ ಬೆಂಬಲ ನೀಡಿದ ದಾನಿಗಳಾದ

ಸ್ನೇಹ ಮತ್ತು ಶ್ರೀ ಕೀರ್ತಿ ಮೇಲುಕೋಟೆ ಅವರು ಮಕ್ಕಳಿಗೆ ಸುರಕ್ಷಿತ ಹಾಗೂ ಸುಸಜ್ಜಿತ ವಾತಾವರಣ ಒದಗಿಸಿ ಶಾಲೆಯು ವಿದ್ಯಾಭ್ಯಾಸದ ಶ್ರೇಷ್ಠತೆ ಮತ್ತು ಸಮಗ್ರ ವಿದ್ಯಾರ್ಥಿ ಅಭಿವೃದ್ಧಿಯತ್ತ ಗಮನಹರಿಸಲು ಸಾಧ್ಯವಾಗುವಂತೆ ಮಾಡಿದ್ದಾರೆ ಎಂದರು.

ಹಾಸ್ಯ ಕಲಾವಿದ ಪ್ರಾಣೇಶ್ ಗಂಗಾವತಿಯವರು ಉದ್ಘಾಟನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಉಪ್ಪಾರ, ತಹಶೀಲ್ದಾರ್ ಡಾ.ಮೋಹನ್ ಭಸ್ಮೆ, ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾದ ಪರಶುರಾಮ ಘಸ್ತೆ, ಮೂಡಲಗಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಪಿ ಬಿ ಹಿರೇಮಠ, ಹಾಸ್ಯ ಕಲಾವಿದ ಬಸವರಾಜ ಹವಾಮನೆ, ಮುಖ್ಯೋಪಾಧ್ಯಾಯ ಈರಣ್ಣ ಕಡಕೋಳ ಸೇರಿದಂತೆ ಎಸ್‌ಡಿಎಂಸಿ ಪದಾಧಿಕಾರಿಗಳು ಅನೇಕರು ಇದ್ದರು.



ಹೊಲಿಗೆ ಯಂತ್ರ ವಿತರಣೆ

◆**ಬೆಳಗಾವಿ :** ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಬೆಳಗಾವಿ ಮಹಿಳಾ ಘಟಕದ ವತಿಯಿಂದ ಮಹಿಳಾ ದಿನಾಚರಣೆ ಮತ್ತು ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮ ಆಯೋಜಿಸಲಾಯಿತು. ಬಳಿಕ ಮಹಿಳಾ ಸದಸ್ಯರುಗಳಿಗೆ ಹೊಲಿಗೆಯಂತ್ರ ವಿತರಣೆ ಮಾಡಲಾಯಿತು. ಜಿಲ್ಲಾ ಅಧ್ಯಕ್ಷರಾದ ಸ್ಮಿತಾ ಪೂಜಾರ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರು ಹಾಗೂ ಸಾಹಿತಿಗಳು ಆದ ಡಾ.ವಿಜಯಲಕ್ಷ್ಮಿ ಪುಟ್ಟಿ , ವಕೀಲರಾದ ವಿದ್ಯಾ ಪಾಟೀಲ್ , ಈ ವೇಳೆ ಕಾರ್ಯಕ್ರಮದದಲ್ಲಿ ರಾಜ್ಯಾಧ್ಯಕ್ಷರಾದ ಮಹೇಶ್ ಕುರ್ಮಾ, ಮಹಿಳಾ ಘಟಕದ ಉಪಾಧ್ಯಕ್ಷರು ಮಂಜುಳಾ ಕುಶಪ್ಪನವರ, ಕಾರ್ಯದರ್ಶಿ ಜಯಶ್ರೀ ಮತ್ತಿಕೊಪ್ಪ, ಜಿಲ್ಲಾ ಗೌರವಾಧ್ಯಕ್ಷರಾದ ಕಂಪಣ್ಣ ಶಿರಹಟ್ಟಿ, ರಾಯಬಾಗ, ಚಿಕ್ಕೋಡಿ, ಹುಕ್ಕೇರಿ ತಾಲೂಕು ಅಧ್ಯಕ್ಷ ಹಾಗೂ ಪದಾಧಿಕಾರಿಗಳು ಮತ್ತು ಬೆಳಗಾವಿ ತಾಲ್ಲೂಕು ಅಧ್ಯಕ್ಷರು ಹಾಗೂ ಮಹಿಳಾ ಘಟಕದ ಪದಾಧಿಕಾರಿಗಳು, ಸದಸ್ಯರುಗಳು ಸೇರಿದಂತೆ ಹಲವರು ಭಾಗಿಯಾಗಿದ್ದರು.

ಕ್ರೀಡಾಂಗಣ ಅಭಿವೃದ್ಧಿಗೆ ಕ್ರಮ

◆**ರಾಯಬಾಗ:** ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಪಟ್ಟಣದ ಸರ್ಕಾರಿ ಕೇಂದ್ರ ಶಾಲೆ ಹಾಗೂ ತಾಲೂಕು ಕ್ರೀಡಾಂಗಣಕ್ಕೆ ಬೇಕಾದ ಎಲ್ಲ ಮೂಲ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ಶಾಸಕ ಡಿ.ಎಮ್.ಐಹೊಳೆ ಹೇಳಿದರು.

ಬುಧವಾರ ಜಿ.ಪಂ.ಇಲಾಖೆಯಿಂದ ಮಂಜೂರಾದ 40 ಲಕ್ಷ ರೂ. ಅನುದಾನದಲ್ಲಿ ಪಟ್ಟಣದಸರ್ಕಾರಿಕೇಂದ್ರಶಾಲೆಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ ಹಾಗೂ 30 ಲಕ್ಷ ರೂ.ಅನುದಾನದಲ್ಲಿ ತಾಲೂಕು ಕ್ರೀಡಾಂಗಣಕ್ಕೆ ಮೂಲಭೂತ ಸೌಕರ್ಯ ಕಲ್ಪಿಸುವ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನ ಕ್ರೀಡಾಪಟುಗಳ ಮತ್ತು ಸಾರ್ವಜನಿಕರ ಬಹು ದಿನಗಳ ಬೇಡಿಕೆಯಾಗಿದ್ದ ತಾಲೂಕು ಕ್ರೀಡಾಂಗಣಕ್ಕೆ ಮೂಲಭೂತ ಸೌಲಭ್ಯ ಕಲ್ಪಿಸಲು ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿದ್ದು, ಗುತ್ತಿಗೆದಾರ ಗುಣಮಟ್ಟದಿಂದ ಕಾಮಗಾರಿ ಮಾಡಬೇಕೆಂದು ಹೇಳಿದರು.

ಜಿ.ಪಂ.ಎಇ ಎಸ್.ಎಸ್.ಹೊಸಮನಿ, ಮುಖ್ಯ ಶಿಕ್ಷಕಿ ಎಮ್.ವಿ.ಪಟ್ಟಣ, ಬಿಇಒ ಬಸವರಾಜಪ್ಪ ಆರ್., ದೈಹಿಕ ಪರಿವೀಕ್ಷಕ ಎಮ್.ಪಿ.ಜಿರಗ್ಯಾಳ, ಮುಖಂಡರಾದ ಸದಾಶಿವ ಘೋರ್ಪಡೆ, ಅಣ್ಣಾಸಾಹೇಬ ಖೆಮಲಾಪೂರೆ, ಮಹೇಶ ಕರಮಡಿ, ಎನ್.ವಿ.ಮಠದಕರ, ಸುರೇಶ ಮಾಳಿ, ಜಿಯಾವುಲ್ಲ ಮುಲ್ಲಾ, ಲಕ್ಷ್ಮಣ ಬಂಡಗರ, ರಾಜು ಮೊಮಿನ, ಎಸ್.ಎಸ್.ಗೆನ್ನೆನ್ನವ್ವರ, ಮಹೇಶ ಕುಲಗುಡೆ, ಮೋಹನ ರಾಜಮಾನೆ, ಅನೀಲ ಕೊರವಿ ಸೇರಿ ಅನೇಕರು ಇದ್ದರು.



ರಾಯಬಾಗ: ಪಟ್ಟಣದ ಸರ್ಕಾರಿ ಕೇಂದ್ರ ಶಾಲೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ಎಮ್.ಐಹೊಳೆ ಚಾಲನೆ ನೀಡಿದರು. ಎಸ್.ಎಸ್.ಹೊಸಮನಿ, ಎಮ್.ವಿ.ಪಟ್ಟಣ, ಸದಾಶಿವ ಘೋರ್ಪಡೆ, ಅಣ್ಣಾಸಾಹೇಬ ಖೆಮಲಾಪೂರೆ, ಮಹೇಶ ಕರಮಡಿ, ಎನ್.ವಿ.ಮಠದಕರ, ಸುರೇಶ ಮಾಳಿ, ಜಿಯಾವುಲ್ಲ ಮುಲ್ಲಾ, ರಾಜು ಮೊಮಿನ, ಮಹೇಶ ಕುಲಗುಡೆ, ಮೋಹನ ರಾಜಮಾನೆ, ಅನೀಲ ಕೊರವಿ ಇದ್ದರು.

ಕಣ್ಮನ ಸೆಳೆದ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಗಳು

◆**ಹಲ್ಯಾಳ:** ಯುವಕರಲ್ಲಿ ಕ್ರೀಡಾಭಿಮಾನ ಬೆಳೆಯಲಿ ಎನ್ನುವ ಸದುದ್ದೇಶ ಹೊಂದಿರುವ ಹಲ್ಯಾಳ ಗ್ರಾಮದ ಕ್ರೀಡಾ ಭಿಮಾನಿಗಳು ಉತ್ಸಾಹಿ ಕ್ರೀಡಾ ಪಟುಗಳಿಗೆ ಪ್ರೋತ್ಸಾಹಿಸಲು ಹಲ್ಯಾಳ ಪ್ರಿಮೀಯರ ಲೀಗ್ ನ್ನು 6ನೇ ಬಾರಿ ಯಶಸ್ವಿಯಾಗಿ ಆಯೋಜಿಸಿದ್ದರು. ಆರು ತಂಡಗಳು ಎಲ್ಲರನ್ನು ಬೆರಗು ಗೊಳಿಸುವಂತೆ ಆಟವನ್ನು ಆಡಿದರು.

ಮುದಕಣ್ಣ ಶೇಗುಣಶಿ ಪ್ರಥಮ ಸ್ಥಾನ ಪಡೆದ ವಿಜೇತ ತಂಡಕ್ಕೆ 15ಸಾವಿರ ರೂ. ಮತ್ತು ದ್ವಿತೀಯ ಸ್ಥಾನ ಪಡೆದ ತಂಡಕ್ಕೆ ಶಿವಾನಂದ ಪಾಟೀಲ 10 ಸಾವಿರ ರೂ ಹಾಗೂ ಮೌನೇಶ್ ಪತ್ತಾರ ಮತ್ತು ಲೋಕೇಶ್ ಕಾಳೆ ಟ್ರೋಫಿಗಳನ್ನು ನೀಡಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿದರು.

ಈ ವೇಳೆ ಮುದಕಣ್ಣ ಶೇಗುಣಶಿ ವಿಠ್ಠಲ್ ಕಾಂಬಳೆ,ಶಶಿಕಾಂತ್



ದಳವಾಯಿ,ಕುಶಾಲ ಬನಸೋಡೆ,ರವಿ ಕೋಳಿ,ಮಾಂತೇಶ ಬೊಮ್ಮಣ್ಣವರ ,ಪ್ರಭು ಬಾಗಿ ಶಿವು ನಾಯಿಕ್,ಅಭಿಶೇಕ್ ಬನಸೋಡೆ,ವಿಕಾಸ ಬಾಗಿ,ಪದ್ಮಣ್ಣ ಕಾಂಬಳೆ ಮತ್ತು ಇತರರಿದ್ದರು.

ಅಶೋಕಗೆ ಗೌರವ ಡಾಕ್ಟರೇಟ್ ಪ್ರಶಸ್ತಿ

◆**ಗೋಕಾಕ:** ಸಾಮಾಜಿಕ ಕಾರ್ಯಕರ್ತ, ಕರ್ನಾಟಕ ರಾಜ್ಯ ಪತ್ರಕರ್ತರ ವೇದಿಕೆ ರಾಜ್ಯಾಧ್ಯಕ್ಷ ಅಶೋಕ ಭಜಂತ್ರಿ ಅವರಿಗೆ ಅಮೆರಿಕಾದ ವಾಷಿಂಗ್ಟನ್ ಯುನಿವರ್ಸಿಟಿಯ ವತಿಯಿಂದ ಸಮಾಜ ಸೇವಾ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಗೋವಾ ರಾಜ್ಯದ ವಡಗಾಂವದ ಖಾಸಗಿ ಹೊಟೇಲ್‌ದಲ್ಲಿ ಶನಿವಾರ ಜರುಗಿದ ಸಮಾರಂಭದಲ್ಲಿ ಅಶೋಕ ಭಜಂತ್ರಿ ಅವರಿಗೆ ಗೌವರ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಯಿತು. ಕರ್ನಾಟಕ ರಾಜ್ಯ ಪತ್ರಕರ್ತರ ವೇದಿಕೆ ರಾಜ್ಯಾಧ್ಯಕ್ಷ ಅಶೋಕ ಭಜಂತ್ರಿ ಅವರಿಗೆ ಗೌರವ ಡಾಕ್ಟರೇಟ್ ಲಭಿಸಿದ ಪ್ರಯುಕ್ತ ಭಾನುವಾರ ನಗರದಲ್ಲಿ ಅವರ ಗೆಳೆಯರ ಬಳಗದವರು ಅವರಿಗೆ ಸತ್ಕರಿಸಿ, ಗೌರವಿಸಿದರು. ಈ ವೇಳೆ ಜೈನುಲ್ಲಾ ಅಂಕಲಗಿ, ಮಾನಿಂಗ ನೀಲನ್ನವರ, ಬಸವರಾಜ ಖಾನಪ್ಪನವರ, ಶಶಿ ಕನ್ನಪ್ಪನವರ, ಸಾದಿಕ ಹಲ್ಯಾಳ,ಶಿವಾನಂದ ಹಿರೇಕೂಡಿ, ರಾಜು ನಾಯಿಕ ಉಪಸ್ಥಿತರಿದ್ದರು.



ಹಾಲು ಉತ್ಪಾದಕರ ಸಂಘಕ್ಕೆ ಸಹಾಯಧನ ವಿತರಣೆ



◆**ಗೋಕಾಕ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ವತಿಯಿಂದ ಗೋಕಾಕ್ ಯೋಜನಾ ಕಚೇರಿ ವ್ಯಾಪ್ತಿಯ ದುಂಡಾನಟ್ಟಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಧರ್ಮಸ್ಥಳದ ಧರ್ಮದರ್ಶಿ ಡಾ.ವಿರೇಂದ್ರ ಹೆಗಡೆಯವರು ಶಿಫಾರಸ್ಸು ಮಾಡಿದ 2ಲಕ್ಷ ರರೂಗಳ ಮಂಜುರಾತಿ ಪತ್ರವನ್ನು ಬುಧವಾರದಂದು ವಿತರಿಸಲಾಯಿತು. ಜಿಲ್ಲಾ ನಿರ್ದೇಶಕ ಎಚ್ ಆರ್ ಲವಕುಮಾರ್, ಯೋಜನಾಧಿಕಾರಿ ತಿಮ್ಮೆಶ್ ಎಂ ಸಿ, ವಲಯದ ಮೇಲ್ವಿಚಾರಕ ಮಹಾಂತೇಶ್ ಎಂ ಇದ್ದರು.

ಗ್ರಾಮೀಣ ಜಾತ್ರೆ ನೋಡುವುದೇ ಚೆಂದ



◆**ಬೆಳಗಾವಿ :** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಂಗಳವಾರ ಸಂಜೆ ವೇಳೆ ಬೆಳಗಾವಿ ಗ್ರಾಮೀಣ ಕ್ಷೇತ್ರದ ನಾಗೇರಹಾಳ ಗ್ರಾಮದ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವ, ನೂತನ ರಥೋತ್ಸವ ಮತ್ತು ಶ್ರೀ ಗ್ರಾಮದೇವಿಯ ಉಡಿ ತುಂಬುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಗ್ರಾಮಸ್ಥರಿಗೆ ಶುಭ ಕೋರಿದರು. ಗ್ರಾಮೀಣ ಭಾಗದಲ್ಲಿ ನಡೆಯುವ ಜಾತ್ರೆಗಳನ್ನು ನೋಡುವುದೇ ಚೆಂದ. ಗ್ರಾಮಸ್ಥರೆಲ್ಲ ಒಟ್ಟಾಗಿ ಭಕ್ತಿ ಹಾಗೂ ಸಂಭ್ರಮದಿಂದ ಜಾತ್ರೆಯನ್ನು ಆಚರಿಸುತ್ತಾರೆ. ಇದು ಗ್ರಾಮಗಳ ಒಗ್ಗಟ್ಟಿನ ಪ್ರತೀಕವೂ ಹೌದು ಎಂದು ಹೆಬ್ಬಾಳ್ಕರ್ ಹೇಳಿದರು. ನಾಗೇರಹಾಳ ಗ್ರಾಮದ ರಸ್ತೆಗಳ ಅಭಿವೃದ್ಧಿಗೆ ಈಗಾಗಲೆ ಅನುದಾನ ಮಂಜೂರಾಗಿದ್ದು, ಇಷ್ಟರಲ್ಲೆ ಕೆಲಸ ಆರಂಭವಾಗಲಿದೆ. ಈಗಾಗಲೆ ಗ್ರಾಮಕ್ಕೆ 2 ಕೋಟಿ ರೂ.ಗಳಿಗಿಂತ ಹೆಚ್ಚಿನ ಅನುದಾನ ಒದಗಿಸಲಾಗಿದೆ. ಇಡೀ ಕ್ಷೇತ್ರ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ಅವರು ಹೇಳಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ಗ್ರಾಮದ ಹಿರಿಯರು, ಗ್ರಾಮದ ಭಕ್ತಾಧಿಗಳು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಏ.17ರವರೆಗೆ ಗ್ರಾಮದೇವತೆ ಶ್ರೀ ದುರ್ಗಾದೇವಿ ಜಾತ್ರೆ

◆**ಕಕಮರಿ :** ಸಮೀಪದ ಬನ್ನೂರ ಗ್ರಾಮದೇವತೆ ಶ್ರೀ ದುರ್ಗಾದೇವಿ ಜಾತ್ರೆ ಏ.16ರಿಂದ 17ರ ವರೆಗೆ ಜರುಗಲಿದ್ದು, ಪ್ರಚಾರ ಪತ್ರಿಕೆಯನ್ನು ಶ್ರೀ ದುರ್ಗಾದೇವಿ ದೇವಸ್ಥಾನದ ಕಮೀಟಿ ಸದಸ್ಯರು ಹಾಗೂ ಗಣ್ಯರು ಬುಧವಾರ ಬಿಡುಗಡೆಗೊಳಿಸಿದರು. ಗುರುವಾರ 16ರಂದು ರಾತ್ರಿ 9.30ಕ್ಕೆ ಶ್ರೀ ರಾಘವೇಂದ್ರ ಶ್ರೀಕೃಷ್ಣ ಪಾರಿಜಾತ ಕಂಪನಿ ಇವರಿಂದ ಶ್ರೀಕೃಷ್ಣ ಪಾರಿಜಾತ ಸುಂದರ ಕೌಟುಂಬಿಕ ಬೈಲಾಟ ಇರುತ್ತದೆ. ಶುಕ್ರವಾರ 27ರಂದು ಮುಂಜಾನೆ 6ಕ್ಕೆ ದೇವಸ್ಥಾನದಲ್ಲಿ ಉಡಿ ತುಂಬುವ ಕಾರ್ಯಕ್ರಮ ನಡೆಯುವುದು. ಮುಂಜಾನೆ 9ಕ್ಕೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ಜರುಗುವುದು. 12 ಗಂಟೆಗೆವೀರಗಾರಿಕೆಕಾರ್ಯಕ್ರಮ ಜರುಗುವುದು. ರಾತ್ರಿ 9.30ಕ್ಕೆ ಬನ್ನೂರ ಶ್ರೀ ಬಸವೇಶ್ವರ ನಾಟ್ಯ ಸಂಘ ಅರ್ಪಿಸುವ 32ನೇ ಕಲಾಕುಸುಮ ?ದುಷ್ಟರ ನಾಡಿನಲ್ಲಿ ರೈತನ ಘರ್ಜನೆ ಅರ್ಥಾತ ಪ್ರತಿಜ್ಞೆ ಪಾಲಿಸಿದ ಪತಿವ್ರತೆ ಎಂಬ ಸುಂದರ ನಾಟಕ ಪ್ರದರ್ಶನವಿದೆ. ಎಂದು ಶ್ರೀ ದುರ್ಗಾದೇವಿ ದೇವಸ್ಥಾನ ಕಮೀಟಿಯವರು ಸುದ್ದಿ ಗೋಷ್ಠಿಯಲ್ಲಿ ಪ್ರಕಟಿಸಿದ್ದಾರೆ.

ಮಾಜಿ ಸೈನಿಕ ಸಂಘದ ಅಧ್ಯಕ್ಷ ಚನ್ನಪ್ಪ ಶೇಗಾಂವಿ, ಬಾಬಾಗೌಡ ಪಾಟೀಲ, ಅಣ್ಣಪ್ಪ ಹನಗಂಡಿ, ರಾಮಪ್ಪ ಚಿಕ್ಕಿ, ಬಸವರಾಜ ನಾಗರಾಳ, ಆಕಾಶ ರಾವೂರ, ಮಹಾಂತೇಶ್ ದಾಶ್ಯಾಳ, ಕೃಷ್ಣಾ ಹರಗಿ, ಶ್ರೀ ದುರ್ಗಾದೇವಿ ಅರ್ಚಕ ಶ್ರೀಮಂತ ಪೂಜಾರಿ, ಸುಭಾಷ ಪೂಜಾರಿ, ಮಾಜಿ ಸೈನಿಕ ಮಲ್ಲಪ್ಪ ಗಲಗಲಿ, ಇರರರಿದ್ದರು.



ಮಹಿಳೆಯರು ಪ್ರಗತಿ ಹೊಂದಲಿ

◆**ಬೆಳಗಾವಿ :** ಮಹಿಳೆಯರು ಸ್ತ್ರೀ ಶಕ್ತಿ ಮತ್ತು ಸ್ವಸಹಾಯ ಸಂಘಗಳ ಸೌಲತ್ತುಗಳನ್ನು ಸದುಪಯೋಗ ಮಾಡಿಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಗತಿ ಹೊಂದಬೇಕು. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಸಾಹಿತಿ, ಉಪನ್ಯಾಸಕಿ ಡಾ. ವಿಜಯಲಕ್ಷ್ಮಿ ಪುಟ್ಟಿ ಹೇಳಿದರು.

ಬುಧವಾರ ನಗರದ ಮಹಾಂತ ಭವನದಲ್ಲಿ ಶ್ರೀ ಅಂಜನಾ ಮಹಿಳಾ ಮಂಡಳದ ವಾರ್ಷಿಕೋತ್ಸವ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆ ಸಮಾಜದ ನಿರ್ಮಾಣಕ್ಕೆ ಅಗತ್ಯವಾದ ಶಕ್ತಿ, ಸಹನೆ ಮತ್ತು ಮೌಲ್ಯಗಳ ಪ್ರತೀಕ, ಮನೆ, ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಅವಿಭಾಜ್ಯ ಅಂಗವಾಗಿರುವ ಮಹಿಳೆ ಇಂದು ಶಿಕ್ಷಣ, ಉದ್ಯೋಗ, ಆಡಳಿತ, ಕೃಷಿ, ಕಲೆ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ತನ್ನ ಸಾಮರ್ಥ್ಯ ಸಾಬೀತು ಪಡಿಸಿದ್ದಾಳೆಂದು. ಇನ್ನೂ ಎಲ್ಲಾ ರಂಗದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕು ಎಂದರು.

ಅಂಜನಾ ಮಹಿಳಾ ಮಂಡಳವು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವುದು ಸಂಸತವಾಗಿದೆ. ಸಹಾಯ ಮತ್ತು ಸಹಕಾರದಿಂದ ನಾಡಿನ ಬದಲಾವಣೆಗೆ ಸಾಧ್ಯ , ಇತಂಹ ಸಂಘಟನೆ ಹೆಚ್ಚೆಚ್ಚು ಸಮಾಜಕ್ಕಾಗಿ ಶ್ರಮಿಸಲಿ ಎಂದರು.



ಮಂಡಳದ ಅಧ್ಯಕ್ಷ ಭಾಗ್ಯಶ್ರೀ ಭೈರಪ್ಪನವರ ಅವರು, ಮಂಡಳದ ಬೆಳವಣಿಗೆ ಹಾಗೂ ಮುಂದಿನ ಗುರಿಗಳ ಬಗ್ಗೆ ವಿವರಿಸಿದರು. ಮಹಿಳಾ ಮಂಡಳದ ಸದಸ್ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೃತ್ಯ ನಾಟಕ ರ್ಯಾಂಪ್ ವಾಕ್ ಪ್ರದರ್ಶನಗೊಂಡವು. ವೇದಿಕೆಯ ಮೇಲೆ ಸಾಂಪ್ರದಾಯಿಕ ಉಡುಗೆ ತೊಟ್ಟ ಮಹಿಳೆಯರ ಸಂಭ್ರಮಿಸಿದರು.

ಈ ವೇಳೆ ಮಂಡಳದ ಕಾರ್ಯದರ್ಶಿ ವಿಜಯಲಕ್ಷ್ಮಿ ಪಾಟೀಲ್, ಉಪಾಧ್ಯಕ್ಷ ಲಲಿತಾ ಹೂಗಾರ್, ಸಹ ಕಾರ್ಯದರ್ಶಿ ಪ್ರಭಾ ಪಾಟೀಲ್, ಖಜಾಂಚಿ ಜಯಶ್ರೀ ದುಗ್ಗಾಣಿ , ಸಲಹಾ ಸಮಿತಿಯವರಾದ ಲತಾ ಸಿಂಗ್, ಗೀತಾ ಕಾವೇರಿ ಸುಮಿತ್ರ ಕುಲಕರ್ಣಿ , ಪ್ರೇಮಾ ಮಾಮದಾಪುರ ಸೇರಿದಂತೆ ಹಲವರು ಇದ್ದರು.

ಕಿರು ಸುದ್ದಿ

ಶಿಕ್ಷಕರ ಸಂಕಷ್ಟಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿ

ಬೆಳಗಾವಿ : ಜಿಲ್ಲೆಯ ಶಿಕ್ಷಕರ ವರ್ಗಾವಣೆ ಮತ್ತು ಜನಗಣತಿ ಕಾರ್ಯಕ್ಕೆ ಸಂಬಂಧಿಸಿದಂತೆ ಇದ್ದ ದೊಡ್ಡ ಗೊಂದಲವೊಂದು ಈಗ ಬಗೆಹರಿದಿದೆ. ಜನಗಣತಿ ಕಾರ್ಯದ ನೆಪದಲ್ಲಿ ವರ್ಗಾವಣೆಗೊಂಡ ಶಿಕ್ಷಕರ ಬಿಡುಗಡೆಯನ್ನು ಮುಂದೂಡಿದ್ದ ಆದೇಶದಿಂದ ಶಿಕ್ಷಕರು ಸಂಕಷ್ಟಕ್ಕೆ ಸಿಲುಕಿದ್ದರು. ಈ ಕುರಿತು ಶಿಕ್ಷಕರ ಸಂಘ ನೀಡಿದ ಮನವಿಗೆ ಜಿಲ್ಲಾಧಿಕಾರಿಗಳು ಪೂರಕವಾಗಿ ಸ್ಪಂದಿಸಿದ್ದು, ಶಿಕ್ಷಕರ ಮೊಗದಲ್ಲಿ ಮಂದಹಾಸ ಮೂಡಿದೆ. ಬೆಳಗಾವಿ ಜಿಲ್ಲೆಯ ಶಿಕ್ಷಕರ ವರ್ಗಾವಣೆ ಮತ್ತು ಜನಗಣತಿ ಕಾರ್ಯಕ್ಕೆ ಸಂಬಂಧಿಸಿದಂತೆ ಇದ್ದ ದೊಡ್ಡ ಗೊಂದಲವೊಂದು ಈಗ ಬಗೆಹರಿದಿದೆ. ಜನಗಣತಿ ಕಾರ್ಯದ ನೆಪದಲ್ಲಿ ವರ್ಗಾವಣೆಗೊಂಡ ಶಿಕ್ಷಕರ ಬಿಡುಗಡೆಯನ್ನು ಮುಂದೂಡಿದ್ದ ಆದೇಶದಿಂದ ಶಿಕ್ಷಕರು ಸಂಕಷ್ಟಕ್ಕೆ ಸಿಲುಕಿದ್ದರು. ಈ ಕುರಿತು ಶಿಕ್ಷಕರ ಸಂಘ ನೀಡಿದ ಮನವಿಗೆ ಜಿಲ್ಲಾಧಿಕಾರಿಗಳು ಪೂರಕವಾಗಿ ಸ್ಪಂದಿಸಿದ್ದು, ಶಿಕ್ಷಕರ ಮೊಗದಲ್ಲಿ ಮಂದಹಾಸ ಮೂಡಿದೆ.



ಬೆಳಗಾವಿ : ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮಂಗಳವಾರ ಸಂಜೆ ವೇಳೆ ಬೆಳಗಾವಿಯ ಶಾಂತಾಯಿ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಹಿರಿಯರ ಆರೋಗ್ಯ ವಿಚಾರಿಸಿ, ಅವರ ಕುಂದುಕೊರತೆಗಳನ್ನು ಆಲಿಸಿದರು. ವೃದ್ಧಾಶ್ರಮದ ಆಡಳಿತಾಧಿಕಾರಿ ವಿಜಯ ಮೋರೆ, ಗುತ್ತಿಗೆದಾರ ಸಿದ್ಧನಗೌಡ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವದಂತಿಗಳಿಗೆ ಕಿವಿಗೊಡಬೇಡಿ

ಬೆಳಗಾವಿ : ರಾಜ್ಯದ ವಿವಿಧ ಆಟೋ ಗ್ಯಾಸ್ ಬಂಕ್‌ಗಳಲ್ಲಿ ಅನಿಲದ ದಾಸ್ತಾನು ಕೊರತೆಯಿದೆ ಎಂಬ ತಪ್ಪು ಮಾಹಿತಿಯ ಆಧಾರದ ಮೇಲೆ ಕಳೆದ ಕೆಲವು ದಿನಗಳಿಂದ ಆಟೋ ಮಾಲೀಕರು ಮತ್ತು ಚಾಲಕರು ಬಂಕ್‌ಗಳ ಮುಂದೆ ಸುದೀರ್ಘ ಸರತಿ ಸಾಲಿನಲ್ಲಿ ನಿಲ್ಲುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳು ಕೇವಲ ವದಂತಿಗಳಾಗಿದ್ದು, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟಪಡಿಸಿದೆ. ಕೆಲವು ಖಾಸಗಿ ಆಟೋ ಗ್ಯಾಸ್ ಸರಬರಾಜು ಸಂಸ್ಥೆಗಳಲ್ಲಿ ಮಾತ್ರ ಅಲ್ಪಮಟ್ಟಿನ ಕೊರತೆ ಕಂಡುಬಂದಿದ್ದು, ಇದನ್ನು ಸರಿಪಡಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಐಓಇ (ಇಂಡಿಯನ್ ಆಯಿಲ್), ಆಕಇ (ಭಾರತ್ ಪೆಟ್ರೋಲಿಯಂ) ಮತ್ತು ಏಕಇ (ಹಿಂದೂಸ್ತಾನ್ ಪೆಟ್ರೋಲಿಯಂ) ಮೂಲಕ ಹೆಚ್ಚಿನ ಪ್ರಮಾಣದ ಅನಿಲವನ್ನು ಪೂರೈಕೆ ಮಾಡಲಾಗುತ್ತಿದೆ. ಹಿಂದೆ ಈ ಮೂರು ಸಂಸ್ಥೆಗಳು ಸರಾಸರಿ 56.67 ಮೆಟ್ರಿಕ್ ಟನ್ ಆಟೋ ಗ್ಯಾಸ್ ಅನ್ನು ಸರಬರಾಜು ಮಾಡುತ್ತಿದ್ದವು. ಆದರೆ ಪ್ರಸ್ತುತ ಬೇಡಿಕೆಯನ್ನು ಪೂರೈಸಲು ಸರಬರಾಜು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಾಗಿದ್ದು, ಸದ್ಯ ಪ್ರತಿದಿನ ಸರಾಸರಿ 83.58 ಮೆಟ್ರಿಕ್ ಟನ್ ಗ್ಯಾಸ್ ಅನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೂರೈಸಲಾಗುತ್ತಿದೆ. ಕಳೆದ ಐದು ದಿನಗಳ ಪೂರೈಕೆ ವಿವರ: ಕಳೆದ ಏಪ್ರಿಲ್ 2 ರಿಂದ ಏಪ್ರಿಲ್ 6 ರವರೆಗಿನ ಅಂಕಿಅಂಶಗಳನ್ನು ಗಮನಿಸಿದರೆ, ಪೂರೈಕೆಯಲ್ಲಿ ಸ್ಥಿರತೆ ಇರುವುದು ಕಂಡುಬರುತ್ತದೆ. ಏಪ್ರಿಲ್ 2 ರಂದು 87.78 ಮೆಟ್ರಿಕ್ ಟನ್, ಏಪ್ರಿಲ್ 3 ರಂದು 86.05 ಮೆಟ್ರಿಕ್ ಟನ್, ಏಪ್ರಿಲ್ 4 ರಂದು 84.80 ಮೆಟ್ರಿಕ್ ಟನ್, ಏಪ್ರಿಲ್ 5 ರಂದು ಗರಿಷ್ಠ 94.11 ಮೆಟ್ರಿಕ್ ಟನ್ ಹಾಗೂ ಏಪ್ರಿಲ್ 6 ರಂದು 83.58 ಮೆಟ್ರಿಕ್ ಟನ್ ಅನಿಲವನ್ನು ಈ ಮೂರು ಪ್ರಮುಖ ಸಂಸ್ಥೆಗಳು ಯಶಸ್ವಿಯಾಗಿ ಪೂರೈಕೆ ಮಾಡಿವೆ.

ಆಕ್ಷೇಪಣೆಗೆ ಆಹ್ವಾನ

ಬೈಲಹೊಂಗಲ: 2024-25ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಬೆಳೆ ವಿಮೆ ಸಂಬಂಧಿಸಿದ ಅರ್ಜಿಗಳಲ್ಲಿ ಅನೇಕ ಪ್ರಕರಣಗಳನ್ನು ವಿಮಾ ಕಂಪನಿಗಳು ತಿರಸ್ಕರಿಸಿವೆ. ಮುಂಗಾರು ಹಂಗಾಮಿನ 774 ಪ್ರಕರಣಗಳು ಹಾಗೂ ಹಿಂಗಾರು ಹಂಗಾಮಿನ 34 ಪ್ರಕರಣಗಳು ತಿರಸ್ಕೃತವಾಗಿರುವುದಾಗಿ ತಿಳಿದುಬಂದಿದೆ. ಬೆಳೆ ವಿಮೆ ಮಾಡಿಸಿದ ಬೆಳೆ ಹಾಗೂ ಬೆಳೆ ಸಮೀಕ್ಷೆ ಮಾಡಿದ ಮಾಹಿತಿಗಳ ನಡುವೆ ವ್ಯತ್ಯಾಸ ಇರುವುದೇ ತಿರಸ್ಕಾರದ ಪ್ರಮುಖ ಕಾರಣವಾಗಿದೆ. ಈ ಸಂಬಂಧ ತಿರಸ್ಕೃತ ಪ್ರಕರಣಗಳ ವಿವರಗಳನ್ನು ರೈತ ಸಂಪರ್ಕ ಕೇಂದ್ರಗಳಾದ ಬೈಲಹೊಂಗಲ, ನೇಸರಗಿ ಹಾಗೂ ಕಿತ್ತೂರು ಕಚೇರಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಆದ್ದರಿಂದ, ಬೆಳೆ ವಿಮೆ ಮಾಡಿಸಿದ ರೈತರು ತಮ್ಮ ಅರ್ಜಿ ತಿರಸ್ಕೃತ ಪಟ್ಟಿಯಲ್ಲಿ ಇದ್ದರೆ, ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಗತ್ಯ ದಾಖಲೆಗಳೊಂದಿಗೆ 15 ದಿನಗಳೊಳಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಸಲ್ಲಿಸಲು ಸೂಚಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕರಾದ ಬಿ.ಎಲ್. ದಳವಾಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಕ್ಕೇರಿ: ಜಿಲ್ಲಾ ಪಂಚಾಯತ ಎಂಜನೀಯರಿಂಗ ವಿಭಾಗಕ್ಕೆ ಸಹಾಯಕ ಕಾರ್ಯ ನಿರ್ವಾಹಕ ಇಂಜನೀಯರಾಗಿ ಆಗಮಿಸಿ ಅಧಿಕಾರ ಸ್ವೀಕರಿಸಿದ ಸುಭಾಷ ಭಜಂತ್ರಿ ಅವರನ್ನು ಹುಕ್ಕೇರಿ ತಾಲೂಕ ಕೊರಮ ಸಮಾಜದ ವತಿಯಿಂದ ಸನ್ಮಾನಿಸಲಾಯಿತು. ವಿದ್ಯುತ್ ಸಹಕಾರಿ ಸಂಘದ ಬಸವರಾಜ ವಾಜಂತ್ರಿ, ಸಮಾಜದ ಮುಖಂಡರಾದ ಪರಶುರಾಮ ಭಜಂತ್ರಿ, ಮಾರುತಿ ಭಜಂತ್ರಿ, ತಮ್ಮೇಶ ಭಜಂತ್ರಿ , ಶಂಕರ ಭಜಂತ್ರಿ , ಪಿಂಟು ಭಜಂತ್ರಿ ,ರಾಮು ಭಜಂತ್ರಿ, ಸತೀಶ ಭಜಂತ್ರಿ , ಹಣಮಂತ ಭಜಂತ್ರಿ ಇತರರಿದ್ದರು.

ಡಾ.ಜಯಶ್ರೀಗೆ ಆನಂದ ಕಂದ ಪ್ರಶಸ್ತಿ

ರಾಮದುರ್ಗ: ಕನ್ನಡ-ಮರಾಠಿ ಭಾಷಾ ಬಾಂಧವ್ಯ ಬೆಳೆಸಲೆಂದು ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ನೀಡುವ ಡಾ. ಪಂಡಿತ ಅವಳೀಕರ ದತ್ತಿ 'ಆನಂದಕಂದ-2026' ಪ್ರಶಸ್ತಿ ರಾಮದುರ್ಗದ ಮೂಲ ನಿವಾಸಿ ಡಾ. ಜಯಶ್ರೀ ಶಶಿಕಾಂತ ಪಟ್ಟಣ ಅವರಿಗೆ ದೊರೆತಿದೆ. ಕನ್ನಡ ಸಾಹಿತ್ಯದ ಕವಿ ಶ್ರೇಷ್ಠ ಸಾಹಿತಿ ಡಾ. ಬೆಟಗೇರಿ ಕೃಷ್ಣ ಶರ್ಮಾ ಅವರ ಹೆಸರಿನಲ್ಲಿ ಈ ಪ್ರಶಸ್ತಿಯನ್ನು 2000ರಿಂದ ಕರ್ನಾಟಕ ವಿದ್ಯಾವರ್ಧಕ ಸಂಘವು ನೀಡುತ್ತಿದೆ. ಕನ್ನಡದಿಂದ ಮರಾಠಿಗೆ, ಮರಾಠಿಯಿಂದ ಕನ್ನಡಕ್ಕೆ ಅನುವಾದ ಮತ್ತು ಸಾಹಿತ್ಯ ರಚನೆ ಮಾಡುವ, ಎರಡೂ ಭಾಷೆಯ ಮಧ್ಯೆ ಸಾಮರಸ್ಯ ತರುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ-ಮಹಾರಾಷ್ಟ್ರದ ಸಾಹಿತಿಗಳಿಗೆ ನೀಡಲಾಗುತ್ತಿದೆ. ಡಾ. ಜಯಶ್ರೀ ಅವರು ಕರ್ನಾಟಕದ ಮೇರು ಸಾಹಿತಿಗಳನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು ಗಡಿನಾಡು ಸೋಲಾಪುರ, ಜತ್ತ, ಅಕ್ಕಲಕೋಟ, ಭಾರ್ಸಿ ಮುಂತಾದ ಭಾಗಗಳ ಅನೇಕ ದಾನಿ, ದಾಸೋಹಿಗಳ, ಪುಣ್ಯಪುರುಷರ ಕುರಿತು ಮರಾಠಿಯಲ್ಲಿ ಸಾಹಿತ್ಯ ರಚಿಸಿ ಮಹಾರಾಷ್ಟ್ರದ ಜನರಿಗೆ ಕನ್ನಡಿಗರ ಚರಿತ್ರೆಯನ್ನು ಪ್ರಕಟ ಮಾಡಿದ್ದಾರೆ. ಬಸವ ಸಮಿತಿಯ ಮರಾಠಿ ದ್ವೈಮಾಸಿಕ ಪತ್ರಿಕೆಯಲ್ಲಿ ಹತ್ತಾರು ಮರಾಠಿ ಲೇಖನಗಳನ್ನು ಪ್ರಕಟ ಮಾಡಿದ್ದಾರೆ. ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ. ದೇಶಪಾಂಡೆ ಸಭಾ ಭವನದಲ್ಲಿ ಏ.16ರಂದು ಸಂಜೆ 6 ಗಂಟೆಗೆ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭದಲ್ಲಿ ಡಾ. ಜಯಶ್ರೀ ಪಟ್ಟಣ ಅವರಿಗೆ ರಾಘವೇಂದ್ರ ಪಾಟೀಲ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಡಾ. ಬೆಟಗೇರಿ ಕೃಷ್ಣ ಶರ್ಮಾ ಸ್ಮಾರಕ ಟ್ರಸ್ಟ್ ಬೆಳಗಾವಿ ಅಧ್ಯಕ್ಷರಾದ ಡಾ. ವಿನಯಾ ಒಕ್ಕುಂದ ಅತಿಥಿಗಳಾಗಿ ಆಗಮಿಸಲಿದ್ದಾರ ಎಂದು ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ : ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಂಗ್ರಾಳಿ ಬಿ.ಕೆ. ಗ್ರಾಮದ ಶ್ರೀ ವಿಠ್ಠಲ ರುಕ್ಮಾಯಿ ದೇವಸ್ಥಾನದ ಅಭಿವೃದ್ಧಿಗಾಗಿ ಮೊದಲನೆ ಹಂತದ 11.50 ಲಕ್ಷ ರೂ.ಗಳ ಚೆಕ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ದೇವಸ್ಥಾನದ ಟ್ರಸ್ಟ್ ಸಮಿತಿಯವರಿಗೆ ಹಸ್ತಾಂತರಿಸಿದರು. ಈ ವೇಳೆ ಯುವ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಕಾಡಾ ಚೇರಮನ್ ಯುವರಾಜ ಕದಂ ಗ್ರಾಮದ ಹಿರಿಯರು, ಯುವಕರು ಕಾಂಗ್ರೆಸ್ ಪಾರ್ಟಿಯ ಮುಖಂಡರುಗಳು ಸೇರಿದಂತೆ ಹಲವರು ಇದ್ದರು.

ಅಗ್ನಿಶಾಮಕ ಠಾಣೆ ನಿರ್ಮಾಣಕ್ಕೆ ಭೂಮಿ ಪೂಜೆ

ಗುಣಮಟ್ಟದ ಕಾಮಗಾರಿ ಕೈಗೊಳ್ಳಿ

ಮೂಡಲಗಿ: ತಾಲೂಕಿನ ಜನತೆಯ ಬಹುದಿನಗಳ ಬೇಡಿಕೆಯಾಗಿದ್ದ ಅಗ್ನಿಶಾಮಕ ಠಾಣೆ ನಿರ್ಮಾಣಕ್ಕೆ ಭೂಮಿ ಪೂಜೆಯನ್ನು ಮಾಡಿದ್ದು, ವರ್ಷದೊಳಗೆ ಕಾಮಗಾರಿಯು ಪೂರ್ಣಗೊಳ್ಳಲಿದೆ ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.

ಬುಧವಾರ ಪಟ್ಟಣದ ದನಗಳ ಪೇಟೆಯ ಹತ್ತಿರ ಅಂದಾಜು 2.30 ಕೋಟಿ ರೂಪಾಯಿ ವೆಚ್ಚದಲ್ಲಿ (ಪಟಗುಂದಿ ರಸ್ತೆ) ನಿರ್ಮಾಣಗೊಳ್ಳಲಿರುವ ನೂತನ ಅಗ್ನಿಶಾಮಕ ಠಾಣೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಗುಣಮಟ್ಟದ ಕಾಮಗಾರಿಯನ್ನು ಕೈಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಮೂಡಲಗಿ ಹೊಸ ತಾಲ್ಲೂಕು ನಂತರ ಅನೇಕ ತಾಲ್ಲೂಕು ಮಟ್ಟದ ಕಛೇರಿಗಳನ್ನು ಆರಂಭಿಸಲಾಗಿದೆ. ಮುಖ್ಯವಾಗಿ ಅಗ್ನಿಶಾಮಕ ಠಾಣಾ ನಿರ್ಮಾಣ ಮಾಡಬೇಕೆಂಬುದು ಇಲ್ಲಿನ ಸಾರ್ವಜನಿಕರ ಬೇಡಿಕೆಯಾಗಿತ್ತು. ಇದಕ್ಕಾಗಿ ಅಧಿವೇಶನದಲ್ಲಿ ಎರಡ್ಮೂರು ಬಾರಿ ಸರ್ಕಾರವನ್ನು ಒತ್ತಾಯಿಸಿ ಕೊನೆಗೂ ಠಾಣಾ ನಿರ್ಮಾಣಕ್ಕೆ ಸರ್ಕಾರವು ಅಸ್ತು ನೀಡಿದೆ. ಇಲ್ಲಿನ ಪುರಸಭೆಯಿಂದ ಅಗತ್ಯವಿರುವ ಕಟ್ಟಡ ನಿರ್ಮಾಣಕ್ಕೆ 1.29 ಎಕರೆ ನಿವೇಶನವನ್ನು ನೀಡಲಾಗಿದೆ. ಮುಂದಿನ 2027 ರಲ್ಲಿ ಮೂಡಲಗಿಯಲ್ಲಿ ಭವ್ಯವಾದ ಕಟ್ಟಡ ತಲೆಎತ್ತಲಿದೆ ಎಂದು ಅವರು ತಿಳಿಸಿದರು. ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುದಾನವನ್ನು ನೀಡುತ್ತಿಲ್ಲ, ಪಂಚ ಗ್ಯಾರಂಟಿ ಯೋಜನೆಗಳಿಗೆ ಎಲ್ಲ ಹಣ ಹೋಗುತ್ತಿದೆ. ಅದರೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರ ಮೂಲಕ ನಮ್ಮ ಕ್ಷೇತ್ರಕ್ಕೆ ಸ್ವಲ್ಪ ಮಟ್ಟಿಗೆ ಅನುದಾನವು ಬರುತ್ತಿದೆ. ರಸ್ತೆಗಳ ನಿರ್ಮಾಣಕ್ಕಾಗಿ ಸಿಎಂಐಡಿಎಫ್ ಯೋಜನೆಯಡಿ 25 ಕೋಟಿ ರೂಪಾಯಿ ಅನುದಾನವು ಮಂಜೂರಾಗಿದೆ. ಇದರಲ್ಲಿ 1.95 ಕೋಟಿ ರೂಪಾಯಿ ವೆಚ್ಚದಲ್ಲಿ ಮೂಡಲಗಿ ಕ್ರಾಸ್ ದಿಂದ ಎ??????ರ್ ಕಾಲೇಜುವರೆಗಿನ ರಸ್ತೆ, 60 ಲಕ್ಷ ರೂಪಾಯಿ ವೆಚ್ಚದಲ್ಲಿ ಎಪಿಎಂಸಿಯಿಂದ ಬಸ್ ನಿಲ್ದಾಣದ ಹಳ್ಳದವರೆಗಿನ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಪುರಸಭೆಯ ಅನುದಾನದಡಿ 46 ಲಕ್ಷ ರೂಪಾಯಿ ವೆಚ್ಚದಲ್ಲಿ ಹಳ್ಳದಿಂದ ಟಿಪ್ಪು ಸುಲ್ತಾನ್ ವೃತ್ತದವರೆಗೆ ರಸ್ತೆಯನ್ನು ನಿರ್ಮಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಮೂಡಲಗಿ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ನಿರ್ಮಾಣ ಸೇರಿದಂತೆ ಮೂರು ಹೊಸ ಕಾಮಗಾರಿಗಾಗಿ ಸುಮಾರು 9.09 ಕೋಟಿ ರೂಪಾಯಿ ಅನುದಾನ ಬಿಡುಗಡೆಯಾಗಿದೆ ಎಂದು ಅವರು ಹೇಳಿದರು.

ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಸಮಾಜ ಕಲ್ಯಾಣ ಇಲಾಖೆಯ ಅನುದಾನದಡಿ 1.51 ಕೋಟಿ ರೂಪಾಯಿ ವೆಚ್ಚದ ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ ಪ್ರಕಾಶ ಗುಡುಮೆ, ಮುಖಂಡರಾದ ರವೀಂದ್ರ ಸೋನವಾಲಕರ, ಅನ್ವರ ನದಾಫ, ರಾಮಣ್ಣಾ ಹಂದಿಗುಂದ, ಡಾ. ಎಸ್.ಎಸ್ .ಪಾಟೀಲ, ಸಂತೋಷ ಸೋನವಾಲಕರ, ಈರಪ್ಪ ಬನ್ನೂರ, ಹಣಮಂತ ಗುಡ್ಲಮನಿ, ಪ್ರಶಾಂತ ನಿಡಗುಂದಿ, ಮರೆಪ್ಪ ಮರೆಪ್ಪಗೋಳ, ಪ್ರಕಾಶ ಮಾದರ, ಮುಖ್ಯಾಧಿಕಾರಿ ತುಕಾರಾಮ ಮಾದರ ಸೇರಿದಂತೆ ಮೂಡಲಗಿ-ಗುರ್ಲಾಪೂರ ಪಟ್ಟಣದ ಹಲವು ಗಣ್ಯರು, ಪುರಸಭೆ ಮಾಜಿ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.



ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅನುದಾನದಲ್ಲಿ ಸುಮಾರು 5.28 ಕೋಟಿ ರೂಪಾಯಿ ವೆಚ್ಚದಲ್ಲಿ 4.45 ಎಮ್‌ಎಲ್ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕಕ್ಕೆ ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಗುದ್ದಲಿ ಪೂಜೆಯನ್ನು ನೆರವೇರಿಸಿದರು.

ಮಹಾವೀರ ಸಹಕಾರಿ ಸಂಘಕ್ಕೆ 4.1 ಕೋಟಿ ರೂ. ಲಾಭ

ಹುಕ್ಕೇರಿ: ಗ್ರಾಮೀಣ ಭಾಗದ ಆರ್ಥಿಕವಾಗಿ ಸದೃಢಗೊಳಿಸುವುದಕ್ಕಾಗಿ ಪ್ರಾರಂಭಿಸಿದ ಶ್ರೀ ಮಹಾವೀರ ಮಲ್ಟಿಪರಪಜ್ ಸೌಹಾರ್ದ ಸಹಕಾರಿ ಸಂಘ ಅನೇಕ ಪೈಪೋಟಿಗಳ ಮಧ್ಯೆಯು ಆರ್ಥಿಕ ವರ್ಷ 31 ಮಾರ್ಚ್ 2026ಕ್ಕೆ 4 ಕೋಟಿ 1 ಲಕ್ಷ 55 ಸಾವಿರ ರೂ. ನಿವ್ವಳ ಲಾಭಗಳಿಸಿ ಪ್ರಗತಿಯತ್ತ ಸಾಗುತ್ತಿದೆ ಎಂದು ಮಹಾವೀರ ಸಮೂಹ ಸಂಸ್ಥೆಗಳ ಅಧ್ಯಕರಾದ ಮಹಾವೀರ ನಿಲಜಗಿ ಹೇಳಿದರು.

ಅವರು ಪಟ್ಟಣದ ಶ್ರೀ ಮಹಾವೀರ ಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಒಟ್ಟು 17 ಶಾಖೆಗಳಿದ್ದು ಸಹಕಾರಿಯು 6 ಜಿಲ್ಲೆಗಳ ಕಾರ್ಯ ಕ್ಷೇತ್ರ ವಿಸ್ತರಿಸಿಕೊಂಡಿದೆ. 14259 ಸದಸ್ಯರನ್ನು ಹೊಂದಿದೆ. ಒಟ್ಟು 1332. ಕೋಟಿ 14 ಲಕ್ಷ ರೂ. ವಹಿವಾಟು ನಡೆಸಿದೆ. 43 ಲಕ್ಷ ಶೇರು ಬಂಡವಾಳವಿದ್ದು, 11 ಕೋಟಿ 66 ಲಕ್ಷ ರೂ. ಕಾಯ್ದಿಟ್ಟ ಹಾಗೂ ಇತರೆ ನಿಧಿಗಳಿವೆ. 342 ಕೋಟಿ ದುಡಿಯುವ ಬಂಡವಾಳವಿದ್ದು ರೂ. 275 ಕೋಟಿ ಸಾಲ ವಿತರಿಸಲಾಗಿದೆ. ರೂ. 311 ಕೋಟಿ ಠೇವುಗಳಿದ್ದು ರೂ. 48 ಕೋಟಿ ಹೂಡಿಕೆಗಳಿವೆ. ಸಹಕಾರಿಯೂ ಕೇವಲ ಸಾಲ ಮತ್ತು ಠೇವು ಸಂಗ್ರಹಣೆ ಮಾಡದೇ ರಾಷ್ಟ್ರೀಯ ಮಟ್ಟದ ಆರ್ಥಿಕ ಸಂಸ್ಥೆಗಳು ನೀಡುವ ಎಸ್.ಎಂ.ಎಸ್. ಮನಿ ಟ್ರಾನ್ಸಫರ್, ಸೇಫ ಡಿಪಾಸಿಟ್ ಲಾಕರ, ಇ-ಸ್ಟ್ಯಾಂಪ್ (ಬಾಂಡ್ ಪೇಪರ್) ಯೋಜನೆಗಳನ್ನು ಜಾರಿಗೆ ತಂದಿದೆ.

ನಿರುದ್ಯೋಗ ಯುವಕರಿಗೂ ಆಸರೆಯಾಗಿದ್ದು, ಜನಸೇವೆಯಲ್ಲೂ ಸಹಕಾರಿಯು ಮುನ್ನಡೆ ಸಾಧಿಸಿದೆ ಎಂದರು.

ಉಪಾಧ್ಯಕ್ಷ ರೋಹಿತ ಚೌಗಲಾ, ನಿರ್ದೇಶಕರಾದ ಸಂಜಯ ನಿಲಜಗಿ, ಪ್ರಜ್ವಲ ನಿಲಜಗಿ, ಕಿರಣ ಸೊಲ್ಲಾಪೂರೆ, ಸುಕುಮಾರ ಖತಗಲ್ಲಿ, ಬಾಹುಬಲಿ ಸೊಲ್ಲಾಪೂರೆ, ಅಕ್ಕಪ್ಪಾ ಖತಗಲಿ. ಅಶೋಕ ಪಾಟೀಲ, ಪ್ರಧಾನ ವ್ಯವಸ್ಥಾಪಕ ರಾಜೇಂದ್ರ ಪಾಟೀಲ, ಶಾಖಾ ವ್ಯವಸ್ಥಾಪರಾದ ಸಂತೋಸಿಂಗ ರಜಪೂತ, ಪ್ರವೀಣ ಪಾಟೀಲ ಸೇರಿದಂತೆ ಸಂಸ್ಥೆಯ ನಿರ್ದೇಶಕರು, ಉಪಸ್ಥಿತರಿದ್ದರು.



ಬೇಡಿಕೆಯಂತೆ ಹೆಚ್ಚುವರಿ ಟಿಸಿ ಅಳವಡಿಕೆಗೆ

ಹುಕ್ಕೇರಿ: ತಾಲೂಕಿನ ರೈತರ ಹಾಗೂ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ಟಿಸಿ ಅಳವಡಿಸಲಾಗುತ್ತಿದೆ. ಕಾರಣ ಅನಧಿಕೃತ ಸಂಪರ್ಕದ ಮೂಲಕ ವಿದ್ಯುತ್ ಪಡೆಯಬಾರದೆಂದು ಗ್ರಾಮಿಣ ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ ಹೇಳಿದರು.

ಅವರು ಮಂಗಳವಾರದಂದು ತಾಲೂಕಿನ ಎಲಿಮುನ್ನೋಳಿಯ ಶೇಲಾರ ಟಿಸಿ, ಹಣಜ್ಯಾನಟ್ಟಿ ಗ್ರಾಮದ ಮೆಹಬೂಬ ಸುಬಾನಿ ಊರ ಟಿಸಿ ಹಾಗೂ ಢಂಗಿ ಅವರ ತೋಟದ ತಲಾ 63 ಕೆ.ವ್ಹಿ ಸಾಮರ್ಥ್ಯದ ಪ್ರತ್ಯೇಕ ಹೊಸದಾಗಿ ಅಳವಡಿಸಿದ ಟಿ.ಸಿ (ವಿದ್ಯುತ್ ಪರಿವರ್ತಕ)ಗಳ ಉದ್ಘಾಟನಾ ಕರ್ಯಕ್ರಮದಲ್ಲಿ ಮಾತನಾಡಿದರು.

ನಿರ್ದೇಶಕ ಪೃಥ್ವಿ ಕತ್ತಿ ಅವರು ಮಾತನಾಡಿ ಸಹಕಾರಿ ತತ್ವದಡಿ ವಿದ್ಯುತ್ ಸರಬರಾಜು ಮಾಡುವ ದೇಶದ ಏಕೈಕ ಸಂಸ್ಥೆ ಇದಾಗಿದೆ. ಇದರ ಆರ್ಥಿಕತೆಗೆ ಸಂಘದ ಸದಸ್ಯರ ಮತ್ತು ಗ್ರಾಹಕರ ಸಹಕಾರ ಅವಶ್ಯ. ಅದಕ್ಕಾಗಿ ಹಲವಾರು ವರ್ಷಗಳಿಂದ ಬಾಕಿ ಉಳಿಸಿಕೊಂಡ ಬಿಲ್ ಗಳನ್ನು ಆದಷ್ಟು ಬೇಗ ತುಂಬಿ ಸಹಕರಿಸಬೇಕು ಎಂದರು. ಅನಧಿಕೃತ ಸಂಪರ್ಕವನ್ನು ಯಾರಾದರೂ ಹೊಂದಿದ್ದರೆ ತಕ್ಷಣ ಸಂಘದ ಅಧಿಕಾರಿಗಳ ಗಮನಕ್ಕೆ ತರುವಂತೆ ವಿನಂತಿಸಿದರು.

ಸಂಘದ ಉಪಾಧ್ಯಕ್ಷ ಅಜಿತ ಮುನ್ನೋಳಿ, ನಿರ್ದೇಶಕರಾದ ಸತ್ತೆಪ್ಪಾ ನಾಯಿಕ, ಕೆಂಪಣ್ಣಾ ವಾಸೇದಾರ, ಶಿವನಗೌಡ ಮದವಾಲ, ಗುರುಸಿದ್ದಪ್ಪಾ ಮೂಡಲಗಿ, ರೆಸಿಡೆಂಟ ಇಂಜನೀಯರ ನೇಮಿನಾಥ ಖೇಮಲಾಪೂರೆ, ಮುಖಂಡರಾದ ಗೌಸಾಜಂ ನಾಯಿಕವಾಡಿ, ಮೀರಾಸಾಬ ಮುಲ್ತಾನಿ, ವಾಗೀಶ ಕಲ್ಲೋಳಿಮಠ, ಸಂಜು ಲಬ್ಬಿ, ಸಾಗರ ಬೋರಗಲ್ಲಿ, ಸತ್ತೆಪ್ಪಾ ಕಡಕೆ, ಮಾರುತಿ ಬಳೋಬಾಳ, ಕೆಂಪಣ್ಣಾ ಢಂಗಿ, ಮಲ್ಲಪ್ಪಾ ಕಡಕಿ ಮುತ್ತಿತರರಿದ್ದರು.



75 ಲಕ್ಷ ಮೊತ್ತದ ಕಾಮಗಾರಿಗೆ ಚಾಲನೆ

ಚಿಕ್ಕೋಡಿ: ತಾಲೂಕಿನ ಜೋಡಕುರಳಿ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹಾಗೂ ಶಾಸಕ ಗಣೇಶ ಹುಕ್ಕೇರಿ ಪ್ರಯತ್ನದಿಂದ ಬಿಡುಗಡೆಯಾದ 75 ಲಕ್ಷ ಮೊತ್ತದಲ್ಲಿ ರಸ್ತೆ, ಚರಂಡಿ ನಿರ್ಮಾಣ ಹಾಗೂ ದೇವಸ್ಥಾನ ಜೀರ್ಣೋದ್ದಾರ ಕಾಮಗಾರಿಗೆ ಬುಧವಾರ ಸ್ಥಳೀಯ ಮುಖಂಡರು ಚಾಲನೆ ನೀಡಿದರು.

50 ಲಕ್ಷ ಮೊತ್ತದಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ ಹಾಗೂ 25 ಲಕ್ಷ ಮೊತ್ತದಲ್ಲಿ ಬೀರಲಿಂಗೇಶ ದೇವಸ್ಥಾನ ಹಾಗೂ ಅರವಡಿ ಬೀರದೇವರ ದೇವಸ್ಥಾನಗಳ ಜೀರ್ಣೋದ್ದಾರ ಕಾಮಗಾರಿಗೆ ಸ್ಥಳೀಯರು ಭೂಮಿಪೂಜೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಬಸಗೌಡ ಪಾಟೀಲ, ಸಿದ್ದಪ್ಪ ಪೂಜಾರಿ, ಯಲ್ಲಪ್ಪ ದುಗ್ಗಾಣಿ, ಚಂದರ ಗಡಕರಿ, ಶಾಸಪ್ಪ ಹರಕೆ, ವಿಠ್ಠಲ ಹರಕೆ, ಅಜೀತ ಸವದತ್ತಿ, ಎಲ್ ಬಿ ಪಾಟೀಲ, ಕೃಷ್ಣಪ್ಪ ಕಾಂಬಳೆ, ಶಿವಾಜಿ ಹರಕೆ, ಸಿದ್ದು ನಾಯಿಕ, ದೀಪಕ ಕಾಂಬಳೆ, ಭರಮಾ ಕಾಂಬಳೆ, ಬೀರಪ್ಪ ಹರಕೆ, ಬಾಳು ಗಡಕರಿ, ಪ್ರಕಾಶ ಹುಲ್ಯಾಗೋಳ, ವಿಠ್ಠಲ ನಾಗನೂರೆ, ಅಜೀತ ಯಡ್ರಾಂವಿ, ರಾಯಪ್ಪ ಹರಕೆ, ಮುತ್ತೆಪ್ಪ ಖಿದ್ದಿ, ಸಿದ್ದಪ್ಪ ಖಿದ್ದಿ ಇತರರು ಇದ್ದರು.



ಮೆರವಣಿಗೆಯ ಮಾರ್ಗ ಪರಿಶೀಲನೆ ನಡೆಸಿದ ಮಹಾಪೌರ- ಉಪಮಹಾಪೌರ

ಬೆಳಗಾವಿ: ಏಪ್ರಿಲ್ 14 ರಂದು ಆಚರಣೆಗೊಳ್ಳಲಿರುವ ಡಾ. ಬಾಬಾಸಾಹೇಬ್ ಅಂಬೇಡ್ಕರರ 135ನೇ ಜಯಂತ್ಯೋತ್ಸವದ ಮೆರವಣಿಗೆ ಮಾರ್ಗವನ್ನು ಮಹಾಪೌರ-ಉಪಮಹಾಪೌರರು ಪರಿಶೀಲಿಸಿ, ಮಹಾಪಾಲಿಕೆಯಿಂದ ಜಯಂತ್ಯುತ್ಸವದ ಆಚರಣೆಗೆ ಸಕಲ ಸೌಲಭ್ಯಗಳನ್ನು ಕಲ್ಪಿಸುವ ಭರವಸೆಯನ್ನು ನೀಡಿದರು.

ಬೆಳಗಾವಿಯಲ್ಲಿ ಏಪ್ರಿಲ್ 14 ರಂದು ಮಹಾಮಾನವ ಬೋಧಿಸತ್ವ ಡಾ. ಬಾಬಾಸಾಹೇಬ್ ಅಂಬೇಡ್ಕರರ 135ನೇ ಜಯಂತ್ಯೋತ್ಸವದ ನಡೆಯಲಿದೆ. ಈ ಹಿನ್ನೆಲೆ ನಡೆಯಲಿರುವ ಮೆರವಣಿಗೆ ಮಾರ್ಗವನ್ನು ಮಹಾಪೌರರಾದ ಪ್ರೀತಿ ಕಾಮಕರ, ಉಪಮಹಾಪೌರರಾದ ಹನುಮಂತ ಕೊಂಗಾಲಿ ಅವರು ಪರಿಶೀಲಿಸಿದರು.

ಈ ವೇಳೆ ವಿವಿಧ ಇಲಾಖೆಯ ಅಧಿಕಾರಿಗಳು ಕೂಡ ಅವರಿಗೆ ಸಾಥ್ ನೀಡಿದರು. ಮಹಾಪೌರ ಪ್ರೀತಿ ಕಾಮಕರ್ ಅವರು ಈಗಾಗಲೇ ಡಾ. ಅಂಬೇಡ್ಕರ್ ಜಯಂತಿ ಮಹಾಮಂಡಳದೊಂದಿಗೆ ಪೂರ್ವಭಾವಿ ಸಭೆಯನ್ನು ನಡೆಸಲಾಗಿದ್ದು, ಈ ಬಾರಿಯೂ ಡಾ. ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಆವಶ್ಯಕ ಸೌಲಭ್ಯಗಳನ್ನು ಒದಗಿಸಲು ತಯಾರಾಗಿರುವುದಾಗಿ ತಿಳಿಸಿದರು.

ಉಪಮಹಾಪೌರರಾದ ಹಣಮಂತ ಕೊಂಗಾಲಿ ಅವರು, ವಿಶ್ವರತ್ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಜಯಂತ್ಯೋತ್ಸವದ ಮೆರವಣಿಗೆಯ ಮಾರ್ಗವನ್ನು ಪರಿಶೀಲಿಸಲು ಆಗಮಿಸಿದ್ದು, ಯಾವುದೇ ಕುಂದು ಕೊರತೆಯಾಗದಂತೆ ಪ್ರತಿವರ್ಷದಂತೆ ವಿಜೃಂಭಣೆಯಿಂದ ಅಂಬೇಡ್ಕರ್ ಜಯಂತಿಯನ್ನು ನಡೆಸಲು ಎಲ್ಲ ವ್ಯವಸ್ಥೆ ಕಲ್ಪಿಸುವ ಭರವಸೆಯನ್ನು ನೀಡಿದರು. ಅಲ್ಲದೇ ಮುಂಬರುವ ದಿನಗಳಲ್ಲಿ ಉದ್ಯಾನದಲ್ಲಿರುವ ಹಳೆಯ ಮೂರ್ತಿಯನ್ನು ಬದಲಾಯಿಸಿ ಹೊಸ ಮೂರ್ತಿಯನ್ನು ಪ್ರತಿಷ್ಠಾಪಿಸಲು ಮಹಾನಗರ ಪಾಲಿಕೆ ಬದ್ಧವಾಗಿದೆ ಎಂದರು ಹೇಳಿದರು.

ಹಕ್ಕುಪತ್ರ, ಉತಾರ ವಿತರಣೆಗೆ ಕ್ರಮ ಕೈಗೊಳ್ಳಿ

ಬೈಲಹೊಂಗಲ: ಪಟ್ಟಣವು ನಗರಸಭೆಯಾಗಿ ಮೇಲ್ದರ್ಜೆಗೇರಿದ್ದರೂ, ಬಸವೇಶ್ವರ ಆಶ್ರಯ ನಗರದ ನಿವಾಸಿಗಳಿಗೆ ಕಳೆದ 27 ವರ್ಷಗಳಿಂದ ಮನೆ ಹಕ್ಕುಪತ್ರ ಹಾಗೂ ನಗರಸಭೆಯ ಕಂಪ್ಯೂಟರ್ ಉತಾರ ವಿತರಣೆ ವಿಳಂಬವಾಗುತ್ತಿರುವುದಾಗಿ ಆರೋಪಿಸಿ, ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ನಿವಾಸಿಗಳು ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ ಅವರಿಗೆ ಮನವಿ ಸಲ್ಲಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ ಮುಖಂಡರಾದ ಯಲ್ಲಪ್ಪ ತಿಮ್ಮಾಪೂರ ಮತ್ತು ಮಲ್ಲಿಕಾರ್ಜುನ ಬಾಚಿ ಅವರು, 1999-2000ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ವಸತಿ ರಹಿತರಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿತ್ತು. ಕಾನೂನಿನ ಪ್ರಕಾರ 20 ವರ್ಷ ವಾಸಿಸಿದ ಬಳಿಕ ಹಕ್ಕುಪತ್ರ ನೀಡಬೇಕಾಗಿದ್ದರೂ, 27 ವರ್ಷ ಕಳೆದರೂ ನಗರಸಭೆ ಇದನ್ನು ಪಾಲಿಸಿಲ್ಲ ಎಂದು ದೂರಿದರು.

ಅಂದಿನ ಸಂದರ್ಭದಲ್ಲಿ ಮಣ್ಣಿನಿಂದ ನಿರ್ಮಿಸಲಾದ ಮನೆಗಳು ಇದೀಗ ಹಾಳಾಗುತ್ತಿದ್ದು, ಮನೆಗಳು ತಮ್ಮ ಹೆಸರಲ್ಲಿ ಇಲ್ಲದ ಕಾರಣ ದುರಸ್ತಿ ಕಾರ್ಯಗಳಿಗೆ ಸರ್ಕಾರದ ಸಹಾಯ ಅಥವಾ ಬ್ಯಾಂಕ್ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ನಿವಾಸಿಗಳು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಇನ್ನೂ ನಾಲ್ಕು ತಿಂಗಳ ಹಿಂದೆ ನಡೆದ ಸಾರ್ವಜನಿಕ ಸಭೆಯಲ್ಲಿ ಸಚಿವರ ಸಮ್ಮುಖದಲ್ಲಿ ಕೇವಲ 35 ಜನರಿಗೆ ಮಾತ್ರ ಹಕ್ಕುಪತ್ರ ವಿತರಿಸಿ, ಉಳಿದವರನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದರು. ಅಲ್ಲದೆ, ನಿವಾಸಿಗಳಿಂದ ರೂ.2000 ಡಿಡಿ ಪಡೆದುಕೊಂಡಿದ್ದರೂ ಹಕ್ಕುಪತ್ರ ನೀಡದೇ ನಗರಸಭೆ ಹಾಗೂ ಕೊಳಚೆ ನಿರ್ಮೂಲನಾ ಮಂಡಳಿ ಪರಸ್ಪರ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿವೆ ಎಂದು ಹೇಳಿದರು.

ನಗರಸಭೆಯ ದಾಖಲೆಗಳಲ್ಲಿ ಮಾಲೀಕರು ಎಂಬ ಕಾಲಮ್‌ನಲ್ಲಿ ಇನ್ನೂ ಅಧಿಕಾರಿಗಳ ಹೆಸರೇ ಕಾಣಿಸುತ್ತಿದ್ದು, ನಿವಾಸಿಗಳ ಹೆಸರು ಅನುಭೋಗುದಾರರು ಎಂದು ಮಾತ್ರ ನಮೂದಾಗಿರುವುದರಿಂದ, ವಿವಿಧ ಸೌಲಭ್ಯಗಳನ್ನು ಪಡೆಯಲು ಅಡಚಣೆ ಉಂಟಾಗಿದೆ ಎಂದು ತಿಳಿಸಿದರು.

ಹಿಂದಿನ ವಾರ್ಡ್ ಸದಸ್ಯರು ಹಕ್ಕುಪತ್ರ ನೀಡುವ ಭರವಸೆ ನೀಡಿ ನಿವಾಸಿಗಳಿಂದ ಹಣ ಪಡೆದು ವಂಚಿಸಿರುವುದಾಗಿ ಆರೋಪಿಸಿ, ತಕ್ಷಣವೇ ಕೊಳಚೆ ನಿರ್ಮೂಲನಾ ಮಂಡಳಿಯೊಂದಿಗೆ ಸಮನ್ವಯ ಸಾಧಿಸಿ ಹಕ್ಕುಪತ್ರ ವಿತರಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ, ಮುಂದಿನ 15 ದಿನಗಳೊಳಗೆ ಸಮಸ್ಯೆ ಪರಿಹರಿಸದಿದ್ದಲ್ಲಿ ನಗರಸಭೆ ಎದುರು ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಶಿವಾನಂದ ಆನಿಗೋಳ, ಮಹಾಂತೇಶ ಹಂಪಣ್ಣವರ, ಉಮೇಶ ಬಾಗೋಜಿ, ಬಸವರಾಜ ಅಂಕಲಗಿ, ಕುಮಾರ ಬರ್ಜಿ, ರಮೇಶ್ ಪತ್ತಾರ ಸೇರಿದಂತೆ ಬಸವೇಶ್ವರ ಆಶ್ರಯ ನಗರದ

ಸೇವೆಯ ಮೂಲಕ ಸಮಾಜದ ಪ್ರಗತಿ ಸಾಧ್ಯ

ತೆಲಸಂಗ: ಯುವಶಕ್ತಿಯು ಕೇವಲ ಪದವಿ ಗಳಿಕೆಗೆ ಸೀಮಿತವಾಗದೆ, ಸಾಮಾಜಿಕ ಜವಾಬ್ದಾರಿಯನ್ನು ಮೈಗೂಡಿಸಿಕೊಂಡಾಗ ಮಾತ್ರ ದೇಶದ ಸುಸ್ಥಿರ ಅಭಿವೃದ್ಧಿ ಸಾಧ್ಯ. ಹೀಗಾಗಿ ಶಿಕ್ಷಣದೊಂದಿಗೆ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಎಂದು ಪ್ರಾಂಶುಪಾಲ ಶಿವಕುಮಾರ.ಕೆ. ಹೇಳಿದರು.

ಸಮೀಪದ ಬನ್ನೂರ ಗ್ರಾಮದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಆವರಣದಲ್ಲಿ ತೆಲಸಂಗದ ಎಸ್‌ಎಂವಾಯ್ ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿ, ಇಂದು ನಮಗೆ ಪದವಿ ಪಡೆಯುವುದು ಎಷ್ಟು ಮುಖ್ಯವೋ, ಸಾಮಾಜಿಕ ಜವಾಬ್ದಾರಿಯನ್ನು ಅರಿತುಕೊಳ್ಳುವುದು ಅಷ್ಟೇ ಮುಖ್ಯ. ಯುವಶಕ್ತಿ ಎಂದರೆ ಕೇವಲ ವಯಸ್ಸಿನ ಸಂಖ್ಯೆಯಲ್ಲ, ಅದು ಬದಲಾವಣೆಯ ಕಿಡಿ. ಯುವಕರು ಕೇವಲ ಉದ್ಯೋಗಾಕಾಂಕ್ಷಿಗಳಾಗದೆ ಸಮಾಜದ ಬದಲಾವಣೆಯ ಹರಿಕಾರರಾಗಬೇಕು. ಗ್ರಾಮೀಣ ಭಾಗದ ಸಮಸ್ಯೆಗಳಿಗೆ ಸ್ಪಂದಿಸುವ ಗುಣ ಬೆಳೆಸಿಕೊಳ್ಳಬೇಕು. ಇಂತಹ ಶಿಬಿರಗಳು ಹಳ್ಳಿ ಮತ್ತು ನಗರಗಳ ನಡುವಿನ ಕಂದಕವನ್ನು ಕಡಿಮೆ ಮಾಡುತ್ತವೆ. ನಮ್ಮಲ್ಲಿರುವ ಕೌಶಲಗಳು ಸಮಾಜದ ಒಳಿತಿಗಾಗಿ ಬಳಕೆಯಾದಾಗ ಮಾತ್ರ ನಮ್ಮ ಶಿಕ್ಷಣಕ್ಕೆ ಒಂದು ಸಾರ್ಥಕತೆ ಸಿಗುತ್ತದೆ.



ಎನ್.ಎಸ್.ಎಸ್ ಶಿಬಿರದ ಸಮಾರೋಪ

ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ. ಸ್ವಚ್ಛತೆ, ಪರಿಸರ ಸಂರಕ್ಷಣೆ ಮತ್ತು ಆರೋಗ್ಯದ ಬಗ್ಗೆ ನಾವು ಜಾಗೃತಿ ಮೂಡಿಸಲು ಪ್ರಯತ್ನಿಸಿದ್ದೇವೆ. ಆದರೆ ಈ ಬದಲಾವಣೆ ನಾವು ಹೋದ ಮೇಲೂ ಮುಂದುವರಿಯಬೇಕು. ಪ್ರತಿಯೊಬ್ಬರೂ ತಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡು, ಗಿಡಮರಗಳನ್ನು ಬೆಳೆಸುವ ಸಂಕಲ್ಪ ಮಾಡಿದರೆ, ನಮ್ಮ ಹಳ್ಳಿಗಳೇ ನಂದನವನವಾಗುವುದರಲ್ಲಿ ಸಂಶಯವಿಲ್ಲ. ಈ ಶಿಬಿರ ನಮಗೆ ಸಹಬಾಳ್ವೆ, ಶಿಸ್ತು ಮತ್ತು ಸಮಯಪ್ರಜ್ಞೆಯನ್ನು ಕಲಿಸಿದೆ. ಈ ಶಿಬಿರ ಮುಗಿಯುತ್ತಿರಬಹುದು, ಆದರೆ ಇಲ್ಲಿ ಕಲಿತ ಸೇವಾ ಮನೋಭಾವ ಬದುಕಿನುದ್ದಕ್ಕೂ ಇರಲಿ ಎಂದರು.

ಕಳೆದ ಒಂದು ವಾರದಿಂದ ಶಿಬಿರಾರ್ಥಿಗಳು ಹಳ್ಳಿಯ ಪ್ರಮುಖ ರಸ್ತೆಗಳ ಸ್ವಚ್ಛತೆ, ಶಾಲಾ ಆವರಣದ ನವೀಕರಣ, ಜನರಲ್ಲಿ ಆರೋಗ್ಯ ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವಂತಹ ಅರ್ಥಪೂರ್ಣ ಕೆಲಸಗಳನ್ನು ನಿರ್ವಹಿಸಿದರು. ಶಿಬಿರದ ಧ್ಯೇಯವಾಕ್ಯವಾದ ನನಗಲ್ಲ ನಿನಗೆ ಎಂಬ ತತ್ವದಡಿ ವಿದ್ಯಾರ್ಥಿಗಳು ಹಗಲಿರುಳು ಶ್ರಮಿಸಿ ಗ್ರಾಮದ ಜನರ ಪ್ರಶಂಸೆಗೆ ಪಾತ್ರರಾದರು.

ಎಂದು ಎನ್‌ಎಸ್‌ಎಸ್ ಅಧಿಕಾರಿಗಳಾದ ಜ್ಯೋತಿ ಎಸ್. ಎನ್, ಗುರುರಾಜ ಕಾಮನ, ಸಂಗು ದಾಶ್ಯಾಳ, ರಮ್ಯಾ ಜೆ., ಡಾ.ಡಿ.ಬಿ.ಬಿರಾದರ, ಡಾ.ಸುಭಾಸ್ ಕಾಂಬಳೆ, ಡಾ.ಬಿ.ಆಯ್. ಮಠಪತಿ, ಶ್ವೇತಾ ಜುಗಳೆ, ಮಹೇಶ ಕುಮಠಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಿರುಸುದ್ದಿ

ಗದ್ದೆಮ್ಮದೇವಿ ಕಳಸ ಮೆರವಣಿಗೆ



ಕೆರೂರ: ಸಮೀಪದ ಇನಾಂ ಹುಲ್ಲಿಕೇರಿ ಗ್ರಾಮದ ಗದ್ದೆಮ್ಮದೇವಿಯ ನೂತನ ಗೋಪುರದ ಕಳಸದ ಮೆರವಣಿಗೆಯು ಬುಧವಾರ ಗ್ರಾಮದಲ್ಲಿ ನಡೆಯಿತು. ದೇವಿಯ ಕಳಸವನ್ನು ತೆರದ ವಾಹನದಲ್ಲಿ ಸ್ಥಾಪಿಸಿ ಗ್ರಾಮದ ಹೊರವಲಯದಲ್ಲಿರುವ ಮಠದಿಂದ ದೇವಸ್ಥಾನದವರೆಗೆ ಮೆರವಣಿಗೆ ಮೂಲಕ ತರಲಾಯಿತು. ನಿವೃತ್ತ ಇಂಜಿನಿಯರ್ ಮಲ್ಲಪ್ಪ ಕಿತ್ತಲಿ, ಜಿಪಂ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ, ರವಿ ಲಮಾಣಿ, ಯಲ್ಲಪ್ಪ ಕಿತ್ತಲಿ, ಗ್ರಾಮಸ್ಥರು ಇದ್ದರು.

ಸಂಗಮನಾಥನ ರಥೋತ್ಸವ



ಇಳಕಲ್: ಹುನಗುಂದ ತಾಲೂಕಿನ ಪವಿತ್ರ ಕ್ಷೇತ್ರ ಕೂಡಲಸಂಗಮದಲ್ಲಿ ಕೂಡಲಸಂಗಮೇಶ್ವರನ ಜಾತ್ರಾ ಮಹೋತ್ಸವವು ಅತ್ಯಂತ ವೈಭವದಿಂದ ಜರುಗಿತು. ವಿಶ್ವಗುರು ಬಸವಣ್ಣನವರ ತಪೋಭೂಮಿ ಕೂಡಲಸಂಗಮದಲ್ಲಿ, ಧಾರ್ಮಿಕ ವಿಧಿವಿಧಾನಗಳೊಂದಿಗೆ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಕೂಡಲ ಸಂಗಮೇಶ್ವರರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಶಾಸಕ ಡಾ.ವಿಜಯಾನಂದ ಎಸ್.ಕಾಶಪ್ಪನವರ ತಮ್ಮ ಪತ್ನಿ ವೀಣಾ ಕಾಶಪ್ಪನವರ ಅವರೊಂದಿಗೆ ಪಾಲ್ಗೊಂಡು ರಥಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ಬೆಳಗಲ್ ಗ್ರಾಮದಿಂದ ಬಂದ ತೇರಿನ ಹಗ್ಗ, ಗಂಜಿಹಾಳ ಗ್ರಾಮದ ಭಕ್ತರು ನೀಡಿದ ಬಾಳೆಕಂಬ, ತಂಗಡಗಿ ಗ್ರಾಮದಿಂದ ಆಗಮಿಸಿದ ಪಲ್ಲಕ್ಕಿ ಹೀಗೆ ಹತ್ತಾರು ಹಳ್ಳಿಗಳ ಭಕ್ತರು ಒಗ್ಗೂಡಿ ತಮ್ಮ ತಮ್ಮ ಸೇವೆ ಅರ್ಪಿಸುವ ಮೂಲಕ ಭಾವೈಕ್ಯತೆ ಮೆರೆದರು.

ಏ.13ರಿಂದ ಉರುಸು

ಮುಧೋಳ: ಇಲ್ಲಿನ ಹಜರತ ಸೈಯದವಲಿ ದರ್ಗಾದ ಉರುಸು ಏ.13ರಂದು ಸೋಮವಾರ ರಾತ್ರಿ 8ಕ್ಕೆ ಮಾಜಿ ಸಂಸದ ಪಾಟೀಲರ ಮನೆಯಿಂದ ಝುಂಡಾ ಹಾಗೂ ಗಂಧ ವಾದ್ಯದ ಜೊತೆ ತೆರಳಿ ರಾತ್ರಿ10ಕ್ಕೆ ನ್ಯಾಯವಾದಿ ದಯಾನಂದರ ಹಸ್ತದಿಂದ ಗಂಧ ಸಮರ್ಪಣೆ, ಜಮೀರ ಸೈ ಮುಲ್ಲಾ ಕುರಾನ ಪಠಣ, ಮೌ.ಸಜ್ಜಾದ ಹುಸೇನ್ ರು ಫಾತ್ಯಾಖಾನಿ ಪಠಿಸುವರು. ಏ.14ರಂದು ಬೆಳಗ್ಗೆ 9ಕ್ಕೆ. ಪುರುಷರ 50ಕಿ.ಮಿ ಸೈಕಲ್ ರೇಸ್,ಗೆ ಬಹುಮಾನ ಕೊಡುಗೆದಾರ ರಫೀಕ ಪಠಾಣ, ನವೀನ ಬೋಳಾರ, ಬಾಬುಲಾಲ ಮನಿಯಾರ, ಡೋಂಗ್ರಿ ಬೇಪಾರಿ, ಶಬ್ಬಿರ ಮುಲ್ಲಾ ಚಾಲನೆ ನೀಡುವರು. ರಾತ್ರಿ 10.ಕ್ಕೆ. ಕವ್ವಾಲ್ ಇಫ್ತೆಖಾರಿ ಬ್ರದರ್ಸ್ (ಮುಂಬೈ) ಮತ್ತು ಅರ್ಷಿಯಾ ನಾಜ್ (ಬೆಂಗಳೂರು) ಅವರ ತುರುಸಿನ ಕವ್ವಾಲಿ ಯನ್ನು ದಯಾನಂದ ಪಾಟೀಲರ ಅಧ್ಯಕ್ಷತೆಯಲ್ಲಿ ಸಚಿವ ಆರ್.ಬಿ.ತಿಮ್ಮಾಪುರ ಉದ್ಘಾಟಿಸುವರು. ಏ.15ರಂದು 12ಕ್ಕೆ ಭಕ್ತಾಧಿಗಳಿಗೆ ಅನ್ನಪ್ರಸಾದ, ಮ.3ಕ್ಕೆ ಜಂಗಿ ಕುಸ್ತಿ ಸ್ಪರ್ಧೆಗೆ ಉದ್ಯಮಿ ಸಂಗಮೇಶ ನಿರಾಣಿ ಅಧ್ಯಕ್ಷತೆಯಲ್ಲಿ ಚಿತ್ರದುರ್ಗ ಸಂಸದ ಮಾಜಿ ಡಿಸಿಎಂ.ಗೋವಿಂದ ಎಂ. ಕಾರಜೋಳ ಉದ್ಘಾಟಿಸುವರು. ಸಂಜೆ 4ಕ್ಕೆ ರಾಜ್ಯಮಟ್ಟದ ಟಗರಿನ ಕಾಳಗಗೆ ಕೊಡುಗೆದಾರ ಮುಧೋಳ ಜನತಾ ಪ್ಲಾಟ್‌ದ ಸೋಶಿಯಲ್ ವರ್ಕ ಯಂಗ್ ಕಮೀಟಿ ಅವರಿಂದ ಚಾಲನೆ. ಏ.16ರಂದು ರಾತ್ರಿ.10.ಕ್ಕೆ. ಮಹಾಲಿಂಗಪುರದ ನಿಜಾಮ ಅಲ್ಲಾಖಾನರ ಕನ್ನಡ ಕವ್ವಾಲಿ(ಜಾನಪದ)ಗೆ, ಸಲೀಂ ಚೌಧರಿ(ಎಚ್‌ಎಂಸಿ) ಗುತ್ತಿಗೆದಾರ ಮುಬಾರಕ ಚಾಂದ ಉದ್ಘಾಟಿಸುವರು ಎಂದು ತಿಳಿಸಿದ್ದಾರೆ.

ವಿದ್ಯುತ್ ಅವಘಡ

ಬೀಳಗಿ: ತಾಲೂಕಿನ ಕುಂದರಗಿ ಗ್ರಾಮದ ಚಾಕವೆಲ್ ಹತ್ತಿರ ರಸ್ತೆ ಬದಿಗೆ ಇರುವ ಕೆಇಬಿ ಕಂಬದ ಕೆಳಗಡೆ ನೆಟವರ್ಕ ವಾಯರನ್ನು ಕಂಬಕ್ಕೆ ಕಟ್ಟಿಸುವಾಗ ವಿದ್ಯುತ್ ತಂತಿ ಶಾಕ್ ಹೊಡೆದ ಪರಿಣಾಮ ಬಾದಾಮಿ ತಾಲೂಕಿನ ಅನವಾಲ ಗ್ರಾಮದ ಬಸವರಾಜ ವಿಠ್ಠಲ ಕುಂಟಲದ(32) ಸ್ಥಳದಲ್ಲಿಯೇ ಅಸುನೀಗಿದ ಘಟನೆ ಮಂಗಳವಾರ ನಡೆದಿದೆ. ವಿದ್ಯುತ್ ತಂತಿ ಕಂಬದ ಕೆಳಗಡೆ ಜಿಯೋ ನೆಟ್ ವರ್ಕ ಕಂಪನಿ ಹಾಗೂ ಗುತ್ತಿಗೆದಾರರು ಮತ್ತು ಬಿಎಸ್ ಎನ್‌ಎಲ್ ನೆಟ್‌ವರ್ಕ ಕಂಪನಿ ಹಾಗೂ ಗುತ್ತಿಗೆದಾರರು ಯಾವುದೇ ಸುರಕ್ಷಿತ ಮುಂಜಾಗ್ರತೆ ಕ್ರಮ ಕೈಗೊಳ್ಳದೇ ನಿರ್ಲಕ್ಷತನದಿಂದ ಹಾಗೆಯೇ ನೆಟವರ್ಕ ವಾಯರಗಳನ್ನು ತಂತಿಯಿಂದ ಕಂಬಕ್ಕೆ ಕಟ್ಟಿಸುವಾಗ ಬಸವರಾಜನ ಕೈಯಲ್ಲಿರುವ ತಂತಿಯು ಮೇನ್ ಲೈನ್ ವಿದ್ಯುತ್ ತಂತಿಗೆ ತಾಗಿ ಶಾಕ್ ಹೊಡೆದು ಕೈಗೆ, ಎದೆಗೆ, ಮುಖಕ್ಕೆ, ಮೈಗೆ ಅಲ್ಲಲ್ಲಿ ಸುಟ್ಟ ಗಾಯಗಳಾಗಿ ಮೇಲಿಂದ ಕೆಳಗೆ ಬಿದ್ದು ಸಾವನ್ನಪ್ಪಿರುತ್ತಾನೆ. ಈ ಘಟನೆಗೆ ಸಂಬಂಧಿಸಿದ ಎರಡೂ ಕಂಪನಿಯವರು ಮತ್ತು ಗುತ್ತಿಗೆದಾರರು ಕಾರಣಿಭೂತರಾಗಿದ್ದಾರೆಂದು ಮೃತನ ತಂದೆ ವಿಠ್ಠಲ ಯಮನಪ್ಪ ಕುಂಟಲದ ಬೀಳಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರು ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ.



ಗುಳೇದಗುಡ್ಡ: ಪಟ್ಟಣದ ಚಿತ್ರಕಲಾ ಶಿಕ್ಷಕ ವಿವೇಕಾನಂದ ದೇವಾಂಗಮಠ ಅವರ ಪುತ್ರಿ ನಂದಾ ದೇವಾಂಗಮಠ ಅವರು ಬಿಎ ಪದವಿ ಪರೀಕ್ಷೆಯ ಸಂಸ್ಕೃತ ವ್ಯಾಕರಣ ಶಾಸ್ತ್ರ ವಿಷಯದಲ್ಲಿ ಹೆಚ್ಚು ಅಂಕ ಪಡೆದಿದ್ದು, ಬೆಂಗಳೂರಿನಲ್ಲಿ ಮಂಗಳವಾರ ನಡೆದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 12 ಹಾಗೂ 13ನೇ ಘಟಿಕೋತ್ಸವದಲ್ಲಿ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರು ನಂದಾ ದೇವಾಂಗಮಠ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಅಹಲ್ಯಾ, ಸಂಸದ ಡಾ.ಸಿ.ಎನ್.ಮಂಜುನಾಥ ಉಪಸ್ಥಿತರಿದ್ದರು.

ಉತ್ತಮ ಸಮಾಜಕ್ಕೆ ನಾವೆಲ್ಲರೂ ಬದ್ಧರಾಗೋಣ

ಬೀಳಗಿ: ಮನುಷ್ಯನಿಗೆ ಆರೋಗ್ಯವೇ ಭಾಗ್ಯ. ಆರೋಗ್ಯವಾಗಿದ್ದರೆ ಮಾತ್ರ ಎಲ್ಲವನ್ನು ಪಡೆಯಲು ಸಾಧ್ಯ. ಉತ್ತಮ ಸಮಾಜ ನಿರ್ಮಾಣಕ್ಕೆ ನಾವೆಲ್ಲರೂ ಬದ್ಧರಾಗಬೇಕಾಗಿದೆ ಎಂದು ಎಸ್.ಆರ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವೈದ್ಯಕೀಯ ಅಧೀಕ್ಷಕ ಡಾ.ವಿಜಯಾನಂದ ಹಳ್ಳಿ ಹೇಳಿದರು. ತಾಲೂಕಿನ ಬಾಡಗಂಡಿಯ ಎಸ್.ಆರ್.ಪಾಟೀಲ ಶಿಕ್ಷಣ ಫೌಂಡೇಶನ್, ಶಾಂತಾದೇವಿ ಮೆಮೋರಿಯಲ್ ಕಾಲೇಜ ಆಫ್ ನರ್ಸಿಂಗ್ ಮತ್ತು ಎಸ್.ಆರ್.ಪಾಟೀಲ ಮೆಡಿಕಲ್ ಕಾಲೇಜ್ ಮತ್ತು ರಿಸರ್ಚ್ ಸೆಂಟರ್ ಸಂಯುಕ್ತಾಶ್ರಯದಲ್ಲಿ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಆರೋಗ್ಯ ಜಾಗೃತಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ನಿಯಮಿತ ಆರೋಗ್ಯ ತಪಾಸಣೆ, ಆರಂಭಿಕ ಹಂತದಲ್ಲೇ ರೋಗ ಗುರುತಿಸುವಿಕೆ ಮತ್ತು ಆರೋಗ್ಯಕರ ಜೀವನಶೈಲಿಯ ಅಗತ್ಯತೆ ವಿವರಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಡಾ.ರಾಘವೇಂದ್ರ ಪಾಟೀಲ ಮಾತನಾಡಿ, ಎಲ್ಲರೂ ಆರೋಗ್ಯದ ಕಡೆಗೆ ಹೆಚ್ಚು ಗಮನವಹಿಸಬೇಕು. ಬಿಸಿಲಿನ ತಾಪಮಾನ ಹೆಚ್ಚು ಇರುವುದರಿಂದ ಆರೋಗ್ಯದ ಕಡೆಗೆ ಗಮನಹರಿಸಿ ವೈದ್ಯರ ಸಲಹೆ ಪಡೆದುಕೊಳ್ಳಬೇಕು. ಮಹಾವಿದ್ಯಾಲಯ ಆಸ್ಪತ್ರೆ ಹಾಗೂ ಆಯುರ್ವೇದಿಕೆ ಆಸ್ಪತ್ರೆಗಳಲ್ಲಿ ಹಲವು ಉಚಿತ ಸೇವೆ ಇದ್ದು, ಈ ಭಾಗದ ಜನರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರಸಾದ ಪಾಟೀಲ, ಉಪನ್ಯಾಸಕ ಚೇತನ ಸಂಗಟಿ, ದಾನೇಶ ನಾಗರಾಳ, ಮಂಜುನಾಥ ಲಮಾಣಿ, ಉಪನ್ಯಾಸಕಿ ಲಕ್ಷ್ಮೀ, ತೇಜಸ್ವಿನಿ ಬೆಟಗೇರಿ, ಚೈತ್ರಾ ಕೊಟ್ಟಿಗೆ ಮತ್ತಿತರಿದ್ದರು.



ಬೀಳಗಿ: ತಾಲೂಕಿನ ಬಾಡಗಂಡಿಯ ಎಸ್.ಆರ್.ಪಾಟೀಲ ಶಿಕ್ಷಣ ಫೌಂಡೇಶನ್, ಶಾಂತಾದೇವಿ ಮೆಮೋರಿಯಲ್ ಕಾಲೇಜ ಆಫ್ ನರ್ಸಿಂಗ್ ಮತ್ತು ಎಸ್.ಆರ್.ಪಾಟೀಲ ಮೆಡಿಕಲ್ ಕಾಲೇಜ್ ಮತ್ತು ರಿಸರ್ಚ್ ಸೆಂಟರ್ ಸಂಯುಕ್ತಾಶ್ರಯದಲ್ಲಿ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಆರೋಗ್ಯ ಜಾಗೃತಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಉಪಚುನಾವಣೆ | ಮತಗಟ್ಟೆ ಗೋಡೆಗಳ ಮೇಲೆ ಬಣ್ಣದ ಚಿತ್ತಾರ

ಮತದಾನಕ್ಕೆ ಸಿದ್ಧವಾದ ಮತಗಟ್ಟೆಗಳು

ಬಾಗಲಕೋಟೆ: ಮತದಾನದ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಭಾರತ ಚುನಾವಣಾ ಆಯೋಗ ನಿರ್ದೇಶನದಂತೆ ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ವ್ಯಾಪ್ತಿಯಲ್ಲಿ ಸಖಿ, ವಿಶೇಷ ಚೇತನರ ಸ್ನೇಹಿ, ಯುವ ಹಾಗೂ ಥೀಮ್ ಆಧಾರಿತ ಮತಗಟ್ಟೆಗಳನ್ನು ಸಜ್ಜುಗೊಳಿಸಲಾಗಿದೆ ಎಂದು ಜಿಪಂ ಸಿಇಒ ಆಗಿರುವ ಜಿಲ್ಲಾ ಸ್ವೀಪ್ ಅಧ್ಯಕ್ಷ ಶಶಿಧರ ಕುರೇರ ತಿಳಿಸಿದರು.

ಬುಧವಾರ ನವನಗರ ಅಂಬೇಡ್ಕರ ಭವನದಲ್ಲಿ ಸ್ಥಾಪಿಸಲಾದ ಸಖಿ ಮತ್ತು ಯುವ ಮತಗಟ್ಟೆ ಹಾಗೂ ಅಂಜುಮನ್ ಇಂಗ್ಲೀಷ್ ಮೀಡಿಯಂ ಪ್ರೀ ಪ್ರೈಮರಿ ಸ್ಕೂಲ್, ಪಿಎಂಶ್ರೀ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸ್ಥಾಪಿಸಲಾದ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಮತದಾರರನ್ನು ಮತಗಟ್ಟೆಯತ್ತ ಆಕರ್ಷಿಸಲು ಒಟ್ಟು 5 ಬಗೆಯ ಮತಗಟ್ಟೆ ಸ್ಥಾಪಿಸಲಾಗಿದೆ. ಮತಗಟ್ಟೆ ಗೋಡೆಗಳ ಮೇಲೆ ಬಗೆ ಬಗೆಯ ಚಿತ್ರಗಳ ಜೊತೆಗೆ ಮತದಾನದ ಜಾಗೃತಿ ಕುರಿತು ಘೋಷ ವಾಕ್ಯಗಳನ್ನು ಬರೆಯಲಾಗಿದೆ. ವಿಶೇಷ ಚೇತನ ಮತದಾರರನ್ನು ಆಕರ್ಷಿಸುವ ರಂಗು ರಂಗಿನ ಚಿತ್ತಾರದ ಚಿತ್ರಗಳು, ಪಿಂಕ್ ಬಣ್ಣದಿಂದ ಅಲಂಕೃತಗೊಂಡ ಸಖಿ ಮತಗಟ್ಟೆಗಳು ಎಲ್ಲರನ್ನು ಕೈ ಬೀಸಿ ಕರೆಯುವಂತಿವೆ.

ಭಾರತ ದೇಶದಂತಹ ಬೃಹತ್ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮುಕ್ತ, ನ್ಯಾಯಸಮ್ಮತ ಹಾಗೂ ಅಚ್ಚುಕಟ್ಟಾಗಿ ಸಂಘಟಿಸುವುದು ಒಂದು ಸವಾಲಿನ ಕೆಲಸ. ಮತದಾರರಲ್ಲಿ ಜಾಗೃತಿ ಮೂಡಿಸಲು ಭಾರತ ಚುನಾವಣಾ ಆಯೋಗ ಹಲವು ಕ್ರಮಗಳನ್ನು ನಿರಂತರವಾಗಿ ಕೈಗೊಳ್ಳುತ್ತ ಬಂದಿದೆ. ಆ ಮಾರ್ಗದಲ್ಲಿಯೇ ಜಿಲ್ಲಾ ಸ್ವೀಪ್ ಸಮಿತಿಯ ಮತ್ತೊಂದು ಅದ್ಭುತ ಕಲ್ಪನೆ ಇದಾಗಿದೆ. ಎಲ್ಲರನ್ನು ಒಳಗೊಳ್ಳುವಿಕೆಯ ಮಂತ್ರ ಈ ವಿಶೇಷ ಮತಗಟ್ಟೆಗಳ ನಿರ್ಮಾಣದ ಹಿಂದೆ ಇದೆ. ಮತದಾರರನ್ನು ಮತಗಟ್ಟೆಯ ಕಡೆ ಸೆಳೆದು ಅವರಲ್ಲಿ ಜಾಗೃತಿ ಮೂಡಿಸುವ ಮೂಲಕ ಮತದಾನದ ಪ್ರಮಾಣವನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಸಿಇಒ ತಿಳಿಸಿದರು.

ಮತಗಟ್ಟೆ ಭೇಟಿ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ ಬಡದಾನಿ, ಜಿ.ಪಂ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ, ನಗರಸಭೆ ಪೌರಾಯುಕ್ತ ವಾಸಣ್ಣ ಆರ್ ಸೇರಿದಂತೆ ಇತರರು ಇದ್ದರು.



ವಿಶೇಷ ಮತಗಟ್ಟೆಗಳ ವಿವರ

ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದ ಮತಗಟ್ಟೆ ನಂ.195ರಲ್ಲಿ ಹಾಗೂ ಭಗವತಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ (ಮ.ಸಂ.62) ಪಿಂಕ್ ಮತಗಟ್ಟೆ, ನವನಗರದ ಅಂಬೇಡ್ಕರ ಭವನದಲ್ಲಿರುವ ಸಿಎಂಸಿ ಡಿಜಿಟಲ್ ಗ್ರಂಥಾಲಯ (ಮ.ಸಂ.196) ದಲ್ಲಿ ಯುವ ಮತಗಟ್ಟೆ, ಬಾಗಲಕೋಟೆ ನಗರದ ಸರಕಾರಿ ಮೊರಾರ್ಜಿ ದೇಸಾಯಿ ವಸತಿ ಶಾಲೆ (ಮ.ಸಂ.212)ರಲ್ಲಿ ವಿಶೇಷ ಚೇತನರ ಸ್ನೇಹಿ ಹಾಗೂ ವಿದ್ಯಾಗಿರಿಯ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲೆ (ಮ.ಸಂ.89) ರಲ್ಲಿ ಥೀಮ್ ಆಧಾರಿತ ಮತಗಟ್ಟೆ ಸ್ಥಾಪಿಸಲಾಗಿದೆ.

ಅಕ್ರಮ ಮಣ್ಣು ಸಾಗಾಟ ವಿರೋಧಿಸಿ ಮನವಿ

ಜಮಖಂಡಿ: ತಾಲೂಕಿನ ಚಿಕ್ಕ ಪಡಸಲಗಿ ಗ್ರಾಮದಲ್ಲಿ ಕೃಷ್ಣಾ ನದಿಯಿಂದ ಅಕ್ರಮವಾಗಿ ಮಣ್ಣು ತೆಗೆದು ಇಟ್ಟಿಗೆ ಭಟ್ಟಿಗಳಿಗೆ ಸಾಗಣೆ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ಈ ಕುರಿತು ಸ್ಥಳೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಗ್ರಾಮದ ಪ್ರಮುಖರಾದ ಶಿವಾನಂದ ಲಕ್ಷ್ಮಣ ಬೋದ್ಲಿ ಹಾಗೂ ಕಿರಣ ಮನೋಹರ ಗುಗ್ಗರಿ ಸೇರಿದಂತೆ ಗ್ರಾಮಸ್ಥರು ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಮತ್ತು ತಹಶೀಲ್ದಾರ್ ಅನೀಲ ಬಡಗೇರ ಅವರಿಗೆ ಮನವಿ ಸಲ್ಲಿಸಿ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಮಾತನಾಡಿದ ಶಿವಾನಂದ ಲಕ್ಷ್ಮಣ ಬೋದ್ಲಿ ಮಾತನಾಡಿ, ಚಿಕ್ಕ ಪಡಸಲಗಿ ಗ್ರಾಮದ ಬಿಜಾಪುರ ಮುಖ್ಯ ರಸ್ತೆಯ ಎಡ ಹಾಗೂ ಬಲಭಾಗಗಳಲ್ಲಿ ಅಕ್ರಮವಾಗಿ ಮಣ್ಣು ತೆಗೆಯಲಾಗುತ್ತಿದ್ದು, ಅದನ್ನು ಇಟ್ಟಿಗೆ ಭಟ್ಟಿಗಳಿಗೆ ಬಳಸಲಾಗುತ್ತಿದೆ ಎಂದು ಆರೋಪಿಸಿದರು. ಭಟ್ಟಿಗಳಲ್ಲಿ ಬಳಸುವ ಹೂದಿ ಹಾಗೂ ಕಲ್ಲಿದ್ದಲಿನ ಹೊಗೆಯಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ತೀವ್ರ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಿದರು.

ಇದೇ ವಿಷಯವಾಗಿ ಕಳೆದ ಎರಡು ವರ್ಷಗಳಿಂದ ತಹಶೀಲ್ದಾರ್ ಕಚೇರಿಗೆ ಮನವಿ ಸಲ್ಲಿಸಿದರೂ ಯಾವುದೇ ಪರಿಣಾಮಕಾರಿ ಕ್ರಮಕೈಗೊಳ್ಳಲಾಗಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ಭಟ್ಟಿಗಳ ಮಾಲೀಕರನ್ನು ಪ್ರಶ್ನಿಸಿದಾಗ ಅವರು ಅಧಿಕಾರಿಗಳಿಗೆ ಹಣ ನೀಡುತ್ತಿರುವುದಾಗಿ ಹೇಳಿ ನಿರ್ಲಕ್ಷ್ಯ ಧೋರಣೆ ತೋರಿರುವುದಾಗಿ ಆರೋಪಿಸಿದರು.

ಕಿರಣ ಮನೋಹರ ಗುಗ್ಗರಿ ಮಾತನಾಡಿ, ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ಕಡಿಮೆಯಾಗಿರುವುದನ್ನು ಬಳಸಿಕೊಂಡು ಅಕ್ರಮವಾಗಿ ಮಣ್ಣು ಸಾಗಣೆ ನಡೆಯುತ್ತಿದೆ. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಸ್ಪಂದನೆ ಸಿಗದಿರುವುದರಿಂದ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದೆ. ಕೂಡಲೇ ಅಕ್ರಮ ಮಣ್ಣು ಗಣಿಗಾರಿಕೆ ನಿಲ್ಲಿಸಬೇಕು, ಇಲ್ಲವಾದರೆ ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಶಿವಾನಂದ ಎನಗಾಯಿ, ಮುತಾಲಿಕ ಬೋದ್ಲಿ, ಮುತ್ತಪ್ಪ ಮರನೂರ, ಮಹಾದೇವ ಗುಗ್ಗರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕುಡಿಯುವ ನೀರಿನ ಸೌಲಭ್ಯ: ಶ್ಲಾಘನೀಯ

ಬೀಳಗಿ: ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬೇಸಿಗೆ ಬಿಸಿಲು, ಗ್ರಾಮೀಣ ಭಾಗಗಳಿಂದ ಪಟ್ಟಣಕ್ಕೆ ಬರುವ ಮತ್ತು ಹೋಗುವ ಸಾರ್ವಜನಿಕರಿಗೆ ನೀರಿನ ದಾಹ ನೀಗಿಸಲು ಅರವಟಿಗೆ ಸ್ಥಾಪಿಸುವ ಮೂಲಕ ಪ್ರತಿನಿತ್ಯ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಹೇಳಿದರು.

ಪಟ್ಟಣದ ಬಸ್ ನಿಲ್ದಾಣದ ಎದುರು ಫಾರುಖ ಹುಡೇದ ಹಾಗೂ ಅಲ್ಲಾಭಕ್ಷ ಜಮಖಂಡಿ ಅವರು ಸಿದ್ಧಗೊಳಿಸಿದ ಕುಡಿಯುವ ನೀರಿನ ಅರವಟಿಗೆಗೆ ಚಾಲನೆ ನೀಡಿ ಮಾತನಾಡಿ, ಅರವಟಿಗೆ ಸ್ಥಾಪಿಸಿದ್ದಲ್ಲದೇ ಪ್ರತಿದಿವಸ ಪಟ್ಟಣಕ್ಕೆ ಆಗಮಿಸುವ ಜನಸಾಮಾನ್ಯರಿಗೆ ತಂಪಾದ ಕುಡಿಯುವ ನೀರು ಒದಗಿಸುವ ಗೆಳೆಯರನ್ನು ಅಭಿನಂದಿಸಿದರು.

ಪತ್ರಕರ್ತ ಆನಂದ ಜಡಿಮಠ ಮತ್ತು ಕಾಶಿನಾಥ ಸೋಮನಕಟ್ಟಿ ಮಾತನಾಡಿ, ಕುಡಿಯುವ ನೀರು ಲಭ್ಯವಾಗಿಸುವ ನಿಟ್ಟಿನಲ್ಲಿ ಗೆಳೆಯರು ಸೇರಿ ಈ ಸೇವೆಗೆ ಮುಂದಾಗಿದ್ದು, ನೀರನ್ನು ಹಿತಮಿತವಾಗಿ ಬಳಸಬೇಕು. ನೀರಿನ ಬವಣೆ ನೀಗಿಸಲು ಅರವಟಿಗೆ ಆರಂಭಿಸಲಾಗಿದ್ದರಿಂದ ಶುದ್ಧ ಕುಡಿಯುವ ನೀರನ್ನು ಕುಡಿದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲು ತಿಳಿಸಿದರು.

ಅರವಟ್ಟಿಗೆ ಸ್ಥಾಪಕ ಫಾರುಖ ಹುಡೇದ ಮಾತನಾಡಿ, ತಾಲೂಕಿನ ವಿವಿಧ ಗ್ರಾಮಗಳಿಂದ ಪಟ್ಟಣಕ್ಕೆ ಪ್ರತಿನಿತ್ಯ ಬರುವ ಜನರಿಗೆ ಕುಡಿಯುವ ನೀರಿನ ದಾಹ ನಿಗಿಸುವ ಉದ್ದೇಶದಿಂದ ನಾನು ನನ್ನ ಸ್ನೇಹಿತ ಕೂಡಿಕೊಂಡು ಪ್ರಯತ್ನ ಮಾಡುತ್ತಿದ್ದೇವೆ. ಈ ಬೇಸಿಗೆಯಿಂದಾಗಿ ದಿನೇ ದಿನೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ. ಬೇಸಿಗೆಯಲ್ಲಿ ಜನರಿಗೆ ಕುಡಿಯುವ ನೀರು ಲಭ್ಯವಾಗಿಸುವ ನಿಟ್ಟಿನಲ್ಲಿ ಗೆಳೆಯರು ಸೇರಿ ಈ ಸೇವೆಗೆ ಮುಂದಾಗಿದ್ದು, ನೀರನ್ನು ಮಿತವಾಗಿ ಬಳಸಿ ಸದುಪಯೋಗಪಡಿಸಿಕೊಳ್ಳಲು ಎಂದು ಹೇಳಿದರು. ಅಲ್ಲಾಭಕ್ಷ ಜಮಖಂಡಿ ಮಾತನಾಡಿ, ಬೀಳಗಿ ಕ್ರಾಸ್‌ನ ಕನಕ ವೃತ್ತದ ಸಮೀಪ ಹಾಗೂ ಬಸ್ ನಿಲ್ದಾಣದ ಎದುರು ಎರಡು ಅರವಟ್ಟಿಗೆ ನಿರ್ಮಾಣ ಮಾಡಿದ್ದು ಸಾರ್ವಜನಿಕರು ಅಲ್ಲಿರುವ ಹರವಿಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ನೀರನ್ನು ಬಳಸಿಕೊಳ್ಳಲು ಸಾರ್ವಜನಿಕರಿಗೆ ವಿನಂತಿಸಿದರು.

ಮಂಜುಳಾ ಮೇರಾಕಾರ, ಹನುಮಂತ ಚಿಗರನ್ನವರ, ಹುಸೇನ ಬಾಲಗಾವಿ, ಲಾಲಸಾಬ ಮಕಾನದಾರ, ಜಾವೀದ ಕಲೈಗಾರ, ಶರಣಪ್ಪ ಹಡಪದ, ರಫೀಕ್ ಮುಲ್ಲಾ, ಅಲೀಮ ತೆಗ್ಗಿ, ಕುತುಬುದ್ದಿನ್ ಮುಲ್ಲಾ ಮತ್ತಿತರಿದ್ದರು.



ಕರವೇ ಅಧ್ಯಕ್ಷರಾಗಿ ಬಸವರಾಜ ನಾಲವಾಡದ ನೇಮಕ

ಇಳಕಲ್: ಕರ್ನಾಟಕ ರಕ್ಷಣಾ ವೇದಿಕೆಯ ಇಳಕಲ್ ತಾಲೂಕು ಘಟಕಕ್ಕೆ ಹೊಸ ಚೈತನ್ಯ ಬಂದಿದ್ದು, ನೂತನ ಪದಾಧಿಕಾರಿಗಳ ಹಾಗೂ ಸದಸ್ಯರ ಆಯ್ಕೆ ಪ್ರಕ್ರಿಯೆ ಯಶಸ್ವಿಯಾಗಿ ನಡೆಯಿತು.

ಗೌರವ ಅಧ್ಯಕ್ಷರಾಗಿ ಬಸವರಾಜ ನಾಲವಾಡದ ಮತ್ತು ತಾಲೂಕು ಪ್ರಧಾನ ಕಾರ್ಯದರ್ಶಿಯಾಗಿ ಮುರ್ತುಜಾ ಬಾದಾಮಿ ಅವರು ಅಧಿಕೃತವಾಗಿ ಆಯ್ಕೆಯಾಗಿದ್ದಾರೆ ಎಂದು ತಾಲೂಕ ಅಧ್ಯಕ್ಷ ಅಶೋಕ ಪೂಜಾರಿ ತಿಳಿಸಿದ್ದಾರೆ.

ಸಂಘಟನೆ ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ನೂತನ ಸದಸ್ಯರನ್ನಾಗಿ ವಿಠ್ಠಲ ಜಾದವ, ಗೀತಾ ಬಿಜ್ಜಲ್, ವಿಜಯಲಕ್ಷ್ಮೀ ನಂದಾಪುರಮಠ, ರೂಪ ಮಾಸನ ಮತ್ತು ಮಲ್ಲಿಕಾರ್ಜುನ ಮೇಟಿ ಅವರನ್ನು ನೇಮಕ ಮಾಡಲಾಯಿತು. ಸಂಘಟನೆಯ ಹಿರಿಯ ಮುಖಂಡರು ನೂತನ ಸದಸ್ಯರಿಗೆ ಶಾಲು ಹಾಕುವ ಮೂಲಕ ಆತ್ಮೀಯವಾಗಿ ಸ್ವಾಗತಿಸಿದರು.



ಹೊಸ ಪದಾಧಿಕಾರಿಗಳ ಆಯ್ಕೆಯೊಂದಿಗೆ ಇಳಕಲ್ ಭಾಗದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಚಟುವಟಿಕೆಗಳು ಇನ್ನು ಮುಂದೆ ಮತ್ತಷ್ಟು ಚುರುಕುಗೊಳ್ಳಲಿವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಜಿಲ್ಲಾ ಘಟಕದ ಮಹಿಳಾ ಪ್ರಧಾನ ಕಾರ್ಯದರ್ಶಿ ಸವಿತಾ ಹಿರೇಮಠ, ಇಳಕಲ್ ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷೆ ಶೋಭಾ ಆರ್ಯರ, ಉಪಾಧ್ಯಕ್ಷ ಹಸನ್ ಕಲಕಬಂಡಿ, ಮತ್ತಿತರರು ಉಪಸ್ಥಿತರಿದ್ದರು.

ಮಾನವೀಯತೆ ಮೆರೆದ ನಿರ್ವಾಹಕ

ಲೋಕಾಪುರ: ಬಸ್ ಇಳಿಯುವಾಗ ಪ್ರಯಾಣಿಕರೋರ್ವರಿಗೆ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣದ ಬ್ಯಾಗ ಮರೆತು ಹೋಗಿ ಹಾಗೆ ಇಳಿದು ಹೋಗಿದ್ದರು. ಸ್ವಲ್ಪ ಸಮಯದ ನಂತರ ಗಮನಕ್ಕೆ ಬಂದಾಗ ಕಂಗಾಲಾಗಿ ಹೋಗಿದ್ದರು. ಹೇಗಪ್ಪ ವಾಪಸ್ ಪಡೆಯುವುದು ಎಂದು ಆಘಾತಗೊಂಡಿದ್ದರು. ಆ ಪ್ರಯಾಣಿಕರನ್ನು ಪತ್ತೆ ಹಚ್ಚಿ ನಿರ್ವಾಹಕ ಬ್ಯಾಗನ್ನು ವಾಪಸ್ ಕೊಟ್ಟಿದ್ದಾರೆ. ಪ್ರಯಾಣಿಕರ ಮೊಗದಲ್ಲಿ ಸಂತಸ ಮೂಡಿಸಿದ್ದಾರೆ. ಬಸ್ ಇಳಿಯುವಾಗ ಪ್ರಯಾಣಿಕರೋರ್ವರು ಮರೆತು ಹೋಗಿದ್ದ ಚಿನ್ನದ ಬ್ಯಾಗನ್ನು ಜೋಪಾನವಾಗಿಟ್ಟು, ಆ ಪ್ರಯಾಣಿಕರನ್ನು ಹುಡುಕಿ ಬ್ಯಾಗನ್ನು ಮರಳಿಸಿ ನಿರ್ವಾಹರೊಬ್ಬರು ಮಾನವೀಯತೆ ಮೆರೆದಿದ್ದಾರೆ. ಲೋಕಾಪುರದಿಂದ ಹೊಸಕೋಟಿ ಮಾರ್ಗದಲ್ಲಿ ಪ್ರಯಾಣಿಕರೋರ್ವರು ಚಿನ್ನಾಭರಣ ಇದ್ದ ಬ್ಯಾಗನ್ನು ಮರೆತು ಹೋಗಿದ್ದರು, ಅದನ್ನು ಗಮನಿಸಿದ ನಿರ್ವಾಹಕ ಎ.ಎಸ್.ಕಂಬಾರ ಬಿಟ್ಟು ಹೋಗಿರುವ ಪರ್ಸನ್ನು ಪ್ರಯಾಣಿಕರಿಗೆ ಮರಳಿ ಹಿಂದುರುಗಿಸಿರುತ್ತಾರೆ. ನಿರ್ವಾಹಕ ಎ.ಎಸ್.ಕಂಬಾರ ಕಾರ್ಯಕ್ಕೆ ಪ್ರಯಾಣಿಕ ಮತ್ತು ಮುಧೋಳ ಘಟಕದ ಕೆಎಸ್‌ಆರ್‌ಟಿಸಿ ಸಿಬ್ಬಂದಿ ನಿರ್ವಾಹಕ ಕಂಬಾರ ಅವರಿಗೆ ಅಭಿನಂದನೆ ಸಲ್ಲಿಸಿದರು.



ಏ.16ರಿಂದ ಗಣತಿದಾರರಿಗೆ ಸಹಕಾರ

ಮುಧೋಳ: ಭಾರತದ ಪ್ರತಿಯೊಬ್ಬ ನಾಗರಿಕ ಸ್ವಯಂ ಗಣತಿ ಮಾಡುವ ಕಾರ್ಯ ಪ್ರಾರಂಭವಾಗಿದ್ದು, ಅದಕ್ಕಾಗಿ ಸರ್ಕಾರ ಸರಳ ಸುರಕ್ಷಿತ ಮತ್ತು ಡಿಜಿಟಲ್ ಸೌಲಭ್ಯ ಒದಗಿಸಲಾಗಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಏ.16ರಿಂದ ತಮ್ಮ ಮನೆಗಳಿಗೆ ಬರುವ ಗಣತಿದಾರರಿಗೆ ಸಹಕರಿಸಲ ತಿಳಿಸಿದ್ದಾರೆ. ಮುಧೋಳ ನಗರಸಭೆಯಲ್ಲಿ ಪ್ರತಿಸಲದಂತೆ ಸ್ವಯಂ ಘೋಷಿತ ಆಸ್ತಿ ತೆರಿಗೆ ತುಂಬಲು ಶೇ 5%ರಷ್ಟು ರಿಯಾಯಿತಿ ಅಭಿಯಾನ ಪ್ರಾರಂಭವಾಗಿದ್ದು, ಅದಕ್ಕಾಗಿ ಮುಧೋಳ ನಗರಸಭೆಗೆ ಆಸ್ತಿ ತೆರಿಗೆ ಭರಣಾ ಮಾಡಲು ಬರುವ ಪ್ರತಿಯೊಬ್ಬ ಸಾರ್ವಜನಿಕರಿಂದ ಸ್ವಯಂ ಗಣತಿ ಮಾಡಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಮುಧೋಳ ನಗರಸಭೆಯ ಪೌರಾಯುಕ್ತ ಗೋಪಾಲ ಕಾಸೆ ತಿಳಿಸಿದ್ದಾರೆ.



ಸವಾರರಿಗೆ ತಲೆನೋವಾಗಿ ಪರಿಣಮಿಸಿದ ರಸ್ತೆ ಉಬ್ಬುಗಳು

ನಿತೀಶ ಪಾಟೀಲ

ಕಲಾದಗಿ: ಗ್ರಾಮದ ಒಳಬರುವ ರಸ್ತೆಯ ಖೊಬ್ರಿ ಕ್ರಾಸ್ ಹತ್ತಿರದ ಮುಖ್ಯ ರಸ್ತೆಯ ಮಾರ್ಗದಲ್ಲಿ ಕೃತಕವಾಗಿ ನಿರ್ಮಿತವಾಗಿರುವ ರಸ್ತೆ ಉಬ್ಬು(ರೋಡ ಬ್ರೆಕ್)ನ್ನು ದಾಟಬೇಕಾದರೆ ದಿನಂಪ್ರತಿ ಸಂಚರಿಸುವ ಸವಾರರಿಗೆ ತಲೆನೋವಾಗಿ ಪರಿಣಮಿಸಿದ್ದು, ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡ ಉದಾಹರಣೆಗಳು ಸಾಕಷ್ಟಿವೆ.

ಗ್ರಾಮದ ಖೊಬ್ರಿ ಕ್ರಾಸ್‌ನಿಂದ ಡಾ.ಅಂಬೇಡ್ಕರ್ ವೃತ್ತಕ್ಕೆ ಸಾಗುವ ಮಾರ್ಗ ಮಧ್ಯೆ ಈ ಹಿಂದೆ ವರ್ಷಗಳ ಮೊದಲು ಕಾಂಕ್ರೀಟ್ ಚರಂಡಿ ನಿರ್ಮಿಸಿ ಅದರ ಮೇಲೆ ರೋಡ್ ಬ್ರೆಕ್ ರೀತಿ ಕಾಂಕ್ರೀಟ್ ಹಾಕಿ ಕಾಮಗಾರಿ ಮಾಡಲಾಗಿತ್ತು. ಕಳೆದ ವರ್ಷ ಸುರಿದ ವಿಪರೀತ ಮಳೆ ಹಾಗೂ ಭಾರಿ ಗಾತ್ರದ ವಾಹನಗಳ ಸಂಚಾರ ಹಾಗೂ ಬಸಗಳ ಸಂಚಾರದಿಂದ ಕೃತಕವಾಗಿ ನಿರ್ಮಾಣವಾಗಿದ್ದ ರಸ್ತೆ ಉಬ್ಬು ಹಾಳಾಗಿ ಅಲ್ಲಲ್ಲಿ ಒಡೆದು ದೊಡ್ಡ ಪ್ರಮಾಣದ ಉಬ್ಬು ದಿನ್ನೆಗಳು ನಿರ್ಮಾಣವಾಗಿ ದ್ವಿಚಕ್ರ ವಾಹನ ಸವಾರರು ಸಂಚರಿಸಲು ಅಡಚಣೆಯುಂಟಾಗುತ್ತದೆ. ಇಂತಹ ಘಟನೆಗಳು ಮೇಲಿಂದ ಮೇಲೆ ಸಂಭವಿಸಿದರೂ ಸಂಬಂದಿಸಿದ ಅಧಿಕಾರಿಗಳು ಇತ್ತ ಕಡೆ ಗಮನಹರಿಸದಿರುವುದು ಆಕ್ರೋಶಕ್ಕೆ ಕಾರಣವಾಗುತ್ತಿದೆ.

ಕಲಾದಗಿ ಒಳ ಬರುವ ಮುಖ್ಯ ರಸ್ತೆಯ ಹೆರಕಲ್ (ದಕ್ಷಿಣ) ಏತ ನೀರಾವರಿ ಚಾಕವೆಲ್ ಕಾಲುವೆ ಮೇಲ್ಭಾಗದ ರಸ್ತೆ ಸಂಚಾರಕ್ಕೆ ಮುಕ್ತವಾಗಿ ವರ್ಷಗಳೇ ಕಳೆದರೂ ರಸ್ತೆ ತುಂಬೆಲ್ಲ ತಗ್ಗು ದಿನ್ನೆಗಳು ತುಂಬಿ ವಾಹನದ ಹಿಂದೆ ಏಳುತ್ತಿರುವ ದೂಳಿನಿಂದ ಬೇಸತ್ತಿದ್ದು, ಇದನ್ನು ಡಾಂಬರೀಕರಣ ಮಾಡಲು ಅಧಿಕಾರಿಗಳು ಮಾತ್ರ ನಮ್ಮ ಇಲಾಖೆಯಲ್ಲಿ ಅನುದಾನವಿಲ್ಲ ಎಂಬ ಸಬೂಬು ಹೇಳುತ್ತಿದ್ದು ವರ್ಷಗಳಿಂದ ಇದೇ ಉತ್ತರವನ್ನು ಕೇಳಿರುವ ಗ್ರಾಮಸ್ಥರು ಸಂಬಂದಿಸಿದ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಈ ರಸ್ತೆಯಲ್ಲಿ ಸಂಚರಿಸುವಾಗ ಉಬ್ಬು ದಿನ್ನೆಗಳಿಂದ ಸಾಕಷ್ಟು ಸವಾರರು ಬೈಕ್ ಸಮೇತ ಬಿದ್ದು ಗಾಯ ಮಾಡಿಕೊಂಡ ಉದಾಹರಣೆಗಳಿವೆ. ಸಂಜೆ ಹೊತ್ತು ನಮ್ಮ ಹೊಲ ಗದ್ದೆಗಳಿಂದ ದನ ಕರುಗಳಿಗೆ ಮೇವುಗಳನ್ನು ತೆಗೆದುಕೊಂಡು ಹೋಗುವಾಗ ಸಾಕಷ್ಟು ಅಡಚಣೆಯಾಗುತ್ತಿದ್ದು ಶೀಘ್ರವೇ ಈ ಉಬ್ಬು ದಿನ್ನೆ ದುರಸ್ತಿಗೊಳಿಸಬೇಕು ಎಂದು ಗ್ರಾಮದ ರೈತ ಚಬಸವರಾಜ ಚೌಕಿಮಠ ಆಗ್ರಹಿಸಿದರು.



> ಖೊಬ್ರಿ ಕ್ರಾಸ್ ಹತ್ತಿರದ ರಸ್ತೆ ಉಬ್ಬು ದಿನ್ನೆ ಹಾಳಾಗಿರುವ ಬಗ್ಗೆ ನಮ್ಮ ಗಮನದಲ್ಲಿರಲಿಲ್ಲ. ಈ ಕಾಮಗಾರಿ ನಮ್ಮ ಪಂಚಾಯತಿ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಪಂಚಾಯತಿ ವತಿಯಿಂದ ಇಲ್ಲಿ ಆಗಿರುವ ರಸ್ತೆ ಸಮಸ್ಯೆಯನ್ನು ಶೀಘ್ರವೇ ದುರಸ್ತಿ ಮಾಡಲಾಗುವುದು.
>
> ■ ಕೆ.ಎಚ್.ಮುಲ್ಲಾ, ಕಲಾದಗಿ ಗ್ರಾಪಂ ಪಿಡಿಒ

ದಿಗಂತ ವಿಶೇಷ

ಮೂಲ ಸೌಲಭ್ಯಕ್ಕೆ ಕೊರತೆ: ಸಾರ್ವಜನಿಕರ ಆಕ್ರೋಶ

ಗೋಪಾಲ ಪಾಟೀಲ

ಜಮಖಂಡಿ: ಸಮೀಪವಿರುವ ಕಡಪಟ್ಟಿ ಹಂಚಿನಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪೋಸ್ಟ್ ಕಾಲೋನಿ, ಗಣೇಶ ನಗರ, ಕಪ್ಪಲಪಡೆವ್ವ ಬಡಾವಣೆ, ಸತ್ಯಪ್ರಮೋದ ತೀರ್ಥ ಕಾಲೋನಿ, ಮೌನೇಶ್ವರ ನಗರದ ನಿವಾಸಿಗಳು ಕಳೆದ ಹತ್ತಾರು ವರ್ಷಗಳಿಂದ ಅಕ್ಷರಶಃ ಅತಂತ್ರ ಸ್ಥಿತಿಯಲ್ಲಿ ವಾಸಿಸುತ್ತಾರೆ.

ಇಲ್ಲಿ ಯಾವುದೇ ತರಹದ ವಾರ್ಡ್ ವಿಂಗಡನೆಯಿಲ್ಲ ಚುನಾಯಿತ ಪ್ರತಿನಿಧಿಯಿಲ್ಲ, ಇಲ್ಲಿ ಅಭಿವೃದ್ಧಿ ಮಾತ್ರ ಶೂನ್ಯವಾಗಿದೆ. ಇಲ್ಲಿಯ ನಿವಾಸಿಗಳು ಪ್ರತಿ ಚುನಾವಣೆಯಲ್ಲಿ ಮತದಾನ ಮಾಡುವದಕ್ಕೆ ಎಲ್ಲೆಂದರಲ್ಲಿ ಅಲೆದಾಡಿ ಮತ ಚಲಾವಣೆ ಮಾಡುತ್ತಾರೆ.

ಕಳೆದ ಎರಡು ವರ್ಷದ ಹಿಂದೆ ಹಿಂದಿನ ಜಿಲ್ಲಾಧಿಕಾರಿ ಕೆ.ಎಂ.ಜಾನಕಿಯವರು ತಾಲೂಕಾಡಳಿತ ಭವನದಲ್ಲಿ ಜನಸ್ಪಂದನಕ್ಕೆ ಆಗಮಿಸಿದ್ದರು. ಅಂದು ಇಲ್ಲಿಯ ನಿವಾಸಿಗಳು ನೀಡಿದ ಮನವಿಗೆ ಸ್ವತಃ ಜಿಲ್ಲಾಧಿಕಾರಿಗಳೇ ನಿರ್ಲಕ್ಷ್ಯ ಮಾಡಿದಂತಿದೆ. ಅಲ್ಲಿಂದ ಇಲ್ಲಿಯವರಗೆ ಯಾವುದೇ ಅಧಿಕಾರಿಗಳು ಬಂದು ಇಲ್ಲಿಯ ಸ್ಥಿತಿ ವೀಕ್ಷಿಸಿಲ್ಲ.

ಅಂದು ಜನಸ್ಪಂದನೆಯಲ್ಲಿ ಸ್ಥಳಿಯ ಎಸಿ, ತಾಪಂ ಇಒ, ಹುನ್ನೂರು, ಕಡಪಟ್ಟಿ ಗ್ರಾಮ ಪಂಚಾಯತಿ ಪಿಡಿಒ ಮತ್ತು ನಗರ ಸಭೆಯ ಪೌರಾಯುಕ್ತರು ಒಂದು ಸಭೆ ನಡೆಸಿ ಬಿಟ್ಟು ಹೋದ ಬಡಾವಣೆಯ ಅಭಿವೃದ್ಧಿಗಾಗಿ ಮತ್ತು ವಾರ್ಡ್ ವಿಂಗಡನೆಗಾಗಿ ನಿವಾಸಿಗಳೊಂದಿಗೆ ಚರ್ಚೆ ಮಾಡಿ ವರದಿ ಸಲ್ಲಿಸಲು ತಿಳಿಸದ್ದರು. ಇಂತಹ ಎಷ್ಟೋ ಅಧಿಕಾರಿಗಳು ಬಂದು ಸುಮ್ಮನೆ ಹೋಗುತ್ತಾರೆ. ಆದರೆ ಅಭಿವೃದ್ಧಿ ಮಾತ್ರ ಶೂನ್ಯ ವ್ಯವಸ್ಥೆಯಲ್ಲಿದೆ ಎಂದು ನಿವಾಸಿಗಳು ಆರೋಪಿಸಿದ್ದಾರೆ.

ಇತ್ತೀಚಿಗೆ ಜಲಜೀವನ ಮಿಶನದ ಅಡಿಯಲ್ಲಿ ಕೊಳವೆಮಾರ್ಗ ಜೋಡಣೆಯಾಗಿದ್ದು, ಸರಿಯಾದ ಪ್ರಮಾಣದಲ್ಲಿ ನಳಗಳ ಜೋಡಣೆಯಗಿಲ್ಲ, ಮನೆಯ ಹೊರಗಡೆ ರಸ್ತೆಯು ಬದಿಯಲ್ಲಿ ನಲ್ಲಿ ಜೋಡಣೆ ಮಾಡಿದ್ದು, ಇದರಿಂದ ನಮಗೆ ತೊಂದರೆಯೇ ವಿನಃ ಉಪಯೋಗವಾಗುತ್ತಿಲ್ಲಾ, ಗ್ರಾಮೀಣ ಮತ್ತು ಕುಡಿಯುವ ನೀರಿನ ಅಧಿಕಾರಿಗಳಿಗೆ ಕೇಳಿದರೆ ಅವರಿಂದ ಯಾವುದೇ ಸಮರ್ಪಕ ಉತ್ತರವಿಲ್ಲಾ,

ನಾವು ಮೂಲ ಸೌಕರ್ಯದಿಂದ ವಂಚಿತರಾಗಿದ್ದೇವೆ. ಪಂಚಾಯತಿಗೆ, ತಾಪಂ ಇಒ ಅವರಿಗೆ ಸಾಕಷ್ಟು ಬಾರಿ ಮನವಿ ಮಾಡಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಗಣೇಶ ನಗರ ಅಭಿವೃದ್ಧಿ ಸಂಘದ ಪದಾಧಿಕಾರಿಗಳು ಎಂದು ಆರೋಪಿಸಿದರು.



> ಗ್ರಾಮದ ವ್ಯಾಪ್ತಿಯಲ್ಲಿ ನರೇಗಾ ಯೋಜನೆ ಇದ್ದು, ಕೇವಲ ರಸ್ತೆ ಮತ್ತು ಚರಂಡಿಗೆ ಮಾತ್ರ ಕಾಮಗಾರಿ ಆಗುತ್ತಿದೆ. ಗ್ರಾಮದ ಬಿಟ್ಟು ಹೋದ ಬಡಾವಣೆ ವಾರ್ಡ್‌ಗಳನ್ನು ಮಾಡುವ ಬಗ್ಗೆ ತಹಶೀಲ್ದಾರ್ ಮತ್ತು ಎಸಿ ಅವರ ಜೊತೆಗೆ ಚರ್ಚೆ ಮಾಡಿ ಅಗತ್ಯ ಕ್ರಮ ಜರುಗಿಸುತ್ತೇವೆ.
>
> ■ ಸಚಿನ್ ಪಟ್ಟಣಶೆಟ್ಟಿ, ತಾಪಂ ಇಒ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಕೃತಿಕ

ಕಿರುಸುದ್ದಿ



ನಿಡಗುಂದಿ: ಪಟ್ಟಣದ ರುದ್ರೇಶ್ವರ ಮಠದ ಜಾತ್ರೆ ನಿಮಿತ್ತ ಸಂಭ್ರಮದಿಂದ ರಥೋತ್ಸವ ಜರುಗಿತು.

ಹೆದ್ದಾರಿ ಮೇಲ್ದರ್ಜೆಗೇರಿಸಲು ಕೇಶವ ಪ್ರಸಾದ ಒತ್ತಾಯ

ದೇವರಹಿಪ್ಪರಗಿ: ತಾಲೂಕಿನ ವ್ಯಾಪ್ತಿಯಲ್ಲಿ ಹಾದು ಹೋಗುವ ಶಿರಾಡೋಣ–ಲಿಂಗಸೂಗೂರು ರಾಜ್ಯ ಹೆದ್ದಾರಿ–41, ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ ಹಾಗೂ ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಸಂಪೂರ್ಣ ಮಾಹಿತಿ ಮತ್ತು ಜಿಲ್ಲೆಯಿಂದ ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೇರಿಸಲಾಗಿದೆ. ಅದರ ಸಂಪೂರ್ಣ ವಿವರ ನೀಡುವ ಕುರಿತು ವಿಪ ಸದಸ್ಯ ಕೇಶವ ಪ್ರಸಾದ ಎಸ್ ಪ್ರಶ್ನಿಸಿದರು. ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ ಜಾರಕಿಹೊಳಿ ಉತ್ತರಿಸಿ ಈ ಕುರಿತು ಶಿರಾಡೋಣ–ಲಿಂಗಸೂಗೂರು ರ ವರೆಗೆ ಇರುವ ರಾಜ್ಯ ಹೆದ್ದಾರಿ–41 ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು 2016ರಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ತಾತ್ವಿಕ ಅನುಮೋದನೆ ನೀಡಿದ್ದು, ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು m/s. Satra infrastructure management service pvt ಅವರನ್ನು ಸಮಾಲೋಚಕರನ್ನಾಗಿ ನೇಮಿಸಲಾಗಿತ್ತು. ಜುಲೈ, 28, 2020ರ ಹೆದ್ದಾರಿ ಸಚಿವಾಲಯದ ಪತ್ರದಲ್ಲಿ ಮೇಲ್ದರ್ಜೆಗೇರಿಸುವ ಕಾರ್ಯ ಸಾಧ್ಯತಾ ಅಧ್ಯಯನಗಳ ಸಂಖ್ಯಾ ಸೇವೆಗಳನ್ನು ಸ್ಥಗಿತ ಮರುಪ್ರಾರಂಭಿಸಿ ಮಾಡುವಂತೆ ಸೂಚಿಸಿದ್ದು, ಅದರಂತೆ ಕ್ರಮ ವಹಿಸಲಾಗಿರುತ್ತದೆ. ಹಾಗೂ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ಜ.14, 2025ರ ಪತ್ರದಲ್ಲಿ ಯಾವುದೇ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳನ್ನು ಪರಿಗಣಿಸುತ್ತಿಲ್ಲ ಎಂದು ತಿಳಿಸುತ್ತಾರೆ ಎಂದು ಉತ್ತರಿಸಿದರು.

ಮಕ್ಕಳ ರಜೆಯ ಮಜಾ, ಆಗದಿರಲಿ ಸಜಾ

ನಾಲತವಾಡ: ಬೇಸಿಗೆ ರಜೆಗಳು ಮಕ್ಕಳಿಗೆ ಎಲ್ಲಿಲ್ಲದ ಸಂಭ್ರಮ, ಹೋಂ ವರ್ಕ್‌ಗಳಿಲ್ಲ, ಪರೀಕ್ಷೆಗಳೂ ಇಲ್ಲ, ಎಲ್ಲಾ ಪರೀಕ್ಷೆ ಮುಗಿಸಿಕೊಂಡ ಮಕ್ಕಳು ಇತ್ತೀಚಿಗೆ ಬೇಸಿಗೆ ರಜೆಯ ಹಿನ್ನೆಲೆ ಕಾಲುವೆ, ಹಳ್ಳ ಕೊಳ್ಳ ಬಾವಿಗಳತ್ತ ಮುಖ ಮಾಡಿದ್ದು, ಒಂದಿಷ್ಟು ಪಾಲಕರ ಕಾಳಜಿಯೂ ಬೇಕಿದೆ.

ಪ್ರಾಥಮಿಕ, ಪ್ರೌಢ ಹಾಗೂ ಪಿಯುಸಿ ಪರೀಕ್ಷೆಗಳು ಮುಗಿದ ಬೆನ್ನಲ್ಲೇ ಪಟ್ಟಣದ ಸೇರಿ ವಿವಿಧ ಹಳ್ಳಿಗಳು ಹರಿಯುತ್ತೀರುವ ಕಾಲುವೆ, ಹಳ್ಳಕೊಳ್ಳ ಅತ್ತ ಭಯ ಹುಟ್ಟಿಸುವ ರೈತರ ಬಾವಿಯತ್ತ ಈಜಲು ಮುಖ ಮಾಡುತ್ತಿದ್ದು ಮನಬಂದಂತೆ ನೀರಲ್ಲಿ ಇಳಿಯುತ್ತಿದ್ದು, ಈಜು ಬಾರದ ಮಕ್ಕಳು ಜಾಗ್ರತೆ ವಹಿಸಬೇಕಿದೆ. ಹಲವಾರು ಈಜು ಬಂದರೆ ಇನ್ನುಳಿದ ಗೆಳೆಯರೂ ಈಜು ಬಾರದ ಪರಿಣಾಮ ಜೊತೆಯಲ್ಲಿ ಅವರನ್ನೂ ಸಹ ಕೈ ಹಿಡಿದು ನೀರಿನ ಜಿಗಿಸುವ ಸಾಹಸ ಮಾಡುತ್ತಿದ್ದಾರೆ. ಮಕ್ಕಳ ವರ್ತನೆ ಭಯ ಹುಟ್ಟಿಸಿದ್ದು ಪಾಲಕರು ಮಕ್ಕಳನ್ನು ಸ್ವಲ್ಪ ಜಾಗ್ರತೆ ವಹಿಸಿ ಅನಾಹುತ ಸುಳಿಯದಂತೆ ನೋಡಿಕೊಳ್ಳಬೇಕಿದೆ.

ಏ.11ರಂದು ರಾಷ್ಟ್ರಮಟ್ಟದ ವಿಚಾರ ಸಂಕಿರಣ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ, ವತಿಯಿಂದ ಏ.11ರಂದು ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಅನುಸಂಧಾನ–11 ನಡೆಯಲಿದೆ. ಅಂದು ಬೆಳಗ್ಗೆ 9.30 ಗಂಟೆಗೆ ಬಿಎಲ್‌ಡಿಇ ಸಂಸ್ಥೆಯ ವಚನಪಿತಾಮಹ ಡಾ.ಪಿ. ಜಿ. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಬೆಂಗಳೂರು ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಬಿಎಲ್‌ಡಿಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ, ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯ ಸಮಕುಲಾಧಿಪತಿ ಡಾ. ವೈ.ಎಂ. ಜಯರಾಜ, ರಜಿಸ್ಟ್ರಾರ್ ಡಾ. ರಾಘವೇಂದ್ರ ಕುಲಕರ್ಣಿ, ನವದೆಹಲಿಯ ಬೋರ್ಡ್ ಆಫ್ ಆಯುರ್ವೇದ ಎನ್‌ಸಿಐಎಸ್‌ಎಂ ಅಧ್ಯಕ್ಷ ಡಾ.ಅಲ್ಲಮಪ್ರಭು ಗುಡ್ಡಾ, ಮಾಜಿ ಅಧ್ಯಕ್ಷ ಡಾ.ಬಿ.ಶ್ರೀನಿವಾಸ ಪ್ರಸಾದ ಇತರರು ಪಾಲ್ಗೊಳ್ಳಲಿದ್ದಾರೆ. ರಾಜ್ಯದಿಂದ ನಾನಾ ಭಾಗಗಳಿಂದ ಅನುಭವಿ ಉಪನ್ಯಾಸಕರು ಸಂಶೋಧನ ಕುರಿತು ಪ್ರಬಂಧ ಮಂಡಿಸಲಿದ್ದಾರೆ. ವಿಚಾರ ಸಂಕಿರಣದಲ್ಲಿ ರಾಜ್ಯದ ನಾನಾ ಭಾಗಗಳಿಂದ ಸುಮಾರು 400ಕ್ಕೂ ಹೆಚ್ಚು ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಅಶೋಕ ಪಾಟೀಲ ತಿಳಿಸಿದ್ದಾರೆ.



ಮುದ್ದೇಬಿಹಾಳ: ಪಟ್ಟಣದ ಹೊರ ವಲಯದಲ್ಲಿ ಹಡಲಗೇರಿ ರಸ್ತೆಗೆ ಹೊಂದಿಕೊಂಡು ಇರುವ ಪವಾಡ ಬಸವೇಶ್ವರ ಆಶ್ರಮದಲ್ಲಿ ಬಸಪ್ಪ ಶರಣರ (ಮೌನ ಯೋಗಿ) 29ನೇ ಆರಾಧನಾ ಮಹೋತ್ಸವ ಧರ್ಮದರ್ಶಿ ಚನ್ನಮಲ್ಲಪ್ಪ ಶರಣರ ನೇತೃತ್ವದಲ್ಲಿ ವಿವಿಧ ಮಠಾಧೀಶರ, ಸಂತರ, ಸದ್ಭಕ್ತರ ಸಮ್ಮುಖದಲ್ಲಿ ಸಂಪನ್ನಗೊಂಡಿತು. ಹಿರಿಯರಾದ ಬಸವರಾಜ ಮೋಟಗಿ ಉಮೇಶ ಕಂಠಿ, ರಾಜು ಜೋಳದ ಸೇರಿದಂತೆ ಸಾವಿರಾರು ಭಕ್ತರು ಆಶ್ರಮಕ್ಕೆ ಆಗಮಿಸಿ ಭಕ್ತಿ ಸೇವೆ ಮಾಡಿದರು.

ಮನಸ್ಸಿಗೆ ಮಧುರತೆ ನೀಡುವುದೇ ಸಂಗೀತ

ಬಸವನಬಾಗೇವಾಡಿ: ನಮ್ಮ ಮನಸ್ಸಿಗೆ ಮಧುರತೆ ನೀಡುವುದೇ ಸಂಗೀತ, ರಾಗ, ತಾಳವಿಲ್ಲದ ಸಂಗೀತವನ್ನು ಕಲ್ಪನೆ ಮಾಡಿಕೊಳ್ಳಲು ಸಾಧ್ಯವಿಲ್ಲ, ಸಂಗೀತದ ಜೀವಾಳವೇ ರಾಗವೆಂದು ವೈದ್ಯ ಡಾ.ವೀಣಾ ಗುಳೇದಗುಡ್ಡ ಎಂದು ಹೇಳಿದರು. ಪಟ್ಟಣದ ಜಗನ್ಮಾತೆ ಕಾಳಿಕಾದೇವಿ ದೇವಸ್ಥಾನದ ಗಾಯತ್ರಿ ಕಲ್ಯಾಣ ಮಂಟಪದಲ್ಲಿ ಮಯೂರಿ ನಾಟ್ಯ ಕಲಾ ಅಕಾಡೆಮಿ ನೇತೃತ್ವದಲ್ಲಿ ಭಾನುವಾರ ನಡೆದ ಸಪ್ತಸ್ವರ ಸಂಗೀತ ಶಾಲೆ ಪ್ರಾರಂಭೋತ್ಸವ ಹಾಗೂ ಮಯೂರಿ ನಾಟ್ಯ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಮನಸ್ಸನ್ನು ರಂಜಿಸುವುದೇ ರಾಗ, ರಾಗ ಎಷ್ಟೆ ಎನ್ನುವುದು ಲೆಕ್ಕಕ್ಕಿಲ್ಲ. ಆದರೆ ಮಾನಸಿಕ ನೆಮ್ಮದಿಗೆ, ಶಾರೀರಿಕ ವೃದ್ಧಿಗೆ ಸಂಗೀತ ಬೇಕು. ನಮ್ಮ ಒತ್ತಡದ ಜೀವನಕ್ಕೆ ಸಂಗೀತ ಅವಶ್ಯಕತೆ ಇದೆ ಎಂದರು.

ಸ್ಥಳೀಯ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಭಾರತೀಯ ಶಾಸ್ತ್ರದಲ್ಲಿ ಸಂಗೀತಕ್ಕೆ ಹೆಚ್ಚಿನ ಆದ್ಯತೆ ಇದ್ದು, ಮಯೂರಿ ಅಕಾಡೆಮಿ ಅವರು ನಾಟ್ಯ ಶಾಲೆ ತೆಗೆದಿರುವುದು ಒಳ್ಳೆಯ ಕಾರ್ಯ ನಾಟ್ಯ ಶಾಲೆಯ ವಿದ್ಯಾರ್ಥಿಗಳು ಶ್ರದ್ಧೆಯಿಂದ ಕಲಿತು ಸಾಧನೆಯಲ್ಲಿ ಒಳ್ಳೆಯವರಾಗಿ ಬಾಳಬೇಕು. ಗವಾಯಿ ಶ್ರೀಮಂತ ಆದಿಕೆಯವರ ನಂತರ ಪಟ್ಟಣದಲ್ಲಿ ಸಂಗೀತ ನಿಂತು ಹೋಗಿದೆ, ಸಂಗೀತವಿದ್ದರೆ ಮನಸ್ಸು ಶಾಂತಿ, ನೆಮ್ಮದಿ, ಶುದ್ಧವಾಗಿರುತ್ತದೆ. ಆಟ, ಪಾಠಗಳು ಜೀವನದಲ್ಲಿ ನಿಲ್ಲಬಹುದು ಆದರೆ ಸಂಗೀತ ಜೀವನಪೂರ್ತಿಯೂ ಇರುತ್ತದೆ ಎಂದು ಹೇಳಿದರು.



ಬಸವನಬಾಗೇವಾಡಿ: ಪಟ್ಟಣದ ಜಗನ್ಮಾತೆ ಕಾಳಿಕಾದೇವಿ ದೇವಸ್ಥಾನದ ಗಾಯತ್ರಿ ಕಲ್ಯಾಣ ಮಂಟಪದಲ್ಲಿ ಮಯೂರಿ ನಾಟ್ಯ ಕಲಾ ಅಕಾಡೆಮಿ ನೇತೃತ್ವದಲ್ಲಿ ಭಾನುವಾರ ನಡೆದ ಸಪ್ತಸ್ವರ ಸಂಗೀತ ಶಾಲೆ ಪ್ರಾರಂಭೋತ್ಸವ ಹಾಗೂ ಮಯೂರಿ ನಾಟ್ಯ ಶಾಲೆಯ ವಾರ್ಷಿಕೋತ್ಸವ ಸಮಾರಂಭ ನಡೆಯಿತು. ನಿ.ಉ.ಕೆ.ಬಿ.ಕಡೆಮನಿ, ಲಕ್ಷ್ಮೀ ತೇರದಾಳಮಠ, ಶೃತಿ ಯಾದವಾಡ, ವಿಭಾ ಕುಲಕರ್ಣಿ, ಡಾ.ಮಂಜುಳಾ ಪಾಟೀಲ ಮಾತನಾಡಿದರು. ಅಕಾಡೆಮಿ ಅಧ್ಯಕ್ಷೆ ಪೂರ್ಣಿಮಾ ಚೌಧರಿ, ಕರುಣಾ ಬಾಬೀರೆ, ರೇವತಿ ವಂದಾಲಮಠ, ಶಿಕ್ಷಕಿ ಶ್ರೀದೇವಿ ಹಿರೇಮಠ, ರಾಜೇಶ್ವರಿ ಯಾರನಾಳ ಇದ್ದರು.

ದೇಶಕ್ಕೆ ಪವರ್ ಗ್ರೀಡ್ ಸಂಸ್ಥೆಯ ಕೊಡುಗೆ ಅಪಾರ: ಸಚಿವ ಎಂಬಿಪಾ

ಜಿಲ್ಲೆಯ ಅಭಿವೃದ್ಧಿಗೆ ಸಹಕಾರ

ವಿಜಯಪುರ: ಪವರ್ ಗ್ರೀಡ್ ಸಂಸ್ಥೆ ನಮ್ಮ ದೇಶದಲ್ಲಿರುವ ಹೆಮ್ಮೆಯ ಸಂಸ್ಥೆ, ಈ ಸಂಸ್ಥೆ ಸ್ಪರ್ಧಾತ್ಮಕವಾಗಿ ದೇಶಕ್ಕೆ ದೊಡ್ಡ ಕೊಡುಗೆ ನೀಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡ ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಜಿಲ್ಲಾಡಳಿತ, ಜಿಪಂ, ಕ್ರೀಡಾ ಇಲಾಖೆ, ಪ್ರವಾಸೋದ್ಯಮ ಇಲಾಖೆ ವತಿಯಿಂದ ಸಿಎಸ್‌ಆರ್ ಅನುದಾನದಡಿ ಆರೋಗ್ಯ, ಶಿಕ್ಷಣ ಮತ್ತು ಕ್ರೀಡಾ ಇಲಾಖೆಗಳಿಗೆ ಸಾಧನ–ಸಲಕರಣೆಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ 100 ವರ್ಷ ಪೂರೈಸಿದ ಸುಮಾರು 258 ಶತಮಾನದ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸಲು ಕೋರಿದೆ. ಅನುದಾನದಿಂದ ಸ್ಮಾರ್ಟ್ ಕ್ಲಾಸ್, ಶಾಲಾ ಕೊಠಡಿ, ದುರಸ್ತಿ ಸೇರಿದಂತೆ ಜಿಲ್ಲೆಯ ಎಲ್ಲ ಶಾಲೆಗಳನ್ನು ಉನ್ನತೀಕರಿಸಲಾಗುವುದು ಎಂದರು.

ಪವರ್ ಗ್ರೀಡ್ ಸಂಸ್ಥೆಯು ತನ್ನ ಸಿಎಸ್‌ಆರ್ ಅನುದಾನಡಿ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಕ್ಕೆ ಮೆಡಿಕಲ್ ಸಲಕರಣೆ 19.4 ಲಕ್ಷ ರೂ., ಶಿಕ್ಷಣ ಇಲಾಖೆಯ 145 ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 2500 ಬೆಂಚ್ ವಿತರಣೆ, 1.82 ಕೋಟಿ ರೂ. ಅನುದಾನದಡಿ, ಜಿಲ್ಲಾ ಕ್ರೀಡಾಂಗಣಕ್ಕೆ ಸೋಲಾರ್ ರೋಪ್ ಅಳವಡಿಸಲು 19.44 ಲಕ್ಷ ರೂ. ಅನುದಾನ ನೀಡಿದ್ದಾರೆ. ಜಿಲ್ಲಾ ಪಂಚಾಯಿತಿಯಡಿ ವಿಶೇಷಚೇತನರಿಗೆ 3.70 ಲಕ್ಷ ರೂ.ಗಳ ಸಾಧನ–ಸಲಕರಣೆ ಕೊಡುಗೆ ನೀಡಿದ್ದಾರೆ. ಸ್ಮಾರ್ಟ್ ಕ್ಲಾಸ್ ನಿರ್ಮಾಣಕ್ಕೆ 40 ಲಕ್ಷ ರೂ. ಪ್ರವಾಸೋದ್ಯಮ ಇಲಾಖೆಯಿಂದ ಅನುದಾನ ನೀಡಲಾಗಿದೆ ಎಂದರು.



> ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪವರ್ ಗ್ರೀಡ್ ಸಂಸ್ಥೆಯು ಈ ಜಿಲ್ಲೆಗೆ ಸಿಎಸ್‌ಆರ್ ಅನುದಾನ ನೀಡಿದ್ದು, ದೊಡ್ಡ ಕೊಡುಗೆಯಾಗಿದೆ. ಜಿಲ್ಲೆಯ ಅಭಿವೃದ್ಧಿಗಾಗಿ ನಮ್ಮೊಂದಿಗೆ ಸದಾ ಕೈಜೋಡಿಸುತ್ತಿದೆ.
> ■ ಎಂ.ಬಿ.ಪಾಟೀಲ, ಉಸ್ತುವಾರಿ ಸಚಿವ

ಜಿಲ್ಲಾಧಿಕಾರಿ ಡಾ.ಆನಂದ ಕೆ.ಮಾತನಾಡಿ, ಜಿಲ್ಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಲ್ಲಿ ಜಿಲ್ಲೆಯ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ಆರೋಗ್ಯ ದೊರಕುವ ನಿಟ್ಟಿನಲ್ಲಿ ತುಂಬಾ ಕೆಲಸಗಳಾಗುತ್ತಿವೆ. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪವರ್ ಗ್ರಿಡ್ ಸಂಸ್ಥೆಯಿಂದ ಸಿಎಸ್‌ಆರ್ ಅನುದಾನದಡಿ ತಿಕೋಟಾ ಹಾಗೂ ಬಬಲೇಶ್ವರ ಭಾಗದ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಕಲ್ಪಿಸುವ ನಿಟ್ಟಿನಲ್ಲಿ ವೈದ್ಯಕೀಯ ಸಲಕಣೆ ಹಾಗೂ ನಗರದ ಡಾ. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸೋಲಾರ್ ರೂಫ್ ಟಾಪ್ ಪೆನೆಲ್‌ಗಳ ಅಳವಡಿಕೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ನೀಡುವಂತೆ ಕೋರಲಾಗುವುದು ಎಂದರು.

ಜಿಪಂ ಸಿಇಒ ರಿಷಿ ಆನಂದ ಮಾತನಾಡಿದರು. ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ, ಮುಖ್ಯ ಯೋಜನಾಧಿಕಾರಿ ಸಿ.ಬಿ.ಕುಂಬಾರ, ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ಪವರ್ ಗ್ರಿಡ್‌ನ ಸಿಜಿಎಮ್ ಪ್ರೋಜೆಕ್ಟ್ ಮ್ಯಾನೇಜರ್ ಶಕುಂತಲಾ ಸಾಹೂ, ಜಿಎಮ್ ಎಚ್.ಆರ್.ತನ್ವೀರ, ಕನ್ಸಲಂಟ್ ಭೀಮಾಶಂಕರ ತುಗದೆ ಇದ್ದರು.

ನೀರಿನ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಿ

ಚಡಚಣ: ತಾಲೂಕಿನಲ್ಲಿ ಬೇಸಿಗೆ ವೇಳೆ ರೈತರು,ಜನಸಾಮಾನ್ಯರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ವಿಠ್ಠಲ ಕಟಕಧೋಂಡ ಸೂಚಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ನಡೆದ ತಾಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಮುಂದಿನ ಎರಡು ತಿಂಗಳು ಕಡು ಬೇಸಿಗೆ ಸಮಯವಾದ್ದರಿಂದ ಕಾಲುವೆಗಳಿಗೆ ಬಿಟ್ಟ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಮಾತ್ರ ಬಳಸಬೇಕು ಎಂದು ರೈತರಿಗೆ ಮನವಿ ಮಾಡಿಕೊಂಡರು.

ಕೆಬಿಜೆಎನ್‌ಎಲ್ ಅಧೀಕ್ಷಕ ಅಭಿಯಂತರ ಮನೋಜ ಕಡಬಳ್ಳಿ ಮಾತನಾಡಿ, ತಾಲೂಕಿನ ಎಲ್ಲ ಅಧಿಕಾರಿಗಳು ನಮ್ಮ ಕೆಬಿಜೆಎನ್‌ಎಲ್‌ಗೆ ಸಹಕಾರಕೊಟ್ಟು ಎಲ್ಲರು ಕೂಡಿ ಕೆಲಸ ಮಾಡಿದರೆ ಮಾತ್ರ ಸಮಸ್ಯೆ ಬಗೆಹರಿಯಲಿದೆ, ಚಡಚಣ ಭಾಗದ ಹಾವಿನಾಳ ಹಾಗೂ ಹತ್ತಳ್ಳಿ ಭಾಗದ ಕಾಲುವೆಗಳವರೆಗೆ ಮಾತ್ರ ನೀರು ಹರಿಸಲು ಸಾಧ್ಯವಾಗುತ್ತದೆ ಆದ್ದರಿಂದ ಸಹಕಾರ ನೀಡುವಂತೆ ಎಲ್ಲ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಡಿಎಸ್‌ಪಿ ಸದಾಶಿವ ಕಟ್ಟಿಮನಿ ಮಾತನಾಡಿ, ನಮ್ಮ ಪೊಲೀಸ್ ಇಲಾಖೆಯ ಸಹಕಾರ ತಮ್ಮೊಂದಿಗೆ ಇರಲಿದೆ ಎಂದು ಹೇಳಿದರು. ಚಡಚಣ ತಹಶೀಲ್ದಾರ್ ಸಂಜಯ ಇಂಗಳೆ ಮಾತನಾಡಿದರು.

ಒಂದೆ ವಾರದಲ್ಲಿ ಎರಡನೇ ಟಾಸ್ಕ್‌ಫೋರ್ಸ್ ಸಮಿತಿ ಸಭೆ ಇದಾಗಿದ್ದು, ಕಾಲುವೆಗೆ ನೀರು ಹರಿಸುವ ಜವಾಬ್ದಾರಿಯಾಗಿದ್ದು, ಕೆಬಿಜೆಎನ್ ಎಲ್ ಇಲಾಖೆಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ಕಾಲುವೆಗೆ ನೀರು ಹರಿಯುತ್ತಿಲ್ಲ ಎಂಬುದು ಸ್ಪಷ್ಟವಾಗಿ ತೋರುತ್ತಿದೆ. ಪೊಲೀಸ್, ಕಂದಾಯ ಇಲಾಖೆಯವರು ಮುಂದಾಳತ್ವ ವಹಿಸಿಕೊಳ್ಳಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಇಂಡಿ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಶೋಕಕುಮಾರ ರಾಠೋಡ, ಪಪಂ ಮುಖ್ಯಾಧಿಕಾರಿ ಬಿ.ಕೆ.ತಾವಸೆ, ಚಡಚಣ ಸಿಪಿಐ ಪರಶುರಾಮ ಮನಗೂಳಿ, ಪಿಎಸ್‌ಐ ಸೋಮೇಶ ಗೆಜ್ಜಿ, ಚಡಚಣ ಹೆಸ್ಕಾಂ ಎಇಇ ವಿಜಯಕುಮಾರ ಹವಾಲ್ದಾರ, ಶಿವದತ್ತ ಕೊಟ್ಟಲಗಿ, ಆಹಾರ ನಿರೀಕ್ಷಕ ಶಿವಾನಂದ ಕೋಳಿ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.



ಅಗ್ನಿವೀರರ ನೇಮಕಾತಿ ರ್‍ಯಾಲಿ: ಸಿದ್ಧತೆ

ವಿಜಯಪುರ: ವಿಜಯಪುರದಲ್ಲಿ ಮಂಗಳೂರಿನ ಸೇನಾ ನೇಮಕಾತಿ ಕಚೇರಿ ವತಿಯಿಂದ ಅಗ್ನಿಪಥ್ ಯೋಜನೆಯಡಿ ಭಾರತೀಯ ಸೇನಾ ನೇಮಕಾತಿ ಬೃಹತ್ ರ್‍ಯಾಲಿ ನಗರದಲ್ಲಿ ಸೆ.10ರಿಂದ 30ರ ವರೆಗೆ ನಡೆಯಲಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ.ಆನಂದ ಕೆ. ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಅಗ್ನಿಪಥ ನೇಮಕಾತಿ ರ್‍ಯಾಲಿಯ ಪೂರ್ವ ಸಿದ್ಧತೆ ಕುರಿತಂತೆ ಸೇನಾ ನೇಮಕಾತಿ ಅಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖಾ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ವಿಜಯಪುರ ಜಿಲ್ಲೆಯು ಒಳಗೊಂಡಂತೆ ರಾಜ್ಯದ 11 ಜಿಲ್ಲೆಗಳ ಅಭ್ಯರ್ಥಿಗಳು ಈ ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ. ಈ ಅವಧಿಯಲ್ಲಿ ಪ್ರತಿದಿನ ಅಂದಾಜು 800 ಅಭ್ಯರ್ಥಿಗಳಿಗೆ ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ಅಗ್ನಿವೀರರ ಆಯ್ಕೆ ಪ್ರಕ್ರಿಯೆಯ ರ್‍ಯಾಲಿಯ ದೈಹಿಕ ಪರೀಕ್ಷೆ ಹಾಗೂ ವೈದ್ಯಕೀಯ ಪರೀಕ್ಷೆಗಳು ಸೆಪ್ಟೆಂಬರ್ 10 ರಿಂದ 30ರವರೆಗೆ ನಡೆಯಬಹುದಾಗಿದೆ. ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಈ ಬೃಹತ್ ನೇಮಕಾತಿ ರ್‍ಯಾಲಿ ನಡೆಯಲಿದೆ ಎಂದರು. ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಅಗ್ನಿಪಥ್ ಆಯ್ಕೆ ಪ್ರಕ್ರಿಯೆಯಲ್ಲಿ ದೈಹಿಕ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಹಾಗೂ ದಾಖಲಾತಿ ಪರಿಶೀಲನಾ ಪ್ರಕ್ರಿಯೆ ನಡೆಯಲಿವೆ ಎಂದರು.

ಅಭ್ಯರ್ಥಿಗಳವೈದ್ಯಕೀಯಪರೀಕ್ಷೆಗಳನ್ನು ನಡೆಸಲು ಬ್ಯಾಡ್ಮಿಂಟನ್ ಕೋರ್ಟ್ ಬಳಸಿಕೊಳ್ಳಲು ಸೇನಾಧಿಕಾರಿಗಳು ತಿಳಿಸಿದ್ದಾರೆ



ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ರ್‍ಯಾಲಿ ವೇಳೆ ಅಭ್ಯರ್ಥಿಗಳು ಕಾಯುವ ಅಥವಾ ಮೌಲ್ಯಮಾಪನಕ್ಕೊಳಪಡುವ ಸಾಧ್ಯತೆಯಿರುವುದರಿಂದ ರ್‍ಯಾಲಿ ಸ್ಥಳದಲ್ಲಿ ಜಲನಿರೋಧಕ ಟೆಂಟ್‌ಗಳನ್ನು ಹಾಕಲು ನಿರ್ಧರಿಸಲಾಗಿದ್ದು, ಟೆಂಟ್‌ನಲ್ಲಿ ಟೇಬಲ್ ಮತ್ತು ಕುರ್ಚಿ ವ್ಯವಸ್ಥೆ ಮಾಡಲಾಗುವುದು ಎಂದವರು ತಿಳಿಸಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯ ಅಗತ್ಯವಿರುವ ವಿವಿಧ ವ್ಯವಸ್ಥೆಗಳಿಗೆ ಆಪ್ಟಿಕಲ್ ಫೈಬರ್ ಸಂಪರ್ಕ ಮತ್ತು ಇಂಟರ್ನೆಟ್ ಸಂಪರ್ಕವನ್ನು ಸ್ಥಾಪಿಸಲು ಬಿಎಸ್ ಎನ್ ಎಲ್ ಅಧಿಕಾರಿಗಳಿಗೆ ಸೂಚಿಸಲಾಯಿತು. ಪ್ರವೇಶ ನಿಯಂತ್ರಣ, ಜನಸಂದಣಿ ನಿರ್ವಹಣೆ ಮತ್ತು ರ್‍ಯಾಲಿ ಸುಗಮವಾಗಿ ನಡೆಸಲು ನೇಮಕಾತಿ ಸ್ಥಳದ ಒಳ ಮತ್ತು ಹೊರಗೆ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಕರ್ನಲ್ ಬಿಕೆಕೆ ವಂಶಿ,ಆಹಾರ ಇಲಾಖೆಯ ಹಾಗೂ ಸೈನಿಕ ಕಲ್ಯಾಣ ಹಾಗೂ ಪುನರ್ವಸತಿ ಇಲಾಖೆಯ ಉಪ ನಿರ್ದೇಶಕ ವಿನಯಕುಮಾರ ಪಾಟೀಲ, ಕ್ರೀಡಾಧಿಕಾರಿ ರಾಜಶೇಖರ ದೈವಾಡಗಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ವೀರಯ್ಯ ಸಾಲಿಮಠ ಇದ್ದರು.

ಓಣಿಗಳಲ್ಲಿ ಗ್ರಂಥಾಲಯ ಕಟ್ಟಿಸಿ

ಬಸವನಬಾಗೇವಾಡಿ: ಗುಡಿ–ಗುಂಡಾರ ಕಟ್ಟಿಸುವ ಬದಲು ಓಣಿಗಳಲ್ಲಿ ಗ್ರಂಥಾಲಯ ಕಟ್ಟಿಸಿ ಅವುಗಳಿಂದ ಪುಸ್ತಕಗಳನ್ನು ಓದಿಸುವ ಅಭಿರುಚಿ ಹೆಚ್ಚಿಸುವ ಕಾರ್ಯವಾಗಬೇಕೆಂದು ರಾಜ್ಯ ಪ್ರಶಸ್ತಿ ಪುರಸ್ಕೃತ ಕೂಡಗಿ ಸರ್ಕಾರಿ ಪಪೂ ಕಾಲೇಜು ಉಪನ್ಯಾಸಕ ಬಸವರಾಜ ಚಾಲವಾದಿ ಹೇಳಿದರು.

ಸ್ಥಳೀಯ ಬಸವ ಭವನದಲ್ಲಿ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ನೇತೃತ್ವದಲ್ಲಿ ನಡೆದ ಹಸಿರು ಕ್ರಾಂತಿ ಹರಿಕಾರ ಬಾಬು ಜಗಜೀವನರಾಮಜಿ ಅವರ 119ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಮನುಷ್ಯನ ಮನಸ್ಸು ಮೊದಲು ಬದಲಾವಣೆಯಾಗಬೇಕು, ನಾವೆಲ್ಲ ಒಂದೇ ತಾಯಿ ಮಕ್ಕಳು ಎನ್ನುವ ಭಾವನೆ ಬರಬೇಕು ಆದಾಗ ಮಾತ್ರ ಅಸ್ಪೃಶ್ಯತೆ ಹೋಗಲಾಡಿಸಲು ಸಾಧ್ಯವಾಗುತ್ತದೆ, ಪ್ರತಿಯೊಬ್ಬರಲ್ಲಿ ವಿದ್ಯೆ, ಸಂಘಟನಾ ಶಕ್ತಿ ಬಂದಾಗ ಮಾತ್ರ ಏನಾದರೂ ಮಾಡಲು ಸಾಧ್ಯವೆಂದು ಹೇಳಿದರು.

ಡಿಎಸ್‌ಎಸ್ ಮುಖಂಡ ಅರವಿಂದ ಸಾಲವಾಡಗಿ ಮಾತನಾಡಿ, ಬಾಬುಜೀಯವರ ಜೀವನಾದರ್ಶಗಳು ನಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ಅವರು ಕೊಟ್ಟ ಆಚಾರ ವಿಚಾರ ಪಾಲನೆ ಮಾಡಿದಲ್ಲಿ ಜೀವನ ಸ್ವಾರ್ಥಕವಾಗುತ್ತದೆ ಎಂದು ಹೇಳಿದರು.



ಡಿವೈಎಸ್ ಪಿ.ಬಲ್ಲಪ್ಪ ನಂದಗಾಂವಿ, ಅಶೋಕ ಹಾರಿವಾಳ, ಅಶೋಕ ಚಲವಾದಿ, ಸಂಗಮೇಶ ಓಲೇಕಾರ, ಗ್ರೇಡ್–2 ತಹಶೀಲ್ದಾರ್ ಎಚ್.ಎಸ್. ಅರಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಸಂಜೀವ ಕಲ್ಯಾಣಿ, ಗುರುರಾಜ ಗುಡಿಮನಿ, ಮಹಾಂತೇಶ ಸಾಸಬಾಳ, ಪರಶುರಾಮ ದಿಂಡವಾರ, ಗುರುರಾಜ ಗುಡಿಮನಿ, ವಾಸುದೇವ ಮ್ಯಾಗೇರಿ, ಶಿವಾನಂದ ಮಂಗಾನವರ, ಟಿ.ಎಸ್.ಕಾನಾಗಡ್ಡಿ, ಯಮನೂರಿ ಚಲವಾದಿ, ಪು.ಮು ವಿದ್ಯಾಧರ ಕಲಾದಗಿ, ತಾಪಂ ಇಒ ವೆಂಕಟೇಶ ವಂದಾಲ, ಶಾಂತಾಬಾಯಿ ನಿಂಬಾಳ, ಶಿಲ್ಪಾ ಹಿರೇಮಠ, ಬಿಇ ವಸಂತ ರಾಠೋಡ ಸೇರಿ ಇತರರು ಇದ್ದರು. ಮಂಜುಳಾ ಹಿರೇಮನಿ ಸ್ವಾಗತಿಸಿದರು, ಮಕಬೂಲಸಾಬ ದಫೇದಾರ ವಂದಿಸಿದರು.

ಏ.10ರಿಂದ ಸಮರ್ಥ ರಂಗರಾವ್ ಮಹಾರಾಜರ ಮೂರ್ತಿ ಪ್ರತಿಷ್ಠಾಪನೆ

ವಿಜಯಪುರ: ನಗರ ಹೊರ ವಲಯ ಜಮಖಂಡಿ ರಸ್ತೆ ಬಳಿ ಏ.10ರಿಂದ ಏ.12 ರ ವರೆಗೆ ಮೂರು ದಿನ ಸಮರ್ಥ ರಂಗರಾವ್ ಮಹಾರಾಜರ ಮೂರ್ತಿ ಪ್ರತಿಷ್ಠಾಪನೆ, ಧ್ಯಾನ ಮಂದಿರ, ವಾಸ್ತುಶಾಂತಿ, ಕಳಸಾರೋಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡ ಈರಣ್ಣ ಪತ್ತಾರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏ.10 ರಂದು ರಂಗರಾವ್ ಮಹಾರಾಜರ ದಿವ್ಯ ಮೂರ್ತಿ ಹಾಗೂ ಪೂರ್ಣಕುಂಭ ಕಳಸ ಬೆಳಿಗ್ಗೆ 7 ಗಂಟೆಗೆ ಮುರಾಣಕೇರಿಯಿಂದ ಸಕಲ ಮಂಗಳ ವಾದ್ಯಗಳೊಂದಿಗೆ ಭವ್ಯ ದಿಂಡಿ ಪಾದಯಾತ್ರೆಯ ಮೂಲಕ ಧ್ಯಾನ ಮಂದಿರಕ್ಕೆ ಬರಮಾಡಿಕೊಳ್ಳಲಾಗುವುದು. ನಂತರ ಬೆಳಗ್ಗೆ 11.15 ಗಂಟೆಗೆ ಸಂತಪರಿ ಸಾಂಪ್ರದಾಯಿಕ ಭಜನೆ ನಂತರ ಕಾರ್ಯಕ್ರಮಕ್ಕೆ ಆಗಮಿಸಿದ ಜ್ಞಾನಿಗಳಿಂದ ಪ್ರವಚನ ಜರುಗಲಿದೆ ಎಂದರು.

ಶಹಾಪುರದ ಕಾಳಹಸ್ತೇಂದ್ರ ಮಹಾಸ್ವಾಮೀಜಿ, ಯಾದಗಿರಿಯ ಸುರೇಂದ್ರ ಮಹಾಸ್ವಾಮೀಜಿ, ಮಹೇಂದ್ರ ಮಹಾಸ್ವಾಮೀಜಿ, ನಾಗಪ್ಪಯ್ಯ ಮಹಾಸ್ವಾಮೀಜಿ, ಶಾಂತಿ ಕುಟೀರದ ಕೃಷ್ಣ ಸಂಪಗಾಂವಕರ ಗುರೂಜಿ, ಪ್ರಣವ ಪ್ರಕಾಶ ಮಹಾರಾಜರು, ಮುತ್ತುರಾಜ ಕಲಬುರ್ಗಿ ಸಾನ್ನಿಧ್ಯ ವಹಿಸಲಿದ್ದಾರೆ. ನಾಗೇಂದ್ರ ಮಹಾಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.



ಅತಿಥಿಗಳಾಗಿ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ವಿಠ್ಠಲ ಕಟಕಧೋಂಡ, ಜಿಲ್ಲಾಧಿಕಾರಿ ಡಾ. ಆನಂದ ಕೆ., ಎಸ್ಪಿ ಲಕ್ಷ್ಮಣ ನಿಂಬರಗಿ, ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನ ಮೂರ್ತಿ ಪಾಲ್ಗೊಳ್ಳಲಿದ್ದು, ಮೂರು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಗಳು ನಡೆಯಲಿವೆ ಎಂದು ಹೇಳಿದರು.

ಮುಖಂಡರಾದ ಭೀಮಶಿ ಅಟಪಟಕರ, ಸಂತೋಷ ವಿಶ್ವಕರ್ಮ ಇತರರು ಇದ್ದರು.

ಸಂಭ್ರಮದ ಶಂಕರಲಿಂಗೇಶ್ವರ ರಥೋತ್ಸವ



ಇಂಡಿ: ತಾಲೂಕಿನ ಸುಕ್ಷೇತ್ರ ಲಚ್ಯಾಣದಲ್ಲಿ ಶಂಕರಲಿಂಗೇಶ್ವರ ಮಹಾ ರಥೋತ್ಸವ ಬುಧವಾರ ಸಂಜೆ ಮೂಲಾ ನಕ್ಷತ್ರದ ಶುಭ ಮಹೋರ್ತದಲ್ಲಿ ನೆರೆದ ಸಹಸ್ರಾರು ಭಕ್ತರ ಜಯಘೋಷಗಳೊಂದಿಗೆ ಸಂಭ್ರಮದಿಂದ ನೇರವೇರಿತು.

ಬಂಥನಾಳದ ವೃಷಭಲಿಂಗೇಶ್ವರ ಮಹಾಶಿವಯೋಗಿಗಳು, ಯರನಾಳದ ಗುರು ಸಂಗನಬಸವ ಸ್ವಾಮೀಜಿ, ಇಟಗಿ ಪೂಜ್ಯರು, ಶಿರವಾಳದ ಸೋಮಸಿಂಗ ಮಹಾರಾಜರು ಸೇರಿದಂತೆ ವಿವಿಧ ಪೂಜ್ಯರ ಸಾನಿಧ್ಯದಲ್ಲಿ ನಡೆದ ನೋಡಿ ಕಣ್ತುಂಬಿಕೊಳ್ಳಲು ನೆರೆಯ ರಾಜ್ಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ರಾಜ್ಯದ ನಾನಾ ಭಾಗದ ಸಹಸ್ರಾರು ಭಕ್ತರು ಆಗಮಿಸಿದ್ದರು. ರಥೋತ್ಸವದ ಸಂದರ್ಭದಲ್ಲಿ ಭಕ್ತರು ಬಾಳೆಹಣ್ಣು, ಉತ್ತತ್ತಿ, ಖಾರಿಕ ರಥದ ಮೇಲೆ ಎಸೆದು ಭಕ್ತಿ ಸಮರ್ಪಿಸಿದರು. ರಥವು ಚಲಿಸುತ್ತ ಕೂಗಳತೆಯ ದೂರದ ಬಸವಣ್ಣನ ಕಟ್ಟೆಯ ವರೆಗೆ ತಲುಪಿ ಮರಳಿ ಮೂಲ ಸ್ಥಳ ತಲುಪಿ ಉತ್ಸವ ಯಶಸ್ವಿಗೊಂಡಿತು. ಕ್ಷೇತ್ರಕ್ಕೆ ಬಂದ ಭಕ್ತರು ಪೂಜ್ಯರ ದರ್ಶನ ಪಡೆದು ಮಠದಲ್ಲಿ ನಿರಂತರ ದಾಸೋಹ ಕೇಂದ್ರದಲ್ಲಿ ಅನ್ನ ಪ್ರಸಾದ ಸವಿದು ಪುನೀತಾರಾದರು.

ಕ್ರಿಕೆಟ್ ಟೂರ್ನಮೆಂಟ್‌ಗೆ ಚಾಲನೆ

ವಿಜಯಪುರ: ತಾಲೂಕಿನ ಕುಮಟಗಿ ಗ್ರಾಮದ ಮಾರುತೇಶ್ವರ ಹಾಗೂ ನಿಂಗರಾಯ ದೇವರ ಜಾತ್ರಾ ಮಹೋತ್ಸವದ ನಿಮಿತ್ತ ಕ್ರಿಕೆಟ್ ಟೂರ್ನಮೆಂಟ್ ಅನ್ನು ಹಮ್ಮಿಕೊಳ್ಳಲಾಗಿದ್ದು, ಟೂರ್ನಮೆಂಟ್‌ಗೆ ಊರಿನ ಗಣ್ಯರು ಹಾಗೂ ರಾಜಕೀಯ ಮುಖಂಡರ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು.

ಗುತ್ತಿಗೆದಾರ ರಾಕೇಶ ಕುಮಟಗಿ ಚಾಲನೆ ನೀಡಿ ಮಾತನಾಡಿ, ಕ್ರೀಡೆಗಳು ಮನುಷ್ಯನ ಆತ್ಮಸ್ಥೈರ್ಯವನ್ನು ಹೆಚ್ಚಿಸುವ ಜೊತೆಗೆ ಮನುಷ್ಯ ಲವಲವಿಕೆಯಿಂದ ಇರಲು ತುಂಬಾ ಸಹಕಾರಿಯಾಗಿವೆ. ಕ್ರೀಡೆಗಳಲ್ಲಿ ಸೋಲು– ಗೆಲುವು ಸಾಮಾನ್ಯ, ಎರಡನ್ನು ಸಮನಾಗಿ ಸ್ವೀಕರಿಸಬೇಕು ಎಂದರು.

ಹೊನ್ನುಟಗಿ ಪಿಕೆಪಿಎಸ್ ಉಪಾಧ್ಯಕ್ಷ ಬಸವರಾಜ ರೊಟ್ಟಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಕ್ರೀಡೆಗಳನ್ನು ಆಯೋಜಿಸಿರುವುದು ಉತ್ತಮ ಕಾರ್ಯ. ಯುವಕರು ಉತ್ಸಾಹದಿಂದ ಪಾಲ್ಗೊಂಡು ಕ್ರೀಡಾ ಮನೋಭಾವದಿಂದ ಆಟವಾಡಿ ಕ್ರೀಡಾ ಮನೋಭಾವದಿಂದ ಪಾಲ್ಗೊಂಡು ಮಾದರಿಯಾಗಬೇಕು ಎಂದರು.

ಆಶಾರಾಣಿ ಹಿರೇಕುರುಬರ, ವಿಠ್ಠಲ ಅವಟಿ, ಮಹೇಶ ಯರನಾಳ, ರವಿ ವಾಲಿಕಾರ, ಭೀಮರಾಯ ಮಿರಗಿ, ಬಾಬು ಬಿರಾದಾರ, ಮಹಾಂತಯ್ಯ ಹಿರೇಮಠ, ಮಲ್ಲಿಕಾರ್ಜುನ ಹತ್ತಿರಕಿಹಾಳ ಇದ್ದರು.



ರಾಷ್ಟ್ರಕ್ಕೆ ವಿದ್ಯಾವಂತರ ಪಾತ್ರ ಮಹತ್ವದ್ದು



ವಿಜಯಪುರ: ರಾಷ್ಟ್ರನಿರ್ಮಾಣದಲ್ಲಿ ವಿದ್ಯಾವಂತರ ಪಾತ್ರ ಮಹತ್ವದಾಗಿದೆ ಎಂದು ಬಿಎಲ್‌ಡಿಇ (ಡೀಮ್ಡ್) ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ಅರುಣ ಇನಾಮದಾರ ಹೇಳಿದರು.

ನಗರದ ಇಗ್ನೋ ಪ್ರಾದೇಶಿಕ ಕೇಂದ್ರ, ವಿಜಯಪುರ 39 ನೇ ಘಟಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು. ಪದವೀಧರರು ನಿರಂತರ ಸ್ವ–ಸುಧಾರಣೆಗೆ ಬದ್ಧರಾಗಿ, ಸಾಮಾಜಿಕ ಪರಿವರ್ತನೆಗೆ ತಮ್ಮ ಶಿಕ್ಷಣವನ್ನು ಪ್ರಬಲ ಸಾಧನವಾಗಿ ಬಳಸಿಕೊಳ್ಳಬೇಕು ಎಂದ ಅವರು ಜೀವಮಾನದ ಕಲಿಕೆ, ನೈತಿಕ ಜವಾಬ್ದಾರಿ ಮತ್ತು ವೃತ್ತಿಪರ ಸಮಗ್ರತೆಯ ಮಹತ್ವವನ್ನು ಒತ್ತಿ ಹೇಳಿದರು.

ಉಪನಿರ್ದೇಶಕಿ ಡಾ.ಹೇಮಮಾಲಿನಿ ಎಚ್.ಸಿ., ಪ್ರಾದೇಶಿಕ ಕೇಂದ್ರದ ಪ್ರಗತಿ ಮತ್ತು ಸಾಧನೆಗಳ ಕುರಿತು ಸಮಗ್ರ ವರದಿಯನ್ನು ಮಂಡಿಸಿದರು.

ಪ್ರಸಕ್ತ 39ನೇ ಘಟಿಕೋತ್ಸವದಲ್ಲಿ ಪ್ರಾದೇಶಿಕ ಕೇಂದ್ರ ವಿಜಯಪುರದ ಒಟ್ಟು 844 ವಿದ್ಯಾರ್ಥಿಗಳಿಗೆ ಪದವಿ ಮತ್ತು ಡಿಪ್ಲೊಮಾಗಳನ್ನು ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ವಿವಿಧ ವಿಭಾಗಗಳಲ್ಲಿ 58 ಪದವೀಧರರಿಗೆ ಅವರ ಕಠಿಣ ಪರಿಶ್ರಮ ಮತ್ತು ಶೈಕ್ಷಣಿಕ ಶ್ರೇಷ್ಠತೆಯನ್ನು ಗುರುತಿಸಿ ಪದವಿಗಳನ್ನು ಪ್ರದಾನ ಮಾಡಲಾಯಿತು. ಅಧ್ಯಾಪಕರು, ಅತಿಥಿಗಳು, ಪದವೀಧರರ ಕುಟುಂಬಸ್ಥರು ಇದ್ದರು.

44ನೇ ದಿನಕ್ಕೆ ಮುಂದುವರಿದ ಧರಣಿ

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳ ವಿರೋಧಿಸಿ ನಡೆಯುತ್ತಿರುವ ಧರಣಿ ಸತ್ಯಾಗ್ರಹವು 44ನೇ ದಿನಕ್ಕೂ ಮುಂದುವರೆದಿದ್ದು, ಹೋರಾಟ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆ ಕಂಡುಬಂದಿದೆ.

ಹೋರಾಟ ಸಮಿತಿಯ ಉಪಾಧ್ಯಕ್ಷ ಪರಶುರಾಮ ತಂಗಡಗಿ ಮಾತನಾಡಿ, ಸ್ಥಳೀಯ ಶಾಸಕರು ಹಾಗೂ ಉಸ್ತುವಾರಿ ಸಚಿವರು ಧರಣಿ ಸ್ಥಳಕ್ಕೆ ಭೇಟಿ ನೀಡದೆ ಇರುವುದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಳೆದ 44 ದಿನಗಳಿಂದ ನಿರಂತರವಾಗಿ ಧರಣಿ ನಡೆಸುತ್ತಿದ್ದರೂ, ಶಾಸಕರು, ಅಧಿಕಾರಿಗಳು ಗಮನಹರಿಸದೇ ಇರುವುದು ಇಡೀ ತಾಲೂಕಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ತಾಳಿಕೋಟೆ ತಾಲೂಕು ಹೋರಾಟ ಸಮಿತಿಯ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಗೌರವ ಅಧ್ಯಕ್ಷ ಎಸ್.ಬಿ.ಕಟ್ಟಿಮನಿ, ಕಾರ್ಯಾಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ), ಉಪಾಧ್ಯಕ್ಷ ಮುತ್ತಪ್ಪ ಚಮಲಾಪುರ, ಮಾಸೂಮಸಾಬ್ ಕೆಂಭಾವಿ, ಕಾಶಿನಾಥ ಮುರಾಳ, ವಿಜಯಸಿಂಗ್ ಹಜೇರಿ, ಸುರೇಶ ಹಜೇರಿ, ಅನಿಲಸಿಂಗ್ ವಿಜಯಪುರ, ಮಹೇಶ್ ಚಲವಾದಿ, ಸಂಜು ಬರದೆನಾಳ, ಸುರೇಶ ಪುಲುಸ್, ರತನಸಿಂಗ್ ಕೊಕಟನೂರು, ರಾಮಣ್ಣ ಕಟ್ಟಿಮನಿ, ಸದ್ದಾಂ ಹುಸೇನ್ ಬೀಳಗಿ, ದತ್ತು ಹೆಬಸೂರ ಹಾಜರಿದ್ದರು.



ಕಿರುಸುದ್ದಿ

ಜಾಗೃತಿ ಸಭೆ ಇಂದು

ಕುಷ್ಟಗಿ: ಕೊಪ್ಪಳ ತಾಲೂಕಿನ ಟಣಕನಕಲ್ ಗ್ರಾಮದ ಮೊರಾರ್ಜಿ ಶಾಲೆಯಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕೊಪ್ಪಳ ಜಿಲ್ಲೆಯ ಅಲ್ಪಾಸಂಖ್ಯಾತರ(ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ್, ಬೌದ್ಧ) ಸಮುದಾಯದ ಸರ್ವ ಮುಖಂಡರ ಸಭೆಯನ್ನು ಏ.9 ರಂದು ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ. ಅಲ್ಪಾಸಂಖ್ಯಾತರ ಮಹಿಳೆಯರು ಹಾಗೂ ಅಧಿಕಾರೇತರು, ಸಂಘ ಸಂಸ್ಥೆಗಳ ಮಹಿಳೆಯರಿಗಾಗಿ ಸಾಕ್ಷರತಾ ಪ್ರೇರಪಿಸಲು ಜಾಗೃತಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಹಾಗೂ ಪ್ರಧಾನಮಂತ್ರಿಗಳ 17 ಅಂಶಗಳ ಅನುಷ್ಠಾನ ಸಮಿತಿ ನಾಮನಿರ್ದೇಶನ ಸದಸ್ಯ ನಜೀರಸಾಬ್ ಮೂಲಿಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ವಿಚಾರ ಸಂಕಿರಣ ನಾಳೆ



ಮಸ್ಕಿ: ಪಟ್ಟಣದ ಹೊರವಲಯದ ದೇವಾನಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇದೇ ಏ.10ರಂದು 'ಮಹಾತ್ಮ ಗಾಂಧೀಜಿಯವರ ವಿಚಾರಗಳು, ಪ್ರಭಾವ ಮತ್ತು ಜಾಗತಿಕ ಪ್ರಸ್ತುತತೆ' ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲ ಡಾ. ಮಹಾಂತಗೌಡ ಪಾಟೀಲ್ ತಿಳಿಸಿದ್ದಾರೆ. ದೇವಾನಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರಿನ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಕಲಬುರಗಿಯ ಕಡಗಂಚಿ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರೊ. ಬಸವರಾಜ ಕೊಡಗುಂಟಿ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದಾರೆ. ಮಹಾರಾಷ್ಟ್ರದ ಸೊಲ್ಲಾಪುರದ ಹರಿಭಾಯಿ ದೇವಕರಣ ಕಾಲೇಜಿನ ಹಿಂದಿ ವಿಭಾಗದ ಪ್ರೊ. ಧನ್ಯಕುಮಾರ ಜಿನಪಾಲ ಬಿರಾಜದಾರ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿವಿಧ ವಿಷಯಗಳ ನುರಿತ ತಜ್ಞರಿಂದ ಒಟ್ಟು ಮೂರು ಗೋಷ್ಠಿಗಳು ನಡೆಯಲಿವೆ. ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಪ್ರಾಧ್ಯಾಪಕರು ಹಾಗೂ ಸಂಶೋಧಕರಿಗೆ ನಿಯೋಜಿತ ಕಾರ್ಯದ ಸೌಲಭ್ಯವಿರುತ್ತದೆ. ವಿದ್ಯಾರ್ಥಿಗಳು, ಸಂಶೋಧಕರು, ವಿಷಯ ಆಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವಿಚಾರ ವಿನಿಮಯದ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಸಂಘಟನಾ ಸಮಿತಿಯು ಪತ್ರಿಕಾ ಪ್ರಕಟಣೆಯಲ್ಲಿ ಕೋರಿದೆ.

ನಿಂಗಾಪುರ ಗ್ರಾಮದಲ್ಲಿ ಸಾಮೂಹಿಕ ವಿವಾಹ

ಕುಕನೂರು: ತಾಲೂಕಿನ ನಿಂಗಾಪುರ ಗ್ರಾಮದಲ್ಲಿ 9 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮು ಬುಧವಾರ ಜರುಗಿದವು.

ಸಾಮೂಹಿಕ ವಿವಾಹದ ನಂತರ ಪತ್ರಿಕೆಯೊಂದಿಗೆ ಮಾತನಾಡಿದ ಹಿರಿಯ ಮುಖಂಡ ಮಂಜುನಾಥ್ ಕಡೆಮನಿ, ನಿಂಗಾಪುರ ಗ್ರಾಮದಲ್ಲಿ ಪ್ರತಿವರ್ಷವೂ ಶ್ರೀ ಭೀಮಾಂಬಿಕ ದೇವಿಯ ಪುರಾಣಮಂಗಳದ ನಿಮಿತ್ಯ ಪ್ರತಿ ವರ್ಷ 10 ರಿಂದ 11 ಜೋಡಿ ಸಾಮೂಹಿಕ ವಿವಾಹವನ್ನು ಮಾಡುತ್ತಾ ಬಂದಿದ್ದು ಎಲ್ಲಾ ಸಮುದಾಯದ ಜೋಡಿಗಳು ಇಲ್ಲಿ ನವ ಜೀವನಕ್ಕೆ ಕಾಲಿಟ್ಟು ಭೀಮಾಂಬಿಕಾ ಆಶೀರ್ವಾದವನ್ನು ಪಡೆದು ನವ ಜೋಡಿಗಳು ಮದುವೆಯಾದ ನಂತರ ತಮ್ಮ ಜೀವನವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿ ಕುಟುಂಬದ ಗುರುಹಿರಿಯರ ಘನತೆ ಗೌರವವನ್ನು ಕಾಪಾಡಲು ಮುಂದಾಗಬೇಕು. ಸಾಮೂಹಿಕ ವಿವಾಹಕ್ಕೆ ಊರಿನ ಎಲ್ಲಾ ಯುವಕರು ಶಕ್ತಿ ಮೀರಿ ದುಡಿದಿದ್ದಾರೆ ಅವರ ಸೇವೆಯನ್ನು ಮರೆಯುವಂತಿಲ್ಲ ಇದು 26 ವರ್ಷಗಳ ನಿರಂತರ ಪ್ರಕ್ರಿಯೆವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಶ್ರೀನಿವಾಸ್ ತಿಮ್ಮಾಪುರ್, ನಿಂಗಪ್ಪ ನಡಲಮನಿ, ಜಗನ್ನಾಥ್ ಗಡ್ಡದ್, ಚೆನ್ನರೆಡ್ಡಿ ಕೊಟ್ಟಿಕೊಳ್ಳಿ, ಗುಡದಪ್ಪ ಆಗಸಿಮನಿ, ಕೆಂಚಪ್ಪ ರಾಯಪ್ಪ ಆಲೂರ್, ರವಿ ಲಮಾಣಿ, ಯಂಕಪ್ಪ ಆಗಸಿಮನಿ, ಡಾಕ್ಟರ್ ಪ್ರಕಾಶ್ ಹಳ್ಳಿಮನೆ, ಮೈಲಾರಪ್ಪ ಹೊಸಮನಿ, ಬಸವರಾಜ ಕೊಡ್ಲಿ, ಕನಕರಾಯ ತಳವಾರ್, ಹಾಗೂ ಇತರರಿದ್ದರು.

ನಂತರ ಸಾಯಂಕಾಲ ಪುರಾಣ ಮಹಾಮಂಗಳ ನೆರವೇರಿತು ಅನ್ನಸಂತರ್ಪಣ ಕಾರ್ಯಕ್ರಮ ಕೂಡ ಜರುಗಿತು.



ಕುಷ್ಟಗಿ: ಪಟ್ಟಣದ ಅಂಜನಾದ್ರಿ (ಬಿಜೆಪಿ) ಕಚೇರಿಯಲ್ಲಿ ಭಾರತೀಯ ಜನತಾ ಪಾರ್ಟಿ ಸಂಸ್ಥಾಪನಾ ದಿನಾಚರಣೆ ಮಾಡಲಾಯಿತು. ಬಿಜೆಪಿ ಮಂಡಲ ಅಧ್ಯಕ್ಷ ಮಹಾಂತೇಶ ಬದಾಮಿ ಬಿಜೆಪಿ ಪಕ್ಷದ ಧ್ವಜಾರೋಹಣ ನೆರವೇರಿಸಿದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಾಗೂ ಜಿಪಂ ಮಾಜಿ ಸದಸ್ಯ ಕೆ. ಮಹೇಶ, ತುಖಮುನಿಸ್ವಾಮಿ ಗುರುವೀನ್, ದ್ಯಾಮಣ್ಣ ವಣಗೇರಿ ಸೇರಿದಂತೆ ಇತರರಿದ್ದರು.

ಅಗತ್ಯವಿದ್ದಷ್ಟು ಮಾತ್ರ ಯೂರಿಯಾ ಖರೀದಿಸಿ

ರಾಯಚೂರು: ಪ್ರಸ್ತುತ ಮುಂಗಾರು ಹಂಗಾಮಿನಿಂದ ರೈತರು ಯೂರಿಯಾ ರಸಗೊಬ್ಬರ ಖರೀದಿ ಮಾಡಲು ಕೃಷಿ ಇಲಾಖೆಯು ಅಭಿವೃದ್ಧಿಪಡಿಸಿರುವ ಹೊಸ ಕೆ-ಕಿಸಾನ್ ತಂತ್ರಾಂಶದ ಮೂಲಕವೇ ರೈತರ ಎಫ್.ಐ.ಡಿ. ಸಂಖ್ಯೆ, ಆಧಾರ ಕಾರ್ಡ್ ಬಳಸಿಕೊಂಡು ರೈತರು ಹೊಂದಿರುವ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಅಗತ್ಯವಿರುವಷ್ಟು ಮಾತ್ರ ರೈತರು ಖರೀದಿಸಲು, ರಸಗೊಬ್ಬರ ಮಾರಾಟಗಾರರು ವಿತರಿಸಲು ಅವಕಾಶವಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ್ ಚೌವ್ಹಾಣ ತಿಳಿಸಿದ್ದಾರೆ. ಇಲಾಖೆಯ ಕೆ-ಕಿಸಾನ್ ತಂತ್ರಾಂಶದ ಮೂಲಕವೇ ಎಫ್.ಐ.ಡಿ ದಾಖಲಿಸಿ ಯೂರಿಯಾ ರಸಗೊಬ್ಬರ ವಿತರಿಸಬೇಕು. ಎಫ್.ಐ.ಡಿ. ಇಲ್ಲದ ರೈತರು ತಮ್ಮ ಪಹಣಿ, ಬ್ಯಾಂಕ್ ಪಾಸ್‌ಬುಕ್ ಮತ್ತು ಆಧಾರ್ ಕಾರ್ಡ್ ದಾಖಲೆಗಳೊಂದಿಗೆ ಸಮೀಪದ ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ, ಕಂದಾಯ ಇಲಾಖೆ, ಗ್ರಾಮ ಒನ್, ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಎಫ್‌ಐಡಿ ಸೃಜಿಸಿಕೊಳ್ಳಬೇಕು. ಎಫ್‌ಐಡಿ ಹೊಂದಿರುವ ರೈತರು ತಮ್ಮ ಎಲ್ಲ ಸರ್ವೇ ನಂಬರ್‌ಗಳನ್ನು ಅದಕ್ಕೆ ಜೋಡಣೆ ಮಾಡಬೇಕು. ರೈತರಲ್ಲದವರು ಆಧಾರ್ ಬಳಸಿ, ಬೇರೆ ರೈತರ ಎಫ್.ಐ.ಡಿ ಬಳಸಿ ರಸಗೊಬ್ಬರ ಖರೀದಿಸಿ ಸಂಗ್ರಹಿಸಿ ಕೃತಕ ಅಭಾವ ಸೃಷ್ಟಿ ಮಾಡುವ ಪ್ರಕರಣ ಕೃಷಿಯೇತರ ಚಟುವಟಿಕೆಗಳಿಗೆ ರಸಗೊಬ್ಬರ ಬಳಕೆ ಮಾಡುವಂತ ಪ್ರಕರಣ, ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು, ಕಾಳಸಂತೆಯಲ್ಲಿ ಮಾರಾಟ ಮಾಡುವುದು ಕಂಡು ಬಂದರೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.



ಕುಷ್ಟಗಿ: ಪಟ್ಟಣದ ಗಾಂಧಿನಗರದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸೇವಾ ಕೇಂದ್ರದಲ್ಲಿ ಶುಕ್ರವಾರ ನೂತನ ಡಿಜಿ ಪೇ ಕೇಂದ್ರ ಉದ್ಘಾಟಿಸಲಾಯಿತು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕಾ ಯೋಜನಾಧಿಕಾರಿ ನಿರಂಜನ್ ಎಂ. ಆರ್., ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ರವಿಂದ್ರ ಮಡಿವಾಳರ, ಒಕ್ಕೂಟದ ಪದಾಧಿಕಾರಿಗಳು ಮತ್ತು ಸದಸ್ಯರು ಸೇರಿದಂತೆ ವಾರ್ಡಿನ ಗಣ್ಯರು ಇದ್ದರು.

ನೀರಿನ ಕೊರತೆಯಾಗದಂತೆ ಕ್ರಮ ವಹಿಸಿ: ಸಚಿವ ಪಾಟೀಲ

ರಾಯಚೂರು: ಜಿಲ್ಲೆಯ ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ ಸೂಚಿಸಿದರು.

ಬುಧವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಮತ್ತು ಜಾನುವಾರುಗಳಿಗೆ ಮೇವಿನ ಲಭ್ಯತೆಯ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಗ್ರಾಮ ಪಂಚಾಯತಿಗಳು, ನಗರ ಸ್ಥಳೀಯ ಸಂಸ್ಥೆಗಳು, ಬೇಸಿಗೆಯಲ್ಲಿ ಕುಡಿಯುವ ನೀರಿನ ಪೂರೈಕೆಗೆ ಹೆಚ್ಚಿನ ಒತ್ತು ನೀಡಬೇಕು. ಯಾವುದೇ ಅಡೆತಡೆ ಇಲ್ಲದೆ ನೀರು ಪೂರೈಸಲು ಗಮನ ಹರಿಸಬೇಕು. ಸ್ಥಳೀಯವಾದ ಸಮಸ್ಯೆಗಳನ್ನು ತಮ್ಮ ಹಂತದಲ್ಲಿ ಪರಿಹರಿಸಿ ಗ್ರಾಮ ಪಂಚಾಯತಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಅನುದಾನ ಬಳಸಿಕೊಂಡು ಕಾಮಗಾರಿ ನಡೆಸಬೇಕು. ಸಾರ್ವಜನಿಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಬೇಕು ಎಂದು ತಿಳಿಸಿದರು.

ನೀರಿನ ಸಮಸ್ಯೆಗಳಿರುವ ಗ್ರಾಮಗಳ ಪಟ್ಟಿ ಮಾಡಿ, ಕೂಡಲೇ ಆಯಾ ಗ್ರಾಮಗಳಲ್ಲಿರುವ ಕೆರೆಗಳನ್ನು ತುಂಬಿಸಲು ಕ್ರಮ ಕೈಗೊಳ್ಳಬೇಕು. ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿ ಕೊಳ್ಳುವುದು ಆಯಾ ತಾಲೂಕಿನ ತಹಶೀಲ್ದಾರ, ತಾ.ಪಂ ಇಓ ಹಾಗೂ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಎಇಇ ಗಳದ್ದಾಗಿರುತ್ತದೆ ಒಂದು ವೇಳೆ ಸಮಸ್ಯೆಗಳಾದಲ್ಲಿ ನಿಮ್ಮನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಸಿದರು.



» ಕುಡಿಯುವ ನೀರಿನ ಸಮಸ್ಯೆಗಳು ಮತ್ತು ಜಾನುವಾರುಗಳಿಗೆ ಮೇವಿನ ಲಭ್ಯತೆಯ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ

ನಗರ ಶಾಸಕ ಡಾ.ಶಿವರಾಜ ಪಾಟೀಲ ಮಾತನಾಡಿ, ರಾಯಚೂರು ನಗರ ವ್ಯಾಪ್ತಿ ಹಾಗೂ ಕ್ಷೇತ್ರದದಲ್ಲಿನ ಕೆಲ ಗ್ರಾಮಗಳಲ್ಲಿ ಅಂತರ್ಜಲ ಮೂಲದಿಂದ ಮಾತ್ರ ಕುಡಿಯುವ ನೀರನ್ನು ಪಡೆಯಬಹುದಾಗಿದ್ದು, ಕಳೆದ ಬಾರಿ ನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ 14 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು ಬೋರ್‌ವೆಲ್ ಮತ್ತು ಟ್ಯಾಂಕರ್‌ಗಳನ್ನು ಬಾಡಿಗೆ ಪಡೆಯಲಾಗಿತ್ತು. ಅದಕ್ಕಾಗಿ 50 ಲಕ್ಷ ನೀಡಲಾಗುವುದು ಎಂದು ಹೇಳಲಾಗಿತ್ತು. ಆದರೆ ಈವರೆಗೆ ಕೇವಲ 6-7 ಲಕ್ಷ ಮಾತ್ರ ಬಿಡುಗಡೆ ಮಾಡಲಾಗಿದೆ. ಉಳಿದ ಬಾಡಿಗೆ ಮೊತ್ತವನ್ನು ನೀಡಿಲ್ಲ, ಹಳ್ಳಿಗಳಿಗೆ ಹೇಗೆ ಮುಖ ಹೊತ್ತು ಹೋಗಬೇಕು. ಮೊದಲ ಆಧ್ಯತೆಯಾಗಿ ಟ್ಯಾಂಕರ್ ಮತ್ತು ಬೋರ್ ವೆಲ್ ಬಾಡಿಗೆ ಪಡೆದವರಿಗೆ ಬಾಡಿಗೆ ಹಣವನ್ನು ಪಾವತಿ ಮಾಡಬೇಕು ಎಂದು ತಿಳಿಸಿದರು.

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕ ಬಸನಗೌಡ ದದ್ದಲ ಮಾತನಾಡಿ, ಕುಡಿಯುವ ನೀರಿನ ಸಮಸ್ಯೆಯ ಕುರಿತು ಮಾಹಿತಿ ನೀಡಲು ಸಾರ್ವಜನಿಕರಿಗಾಗಿ ಸಹಾಯವಾಣಿ ಆರಂಭಿಸಲಾಗಿದೆ. ಆದರೆ ಸರಿಯಾಗಿ ಸ್ಪಂದನೆ ಸಿಗುತ್ತಿಲ್ಲ ಎಂಬ ದೂರುಗಳಿವೆ. ಸಾರ್ವಜನಿಕರು ಕುಡಿಯುವ ನೀರಿನ ಕುರಿತು ಮಾಹಿತಿ ನಿಡಿದಾಗ ಅದಕ್ಕೆ ಸಂಬಂಧಪಟ್ಟ ನೋಡೆಲ್ ಅಧಿಕಾರಿಗಳು ಮತ್ತು ಸಹಾಯವಾಣಿ ಸಿಬ್ಬಂದಿ ಸ್ಪಂಧಿಸಬೇಕು ಎಂದರು.

ಮಾನ್ವಿ ಶಾಸಕ ಹಂಪಯ್ಯ ನಾಯಕ ಮಾತನಾಡಿ, ಮಾನ್ವಿ ತಾಲೂಕಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, ಕಾಳುವೆಯಲ್ಲಿನ ಗೇಜ್ ಕಡಿಮೆಯಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದು, ಇದರಿಂದ ಕೆರೆ ತುಂಬಿಸಲು ಆಗುತ್ತಿಲ್ಲ ಎಂದರು.

ಸಭೆಯಲ್ಲಿ ಜಿ.ಪಂ ಸಿಇಓ ಈಶ್ವರ ಕಾಂದೂ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮಹಾಪತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ ಸೇರಿದಂತೆ ಇತರರಿದ್ದರು.

ಸಮರ್ಪಕ ನೀರು ಪೂರೈಕೆಯಾಗಲಿ: ಡಿಸಿ

ಕೊಪ್ಪಳ: ಜಿಲ್ಲೆಯ ಪಟ್ಟಣ, ನಗರ ಪ್ರದೇಶ ಮತ್ತು ಎಲ್ಲಾ ಗ್ರಾಪಂಗಳು ಸೇರಿದಂತೆ ಜಿಲ್ಲೆಯಾದ್ಯಂತ ಯಾವುದೇ ಕಡೆಗಳಲ್ಲಿ ಕಡಿಯುವ ನೀರಿನ ಸಮಸ್ಯೆಯಾಗಬಾರದು. ಬೇಸಿಗೆಯ ಈ ಅವಧಿಯಲ್ಲಿ ಕುಡಿಯುವ ನೀರು ಪೂರೈಕೆಗೆ ಮೊದಲಾದ್ಯತೆ ನೀಡಬೇಕು ಎಂದು ಡಿಸಿ ಡಾ.ಸುರೇಶ ಬಿ. ಇಟ್ನಾಳ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್‌ನ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಬುಧವಾರ ಕೊಪ್ಪಳ ಸೇರಿದಂತೆ ವಿವಿಧ ತಾಲೂಕಿನ ತಹಶಿಲ್ದಾರರು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು, ನಗರಸಭೆ, ಪುರಸಭೆ, ಪಪಂ ಮತ್ತು ವಿವಿಧ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಯಾವುದೇ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬವಣೆ ಎದುರಾಗಬಹುದು ಎಂಬುದು ಗೊತ್ತಾದ ಕೂಡಲೇ ಅಲ್ಲಿ ಕುಡಿಯುವ ನೀರು ಸರಬರಾಜಿಗೆ ನ್ಯಾಯ ವ್ಯವಸ್ಥೆ ಮಾಡಿಕೊಂಡಿರಬೇಕು. ಅಂತಹ ಕಡೆಗಳಲ್ಲಿ ಮುಂಚಿತವಾಗಿಯೇ ಖಾಸಗಿ ಬೋರವೆಲ್ ಗುರುತಿಸಬೇಕು. ಮಾಲೀಕರೊಂದಿಗೆ ಮುಂಚಿತವಾಗಿಯೇ ಒಪ್ಪಂದ ಪತ್ರ ಮಾಡಿಕೊಂಡಿರಬೇಕು. ಬೋರವೆಲ್ ಮಾಲೀಕರು ಒಪ್ಪದಿದ್ದಲ್ಲಿ ಜಿಲ್ಲಾಡಳಿತದ ಗಮನಕ್ಕೆ ತರಬೇಕು ಎಂದು ಆಯಾ ಪಿಡಿಓಗಳಿಗೆ ಸೂಚಿಸಿದರು.

ಎಡಿಸಿ ಸಿದ್ರಾಮೇಶ್ವರ, ಜಿಪಂ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ,ಕೊಪ್ಪಳ,ಗಂಗಾವತಿ,ಕಾರಟಗಿ, ಕನಕಗಿರಿ, ಕುಷ್ಟಗಿ, ಯಲಬುರ್ಗಾ, ಕುಕನೂರ ತಹಶೀಲ್ದಾರರು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶ, ಸಣ್ಣ ನೀರಾವರಿ, ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿಗಳು, ಎಲ್ಲ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಇದ್ದರು.

> **ಜಿಲ್ಲೆಯ ಎಲ್ಲ ಪಂಚಾಯತಗಳಲ್ಲಿ ಗ್ರಾಮ ನೀರು ನೈರ್ಮಲ್ಯ ಸಮಿತಿ ಸಭೆಗಳು ನಿಯಮಿತವಾಗಿ ನಡೆಯಬೇಕು. ಈ ಸಭೆಗಳಲ್ಲಿ ಕರ ವಸೂಲಾತಿ ಮತ್ತು ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ಗಂಭೀರವಾಗಿ ಚರ್ಚಿಸಿದಲ್ಲಿ ಯಾವುದೇ ಗ್ರಾಮಗಳಲ್ಲಿ ದಿಢೀರ್ ಎಂದು ನೀರಿನ ಸಮಸ್ಯೆ ಉದ್ಭವಿಸಲಾರದು.**
> **- ಸುರೇಶ್ ಇಟ್ನಾಳ್, ಡಿಸಿ**

ನೋಟೀಸ್ ಜಾರಿ

ತುಂಗಭದ್ರಾ ಡ್ಯಾಂನಿಂದ ಕಾಲುವೆಗೆ ನೀರು ಹರಿಸಿದ್ದು ಈ ಮೊದಲೇ ನೀಡಿದ ಸೂಚನೆಯಂತೆ ಕಾಲುವೆ ವ್ಯಾಪ್ತಿಯ ಕೆರೆಗಳ ಭರ್ತಿ ಕಾರ್ಯ ನಡೆದಿದೆಯೇ ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಅಭಿಯಂತರರಿಗೆ ಪ್ರಶ್ನಿಸಿದ ಜಿಲ್ಲಾಧಿಕಾರಿಗಳು, ಕಾಲುವೆಗೆ ನೀರು ಹರಿಸಿದ್ದರು ಸಹ ಕೆರೆ ಭರ್ತಿಗೆ ನಿರ್ಲಕ್ಷ್ಯ ವಹಿಸಿದ ಆರ್‌ಡಬ್ಲ್ಯುಎಸ್‌ನ ಗಂಗಾವತಿಯ ಸಹಾಯಕ ಅಭಿಯಂತರರಿಗೆ ಕಾರಣ ಕೇಳಿ ನೋಟೀಸ್ ಜಾರಿಗೆ ನಿರ್ದೇಶನ ನೀಡಿದರು.

ಅರಣ್ಯ ಭೂಮಿ ಸಾಗುವಳಿಗೆ ನೆರವು ನೀಡಿ

ಕುಷ್ಟಗಿ: ತಾಲೂಕಿನ ಮ್ಯಾದರಡೊಕ್ಕಿ ತಾಂಡಾದ ದಲಿತರಿಗೆ ಸೂಕ್ತ ರಕ್ಷಣೆ ಕೊಡುವುದು ಹಾಗೂ ಸರ್ಕಾರಿ ಅರಣ್ಯ ಭೂಮಿಯಲ್ಲಿ ಸಾಗುವಳಿಗೆ ಅನುಕೂಲ ಕಲ್ಪಿಸುವ ಎಂದು ಕರ್ನಾಟಕ ತಾಲೂಕು ಸಮಿತಿ ವತಿಯಿಂದ ಪಟ್ಟಣದ ಶಾಸಕರ ಕಾರ್ಯಾಲಯದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ಸಚೇತಕರು ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್‌ಗೆ ಬುಧವಾರ ಮನವಿ ಪತ್ರ ಸಲ್ಲಿಸಲಾಯಿತು.

ಸಂಘದ ತಾಲೂಕಾಧ್ಯಕ್ಷ ದೇವಪ್ಪ ಕಂಬಳಿ ಮಾತನಾಡಿ, ತಾಲೂಕಿನ ಮ್ಯಾದರಡೊಕ್ಕಿ ತಾಂಡದ ದಲಿತ ಕುಟುಂಬಗಳು ಹಾಗೂ ಬಡ ರೈತರು ಸಂ.ನಂ 74 ರ ಭೂಮಿಯನ್ನು ಕಳೆದ 50-60 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು 20ಕ್ಕೂ ಹೆಚ್ಚು ಸಿಬ್ಬಂದಿಗಳು ಫೆ.18, 2026 ರಂದು ಸಾಗುವಳಿದಾರರ ಮೇಲೆ ದೌರ್ಜನ್ಯ ನಡೆಸಿ, ಗುಂಡಿ ತೋಡಿದ್ದಾರೆ. ದಲಿತ ಜನಾಂಗಕ್ಕೆ ಸೇರಿದ ನಿರುಪಾದಿ ರಾಠೋಡ್, ಟಾಕಪ್ಪ ರಾಠೋಡ್ ಗುಂಡಿ ಮುಚ್ಚುವ ಜೆಸಿಬಿ ನಿಲ್ಲಿಸಲು ಅರಣ್ಯ ಅಧಿಕಾರಿಗಳಿಗೆ ವಿನಂತಿಸಿದ್ದಾರೆ. ಆದರೆ ಅರಣ್ಯ ಇಲಾಖೆಗೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಾಗುವಳಿದಾರರನ್ನು ನೂಕು ನೂಗ್ಗಲು ಮೂಲಕ ದೌರ್ಜನ್ಯ ನಡೆಸಿದ್ದಾರೆ. ಸರ್ಕಾರದ ಆದೇಶದಂತೆ 3 ಎಕರೆಗಿಂತ ಕಡಿಮೆ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುವವರನ್ನು, ಭೂಮಿಯಿಂದ ಒಕ್ಕಲೆಬ್ಬಿಸಬಾರದು. ದಲಿತರು, ಬಡ ರೈತರು ಸಾಗುವಳಿ ಮಾಡುತ್ತಿರುವ ಭೂಮಿಯಲ್ಲಿ ಗಿಡ ಹಾಕುವ ಕಾರ್ಯ ಮಾಡಲಾಗತ್ತಿದೆ. ತಾವುಗಳು ಅರಣ್ಯ ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಿ ದಲಿತರು ಸಾಗುವಳಿ ಮಾಡಲು ಅನುಕೂಲ ಕಲ್ಪಿಸಬೇಕೆಂದು ಮನವಿ ಮಾಡಿದರು.

ಮನವಿ ಪತ್ರ ಸ್ವೀಕರಿಸಿದ ವಿಧಾನಸಭೆಯ ವಿರೋಧ ಪಕ್ಷದ ಸಚೇತಕರು ಮಾತನಾಡಿ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ತಾಲೂಕು ಕಾರ್ಯದರ್ಶಿ ಶರಣಪ್ಪ ಸಿದ್ದಾಪೂರ, ಜಿಲ್ಲಾ ಕಾರ್ಯಾಧ್ಯಕ್ಷ ಮಲ್ಲೇಶಗೌಡ ಕನ್ನೆರಡು, ತಾಲೂಕಾಧ್ಯಕ್ಷ ನಿರುಪಾದಿ ಬುನ್ನಟ್ಟಿ, ಸದಸ್ಯರಾದ ಶ್ಯಾಮೀದಸಾಬ್ ತಾವರಗೇರಾ, ದ್ಯಾಮಮ್ಮ, ರಗಡಪ್ಪ ಮೆಣೇದಾಳ ಇದ್ದರು.



ಗ್ರಾಮಗಳ ಸಮಗ್ರ ಅಭಿವೃದ್ಧಿಯೇ ನನ್ನ ಗುರಿ: ಕೆ.ರಾಜಶೇಖರ ಹಿಟ್ನಾಳ

ಯಲಬುರ್ಗಾ: ಲೋಕಸಭಾ ಸದಸ್ಯರ ಅನುದಾನವನ್ನು ಸಮರ್ಪಕದಿಂದ ಬಳಕೆ ಮಾಡಿಕೊಂಡು ಗ್ರಾಮೀಣ ಪ್ರದೇಶಗಳ ಗ್ರಾಮಗಳನ್ನು ಸಮಗ್ರ ಅಭಿವೃದ್ಧಿ ಪಡಿಸುವುದೆ ನನ್ನ ಮುಖ್ಯ ಗುರಿಯಾಗಿದೆ ಎಂದು ಕೊಪ್ಪಳ ಲೋಕಸಭಾ ಸದಸ್ಯ ಕೆ. ರಾಜಶೇಖರ ಹಿಟ್ನಾಳ ಹೇಳಿದರು.

ತಾಲೂಕಿನ ಮಾರನಾಳ, ತಲ್ಲೂರು ಹಾಗೂ ಚಿಕ್ಕಬನ್ನಿಗೋಳ ಗ್ರಾಮಗಳಲ್ಲಿ ಕೇಂದ್ರ ಸರಕಾರದ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿ, ಪ್ರತಿಯೊಬ್ಬ ಗ್ರಾಮಸ್ಥರೂ ತಮ್ಮ ಗ್ರಾಮದ ಸ್ವಚ್ಚತೆ, ಪರಿಸರ ಸಂರಕ್ಷಣೆ, ಆರೋಗ್ಯ ಮತ್ತು ಶಿಕ್ಷಣದ ಬಗ್ಗೆ ಜಾಗೃತರಾಗಬೇಕು ಎಂದರು.

ಆದರ್ಶ ಗ್ರಾಮ ಯೋಜನೆ ಗ್ರಾಮೀಣ ಅಭಿವೃದ್ಧಿಯ ದಿಕ್ಕಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ, ಗ್ರಾಮಗಳನ್ನು ಮಾದರಿ ಗ್ರಾಮಗಳಾಗಿ ರೂಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವ ಮೂಲಕ ರಸ್ತೆ ಅಭಿವೃದ್ಧಿ, ಕುಡಿಯುವ ನೀರಿನ ಸೌಲಭ್ಯ, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ, ಶಾಲಾ ಮೂಲಸೌಕರ್ಯ, ಆರೋಗ್ಯ ಸೇವೆಗಳ ವಿಸ್ತರಣೆ ಸೇರಿದಂತೆ ಅನೇಕ ಪ್ರಮುಖ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿಗಳನ್ನು ಗುಣಮಟ್ಟದಿಂದ, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆರಿಬಸಪ್ಪ ನಿಡಗುಂದಿ, ಕೆಎಂಎಫ್ ನಿರ್ದೇಶಕ ಹಂಪಯ್ಯಸ್ವಾಮಿ ಹಿರೇಮಠ, ಶರಣಪ್ಪ ಗಾಂಜಿ, ಡಾ. ಶಿವನಗೌಡ ದಾನರಡ್ಡಿ, ಭೀಮಣ್ಣ ಜರಕುಂಟಿ, ಸಂಗಪ್ಪ ನಿಡಗುಂದಿ, ಪರಸಪ್ಪ ಪೂಜಾರ, ಮಂಜುನಾಥ ಹುಂಡಿ, ಶರಣಗೌಡ ಬಸಾಪೂರ, ಶಂಕರಗೌಡ ಪಾಟೀಲ, ಸಮಾಜ ಕಲ್ಯಾಣಾಧಿಕಾರಿ ಶಶಿಧರ ಸಕ್ರಿ, ಕೆಆರ್‌ಐಡಿಎಲ್ ಎಇಇ ಇರ್ಫಾನ್ ನಾಡಗೌಡ್ರ ,ಪಿಡಿಓ ರವಿಕುಮಾರ ಲಿಂಗಣ್ಣನವರ ಸೇರಿದಂತೆ ಪಕ್ಷದ ಮುಖಂಡರು, ಅಧಿಕಾರಿಗಳು ಇದ್ದರು.



ಅಡವಿ ಅಮರೇಶ್ವರ ಜಾತ್ರಾ ಮಹೋತ್ಸವ

ಮಾನ್ವಿ: ರಾಯಚೂರು ಜಿಲ್ಲೆಯು ಅನೇಕ ಶರಣರನ್ನು ಸಂತರನ್ನು ಕಂಡ ಪುಣ್ಯಭೂಮಿಯಾಗಿದೆ. ಈ ಭಾಗದ ಮಠಗಳು ಜನರಿಗೆ ಒಳ್ಳೆಯ ಸಂಸ್ಕಾರವನ್ನು ನೀಡಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಿವೆ. ಯಾರು ಸಮಾಜಕ್ಕಾಗಿ ತಮ್ಮದೆಲ್ಲವನ್ನು ತ್ಯಾಗಮಾಡಿ ಪರಿಶ್ರಮದಿಂದ, ನಿಸ್ವಾರ್ಥವಾಗಿ, ಸನ್ಮಾರ್ಗದಲ್ಲಿ ಕರೆದುಕೊಂಡು ಹೋಗುತ್ತಾರೋ ಅವರನ್ನು ಸಮಾಜ ಕೂಡ ಸಮರ್ಪಣ ಭಾವದಿಂದ ಸ್ಮರಿಸಿಕೊಳ್ಳುತ್ತದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ನಿವೃತ್ತ ಡಿ.ಜಿ.ಪಿ. ಹೇಳಿದರು.

ತಾಲೂಕಿನ ಅಡವಿ ಅಮರೇಶ್ವರ ಗ್ರಾಮದಲ್ಲಿನ ಸುವರ್ಣಗಿರಿ ವಿರಕ್ತಮಠ ಅಡವಿ ಅಮರೇಶ್ವರ ಮಠದಲ್ಲಿ ಮಂಗಳವಾರ ಸಂಜೆ 72ನೇ ಜಾತ್ರಾ ಮಹೋತ್ಸವ, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನದರ್ಶನ ಪ್ರವಚನ ಮಂಗಲ ಕಾರ್ಯಕ್ರಮಗುರುವಂದನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೂದುಗುಂಪ ಸಿದ್ದೇಶ್ವರ ಶ್ರೀಗಳು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನದರ್ಶನ ಪ್ರವಚನ ನೀಡಿದರು. ಸಂಗೀತವನ್ನು ಅಮರೇಶ ಸಾಲಿಮಠ ಗವಾಯಿಗಳು ನೀಡಿದರು.

ಕಿಷ್ಕಿಂದ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೆಟ್ ಪಡೆದ ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿ ಡಾ.ಸಿದ್ದಲಿಂಗ ಶ್ರೀಗಳಿಗೆ ಶ್ರೀಮಠ, ಭಕ್ತರಿಂದ ಗುರುವಂದನೆ ಸಲ್ಲಿಸಲಾಯಿತು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೆಂಗಳೂರು ರಾಜ್ಯಾಧ್ಯಕ್ಷ ಶಂಕರ ಬಿದರಿ ನಿವೃತ್ತ ಡಿ.ಜಿ.ಪಿ. ಹಾಗೂ ಮಠಕ್ಕೆ 21 ಲಕ್ಷ ರೂ. ದೇಣಿಗೆ ನೀಡಿದ ಹಿರಿಯ ವಕೀಲ ಸಿದ್ದಲಿಂಗಪ್ಪ ದಂಪತಿಯನ್ನು ಸನ್ಮಾನಿಸಿ ಗೌರವಿಸಲಾಯಿತು. ಸುವರ್ಣಗಿರಿ ವಿರಕ್ತಮಠ ಯದ್ದಲದಿನ್ನಿ ಮಹಾಲಿಂಗ ಶ್ರೀಗಳು, ಕರೆಗುಡ್ಡ ಮಹಾಂತೇಶ್ವರ ಮಠದ ಮಹಾಂತಲಿಂಗ ಶ್ರೀಗಳು, ಸುವರ್ಣಗಿರಿ ವಿರಕ್ತಮಠ ಒಳ್ಳಬಳ್ಳಾರಿಯ ಕಿರಿಯ ಶ್ರೀ ಬಸವಲಿಂಗ ಶ್ರೀಗಳು, ಸುವರ್ಣಗಿರಿ ವಿರಕ್ತಮಠ ಅಡವಿ ಅಮರೇಶ್ವರ ಮಠದ ತೋಂಟದಾರ್ಯ ಶ್ರೀಗಳು, ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ, ಮಾಜಿ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ, ಮಾಜಿ ಜಿಪಂ ಅಧ್ಯಕ್ಷ ದೊಡ್ಡಬಸಪ್ಪಗೌಡ ಭೋಗವತಿ, ಭಕ್ತರು ಇದ್ದರು.



ಬಸವ ಜಯಂತಿ: ಸಾಮೂಹಿಕ ಇಷ್ಟಲಿಂಗ ಪೂಜೆ, ಲಿಂಗದೀಕ್ಷೆ

ಕಲಬುರಗಿ: ವಿಶ್ವಗುರು, ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ 893ನೇ ಜಯಂತಿ ಅಂಗವಾಗಿ ಬಸವ ಜಯಂತಿ ಉತ್ಸವ ಸಮಿತಿ 2026 ವತಿಯಿಂದ ನಗರದ ಮೂರು ದಿನ ವಿಶೇಷ ಉಪನ್ಯಾಸ ಕಾರ್ಯಕ್ರಮ, ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ಲಿಂಗದೀಕ್ಷೆ ಕಾರ್ಯಕ್ರಮ ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ, ಶಾಸಕ ಬಿ.ಆರ್.ಪಾಟೀಲ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸಮಿತಿಯ ಸರ್ವರೂ ಜಂಟಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ಏ.16,17,18ರಂದು ಮೂರು ದಿನ ನಡೆಯಲಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಶರಣಬಸವೇಶ್ವರರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ.ದಾಕ್ಷಾಯಿಣಿ ಎಸ್ ಅಪ್ಪ ಚಾಲನೆ ನೀಡಲಿದ್ದು, ಪೂಜ್ಯ ಪ್ರಭುಶ್ರೀ ಮಾತಾಜಿ ಅಕ್ಕಮಹಾದೇವಿ, ಗದ್ದುಗೆಮಠದ ಚರಲಿಂಗಶ್ರೀಗಳು, ಗುರುಮಿಠಕಲ್ ಶಾಂತವೀರ ಶಿವಾಚಾರ್ಯರು ಪ್ರತ್ಯೇಕವಾಗಿ ಆಯಾ ದಿನಾಂಕದಂದು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಹಲವು ಮಠಾಧೀಶರು, ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಏ.19ರಂದು ನಗರದ ಶರಣಬಸವೇಶ್ವರರ ಸಂಸ್ಥಾನದ ಅಖಿಲಭಾರತಶಿವಾನುಭವಮಂಟಪದಲ್ಲಿ ಬೆಳಿಗ್ಗೆ 6.30ಕ್ಕೆ ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ಲಿಂಗದೀಕ್ಷೆ ಕಾರ್ಯಕ್ರಮ ನಡೆಯಲಿದ್ದು, ಸಂಜೆ 5 ಗಂಟೆಗೆ ಜಾತ್ರಾ ಮೈದಾನದಲ್ಲಿ ಬಸವಾಭಿಮಾನಿಗಳ ಬೃಹತ್ ಬಹಿರಂಗ ಸಭೆ ಆರಂಭಗೊಳ್ಳಲಿದೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ, ಸಚಿವ ಈಶ್ವರ ಖಂಡ್ರೆ, ಹಲವು ಮಠಾಧೀಶರು, ಸಮಾಜದ ಗಣ್ಯರು ಭಾಗಿಯಾಗಲಿದ್ದಾರೆ.

ಏ.20ರಂದು ಬಸವೇಶ್ವರರ 893ನೇ ಜಯಂತಿ ಅಂಗವಾಗಿ ಬೆಳಿಗ್ಗೆ ಬಸವೇಶ್ವರರ ಆವರಣದಲ್ಲಿ ಷಟಸ್ಥಲ ಧ್ವಜಾರೋಹಣ, ಉಪನ್ಯಾಸ, ವಚನ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ,ರಕ್ತದಾನ ಶಿಬಿರ ಆಯೋಜಿಸಿದ್ದು, ಸಂಜೆ 4ಕ್ಕೆ ನಗರದಲ್ಲಿ ಬಸವಣ್ಣನವರ, ಕಾಯಕ ಶರಣರ ಭಾವಚಿತ್ರಗಳ ಭವ್ಯ ಸಾಂಸ್ಕೃತಿಕ ಮೆರವಣಿಗೆ, ಬೈಕ್ ರ್‍ಯಾಲಿ ನಡೆಯಲಿದೆ ಎಂದರು.

ಸಮಿತಿಯ ಸದಸ್ಯರಾದ ಶಾಸಕ ಅಲ್ಲಂಪ್ರಭು ಪಾಟೀಲ್, ಅಮರನಾಥ ಪಾಟೀಲ್, ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ಡಾ. ಭೀಮಾಶಂಕರ ಬಿಲಗುಂದಿ, ಆರ್.ಕೆ.ಹುಡುಗಿ,ಆರ್.ಜಿ.ಶೆಟಗಾರ್, ರಾಜಶೇಖರ್ ಸಿರಿ, ಶರಣಬಸಪ್ಪಾ ಭೂಸನೂರ, ರಾಜಶೇಖರ ಮಂಕಂಚಿ, ರಮೇಶ್ ಮರಗೋಳ, ಅಶೋಕ್ ಘೂಳಿ, ಸೋಮಶೇಖರ ಹಿರೇಮಠ, ಶಿವಾನಂದ ಧ್ಯಾಮಗೋಳ, ರುದ್ರಮುನಿ ಹಿರೇಮಠ, ಭೀಮಾಶಂಕರ ಮೀಟೆಕರ್, ಚನ್ನವೀರ ಡಿಗ್ಗಾವಿ, ಮುಖಂಡರು ಇದ್ದರು.



> **ನಾಳೆಯ ಏ.10ರಿಂದ ಕಲಬುರಗಿ ಜಿಲ್ಲೆಯಾದ್ಯಂತ ತಾಲೂಕುಗಳಿಗೆ ಭೇಟಿ ನೀಡಿ (ದಿನಕ್ಕೆ ಎರಡು ತಾಲೂಕು) ಸಮಿತಿ ಸರ್ವರೂ ಸಭೆ ನಡೆಸಲಿದ್ದೇವೆ. ಈಗಾಗಲೇ 3 ಹಂತದ ಸಭೆಗಳು ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಈ ಬಾರಿ ಯಾರ ಹತ್ತಿರವೂ ಹಣ ಸಂಗ್ರಹ ಮಾಡುತ್ತಿಲ್ಲ. ಸಮಾಜದ ಸರ್ವರೂ ಒಗ್ಗೂಡಿ ಬಸವಣ್ಣನವರ ಜಯಂತಿ ಆಚರಿಸಬೇಕಿದೆ.**
> **- ಬಿ.ಜಿ.ಪಾಟೀಲ್, ಕಾರ್ಯಾಧ್ಯಕ್ಷ,ಬಸವ ಜಯಂತಿ ಉತ್ಸವ ಸಮಿತಿ, ಎಂಎಲ್ಸಿ**

ಬಿಜೆಪಿ ಸಂಸ್ಥಾಪನಾ ದಿನ ಆಚರಣೆ

ಸಿಂಧನೂರು: ನಗರದ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಸೋಮವಾರ ಭಾರತೀಯ ಜನತಾ ಪಕ್ಷದ 46ನೇ ವರ್ಷದ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು.

ಈ ಆಚರಣೆಯ ಶುಭ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಹಿರಿಯ ಮುಖಂಡ ಕೆ.ಕರಿಯಪ್ಪ ನವರು ಭಾಗವಹಿಸಿ ಪಕ್ಷದ ಕಾರ್ಯಾಲಯದಲ್ಲಿ ಪಕ್ಷದ ಮುಖಂಡರೊಂದಿಗೆ ಬಾವುಟವನ್ನು ಧ್ವಜಾರೋಹಣ ಮಾಡಿ ಎಲ್ಲರಿಗೂ ಸಿಹಿ ಹಂಚಿ ಪ್ರತಿ ಮನೆ ಮೇಲೆ ಪಕ್ಷದ ಬಾವುಟ ಹಾರಿಸಬೇಕು ಎಂದು ಸೂಚಿಸುವ ಮೂಲಕ ಸಂಸ್ಥಾಪನಾ ದಿನಾಚರಣೆಯ ಆಚರಣೆಗೆ ಮತ್ತಷ್ಟು ಮೆರಗು ನೀಡಿದರು.

ಈ ವೇಳೆ ಬಿಜೆಪಿ ನಗರ ಮಂಡಲ ಅಧ್ಯಕ್ಷ ಸಿದ್ದರಾಮೇಶ ಮನ್ನಾಪುರು, ಗ್ರಾಮೀಣಮಂಡಲದ ಅಧ್ಯಕ್ಷ ಯಂಕೋಬನಾಯಕ ರಾಮತ್ನಾಳ, ಸಿರಾಜ್ ಪಾಷಾ, ಲಿಂಗರಾಜ ಹೂಗಾರ, ಶೈಲಜಾ ಷಡಕ್ಷರಪ್ಪ, ಮಹಿಳಾ ಅಧ್ಯಕ್ಷರಾದ ಮಹದಾನಂದ, ನಂದಿನಿ ಮೆರನಾಳ, ಯಮುನಮ್ಮ, ಸಿದ್ದಲಿಂಗಯ್ಯ ಸ್ವಾಮಿ, ಮಲ್ಲಿಕಾರ್ಜುನ ಕಾಟಗಲ್, ಪ್ರಧಾನ ಕಾರ್ಯದರ್ಶಿಗಳಾದ ರವಿ ಉಪ್ಪಾರ, ರವಿ ರಾಠೋಡ್, ಹೇಮನಗೌಡ ಹಾರಾಪುರ ಹಾಗೂ ಎಲ್ಲ ಮೋರ್ಚಾದ ಅಧ್ಯಕ್ಷರು ಜಿಲ್ಲಾ ಪದಾಧಿಕಾರಿಗಳು, ವಿವಿಧ ಸ್ಥಳದ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.



ಕನಿಷ್ಠ ವೇತನ ಪರಿಷ್ಕರಣೆಗೆ ಒತ್ತಾಯ



ಮಸ್ಕಿ: ರಾಜ್ಯ ಹಾಗೂ ದೇಶದಾದ್ಯಂತ ಕಾರ್ಮಿಕರ ಬದುಕು ಸಂಕಷ್ಟಕ್ಕೀಡಾಗಿರುವ ಹಿನ್ನೆಲೆಯಲ್ಲಿ ಕನಿಷ್ಠ ವೇತನವನ್ನು ತಕ್ಷಣ ಪರಿಷ್ಕರಿಸಿ ತಿಂಗಳಿಗೆ ಕನಿಷ್ಠ 42,000 ನಿಗದಿ ಮಾಡುವಂತೆ ಆಗ್ರಹಿಸಿ ಎಐಸಿಸಿಟಿಯು ಮಸ್ಕಿ ತಾಲೂಕ ಸಮಿತಿಯಿಂದ ಡಾ. ಬಿಆರ್ ಅಂಬೇಡ್ಕರ್ ಪುತ್ಥಳಿ ಮುಂಭಾಗದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರವು 2025ರ ನವೆಂಬರ್ 21ರಿಂದ ಜಾರಿಗೆ ತಂದ ನಾಲ್ಕು ಕಾರ್ಮಿಕ ಸಂಹಿತೆಗಳು ದಶಕಗಳ ಹೋರಾಟದ ಮೂಲಕ ಕಾರ್ಮಿಕರು ಪಡೆದುಕೊಂಡ ಹಕ್ಕುಗಳನ್ನು ದುರ್ಬಲಗೊಳಿಸುತ್ತಿವೆ ಎಂದು ಆರೋಪಿಸಿದರು.

ಕಾರ್ಮಿಕ ವಿರೋಧಿ ಸಂಹಿತೆಗಳನ್ನು ತಕ್ಷಣ ರದ್ದುಪಡಿಸಬೇಕು. ಕನಿಷ್ಠ ವೇತನವನ್ನು ರೂ. 42,000ಕ್ಕೆ ನಿಗದಿ ಮಾಡಬೇಕು. ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಾದ ಅನುಷ್ಠಾನ ಖಚಿತಪಡಿಸಬೇಕು. ಕಾರ್ಮಿಕ ವರ್ಗವು ಒಗ್ಗೂಡಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಎಐಸಿಸಿಟಿಯು ಮುಖಂಡ ಆರ್.ಎಚ್.ಕಲಮಂಗಿ, ಅಧ್ಯಕ್ಷರಾದ ಮುಹಮ್ಮದ್ ಸಾಬ್, ಹನುಮಂತ, ರಫಿ, ಹನುಮಂತಪ್ಪ ವೆಂಕಟಾಪುರ, ಲಿಂಗನಗೌಡ, ಚಂದ್‌ಸಾಬ್, ಹನುಮಂತ ಡ್ರೈವರ್, ನವೀನ್ ನಾಗರಾಜ್, ಮುದಕಪ್ಪ, ಯಮನಪ್ಪ ಮುರಾರಿ, ಯಂಕಪ್ಪ ಸೇರಿದಂತೆ ಇನ್ನಿತರರಿದ್ದರು.

ಕಿರುಸುದ್ದಿ

ಡಿಎಚ್‌ಒ ಶಂಕರ್ ನಾಯ್ಕ ವರ್ಗಾವಣೆ



◆**ವಿಜಯನಗರ:** ಮುಂದಿನ ಸ್ಥಳವನ್ನೂ ಸೂಚಿಸಿದೇ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಲ್.ಆರ್.ಶಂಕರ್ ನಾಯ್ಕ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ ಆರೋಗ್ಯ ಇಲಾಖೆಯ ಆಯುಕ್ತರು ಬುಧವಾರ ಆದೇಶಿಸಿದ್ದಾರೆ. ತೆರವಾದ ಡಿಎಚ್‌ಒ ಹುದ್ದೆಯನ್ನು ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ಎಂ.ವಿನಯ್ ಅವರಿಗೆ ಹೆಚ್ಚುವರಿ ಪ್ರಭಾರವಹಿಸಲಾಗಿದೆ. ಮುಂದಿನ ಸ್ಥಳ ನಿಯುಕ್ತಿಗಾಗಿ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಆಯುಕ್ತರ ಕಚೇರಿಗೆ ವರದಿ ಮಾಡಿಕೊಳ್ಳುವಂತೆ ಡಾ.ಎಲ್.ಆರ್. ಶಂಕರ್ ನಾಯ್ಕ್ ಅವರಿಗೆ ಆದೇಶ ಪತ್ರದಲ್ಲಿ ಸೂಚಿಸಿದ್ದರೆ. ಕಳೆದ ಎರಡೂ ವರ್ಷಗಳ ಕಾಲ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿದ್ದ ಡಾ.ಎಲ್.ಆರ್. ಶಂಕರ್ ನಾಯ್ಕ್ ನೇತೃತ್ವದಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಸಾಕಷ್ಟು ಸುಧಾರಣೆಗೊಂಡಿತ್ತು. ಆದರೆ, ಇತ್ತೀಚಿನ ಕೆಲ ಬೆಳವಣಿಗೆಗಳಿಂದಾಗಿ ಡಾ.ಶಂಕರ್ ನಾಯ್ಕ ವರ್ಗಾವಣೆ ಸಾರ್ವಜನಿಕರಲ್ಲಿ ಚರ್ಚೆಗೆ ಬಂದಿವೆ.

ವ್ಯಕ್ತಿತ್ವ ವಿಕಸನಕ್ಕೆ ಬೇಸಿಗೆ ಶಿಬಿರ ಉತ್ತಮ ವೇದಿಕೆ

◆**ಸಿರುಗುಪ್ಪ:** ಮಕ್ಕಳಿಗೆ ಬೇಸಿಗೆ ರಜೆಯಲ್ಲಿ ಹೊಸ ಕೌಶಲ್ಯಗಳನ್ನು ಕಲಿಯಲು, ವ್ಯಕ್ತಿತ್ವ ವಿಕಸನಕ್ಕೆ ಮತ್ತು ಸೃಜನಶೀಲತೆಯನ್ನು ಹೆಚ್ಚಿಸಲು ಒಂದು ಉತ್ತಮ ವೇದಿಕೆಯೇ ಬೇಸಿಗೆ ಶಿಬಿರವಾಗಿದೆ ಎಂದು ನೇಹ ರಂಗದ ಅಧ್ಯಕ್ಷ ಆರ್.ಸದಾಶಿವ ಹೇಳಿದರು. ನಗರದ ಅಮೃತೇಶ್ವರ ದೇವಸ್ಥಾನದಲ್ಲಿ ನೇಹ ರಂಗ ಕಲಾ ತಂಡದಿಂದ ಬೇಸಿಗೆ ಶಿಬಿರ ಉದ್ಘಾಟಿಸಿ ಮಾತನಾಡಿ, ಮಕ್ಕಳಿಗೆ ಬೇಸಿಗೆ ರಜೆಯಲ್ಲಿ ಹೊಸ ಕೌಶಲ್ಯಗಳನ್ನು ಕಲಿಯಲು, ವ್ಯಕ್ತಿತ್ವ ವಿಕಸನಕ್ಕೆ ಮತ್ತು ಸೃಜನಶೀಲತೆಯನ್ನು ಹೆಚ್ಚಿಸಲು ಈ ಶಿಬಿರದಲ್ಲಿ ನೃತ್ಯ, ಸಂಗೀತ, ಕಲೆ, ಯೋಗ, ಮತ್ತು ರಂಗಭೂಮಿ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಗೆ ನೆರವಾಗುತ್ತವೆ, ಜೊತೆಗೆ ಹೊಸ ಸ್ನೇಹಿತರನ್ನು ಮಾಡಲು ಸಹಾಯ ಮಾಡುತ್ತವೆ. ಆಸಕ್ತ ಪೋಷಕರ ಪ್ರೋತ್ಸಾಹದಿಂದ ಒಂದು ತಿಂಗಳ ಕಾಲ ಬೇಸಿಗೆ ರಜೆಯ ಅವಧಿಯ ನಾಟಕ ಶಿಬಿರ ಆಯೋಜಿಸಲಾಗಿದೆ ಎಂದರು. ಹಾಸ್ಯ ಕಲಾವಿದ ಜಿ.ನರಸಿಂಹಮೂರ್ತಿ, ಕಾರ್ಯದರ್ಶಿ ನಿವೃತ್ತ ಶಿಕ್ಷಕ ವೆಂಕಟೇಶ, ಶಿಕ್ಷಕರಾದ ಮಾರುತಿ, ಶ್ರೀನಾಥ್, ಬಸಮ್ಮ, ಗೀತಾ, ಮಂಜುಳ, ಮುಖಂಡರಾದ ಅಮೀತ್, ಚೆನ್ನಬಸವ, ಎ.ಜಿ. ಮಂಜುನಾಥ ಇದ್ದರು.

ಬ್ಯಾಂಕ್‌ಗಳ ನಿರ್ಲಕ್ಷ್ಯ: ಕ್ರಮಕ್ಕೆ ಒತ್ತಾಯ

◆**ಬೀದರ:** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಉದ್ಯಮ ಶೀಲತಾ ಮತ್ತು ಸ್ವಾವಲಂಬಿ ಸಾರಥಿ ಯೋಜನೆಯಡಿ 2022 ರಿಂದ 2026 ರವರೆಗೆ ಆಯ್ಕೆಯಾದ ಫಲಾನುಭವಿಗಳಿಗೆ ಬ್ಯಾಂಕ್ ಕ್ಲೇಮು ಪತ್ರ ನೀಡುವಲ್ಲಿ ಬೀದರ ಜಿಲ್ಲೆಯ ಬ್ಯಾಂಕ್‌ಗಳು ನಿರ್ಲಕ್ಷ್ಯ ತೋರುತ್ತಿವೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಜಿಲ್ಲಾ ಭೋವಿ ವಡ್ಡರ ಸಮಾಜ ಸಂಘ ಜಿಲ್ಲಾ ಸಮಿತಿ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾದ ಮನವಿ ಪತ್ರದಲ್ಲಿ ಆಯ್ಕೆಯಾದ ಫಲಾನುಭವಿಗಳು ಸಂಬಂಧಪಟ್ಟ ಬ್ಯಾಂಕ್ ಶಾಖಾ ವ್ಯವಸ್ಥಾಪಕರನ್ನು ಅನೇಕ ಬಾರಿ ಸಂಪರ್ಕಿಸಿದರೂ, ಕ್ಲೇಮು ಪತ್ರ ನೀಡುವ ವಿಷಯದಲ್ಲಿ ಯಾವುದೇ ಸ್ಪಂದನೆ ದೊರೆಯುತ್ತಿಲ್ಲ ಎಂದು ತಿಳಿಸಲಾಗಿದೆ. ಇದರಿಂದ ಸರ್ಕಾರದ ಯೋಜನೆಗಳ ಲಾಭವನ್ನು ಪಡೆಯಬೇಕಾದ ಫಲಾನುಭವಿಗಳು ಅನಾವಶ್ಯಕ ವಿಳಂಬ ಮತ್ತು ತೊಂದರೆಗಳನ್ನು ಅನುಭವಿಸುತ್ತಿದ್ದು, ಹಲವರು ಯೋಜನೆಯ ಪ್ರಯೋಜನಗಳಿಂದ ವಂಚಿತರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ಜಿಲ್ಲೆಯ ಹಲವು ಬ್ಯಾಂಕ್ ಶಾಖೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಹೊರ ರಾಜ್ಯಗಳಿಂದ ಆಗಮಿಸಿರುವುದರಿಂದ ಸ್ಥಳೀಯ ಭಾಷೆ ಕನ್ನಡವನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲಾಗುತ್ತಿಲ್ಲ, ಇದರಿಂದ ಸ್ಥಳೀಯ ಫಲಾನುಭವಿಗಳೊಂದಿಗೆ ಸಂವಹನದಲ್ಲಿ ಸಮಸ್ಯೆಗಳು ಉಂಟಾಗುತ್ತಿದ್ದು, ಸಮಸ್ಯೆಗಳ ಪರಿಹಾರ ಇನ್ನಷ್ಟು ವಿಳಂಬವಾಗುತ್ತಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರದ ಉದ್ದೇಶಿತ ಯೋಜನೆಗಳ ಲಾಭವನ್ನು ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಿಸಲು ಬ್ಯಾಂಕ್‌ಗಳು ಕ್ಲೇಮು ಪತ್ರಗಳನ್ನು ನೀಡುವುದು ಅತ್ಯಾವಶ್ಯಕವಾಗಿದೆ. ಈ ಹಿನ್ನೆಲೆ, ಜಿಲ್ಲೆಯ ಎಲ್ಲಾ ಬ್ಯಾಂಕ್‌ಗಳಿಗೆ ಸೂಕ್ತ ನಿರ್ದೇಶನ ನೀಡಿ, ಆಯ್ಕೆಯಾದ ಫಲಾನುಭವಿಗಳಿಗೆ ತಕ್ಷಣ ಕ್ಲೇಮು ಪತ್ರಗಳನ್ನು ನೀಡುವಂತೆ ಕ್ರಮ ಕೈಗೊಳ್ಳಬೇಕು. ಜೊತೆಗೆ, ನಿರ್ಲಕ್ಷ್ಯ ತೋರಿದ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕು ಎಂದು ಸಂಘದ ಜಿಲ್ಲಾಧ್ಯಕ್ಷ ಸಂತೋಷ ಎಣಕೂರ ಮನವಿ ಮಾಡಿದ್ದಾರೆ.



ಸಿರುಗುಪ್ಪ : ನಗರದ ಟಿ.ಎಚ್.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಸರ್ಕಾರಿ ಸಾರ್ವಜನಿಕ ರಾಷ್ಟ್ರೀಯ ಬಾಯಿ ಆರೋಗ್ಯ ಕಾರ್ಯಕ್ರಮದಡಿ ಹಮ್ಮಿಕೊಂಡಿದ್ದ ಉಚಿತ ದಂತ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ನಡೆಯಿತು. ತಾಲೂಕು ಸಾರ್ವಜನಿಕ ಆಸ್ಪತ್ರೆಯ ದಂತ ವೈದ್ಯ ಡಾ.ಪವನ್ ವರ್ಮ ಎಂ.ಡಿ.ಎಸ್., ದಂತ ವೈದ್ಯೆ ಸ್ವಾತಿ, ಆರೋಗ್ಯ ಕಾರ್ಯಕ್ರಮದ ಆಪ್ತ ಸಮಾಲೋಚಕ ಮಲ್ಲೇಶಪ್ಪ, ಸಹಾಯಕ ಪ್ರಾಧ್ಯಪಕ ಡಾ.ಕೆ. ಎಂ.ಚಂದ್ರಕಾಂತ ಇದ್ದರು.

ಕಾಂಗ್ರೆಸ್ ವಿರುದ್ಧ ಠಾಕೂರ್ ಆಕ್ರೋಶ

◆**ಬೀದರ್:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್ ಹಾಗೂ ಅದರ ನಾಯಕರಿಗಿಲ್ಲ. ಕಳೆದ ದಿವಸ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಾರ್ವಜನಿಕ ಸಭೆಯ ವೇಳೆ ಮಾತನಾಡುವಾಗ ಆರ್.ಎಸ್.ಎಸ್ ಸಂಘಟನೆಯನ್ನು ಹಾವು ಅದನ್ನು ಕೊಲ್ಲದಿದ್ದರೆ ನೀವು ಬದುಕಲು ಸಾಧ್ಯವಿಲ್ಲ ಎಂದು ಹೇಳಿ ಸ್ವತಃ ತಾವೇ ವಿಷಕಾರಿರುವ ಅವರಮನಸ್ಥಿತಿ ವಿಷಮಯವಾಗಿದೆ. ಕಾಂಗ್ರೆಸ್ ಕಾಗೆಯ ಹಾಗಿದೆ ಮನಸ್ಥಿತಿಯೂ ಕಪ್ಪು, ಮಾಡುವ ಕಾರ್ಯವೂ ಕಪ್ಪು, ಹೊರಗೂ ಕಪ್ಪು ಒಳಗೂ ಕಪ್ಪು, ಇಂಥವರ ನೇತೃತ್ವದಲ್ಲಿ ಕಾರ್ಯಕರ್ತರು ಸಹ ಕಾಗೆಯಂತಾಗಿದ್ದಾರೆ. ದೇಶದ ಅಸ್ಮಿತೆ ಕಾಪಾಡುವಲ್ಲಿ ಹಾಗೂ ಸದಾ ಸಾಮಾಜಿಕ ಸಮಾನತೆ ಮತ್ತು ಏಳಿಗೆಗಾಗಿ ನಿಸ್ವಾರ್ಥ ಭಾವದಿಂದ ಸೇವೆ ಸಲ್ಲಿಸುತ್ತಿರುವ ಸಂಘಟನೆ ಎಂದರೆ ಅದು ರಾಷ್ಟ್ರೀಯ ಸ್ವಯಂಸೇವಕ ಸಂಘ, ಸಂಘ ಎಂದಿಗೂ ಮತ ಕೇಳಲು ಹೋಗಿ ರಾಜಕೀಯ ಮಾಡಿಲ್ಲ, ಮಾಡುವುದು ಇಲ್ಲ, ಸದಾ ದೇಶವನ್ನು ಸುಭದ್ರಗೊಳಿಸುವ ಕಾರ್ಯದಲ್ಲಿ ನಿರತರಾಗಿರುವ ಸಂಘಟನೆಯ ಬಗ್ಗೆ ತುಚ್ಛವಾಗಿ ಮಾತನಾಡುವ ಮುನ್ನ ಕಾಂಗ್ರೆಸ್ ಕಾರ್ಯಕರ್ತರು, ಆ ಪಕ್ಷದ ನಾಯಕರು ನಾಲಿಗೆ ಮೇಲೆ ಹಿಡಿತ ಇರಲಿ. ಮುಂಬರುವ ಐದು ರಾಜ್ಯಗಳ ಚುನಾವಣೆಯಲ್ಲಿ ಸೋಲಿನ ಹತಾಶೆಯಿಂದ ಅವರು ಈ ರೀತಿ ನಕಾರಾತ್ಮಕ ಹೇಳಿಕೆಗಳಿಂದ ಸಮಾಜದಲ್ಲಿ ಸಾಮರಸ್ಯ ಕದಡುವ ಪ್ರಯತ್ನಿಸುತ್ತಿರುವುದು ರಾಷ್ಟ್ರೀಯ ಪಕ್ಷದ ಅಧ್ಯಕ್ಷರಿಗೆ ಶೋಭೆ ತರಲ್ಲ ಎಂದು ಬಿಜೆಪಿ ಹಿರಿಯ ಮುಖಂಡ ಈಶ್ವರ ಸಿಂಗ್ ಠಾಕೂರ್ ಹೊಸ ದಿಗಂತಕ್ಕೆ ಮಾತನಾಡಿ ಪ್ರತಿಕ್ರಿಯಿಸಿದರು.



ಸಿರುಗುಪ್ಪ: ನಗರದ ಅಮೃತೇಶ್ವರ ದೇವಸ್ಥಾನದಲ್ಲಿ ನೇಹ ರಂಗ ಕಲಾ ತಂಡದಿಂದ ಬುಧವಾರ ಬೇಸಿಗೆ ಶಿಬಿರ ನಡೆಯಿತು. ನೇಹ ರಂಗದ ಅಧ್ಯಕ್ಷ ಆರ್.ಸದಾಶಿವ, ಹಾಸ್ಯ ಕಲಾವಿದ ಜಿ.ನರಸಿಂಹಮೂರ್ತಿ, ಕಾರ್ಯದರ್ಶಿ ನಿವೃತ್ತ ಶಿಕ್ಷಕ ವೆಂಕಟೇಶ, ಶಿಕ್ಷಕರಾದ ಮಾರುತಿ, ಶ್ರೀನಾಥ್, ಬಸಮ್ಮ, ಗೀತಾ, ಮಂಜುಳ, ಮುಖಂಡರಾದ ಅಮೀತ್, ಚೆನ್ನಬಸವ, ಎ.ಜಿ.ಮಂಜುನಾಥ ಇದ್ದರು.

ಬಳ್ಳಾರಿ ಜಿಲ್ಲೆಯಲ್ಲಿ 2,591 ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ಲಸಿಕೆ: ಡಾ.ಹನುಮಂತಪ್ಪ

◆**ಬಳ್ಳಾರಿ:** ಜಿಲ್ಲೆಯಲ್ಲಿ 14 ವರ್ಷದ ಹೆಣ್ಣು ಮಕ್ಕಳಲ್ಲಿ ಇಲ್ಲಿವರೆಗೆ 2,591 ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮ ವೈರಸ್) ಲಸಿಕೆ ನೀಡಲಾಗಿದೆ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ ತಿಳಿಸಿದರು.



ಈ ಕುರಿತು ಹೇಳಿಕೆ ನೀಡಿದ ಅವರು, ಜಿಲ್ಲೆಯ 16,49,492 ಒಟ್ಟು ಜನಸಂಖ್ಯೆಯಲ್ಲಿ ಶೇ.1 ರಷ್ಟು 14 ವರ್ಷದ ಹೆಣ್ಣು ಮಕ್ಕಳು ಅಂದರೆ 16,495 ಹೆಣ್ಣು ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿತ್ತು. ಇಲ್ಲಿವರೆಗೆ ಒಟ್ಟು 2,591 ಹೆಣ್ಣು ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಯಾರಿಗೂ ಯಾವುದೇ ರೀತಿಯ ಅಡ್ಡ ಪರಿಣಾಮ ಬೀರಿಲ್ಲ ಎಂದು ಅವರು ಹೇಳಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಕೆಲವೊಂದು ತಪ್ಪು ಮಾಹಿತಿ ಪ್ರಸಾರವಾಗುತ್ತಿರುವುದು ಕಂಡುಬರುತ್ತಿದ್ದು, ಈ ಕುರಿತು ಪಾಲಕರು ಕಿವಿಕೊಡದೇ ತಮ್ಮ 14 ವರ್ಷದ ಹೆಣ್ಣು ಮಕ್ಕಳ ಉತ್ತಮ ಆರೋಗ್ಯಕ್ಕೆ ಹೆಚ್.ಪಿ.ವಿ ಲಸಿಕೆಯನ್ನು ತಪ್ಪದೇ ಹಾಕಿಸಬೇಕು ಎಂದು ಮನವಿ ಮಾಡಿದ್ದಾರೆ.

ಈ ಲಸಿಕಾ ಕಾರ್ಯಕ್ರಮ ಈಗಾಗಲೇ ಮಾ. 11 ರಿಂದ ಆರಂಭವಾಗಿದ್ದು, 90 ದಿನಗಳವರೆಗೆ ಮುಂದುವರೆಯಲಿದೆ. 14 ವರ್ಷದ ಎಲ್ಲಾ ಹೆಣ್ಣು ಮಕ್ಕಳು ಈ ಹೆಚ್‌ಪಿವಿ ಲಸಿಕೆ ಪಡೆಯಲು ಅರ್ಹರಿರುತ್ತಾರೆ. ಲಸಿಕೆ ಪಡೆಯುವುದರಿಂದ ಗರ್ಭಕಂಠದ ಕ್ಯಾನ್ಸರ್ ನ್ನು ಶೇ.99 ರಷ್ಟು ತಡೆಗಟ್ಟಬಹುದಾಗಿದೆ. ಹಾಗಾಗಿ ಲಸಿಕೆ ಪಡೆಯಲು ಬರುವ ಫಲಾನುಭವಿಗಳು ಸೂಕ್ತ ಗುರುತಿನ ಚೀಟಿ (ಜನನ ಪ್ರಮಾಣ ಪತ್ರ) ಯೊಂದಿಗೆ ಕಡ್ಡಾಯವಾಗಿ ಪೋಷಕರನ್ನು ಜೊತೆಯಲ್ಲಿ ಕರೆದುಕೊಂಡು ಬರಬೇಕು. ಕ್ಯಾನ್ಸರ್ ಮುಕ್ತ ನಾಳೆಗಾಗಿ ಇಂದೆ ಇರಲಿ ಲಸಿಕೆಯ ಸುರಕ್ಷೆ ಎಂದು ತಿಳಿಸಿದ್ದಾರೆ.

'ಹೆಣ್ಣು ಮಕ್ಕಳ ಜೀವನದಲ್ಲಿ ಗಂಭೀರ ಆರೋಗ್ಯ ಸಮಸ್ಯೆಯನ್ನುಂಟು ಮಾಡುವ ಗರ್ಭಕಂಠದ ಕ್ಯಾನ್ಸರ್ ತಡೆಗೆ 14 ವರ್ಷದ ಹೆಣ್ಣು ಮಕ್ಕಳಿಗೆ ಜಿಲ್ಲೆಯಲ್ಲಿ ಉಚಿತ ಹೆಚ್.ಪಿ.ವಿ 'ಹ್ಯೂಮನ್ ಪ್ಯಾಪಿಲೋಮ ವೈರಸ್' ವಿರುದ್ಧದ ಲಸಿಕೆ ಹಾಕಲಾಗುತ್ತಿದ್ದು, ಪಾಲಕರು ತಮ್ಮ ಮಕ್ಕಳಿಗೆ ತಪ್ಪದೇ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಲಸಿಕೆ ಹಾಕಿಸಬೇಕು' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಸಹ ಕೋರಿದ್ದಾರೆ.

ಸಾಮಾನ್ಯವಾಗಿ ವೈಯಕ್ತಿಕ ಶುಚಿತ್ವ, ಜನನಾಂಗಗಳಲ್ಲಿ ತೊಂದರೆ, ಹುಣ್ಣು ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುವ ಹ್ಯೂಮನ್ ಪ್ಯಾಪಿಲೋಮ ವೈರಸ್ (ಹೆಚ್.ಪಿ.ವಿ) ಸೋಂಕು ಕ್ರಮೇಣ ಗರ್ಭಕಂಠದ ಜೀವಕೋಶಗಳಲ್ಲಿ ಬದಲಾವಣೆಗಳಾಗಿ ಕ್ಯಾನ್ಸರ್ ಆಗಿ ಬದಲಾಗುವ ಸಂಭವವಿರುತ್ತದೆ. ಈ ಹಿನ್ನಲೆಯಲ್ಲಿ ಆರೋಗ್ಯಕ್ಕೆ ಮಾರಕವಾಗುವ ರೋಗ ತಡೆಯಲು ಹೆಚ್.ಪಿ.ವಿ ಲಸಿಕೆಯನ್ನು ಮಾರ್ಗಸೂಚಿಯಡಿ 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಹಾಕಲಾಗುತ್ತಿದ್ದು, ಇದರ ಸದುಪಯೋಗ ಪಡೆದುಕೊಳ್ಳಲು ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಅಕ್ರಮ ರಾಗಿ ಲೋಡ್: ಕಣ್ಮುಚ್ಚಿ ಕುಳಿತ ಇಲಾಖೆ



◆**ಕೊಟ್ಟೂರು:** ಸರ್ಕಾರ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಪ್ರತಿ ಕ್ವಿಂಟಾಲ್ ರಾಗಿಗೆ 4,886 ರೂ ರೂ.ಗಳ ನಿಗದಿ ಪಡಿಸಿದ್ದು, ನೋಂದಾಯಿತ ರೈತರಿಂದ ನೇರವಾಗಿ ಖರೀದಿ ನಡೆಯುತ್ತಿದೆ. ರಾಗಿ ಖರೀದಿ ಕೇಂದ್ರವನ್ನು ಸರ್ಕಾರವು ಸ್ಥಳವನ್ನು ನಿಗದಿಪಡಿಸಿದ್ದು ಆಯಾ ತಾಲೂಕು ಎಪಿಎಂಸಿ ಹಾಗೂ ರೈತ ಸಂಪರ್ಕ ಕೇಂದ್ರದಲ್ಲಿ ರಾಗಿ ಖರೀದಿ ಕೇಂದ್ರ ಖರೀದಿಸಬೇಕೆಂದು ಸರ್ಕಾರವು ಆದೇಶಿಸಿದೆ.

ಕೊಟ್ಟೂರು ಪಟ್ಟಣದಲ್ಲಿ ಖರೀದಿ ಕೇಂದ್ರವನ್ನು ಎಪಿಎಂಸಿ ಆವರಣದಲ್ಲಿ ಸ್ಥಳವನ್ನು ನಿಗದಿಪಡಿಸಿದ್ದು ನೋಂದಾಯಿಸಿದ ರೈತರು ತಮ್ಮ ರಾಗಿಯನ್ನು ನಿಗದಿ ಪಡಿಸಿದ ಸ್ಥಳದಲ್ಲಿ ತಂದು ಮಾರಾಟ ಮಾಡುತ್ತಿದ್ದಾರೆ. ಸರಿಯಾದ ಸಮಯಕ್ಕೆ ತೂಕ ನಡೆಯದೆ ವಿಳಂಬವಾಗುತ್ತಿದ್ದು, ನೊಂದಾಯಿಸಿದ ರೈತರು ಟ್ರಾಕ್ಟರ್, ವಾಹನಗಳಲ್ಲಿ ರಾಗಿಯನ್ನು ತುಂಬಿಕೊಂಡು ಹಗಲು ರಾತ್ರಿ ಮಳೆ ಚಳಿ ಎನ್ನದೆ ರಾಗಿ ಮಾರಾಟ ಮಾಡಲು ಸರತಿ ಸಾಲಿನಲ್ಲಿ ನಿಂತು ಕಾಯುತ್ತಿದ್ದಾರೆ. ಸರಿಯಾದ ಸಮಯಕ್ಕೆ ತೂಕ ಆಗದೆ ರೈತರು ಪರದಾಡುತ್ತಿದ್ದಾರೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸುವಂತೆ ಅನ್ನದಾತರ ಕೋರಿಕೆ.

ಆದರೆ ಕೊಟ್ಟೂರಿನ ಪಟ್ಟಣದ ಹಗರಿಬೊಮ್ಮನಹಳ್ಳಿ ರಸ್ತೆಯಲ್ಲಿ ಶನಿವಾರ ಖಾಸಗಿ ಸೈಟಿನಲ್ಲಿ ಟ್ರಾಕ್ಟರ್‌ನಲ್ಲಿ ರಾಗಿಯನ್ನು ತುಂಬಿ ಲಾರಿಗೆ ಲೋಡ್ ಮಾಡುತ್ತಿದ್ದಾರೆ. ಸರ್ಕಾರವು ರಾಗಿ ಖರೀದಿ ಕೇಂದ್ರವನ್ನು ಸ್ಥಳವನ್ನು ಗುರುತಿಸಿದರು ಆದರೆ ಕೆಲವು ಏಜೆನ್ಸಿಗಳು ಸರ್ಕಾರದ ಆದೇಶವನ್ನು ಗಾಳಿಗೆ ತೂರಿ ತಮಗೆ ಇಷ್ಟ ಬಂದಂತೆ ರೀತಿಯಲ್ಲಿ ರಾಗಿ ಖರೀದಿಸುತ್ತಿದ್ದಾರೆ. ಕೆಲವರ ರಾಜ್ಯಗಳಿಂದ ರಾಗಿಯನ್ನು ತಂದು ಸರ್ಕಾರಕ್ಕೆ

ಮಾರಾಟ ಮಾಡುತ್ತಿದ್ದಾರೆ ಇದರ ಬಗ್ಗೆ ಸೂಕ್ತ ತನಿಖೆ ನಡೆಸಬೇಕೆಂದು ಭಾರತೀಯ ಕಮ್ಯುನಿಸ್ಟ್ ಪಕ್ಷದ ಕೊಟ್ಟೂರು ತಾಲೂಕು ಕಾರ್ಯದರ್ಶಿಯಾದ ಕೆ. ರೇಣುಕಮ್ಮ ಆಗ್ರಹಿಸಿದರು.

> **ಅಕ್ರಮವಾಗಿ ನಡೆಸಿರುವ ರಾಗಿ ಲೋಡಿನಲ್ಲಿ ಸೂಕ್ತ ತನಿಖೆ ನಡೆಸಬೇಕು. ಇಲ್ಲವಾದಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತದೆ.**
> ■ ದಲಿತ ಸಂಘಟನೆಗಳು

> **ಸರ್ಕಾರವು ನಿಗದಿಗೊಳಿಸಿದ ಸ್ಥಳದಲ್ಲೇ ರೈತರ ರಾಗಿ ಖರೀದಿಸಬೇಕು ಎಂಬ ಸರ್ಕಾರದ ಆದೇಶವಿದೆ. ಬೇರೆ ಸ್ಥಳದಲ್ಲಿ ರಾಗಿಯನ್ನು ಖರೀದಿಸಿದರೆ ಸರ್ಕಾರವು ತೆಗೆದುಕೊಳ್ಳುವುದಿಲ್ಲ ಮತ್ತು ಆ ಏಜೆನ್ಸಿ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.**
> ■ ಗುರುರಾಜ್, ಜಿಲ್ಲಾ ಆಹಾರ ಇಲಾಖೆ ಮ್ಯಾನೇಜರ್, ವಿಜಯನಗರ ಜಿಲ್ಲೆ

ಹಡಪದ ಅಪ್ಪಣ್ಣ ಮೂರ್ತಿ ಪುನಃ ಪ್ರತಿಷ್ಠಾಪನೆಗೆ ಒತ್ತಾಯ

◆**ಹಗರಿಬೊಮ್ಮನಹಳ್ಳಿ;** ಬಸವಕಲ್ಯಾಣದಲ್ಲಿ ಬೇರೆ ಬೇರೆ ಶರಣರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿದಂತೆ ಹಡಪದ ಅಪ್ಪಣ್ಣನವರ ಮೂರ್ತಿಯನ್ನು ಪುನಃ ಪ್ರತಿಷ್ಠಾಪನೆ ಮಾಡುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು. ಇಲ್ಲಿನ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯವರು ಹಡಪದ ಅಪ್ಪಣ್ಣ ಅವರ ಅರಿವಿನ ಗವಿಯನ್ನು ಅಕ್ರಮವಾಗಿ ಹಸ್ತಕ್ಷೇಪ ಮಾಡಿರುವುದು ಅನ್ಯ ಶರಣರ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವುದು ಹಡಪದ ಅಪ್ಪಣ್ಣ ಅರಿವಿನ ಗವಿಯ ಮುಂದಿನ ನಾಮಫಲಕವನ್ನು ಕಿತ್ತು ಹಾಕಿರುವುದು ಖೇದನೀಯ ಸಮಾಜದ ಭಕ್ತರ ಭಾವನೆಗಳಿಗೆ ದಕ್ಕೆಯನ್ನುಂಟು ಮಾಡಿದೆ ಎಂದು ಆರೋಪಿಸಿ ಇತರ ಶರಣರಂತೆ ಹಡಪದ ಅಪ್ಪಣ್ಣ ಅವರ ಮೂರ್ತಿಯನ್ನು ಪುನಃ ಪ್ರತಿಷ್ಠಾಪಿಸುವಂತೆ ಒತ್ತಾಯಿಸಿ ಉಪ ತಹಶೀಲ್ದಾರ್ ಶಿವಕುಮಾರ್ ಗೌಡಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಹಡಪದ ಸಮಾಜದ ತಾಲೂಕ ಗೌರವಾಧ್ಯಕ್ಷ ಹೆಚ್. ನಿಂಗಪ್ಪ ಗದ್ದಿಕೇರಿ, ಅಧ್ಯಕ್ಷ ಮಂಜುನಾಥ ಬ್ಯಾಲಾಳು, ಉಪಾಧ್ಯಕ್ಷ ಎಚ್. ವೀರೇಶ್ ತಂಬ್ರಹಳ್ಳಿ, ಕಾರ್ಯದರ್ಶಿ ಕೆ ಹಾಲೇಶ್ ಚಿಲ್ಗೋಡು, ಖಜಂಚಿ ಹೆಚ್ ಉಜಿಲಪ್ಪ ಅಂಕಸಮುದ್ರ ಸಮಾಜದ ಮುಖಂಡರು ಹಿರಿಯರು ಯುವಕರು ಪಾಲ್ಗೊಂಡಿದ್ದರು.

ಹಡಪದ ಅಪ್ಪಣ್ಣ ಮೂರ್ತಿ ಪುನಃ ಸ್ಥಾಪಿಸಿ: ಶಿವಕುಮಾರ್

◆**ಬಳ್ಳಾರಿ:** ವೊದಲಿನಂತೆ ಅರುವಿನ ಗವಿಯಲ್ಲಿ ಶಿವಶರಣ ಹಡಪದ ಅಪ್ಪಣ್ಣನವರ ಮೂರ್ತಿಯನ್ನು ಪುನಃ ಯಥವತ್ತಾಗಿ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಹಡಪದ ಅಪ್ಪಣ್ಣ ಸಮಾಜ ಬಾಂಧವರು ಜಿಲ್ಲಾಧಿಕಾರಿಗಳವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಶಿವಶರಣ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಹೆಚ್. ಶಶಿಕುಮಾರ್ ಮಾತನಾಡಿ, ಬೀದರ್ ಜಿಲ್ಲೆಯ ಬಸವಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಬಳಿ ಇರುವ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಶಿವಶರಣ ಹಡಪದ ಅಪ್ಪಣ್ಣ ಮೂರ್ತಿಯನ್ನು ಸ್ಥಾಪನೆ ಮಾಡಲಾಗಿತ್ತು. ಆದರೆ, ಬಸವೇಶ್ವರ ದೇವಸ್ಥಾನದಪಂಚಕಮೀಟಿಪದಾಽಕಾರಿಗಳು ಹಸ್ತಕ್ಷೇಪ ಮಾಡಿದ ಹಿನ್ನೆಲೆ ಶಿವಶರಣ ಹಡಪದ ಅಪ್ಪಣ್ಣನವರ ಮೂರ್ತಿಯನ್ನು ತೆರವುಗೊಳಿಸಲಾಗಿದೆ. ಅದೇ ಸ್ಥಳದಲ್ಲಿ ಅನ್ಯ ಶರಣರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿರುವುದು ಅತ್ಯಂತ ಖಂಡನೀಯ. ಈ ಪಂಚ ಕಮಿಟಿಯವರ ಈ ನಿರ್ಧಾರ ರಾಜ್ಯದ ಹಡಪದ ಅಪ್ಪಣ್ಣ ಸಮಾಜಕ್ಕೆ ಅತ್ಯಂತ ನೋವನ್ನುಂಟು ಮಾಡಿದೆ. ವೊದಲಿದ್ದಂತೆ ಅರುವಿನ ಗವಿಯಲ್ಲಿ ಪುನಃ ಯಥವತ್ತಾಗಿ ಶಿವಶರಣ ಹಡಪದ ಅಪ್ಪಣ್ಣನವರ ಮೂರ್ತಿಯನ್ನು ಸ್ಥಾಪಿಸಿ ಅಪ್ಪಣ್ಣ ಸಮಾಜದವರಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಈ ಕುರಿತು ಈಗಾಗಲೇ ಅನೇಕ ಬಾರಿ ಮಠಾಧೀಶರು, ಸಮಾಜದ ನಾಯಕರು, ಹಲವಾರು ಬಾರಿ ಮನವಿ ಮಾಡಿ ಹೋರಾಟ ನಡೆಸಿದರು, ಇಲ್ಲಿವರೆಗೆ ನ್ಯಾಯ ಸಿಕ್ಕಿಲ್ಲ. ಕೂಡಲೇ ಅರಿವಿನ ಗವಿಯಲ್ಲಿ ಹಡಪದ ಅಪ್ಪಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ಶ್ರಿ ಶಿವಶರಣ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ಜಿಲ್ಲಾಧ್ಯಕ್ಷ ಎಚ್. ರುದ್ರಪ್ಪ, ಜಿಲ್ಲಾ ಸಂಚಾಲಕ ಎಚ್. ಅಮರೇಶ್, ತಾಲೂಕ ಅಧ್ಯಕ್ಷ ಎಚ್. ಶಿವರಾಜ್ ಜಿಲ್ಲಾ ಪ್ರತಿನಿಧಿ ಎಚ್. ಸದಾಶಿವ ಸೇರಿದಂತೆ ಹಡಪದ ಅಪ್ಪಣ್ಣ ಸಮಾಜದ ಅನೇಕ ಗಣ್ಯರು ಭಾಗವಹಿಸಿದ್ದರು.



ಜನರ ನಾಡಿಮಿಡಿತ ಅರಿಯುವ ಕೆಲಸವಾಗಲಿ

◆**ಹಗರಿಬೊಮ್ಮನಹಳ್ಳಿ:** ಪ್ರಭುತ್ವವು ಸದಾ ಜನತೆಯ ನಾಡಿಮಿಡಿತವನ್ನು ಅರಿಯುವ ಕೆಲಸ ಮಾಡಬೇಕೇ ಹೊರತು ಉಸಿರು ನಿಲ್ಲಿಸುವ ಕೆಲಸ ಮಾಡಿದಾಗ ಸಂಘರ್ಷ ಅನಿವಾರ್ಯ ಎಂದು ಪ್ರಗತಿಪರ ಚಿಂತಕ ಮತ್ತು ವಿಜಯನಗರ ಕೃಷ್ಣದೇವರಾಯ ವಿವಿ ಸಿಂಡಿಕೇಟ್ ಸದಸ್ಯ ಬಿ. ಪೀರ್ ಬಾಷ ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಎದ್ದೇಳು ಕರ್ನಾಟಕ ವೇದಿಕೆ ಹಾಗೂ ಬಂಡಾಯ ಸಾಹಿತ್ಯ ಸಂಘಟನೆ ಸಹಯೋಗದಲ್ಲಿ ಯುದ್ಧವಿರೋಧಿ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿ, ಯುದ್ಧದ ಕನ್ನಾಲಿಗೆ ಜನರ ಬದುಕಿನ ಜೊತೆ ಆಟವಾಡುವಾಗ ಆಳುವವರು ತಮ್ಮದೇ ಆದ ಲೋಕದಲ್ಲಿ ಮುಳುಗಿ, ದೈನಂದಿನ ಜನಜೀವನ ಅಸ್ತವ್ಯಸ್ತವಾದಾಗ, ಹಸಿದವರೆದುರು ಸಿದ್ಧಾಂತವನ್ನು ಬೋಧಿಸಲಾಗದು. ಹಸಿವನ್ನು ನೀಗಿಸುವ ಪ್ರಯತ್ನ ಮಾಡದೆ ಜಗತ್ತಿನ ದೊಡ್ಡಣ್ಣ ಟ್ರಂಪ್ ಜಗತ್ತನ್ನೆ ಯುದ್ಧದ



ಬಾಗಿಲಿಗೆ ತಂದು ನಿಲ್ಲಿಸಿದ್ದಾನೆ. ರಾಜಕೀಯ ಪ್ರಜ್ಞೆ ಇರುವ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ದನಿಯೆತ್ತುವುದು ದೇಶ ಉಳಿಸುವಲ್ಲಿ ತುಂಬ ಮುಖ್ಯ ಎಂದರು. ಕವಯಿತ್ರಿ ಸುಧಾ ಚಿದಾನಂದಗೌಡ ಮಾತನಾಡಿ, ಯುದ್ಧದ ನೇರ ಪರಿಣಾಮ ಕುಟುಂಬಗಳ ಮೇಲಾಗುತ್ತದೆ ತಾಯಿ, ಪತ್ನಿ, ಮುಗ್ಧಮಕ್ಕಳು ಯುದ್ಧದ ಬಲಿಪಶುಗಳು. ತಾಯಿ ಕರುಳು ಹೊಂದಿದ ಕವಿಗಳು ಯುದ್ಧ ವಿರೋಧಿ ಪ್ರತಿಕ್ರಿಯೆ ವ್ಯಕ್ತಪಡಿಸುವುದು, ಒಂಟಿಕೊರಳಲ್ಲಾದರೂ ಸಶಕ್ತವಾದ ಪ್ರತಿರೋಧವನ್ನು ದಾಖಲಿಸಿದಂತಾಗುತ್ತದೆ ಎಂದರು.

ನಿರ್ಮಲಾ ಶಿವನಗುತ್ತಿ, ಹೊಸಪೇಟೆಯ ಚಿಂತಕ ಕುಮಾರ್ ಸಮತಲ, ಹಿರಿಯ ಕವಿ ಹುರುಕಡ್ಲಿ ಶಿವಕುಮಾರ ಮಾತನಾಡಿದರು. ಇದೇ ವೇಳೆ ಕವಿಗಳಾದ ಮಂಜುನಾಥಗಂಡಿ, ಮೆಹಬೂಬ, ಕೊಟ್ರೇಶ್ ನಾಯಕ ಲಮಾಣಿ, ಅರುಣಾಕೊಟ್ರೇಶ್, ಗಂಗಾ ಕೊಟ್ಟೂರು, ವಿಶಾಲ್ ಮ್ಯಾಸರ್, ವಿನೋದ ಸರ್ದಾರ್, ಮಂಜುನಾಥಕೊಟ್ಟೂರು, ಯುದ್ಧವನ್ನು ವಿರೋಧಿಸುವ ಕವನಗಳನ್ನು ವಾಚಿಸಿದರು. ರಂಗಪ್ಪದಾಸರ, ಜಯಮ್ಮ ಮುತ್ತಿಹಳ್ಳಿ, ವಾಸಂತಿ ಸಾಲ್ಮನಿ ಅನೇಕರಿದ್ದರು. ವಿಶಾಲ್ ಮ್ಯಾಸರ್ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ವಿನೋದ ಸರ್ದಾರ್ ನಿರೂಪಿಸಿದರು.

ಕೆರೆಗಳಿಗೆ ನೀರು ತುಂಬಿಸಲು ರೈತರ ಸಹಕಾರ ಅಗತ್ಯ: ಮಂಜುನಾಥ

◆ **ಕುರುಗೋಡು:** ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಹಿನ್ನಲೆ ಇತ್ತೀಚೆಗೆ ತುಂಗಭದ್ರಾ ಜಲಾಶಯದ ಬಲದಂಡೆಯ ಎಲ್‌ಎಲ್‌ಸಿ ಕೆಳಮಟ್ಟದ ಕುರುಗೊಡು ಕಂಪ್ಲಿ ಭಾಗದ ಎಮ್ಮಿಗನೂರು ವ್ಯಾಪ್ತಿಯ ಸೂಗೂರು ಡಿಸ್ಟ್ರಿಬ್ಯೂಟರ್ ಕಾಲುವೆ ಮೂಲಕ ಕೊನೆ ಭಾಗದ ಕೆರೆಗಳಿಗೆ ನೀರು ತುಂಬಿಸುವ ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಎಮ್ಮಿಗನೂರು ಗ್ರಾಮ ಆಡಳಿತಾಧಿಕಾರಿ ವಿ.ಮಂಜುನಾಥ ಮಾತನಾಡಿ, ಈ ಬಾರಿ ತುಂಗಭದ್ರಾ ಜಲಾಶಯಕ್ಕೆ ಹೊಸ ಕಸ್ಟ್‌ಗೇಟ್ ಅಳವಡಿಕೆ ಹಿನ್ನಲೆ ನೀರು ಹರಿಸುವುದನ್ನು ತಡೆಹಿಡಿಸಲಾಗಿತ್ತು. ಆದರೆ, ಈಗ ಬೇಸಿಗೆಯಲ್ಲಿ ಜನಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಎಲ್‌ಎಲ್‌ಸಿಗೆ ನೀರು ಹರಿಸಿದ್ದು, ಈ ನೀರು ಕಾಲುವೆ ಮೂಲಕ ಕೆರೆಗಳಿಗೆ ತುಂಬಿಸಲಾಗುತ್ತಿದೆ. ಇಲ್ಲಿನ ಕಾಲುವೆ ಅಂಚಿನ ಭಾಗದ ಕೆಲ ರೈತರು ಅನಧಿಕೃತವಾಗಿ ಜಮೀನುಗಳಿಗೆ ಹರಿಸಿಕೊಳ್ಳುತ್ತಿರುವ ಆರೋಪ ಕೇಳಿ ಬಂದಿದೆ. ಆದ್ದರಿಂದ ಕಾಲುವೆ ಬಳಿಗೆ ಭೇಟಿ ನೀಡಿ, ಜಮೀನುಗಳಿಗೆ ನೀರು ಹೋಗದಂತೆ ಸೂಕ್ತಕ್ರಮ ವಹಿಸಲಾಗಿದೆ.



ಜಮೀನುಗಳಿಗೆ ನೀರು ಹರಿಸಿಕೊಳ್ಳುತ್ತಿರುವುದು ಕಂಡು ಬಂದರೆ ಅಂತವರ ವಿರುದ್ಧ ಸೂಕ್ತಕ್ರಮವಹಿಸಲಾಗುವುದು. ಕುಡಿಲಿಕ್ಕೆ ನೀರು ಒದಗಿಸಿದರಿಂದ ರೈತರು ಸಹಕರಿಸಬೇಕು. ಇಲ್ಲವಾದಲ್ಲಿ ನೀರಿನ ಸಮಸ್ಯೆ ಉಂಟಾಗಲಿದೆ. ಆದ್ದರಿಂದ ಪ್ರತಿಯೊಬ್ಬ ರೈತರು ಜಾಗೃತಿ ವಹಿಸಬೇಕು ಎಂದರು. ಈ ವೇಳೆ ತೆಕ್ಕಲಕೋಟೆ ಕಂದಾಯ ನಿರೀಕ್ಷ ಗಣೇಶ ಹಾಗೂ ಕಂಪ್ಲಿ ತಾಲೂಕು ಎಮ್ಮಿಗನೂರು ಗ್ರಾಮ ಆಡಳಿತಾಧಿಕಾರಿ ಮಂಜುನಾಥ, ಮಹಮ್ಮದ್ ರಬ್ ಸೇರಿದಂತೆ ರೈತರಿದ್ದರು.

ಭೋಜಲಿಂಗೇಶ್ವರ ದೇವಸ್ಥಾನ ಉದ್ಘಾಟನೆ

◆**ಯಾದಗಿರಿ:** ಇಲ್ಲಿಗೆ ಸಮೀಪದ ಚಿತ್ತಾಪುರ ತಾಲೂಕಿನ ಸೂಗೂರು (ಎನ್) ಗ್ರಾಮದಲ್ಲಿ ನಿರ್ಮಿಸಲಾದ ಶ್ರೀ ಭೋಜಲಿಂಗೇಶ್ವರ ನೂತನ ದೇವಸ್ಥಾನ ಉದ್ಘಾಟನೆ ಏ.11ರಂದು ಜರುಗಲಿದೆ ಎಂದು ಮಠದ ಭಕ್ತ ವೀರಣ್ಣ ಬಲಕಲ್ ತಿಳಿಸಿದರು.

ಶ್ರೀಮಠದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದಿನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಲಿದ್ದಾರೆ. ಈಗಾಗಲೇ ಮಠದಲ್ಲಿ ಸಕಲ ಸಿದ್ಧತೆ ನಡೆಸಲಾಗುತ್ತಿದೆ. ಸಿಎಂ ಆಗಮನದ ಹಿನ್ನೆಲೆಯಲ್ಲಿ ದೇವಸ್ಥಾನದ ಆವರಣದಲ್ಲಿ ಅದ್ದೂರಿ ವೇದಿಕೆ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ವೇದಿಕೆ ಇನ್ನಿತರ ಕಾರ್ಯಗಳನ್ನು ಶ್ರೀಮಠದ ಪೀಠಾಧಿಪತಿಗಳಾದ ಹಿರಗಪ್ಪ ತಾತನವರ ನೇತೃತ್ವದಲ್ಲಿ ನಡೆಯುತ್ತಿವೆ ಎಂದರು.

ದೇವಸ್ಥಾನ ಉದ್ಘಾಟನೆ ಜತೆಗೆ ನೂತನ ಬೆಳ್ಳಿ ರಥ ಮತ್ತು ಕಲ್ಯಾಣ ಮಂಟಪ ಲೋಕಾರ್ಪಣೆಗೊಳ್ಳಲಿದೆ. ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ, ಸಾರಿಗೆ ಸಚಿವ ರಾಮಲಿಂಗಾರಡ್ಡಿ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಸೇರಿದಂತೆ ಹತ್ತು ಬಹಲವು ಗಣ್ಯರು ಆಗಮಿಸಲಿದ್ದಾರೆ ಎಂದು ವಿವರಿಸಿದರು. ಭೋಜಲಿಂಗೇಶ್ವರರ ಶಿಲಾಮೂರ್ತಿಯ ಜಲಾಧಿವಾಸ, ಧಾನ್ಯಾಧಿವಾಸ ಕಾರ್ಯಕ್ರಮ ನಡೆಯಲಿದ್ದು, ಏ.9ರಂದು ಬೆಳಗ್ಗೆ ಶ್ರೀ ಭೋಜಲಿಂಗೇಶ್ವರರ ಶಿಲಾಮೂರ್ತಿಯ ಕ್ಷೀರಾಧಿವಾಸ, ಪುಷ್ಪಾಧಿವಾಸ, ಶಯನಾಧಿ ವಾಸ ಕಾರ್ಯಕ್ರಮ ನಡೆಯಲಿದೆ. 10ರಂದು ಬೆಳಗ್ಗೆ ಶ್ರೀ ಭೋಜಲಿಂಗೇಶ್ವರರ ಶಿಲಾಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮ ನಡೆಯಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಭೋಜಲಿಂಗೇಶ್ವರರ ದರ್ಶನ ಪಡೆದು ಪುನಿತರಾಗಬೇಕು ಎಂದು ಕೋರಿದರು.

ಮಠದ ಪೀಠಾಧಿಪತಿ ಶ್ರೀ ಹಿರಗಪ್ಪ ತಾತಾ, ಬಸವರಾಜ ಪಾಟೀಲ, ಶರಣಗೌಡ, ಭೀಮರಡ್ಡಿ ಕುರಿಹಾಳ, ಸಂಗಣ್ಣಗೌಡ, ಸಿದ್ದುಗೌಡ, ಮಲ್ಲಪ್ಪ ಅರಿಕೇರಿ, ಮಲ್ಲಯ್ಯ ಕಸಬಿ, ವಿಶ್ವನಾಥಯ್ಯ ಸ್ವಾಮಿ ಚತುರಾಚಾರ್ಯಮಠ, ಪ್ರಭು ಹೂಗಾರ ಉಪಸ್ಥಿತರಿದ್ದರು.



» ಏ11 ರಂದು ಸೂಗೂರಿಗೆ ಸಿಎಂ ಸಿದ್ದರಾಮಯ್ಯ

» ನೂತನ ಬೆಳ್ಳಿರಥ ಲೋಕಾರ್ಪಣೆ

> **ಭಕ್ತರೋದ್ಧಾರಕ ಶ್ರೀ ಭೋಜಲಿಂಗೇಶ್ವರ ಶರಣರು ಭವದ ಭಕ್ತರ ಕಳೆ-ಕಳೆಯುವ ಭಗವಂತ ಎನಿಸಿದ್ದಾರೆ. ಧರ್ಮದಷ್ಟೇ ಮುಖ್ಯವಾದುದು ಶಿಕ್ಷಣ ಎಂಬ ಧ್ಯೇಯವನ್ನು ಶ್ರೀಮಠ ಹೊಂದಿದೆ.**
> ■ ಹಿರಗಪ್ಪ ತಾತಾ , ಪೀಠಾಧಿಪತಿ

ವಿಜ್ಞಾನ ಮಾನವ ಜೀವನದ ಅವಿಭಾಜ್ಯ ಅಂಗ: ಕೃಷ್ಣನಾಯಕ

◆**ಹೂವಿನಹಡಗಲಿ:** ವಿಜ್ಞಾನವು ಮಾನವ ಜೀವನದ ಅವಿಭಾಜ್ಯ ಅಂಗವಾಗಿದ್ದು, ವಿದ್ಯಾರ್ಥಿಗಳು ವಿಜ್ಞಾನ ಮನೋಭಾವ ಬೆಳೆಸಿಕೊಳ್ಳಬೇಕು. ಇಂದಿನ ಯುಗದಲ್ಲಿ ವಿಜ್ಞಾನ ತಂತ್ರಜ್ಞಾನಕ್ಕೆ ಹೆಚ್ಚಿನ ಮಹತ್ವವಿದ್ದು, ಹೊಸ ಆವಿಷ್ಕಾರಗಳು ದೇಶದ ಅಭಿವೃದ್ಧಿಗೆ ಕಾರಣವಾಗುತ್ತವೆ ಎಂದು ಶಾಸಕ ಕೃಷ್ಣನಾಯಕ ಹೇಳಿದರು.

ಎಸ್‌ಆರ್ ಆರ್‌ಎಂಪಿಪಿ ಸರ್ಕಾರಿ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನ ಹಾಗೂ ಅಂತಾರಾಷ್ಟ್ರೀಯ ಪೈ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಪನ್ಮೂಲ ವ್ಯಕ್ತಿ ತಿಪ್ಪೇಸ್ವಾಮಿ ಜಿ. ಮಾತನಾಡಿ, ಪೈ ಸ್ಥಿರಾಂಕದ ಮಹತ್ವ ಮತ್ತು ಇತಿಹಾಸ ಗಣಿತ ವಿಜ್ಞಾನದಲ್ಲಿ ಅದರ ಬಳಕೆಯ ಕುರಿತು ವಿಶೇಷ ಉಪನ್ಯಾಸ ನೀಡಿ, ಪೈ ಸ್ಥಿರಾಂಕವು ವೃತ್ತದ ಪರಿಧಿ ವ್ಯಾಸದ ನಡುವಿನ ಅನುಪಾತವಾಗಿದ್ದು, ಗಣಿತದ ಅನೇಕ ಲೆಕ್ಕಾಚಾರಗಳಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ಹೇಳಿದರು.

ಕಾಲೇಜಿನ ಭೌತಶಾಸ್ತ್ರ ವಿಭಾಗದ ಉಪನ್ಯಾಸಕಿ ನಾಗವೇಣಿ ಎಂ.ಮಾತನಾಡಿ, ರಾಷ್ಟ್ರೀಯ ವಿಜ್ಞಾನ ದಿನದ ಆಚರಣೆಯ ಉದ್ದೇಶ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಅಗತ್ಯವನ್ನು ವಿವರಿಸಿದರು.



ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರದರ್ಶನ, ಬಿತ್ತಿಪತ್ರ, ರಸಪ್ರಶ್ನೆ, ಪ್ರಬಂಧ ಹಾಗೂ ಇತರೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಶಾಸಕರು, ಅತಿಥಿಗಳಿಂದ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಅಯ್ಯನಗೌಡ, ತಳವಾರ ಮಹಾಂತೇಶ್, ಎಂ. ರಮೇಶ್, ಆರ್. ಪಕ್ಕೀರಪ್ಪ, ವಿಜ್ಞಾನ ವಿಭಾಗದ ಭಾಗ್ಯ ಎಂ., ವಿಕ್ರಂ ಆರ್., ನಾಗವೇಣಿ ಎಂ., ಹರ್ಷ ಎಂ., ಅಫ್ರಿದಿ, ಪ್ರವೀಣ್, ಸಹನಾ, ಗಣೇಶ್ ಲಕ್ಷ್ಮಿ ಸಮಚೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಎಂ. ವಿಜಯಕುಮಾರ್ ವಹಿಸಿದ್ದರು. ಸಾಂಸ್ಕೃತಿಕ ಕಾರ್ಯದರ್ಶಿ ಎಂ. ವೆಂಕಟೇಶ್, ಸಂಯೋಜಕ ಪಿ. ಕೊಟ್ರೇಶ್, ಸತೀಶ್ ಪಿ., ಸುರೇಶ ಬಿ., ಎಂ. ಭೀಮಪ್ಪ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.